ಸಂಕಲನ

೮



ಸಂಪಾದಕರು

ಸಿದ್ಧಲಿಂಗ ಪಟ್ಟಣಶೆಟ್ಟಿ

ಹೇಮಾ ಪಟ್ಟಣಶೆಟ್ಟಿ

ಸಂಕಲನ : ಅನಿಸಿಕೆ

- ಸಂಕಲನ ಎಲ್ಲ ತರಹದ ಓದುಗರನ್ನು ಆಕರ್ಷಿಸುತ್ತಿದೆ. ಇದರ ಯಶಸ್ಸಿನ, ಶ್ರೇಯಸ್ಸಿನ ಹಿಂದೆ ಸಂಕಲನದ ಸಂಪಾದಕರ ಶ್ರಮ ಮೆಚ್ಚುವಂಥದು. ಸಂಚಿಕೆ-೨ ರಿಂದ ಸಂಪಾದಕರ ಸಹಧರ್ಮಿಣಿ ಹೇಮಾ ಅವರೂ ಸಹಭಾಗಿಯಾಗಿರುವುದರಿಂದ ಇದರ ಬಾಹ್ಯ ಸೌಂದರ್ಯವಲ್ಲದೇ ಒಳಸೌಂದರ್ಯವೂ ಹೆಚ್ಚಿದೆ ಎಂದು ನನ್ನ ಭಾವನೆ. – **ಸರೋಜ ಚೌಗುಲೆ**, ಮುಂಬಯಿ
- ಉತ್ತಮ ಅಭಿರುಚಿ ಬೆಳೆಸುವ ಪ್ರಯತ್ನವಾಗಿ ಸಂಕಲನವನ್ನು ಕಟ್ಟುವಲ್ಲಿ ತಾವು ನಿರತರಾಗಿರುವ ಬಗ್ಗೆ ನಮಗೆಲ್ಲ ಕುತೂಹಲವಿದೆ. ಏಕೆಂದರೆ ಹಣ ಕೊಟ್ಟು ಓದುವ ಕನ್ನಡಿಗರ ಕತೆ ಗೊತ್ತಿದ್ದದ್ದೇ ಅಲ್ಲವೇ ? ತಮ್ಮ ಸಾಹಸಕ್ಕೆ ನಮ್ಮ ಮೆಚ್ಚುಗೆ, ಬೆಂಬಲ ಇದೆ. – **ಹಿರೇಮಠ ಎಸ್. ಎಸ್.**, ಹರಪನಹಳ್ಳಿ
- ಕವಿತೆ, ನಾಟಕ, ವಿಮರ್ಶೆ ಮತ್ತು ಇವತ್ತಿನ ಪುಸ್ತಕಗಳು ಮುಂತಾಗಿ ಈ ಸಂದರ್ಭದ ಸಾಹಿತ್ಯದ ಗಂಭೀರ ಚಿಂತನೆಗಳು ಸಂಕಲನದಲ್ಲಿವೆ. ಸಾಹಿತ್ಯಾಭ್ಯಾಸಿಗಳಿಗೆ ಸಂಗ್ರಹಯೋಗ್ಯ ಪತ್ರಿಕೆಯಾಗಿ ಸಂಕಲನ ರೂಪಗೊಳ್ಳುತ್ತಿರುವುದು ಸಂತಸದ ವಿಷಯ. – **ಬಂದಗದ್ದೆ ರಾಧಾಕೃಷ್ಣ**, ಕೆಳದಿ
- ಸಂಕಲನ ಆವೃತ್ತಿಯಿಂದ ಆವೃತ್ತಿಗೆ ಬಲಗೊಳ್ಳುತ್ತ ಒಳ್ಳೆಯ ಲೇಖನಗಳೊಡನೆ ಬರುತ್ತಿದೆ. ನಿತ್ಯ, ವಾರ, ಮಾಸಿಕ ಪತ್ರಿಕೆಗಳ ಮಹಾಪೂರಗಳ ಮಧ್ಯೆ ಒಂದು ಹೊಸಗಾಳಿಯ ಸ್ವಚ್ಛವಾದ, ಸಾಹಿತ್ಯಿಕ ಲೇಖನಗಳ ಸಂಕಲನ ಪ್ರಕಟವಾಗುತ್ತಿದ್ದು ಸಾಹಿತ್ಯಾಸಕ್ತರನ್ನು ಮುದಗೊಳಿಸುತ್ತಿದೆ. "ಚರ್ವಿತ ಚರ್ವಣ" ದಲ್ಲೇ ತೃಪ್ತರಾಗಬೇಕಾದ ಅನಿವಾರ್ಯತೆಯನ್ನು ನೀಗಿಸಿ ಒಂದು ಛಲೋದಾದ ಸಾಹಿತ್ಯದೌತಣವನ್ನು ಮಾಡಿಸುತ್ತಿರುವ ನಿಮಗೆ ಧನ್ಯವಾದಗಳು. ಪುಟಸಂಖ್ಯೆಗಳ ಬಗ್ಗೆ ಕಾಳಜಿ ಬೇಡ; ಕೊಡುವಷ್ಟನ್ನು ಚೆನ್ನಾಗಿ ಕೊಟ್ಟರೆ ಸಾಲದೆ ? ಈಗ ನಿಮ್ಮ ಸಾರಥ್ಯ, ಡಾ. ಹೇಮಾ ಪಟ್ಟಣಶೆಟ್ಟಿಯವರ ಸಕ್ರಿಯ ಸಂಪಾದಕತ್ವದಲ್ಲಿ ಸಕ್ಕರೆ-ತುಪ್ಪ ಸೇರಿದಂತೆ ಸಂಕಲನ ಮತ್ತಷ್ಟು ನಳನಳಿಸುವುದರಲ್ಲಿ ಸಂದೇಹವಿಲ್ಲ. ಇವತ್ತಿನ ಸಾಹಿತ್ಯಿಕ ಸಂದರ್ಭದಲ್ಲಿ ಸಂಕಲನ ಒಂದು ಮಹತ್ವದ ಕೊಡುಗೆ.
  – **ಎಚ್. ಜಿ. ಸೋಮಶೇಖರರಾವ್**, ಬೆಂಗಳೂರು
- ಸಂಕಲನ-೨ ತುಂಬ ಚೆನ್ನಾಗಿ ಬಂದಿದೆ. ಹೇಮಾ ಅವರು ಸಂಪಾದಕರಾಗಿ ಸೇರಿದ್ದು ಒಳ್ಳೆಯದಾಯಿತು. ಅವರೇ ಸೇರಿಸುವ dimension ಪತ್ರಿಕೆ ಇನ್ನೊಂದು ದಿಕ್ಕಿನಲ್ಲಿ ಬೆಳೆಯಲು ಅವಕಾಶ ಕೊಟ್ಟೀತು.
  – **ಡಾ. ರಾಮಚಂದ್ರ ದೇವ**, ಕಲ್ಮಡ್ಕ
- ಸಂಕಲನದ format ಗೆ ಅನುಗುಣವಾಗಿ ಸಮೃದ್ಧವಾದ ಸಾಹಿತ್ಯವನ್ನು ಒದಗಿಸಿದ್ದೀರಿ. ಸಂಕಲನ-೧ ರಿಂದ ೬ ರ ವರೆಗಿನ 'ಸಮಗ್ರ ಸಾಮಗ್ರಿ ದರ್ಶನ' ಬಹಳ ಉಪಯುಕ್ತ. ಸಂಪಾದಕರಾಗಿ ಹೇಮಾ ಅವರು ಸೇರ್ಪಡೆಯಾದುದು ನನಗೆ ಸಂತಸವನ್ನುಂಟುಮಾಡಿದೆ. ಅವರ ಓದಿನ ವ್ಯಾಪ್ತಿ ದೊಡ್ಡದು– ನಿಮ್ಮಂತೆಯೇ. ಸಂಕಲನಕ್ಕೀಗ ನವಚೈತನ್ಯ ಪ್ರಾಪ್ತಿ. – **ಪ್ರೊ. ಸಿ. ನಾಗಣ್ಣ**, ಮೈಸೂರು
- ಸಂಕಲನ-೨ ರಲ್ಲಿ ಪ್ರಕಟಗೊಂಡಿರುವ ಎಲ್ಲ ಕವಿತೆಗಳು, ಲೇಖನಗಳು ಬಹಳ ಸೊಗಸಾಗಿವೆ. ಅದರಲ್ಲೂ ಶೈಲಾ ಛಬ್ಬಿಯವರ 'ಸೆಗಣಿ ಸಂಸಾರ' ಹಾಸ್ಯಲೇಖನ ಹಾಗೂ ಹೇಮಾ ಪಟ್ಟಣಶೆಟ್ಟಿಯವರ 'ಹೆಣ್ಣು' ನಾಟಕ ತುಂಬಾ ಚೆನ್ನಾಗಿವೆ. – **ನಿರ್ಮಲ ವೀರಣ್ಣ**, ತುಮಕೂರು
- ಸಂಕಲನವನ್ನು ನಿಯಮಿತವಾಗಿ ನೋಡುತ್ತಿದ್ದೇನೆ. ಧಾರವಾಡದ ನೆನಪಾಗುತ್ತದೆ, ಮತ್ತೆ ಮತ್ತೆ. ನಿಮ್ಮ ನಿವೃತ್ತ್ಯುತ್ತರ ಸಾಹಸ ಅಭಿನಂದನೀಯ. ಪ್ರಕಾಶನ, ಪತ್ರಿಕೆ ಎರಡೂ ಕಷ್ಟದ ಕೆಲಸ. ಒಟ್ಟಿಗೆ ನಡೆಸಲಾರಂಭಿಸಿದ್ದೀರಿ. ಯಶಸ್ಸು ಲಭಿಸಲಿ. – **ಡಾ. ಎಂ. ಪ್ರಭಾಕರ ಜೋಶಿ**, ಮಂಗಳೂರು
- ಸಂಕಲನ-೨ ರ 'ಕಡೀಪುಟ' ಓದಿದೆ. ಪ್ರಜಾವಾಣಿಯಲ್ಲಿ ಈ ಹಿಂದೆ ಪ್ರಕಟವಾಗುತ್ತಿದ್ದ 'ಚಹಾದ ಜೋಡಿ ಚೂಡಾದ್ಹಾಂಗ' ದಲ್ಲಿನ ಗುಂಗಿನಲ್ಲೇ ಓದಿಕೊಂಡೆ. ಪಟ್ಟಣಶೆಟ್ಟಿಯವರು ಆತ್ಮಾಭಿಮಾನದಿಂದ ಬದುಕಿ ಬಾಳಿದ ತಮ್ಮ ತಂದೆ ತಾಯಿಗಳನ್ನು ಅಂತಃಕರಣದಿಂದ ನೆನೆದಿದ್ದಾರೆ. ನಾಲ್ಕು > ನಾಕ ಸಂಖ್ಯಾಸೂಚಕ ಪದದಲ್ಲಿ ಶ್ಲೇಷ ಗುರುತಿಸುವ (ನಾಕ=ಸ್ವರ್ಗ) ಅವರ ಸಂಯೋಜನೆ ನನಗೆ ಮೆಚ್ಚಿಗೆಯಾಯಿತು. ಡಾ. ಪಟ್ಟಣಶೆಟ್ಟರಿಗೆ ನನ್ನ ಅಭಿನಂದನೆಗಳು.
  – **ಎ. ಡಿ. ನಂಜುಂಡಸ್ವಾಮಿ**, ಮೈಸೂರು

ಸಂಕಲನ

ದ್ವೈಮಾಸಿಕ ಸಾಹಿತ್ಯ ಸಂಕಲನ - ೮

೧೪ ಮಾರ್ಚ್ ೨೦೦೩

ಸಂಪಾದಕರು

ಸಿದ್ಧಲಿಂಗ ಪಟ್ಟಣಶೆಟ್ಟಿ

ಹೇಮಾ ಪಟ್ಟಣಶೆಟ್ಟಿ

ಸಂಕಲನ ಪ್ರಕಾಶನ

ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ

ಧಾರವಾಡ - ೫೮೦ ೦೦೪

RNI No. KARKAN 14160 / 10 / 1 / 2002 - TC

SANKALANA : A Kannada Literary Magazine
Volume 2, Issue 2 : 14 March 2003
Edited by **Dr. Siddhaling Pattanshetti**
Hoomane, Shridevinagar, Vidyagiri, Dharwad - 580 004

Yearly subscription : Rs. 150/-

Ptd. by Saraswati Offset Printers, Shivaji Rd. Dharwad-1

•

•

•

ಸಂಕಲನ - ೮ : ಸಂಪುಟ ೨, ಸಂಚಿಕೆ ೨ : ೧೪ ಮಾರ್ಚ್ ೨೦೦೩

ಸಂಪಾದಕರು : **ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ** ಮತ್ತು **ಡಾ. ಹೇಮಾ ಪಟ್ಟಣಶೆಟ್ಟಿ**
ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ -೫೮೦ ೦೦೪
✆ ೦೮೩೬-೪೬ ೨೭೧೮
E-mail : spattanshetti@indiatimes.com
: spattanshetti@sify.com

ಸಂಕಲನ ಪ್ರಕಾಶನ, ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ-೬
ಮತ್ತು ಬೆಳಗು, ಆನಂದಾಶ್ರಮ ರಸ್ತೆ, ಗದಗ - ೫೮೨ ೧೦೧

•

ಸಂಕಲನದಲ್ಲಿ ಪ್ರಕಟವಾದ ಲೇಖನಗಳಲ್ಲಿ ವ್ಯಕ್ತವಾದ
ಅಭಿಪ್ರಾಯಗಳ ಹೊಣೆ, ಹಕ್ಕು ಆಯಾ ಲೇಖಕರವು.

•

ವರ್ಷ ೨೦೦೩ ರಲ್ಲಿ ಪ್ರಕಟವಾಗುವ **ಸಂಕಲನ**ದ ಆರು ಸಂಚಿಕೆಗಳ ಒಟ್ಟು ಬೆಲೆ ರೂ. ೧೫೦/-
ಚಂದಾ ಹಣವನ್ನು ಮನಿಆರ್ಡರ್ ಇಲ್ಲವೆ ಕ್ರಾಸ್ ಮಾಡಿದ ಡಿ. ಡಿ. ಮೂಲಕ
ಸಂಕಲನ ಹೆಸರಿಗೆ ಕಳಿಸುವುದು.
ಚೆಕ್ ಕಳಿಸುವುದಾದಲ್ಲಿ ಬ್ಯಾಂಕ್ ಕಮೀಶನ್ ರೂ. ೨೦/- ಹೆಚ್ಚಿಗೆ ಸೇರಿಸುವುದು.

•

ಛಾಯಾಕ್ಷರಣ : ಬಿಜಿಗ್ರಾಫಿಕ್ಸ್, ೧ ನೇ ಮೇನ್, ವಿಜಯನಗರ, ಧಾರವಾಡ - ೩

ಸಂಪಾದಕರ ಮಾತು

• **ಸಂಕಲನ**ದ ೨ನೆಯ ವರ್ಷದ ಮೊದಲ ಸಂಚಿಕೆ **ಸಂಕಲನ-೭**ನ್ನು ಮಂಗಳೂರಿನ ದಾಸಜನ ಮತ್ತು ಕರಾವಳಿ ಲೇಖಕಿಯರ ವಾಚಕಿಯರ ಸಂಘದ ಸಂಯುಕ್ತ ನೇತೃತ್ವದಲ್ಲಿ ಕೆನರಾ ಕಾಲೇಜಿನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ೨೦೦೩ ಜನವರಿ ೫ ರಂದು ಡಾ. ಶ್ರೀನಿವಾಸ ಹಾವನೂರ ಬಿಡುಗಡಿಸಿದರು. ೨೦೦೨ ರ ಮೊದಲ ವರ್ಷದ ಆರೂ ಸಂಚಿಕೆಗಳನ್ನು ಹಾಗೂ **ಸಂಕಲನ-೭**ನ್ನು ಹಾವನೂರ ಅವರು ವಿವರವಾಗಿ ವಿಶ್ಲೇಷಿಸಿದರು. ಇಂದು ಕನ್ನಡದಲ್ಲಿ ಪ್ರಕಟವಾಗುತ್ತಿರುವ ಸಾಹಿತ್ಯ ಪತ್ರಿಕೆಗಳಲ್ಲಿಯೇ **ಸಂಕಲನ** ವಿಶಿಷ್ಟವಾಗಿದೆ. ಒಂದೇ ಒಂದು ವರ್ಷದ ಇಷ್ಟು ಕಡಿಮೆ ಅವಧಿಯಲ್ಲಿ ತನ್ನ ಹೊಸ ಬಗೆಯ ವ್ಯಕ್ತಿತ್ವ ಹಾಗೂ ಅರ್ಥಪೂರ್ಣ ಅಸ್ತಿತ್ವವನ್ನು ಗಟ್ಟಿಗೊಳಿಸಿಕೊಂಡಿದೆ, ಗುಂಪುಗಾರಿಕೆ ವಾದ-ವಿವಾದ ಮತವೈಭಿನ್ಯ ಮುಂತಾದುವನ್ನು ಮೀರಿದೆ, ಇಂದಿನ ಮನುಷ್ಯನ ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಮನಸ್ಸನ್ನು ಕಟ್ಟುವಲ್ಲಿ, ವಿಸ್ತೃತ ಹಾಗೂ ಉದಾರಗೊಳಿಸುವಲ್ಲಿ ಮೌನವಾಗಿ, ಸಹಜವಾಗಿ ಶ್ರಮಿಸುತ್ತಿದೆ ಎಂದರು.

ಅಂದಿನ ಕಾರ್ಯಕ್ರಮಕ್ಕೆ ಬಂದಿದ್ದ ಮಂಗಳೂರು, ಉಡುಪಿ, ಕಾಸರಗೋಡು ಭಾಗದ ಅನೇಕ ಜನ ಪ್ರಾಜ್ಞರು **ಸಂಕಲನ**ವನ್ನು ಬಹುವಾಗಿ ಮೆಚ್ಚಿ ತಮ್ಮದನ್ನಾಗಿಸಿಕೊಂಡಿದ್ದು ನಮಗೆ ನಿಜವಾಗಿಯೂ ಹೆಮ್ಮೆಯೆನಿಸಿದೆ. ಅಂದಿನ ಸಮಗ್ರ ಕಾರ್ಯಕ್ರಮವನ್ನು ಹಾಗೂ **ಸಂಕಲನ**ದ ಗುಣ-ಮೌಲ್ಯಗಳನ್ನು ಅಲ್ಲಿ ಉಪಸ್ಥಿತರಿದ್ದ ರಾಜ್ಯ ಹಾಗೂ ರಾಷ್ಟ್ರಮಟ್ಟದ ಎಲ್ಲ ಮಾಧ್ಯಮ-ಮಿತ್ರರು ತುಂಬ ಪ್ರೀತಿಯಿಂದ, ಆಪ್ತತೆಯಿಂದ ವರದಿ ಮಾಡಿದರು. ಬಹುಶಃ ಇತ್ತೀಚಿನ ದಿನಗಳಲ್ಲಿ ಇಂಥ ಸಾಹಿತ್ಯಿಕ ಪತ್ರಿಕೆಯೊಂದಕ್ಕೆ ಸಿಕ್ಕ ವಿರಳ ಪ್ರೀತಿ ಹಾಗೂ ಗೌರವ ಇದಾಗಿದೆ. ಅಂದಿನ ಕಾರ್ಯಕ್ರಮ ಆಯೋಜಿಸಿದ ಎಲ್ಲ ಸಾಹಿತಿ-ವಿಮರ್ಶಕ ಮಿತ್ರರು, ಸಾಹಿತ್ಯಪ್ರಿಯರು ಹಾಗೂ ಪತ್ರಕರ್ತರಿಗೆ **ಸಂಕಲನ**ದ ಹಾರ್ದಿಕ ಕೃತಜ್ಞತೆಗಳು.

• ಸಾರ್ಥಕ್ಯ, ಪ್ರಯೋಗ ಹಾಗೂ ಪ್ರಯೋಜನಗಳನ್ನು ಹೆಚ್ಚಿಸಿಕೊಳ್ಳುವ ನಿಟ್ಟಿನಲ್ಲಿ **ಸಂಕಲನ**ದ ಪ್ರತಿಯೊಂದು ಸಂಚಿಕೆಯಲ್ಲಿ ನಾವು ಶ್ರಮಿಸುತ್ತಿರುವುದನ್ನು ಓದುಗ ಮಿತ್ರರು, ಲೇಖಕರು ಗಮನಿಸಿದ್ದಾರೆ. ಈ ಸಂಚಿಕೆಯಲ್ಲಿಯೂ ವಿಷಯ ವೈವಿಧ್ಯ ಹಾಗೂ ಸಂಖ್ಯಾ ಪ್ರಮಾಣವನ್ನು ಹೆಚ್ಚಿಸಲಾಗಿದೆ. ಅಕ್ಷರಗಳ ಆಕಾರ ಮೊದಲಿಗಿಂತ ಕಿರಿದಾಗಿದೆ.

ಸಂಕಲನ-೭ ರ ಜೊತೆಗೆ ಚಂದಾದಾರರಿಗೆ ಕಾಣಿಕೆಯಾಗಿ ಕೊಟ್ಟ 'ವಾಮನ್‌ರಾವ್ ಮಾಸ್ತರ್' ಪುಸ್ತಕವನ್ನು ಎಲ್ಲರೂ ಮೆಚ್ಚಿದ್ದಾರೆ. ಅನೇಕರು ಮುಕ್ತಕಂಠದಿಂದ ಪ್ರಶಂಸಿಸಿದ್ದಾರೆ, ಫೋನಿಸಿದ್ದಾರೆ. ಪತ್ರ ಬರೆದಿದ್ದಾರೆ. ಎಲ್ಲರಿಗೂ ಪ್ರತ್ಯೇಕವಾಗಿ ಬರೆಯಲಾಗುತ್ತಿಲ್ಲ. ಅವರೆಲ್ಲರ ಶುಭಾಶಯಗಳು **ಸಂಕಲನ**ವನ್ನು ಇನ್ನಷ್ಟು ಗಟ್ಟಿಗೊಳಿಸುವಲ್ಲಿ ಕ್ರಿಯಾತ್ಮಕವಾಗಿ ಸಹಕರಿಸಲಿ.

• ಈ ಸಂಚಿಕೆಯಲ್ಲಿ ನಾಡಿನ ಹೆಸರಾಂತ ಪತ್ರಕರ್ತರಾಗಿದ್ದ ಪ. ಲೋ. ಬಂಕಾಪುರರನ್ನು ಕುರಿತ ಒಂದು ವ್ಯಕ್ತಿಚಿತ್ರ ಪ್ರಕಟವಾಗಿದೆ. ನಮ್ಮ ಎಂದಿನ ಸಿದ್ಧತೆ, ಪ್ರಯತ್ನದ ರೀತಿಯಂತೆ ಮುಂದಿನ ೨-೩ ಸಂಚಿಕೆಗಳ ಲೇಖನಗಳು ಮೊದಲೇ ಡಿಟಿಪಿ ಆಗಿರುತ್ತವೆ. ೨೦೦೨ ಸಪ್ಟಂಬರ್ ಮೊದಲ ವಾರದಲ್ಲಿ ನಮ್ಮ ಕೈಗೆ ಬಂದಿದ್ದ ಈ ವ್ಯಕ್ತಿಚಿತ್ರವೂ ಡಿಸೆಂಬರ್‌ದಲ್ಲಿಯೇ ಡಿಟಿಪಿ ಆಗಿದ್ದುದು ಬಂಕಾಪುರ ಅವರಿಗೆ ತಿಳಿದಿತ್ತು. ಅವರು ಮಾರ್ಚ್ ೧೪ ರ ಈ ಸಂಚಿಕೆಯಲ್ಲಿ ತಮ್ಮ ಬಗ್ಗೆ ಈ ಲೇಖನ ಪ್ರಕಟವಾಗುವುದನ್ನು ಪ್ರೀತಿಯಿಂದ ನಿರೀಕ್ಷಿಸುತ್ತಿದ್ದರು. ದುರ್ದೈವ. ಜನವರಿ ೫ ರಂದು ಅವರು ಇನ್ನಿಲ್ಲವಾದರು. ಅವರಿಗೆ **ಸಂಕಲನ**ದ ಶ್ರದ್ಧಾಂಜಲಿ.

೧ ಮಾರ್ಚ್, ೨೦೦೩ — ಸಿದ್ಧಲಿಂಗ ಪಟ್ಟಣಶೆಟ್ಟಿ

ಹೂಮನೆ, ಧಾರವಾಡ - ೪ — **ಹೇಮಾ ಪಟ್ಟಣಶೆಟ್ಟಿ**

ಪರಿವಿಡಿ

ಸಂಕಲನ ಪ್ರತಿಕ್ರಿಯೆ : ಆವರಣಪುಟ ೨+೩; ಸಂಕಲನ ಸ್ವೀಕರಿಸಿದ ಪುಸ್ತಕಗಳು : ಆವರಣಪುಟ ೩

ಸಂಪಾದಕರ ಮಾತು / ೩

೧. ನನ್ನ ಅವ್ವ ನನ್ನ ಅಪ್ಪ : 'ನನ್ನ ಅವ್ವ ನನ್ನ ಅಪ್ಪ' ಮಾಲಿಕೆ : ಕೃತಜ್ಞತೆ - ೨ : ಶಿವಪುತ್ರ ಮ. ರಾಚಯ್ಯನವರ / ೫-೧೪

೨. ಏಳು ಕವಿತೆಗಳು : ೧. ಹೂತ ಮೌನ, ೨. ದೀಪ, ೩. ಬಯಲ ಜೋಗಿ, ೪. ಚಿತ್ರ, ೫. ಹಾಡು, ೬. ಬುದ್ಧನಗು, ೭. ಮಾಯದ ಮಳೆ : ಎಸ್.ಜಿ. ಸಿದ್ಧರಾಮಯ್ಯ / ೧೫-೧೮

೩. ನಮ್ಮ ವಿಮರ್ಶೆಯ ಮುಂದಿರುವ ಹಲವು ಸವಾಲುಗಳು : ರಾ. ಕ. ನಾಯಕ / ೧೯-೨೭

೪. ಎಸ್. ವಿ. ಪ್ರಭಾವತಿಯವರ ಕಾದಂಬರಿ 'ದ್ರೌಪದಿ' : ಎಚ್. ಎಲ್. ಪುಷ್ಪ / ೨೭-೩೧

೫. ತಾಯಿ - ತಂತು - ಆಗಂತುಕ ಬೇರು : ಕವಿತೆ - ೮ : ಮಲ್ಲಿಕಾರ್ಜುನ ಬನ್ನಿ / ೩೨

೬. ಅಮರೇಶ ನುಗಡೋಣಿಯವರ 'ತಮಂಧದ ಕೇಡು' : ಬಸವರಾಜ ಸಬರದ / ೩೩-೩೫

೭. ಬಿ. ಆರ್. ಲಕ್ಷ್ಮಣರಾವ್ ಅವರ 'ಇತ್ಯಾದಿ' : ಜಿ. ಎನ್. ರಂಗನಾಥರಾವ್ / ೩೫-೩೮

೮. 'ಬಳರಿ' : ಹಿರೇಮಠ ಎಸ್. ಎಸ್. / ೩೯-೪೭

೯. ಸಾವು ಹನಿ ಹನಿ : ಕವಿತೆ - ೯ : ಸಿದ್ಧರಾಮ ಹಿರೇಮಠ / ೪೭

೧೦. ಹಳಸದ ವಿನಯ : ಬಿ. ಆರ್. ಪೋಲೀಸ್‌ಪಾಟೀಲ / ೪೮-೫೦

೧೧. ಬಯಲು : ಯು. ಎನ್. ಸಂಗನಾಳಮಠ / ೫೧-೫೫

೧೨. ಎರಡು ಕವನಗಳು : ಕವಿತೆ - ೧೦, ೧೧ : ರಜಿಯಾ ಡಿ. ಬಿ. / ೫೬

೧೩. ದುರ್ದೈವ : ಕವಿತೆ - ೧೨ : ಅಮರೇಶ ಕುಂಬಾರ / ೫೬-೫೭

೧೪. ವಸ್ತು - ಶಿಸ್ತು : ಕವಿತೆ - ೧೩ : ಎಂ. ಡಿ. ಗೋಗೇರಿ / ೫೭

೧೫. ಪ. ಲೋ. ಬಂಕಾಪುರ : ಮೋಹನ ಕಳಸದ / ೫೮-೬೪

೧೬. ಮೋಚಿ, ಮೋಚಿ, ನನ್ನ ಮೊಚ್ಚೆ ಹೊಲಿ : ಕತೆ : ಜ್ಯಾನ್ ಸ್ಟ್ರದರ್ / ಸದಾನಂದ ಕನವಳ್ಳಿ / ೬೪-೬೯

೧೭. ವಾಸನೆಯ ವೈಶಿಷ್ಟ್ಯ : ಹಾಲಾಡಿ ಮಾರುತಿರಾವ್ / ೬೯-೭೧

೧೮. ೪೦ ವರ್ಷದ ಹಿಂದೆ ಅರಳಿದ ಹೂ ೩ : ಕವಿತೆ - ೧೪, ೧೫, ೧೬ / ಜಿ. ಎನ್. ಮಂಜುನಾಥ್ / ೭೧-೭೩

೧೯. ಯಾಕೆ ಅಂಜಲಿ ಯಾಕೆ ಅಳುಕಲಿ : ಕವಿತೆ - ೧೭ / ಜಿ. ಎಚ್. ಹನ್ನೆರಡುಮಠ / ೭೩

೨೦. ಪುಸ್ತಕ ಪರಿಶೀಲನೆ : / ೭೪-೭೯

೧. ಕಾರ್ಯಕ್ರಮ : ಬಂದಗದ್ದೆ ರಾಧಾಕೃಷ್ಣ – ದುಷ್ಯಂತ ನಾಡಗೌಡ

೨. ಲೌಕಿಕ - ಅಲೌಕಿಕ : ರಾಜಾರಾಮ ಹೆಗಡೆ – ಶಿವಶಂಕರ ಹಿರೇಮಠ

೩. ವಾಸ್ತವದ ಕನವರಿಕೆ : ಡಿ. ಬಿ. ರಜಿಯಾ – ಕೆ. ವಿ. ಜಲಜಾಕ್ಷಿ

೪. ಶೇಷ : ದಿವಸ್ಪತಿ ಹೆಗಡೆ – ಎಂ.ಆರ್. ಮಂದಾರವಲ್ಲಿ

೫. ರೆಕ್ಕೆ-ಗೂಡು-ಆಕಾಶ : ಸಿ. ವಿ. ಶೇಷಾದ್ರಿ ಹೊಳವನಹಳ್ಳಿ – ನರಸಿಂಹ ಪರಾಂಜಪೆ

೬. ಅನನ್ಯ : ಸಿದ್ಧರಾಮ ಹಿರೇಮಠ – ಎ. ಮುರಿಗೆಪ್ಪ

೭ ಮಿ॥ ಛತ್ರಪತಿ : ಲಲಿತಾ ಸಿದ್ಧಬಸವಯ್ಯ – ಜಿ. ಟಿ. ಶ್ರೀಧರ ಶರ್ಮ

೮. ನಮ್ಮೆಲ್ಲರ ಭಾರತಿ : ಬಿ. ಎಂ. ಶರಭೇಂದ್ರಯ್ಯ – ಚಂದ್ರಶೇಖರ ವಸ್ತ್ರದ

೨೧. ಕಡೇ ಪುಟ : ಸಿದ್ಧಲಿಂಗ ಪಟ್ಟಣಶೆಟ್ಟಿ / ೮೦

ನನ್ನ ಅವ್ವ ನನ್ನ ಅಪ್ಪ

ಶಿವಪುತ್ರ ಮ. ರಾಚಯ್ಯನವರ

ರಾಚಯ್ಯನವರ ಮನೆತನ ಅಜಮಾಸು ೧೦೦ ವರ್ಷಗಳ ಹಿಂದೆ ಆಂಧ್ರ ಪ್ರದೇಶದ ರಾಯಚೋಟಿ ಊರಲ್ಲಿತ್ತು. ಅಲ್ಲಿ ನಮ್ಮ ಮನೆತನದ ಹೆಸರು ಹಿರೇಮಠ ಅಂತಾ ಇತ್ತು ಎಂದು ನಮ್ಮ ಮನೆಯ ಹೆಳವನಿಂದ ತಿಳಿದುಬಂದಿದೆ. ಮುಸ್ಲಿಮರ ಆಳ್ವಿಕೆಯಿಂದ ಹಿಂದೂಗಳಿಗೆ ತೊಂದರೆಯಾಗಿ ನಮ್ಮ ಮುತ್ತಜ್ಜ ರಾಚಯ್ಯ ರಾಯಚೋಟಿ ಊರು ಬಿಟ್ಟರು (ರಾಯಚೋಟಿ ಪ್ರಸಿದ್ಧ ವೀರಭದ್ರದೇವರು ನಮ್ಮ ಮನೆದೇವರು). ಕೆಲ ಕಾಲ ವಿಜಾಪುರ ಜಿಲ್ಲೆಯ ಮುದ್ದೇಬಿಹಾಳದಲ್ಲಿ ನೆಲೆಸಿದ್ದರು. ಅಲ್ಲಿಂದ ಬಂದು ಧಾರವಾಡದ ಮಾಳಾಪುರದಲ್ಲಿ ತಳ ಊರಿದ್ದಾರೆ. ನಂತರ ಕಮಲಾಪುರದಲ್ಲಿ ಒಂದು ಹಳೇ ಮಾಳಿಗೆಯ ಮನೆ ಖರೀದಿ ಮಾಡಿದ್ದಾರೆ. ಈ ಮನೆ ಈಗಲೂ ಇದೆ. ರಾಯಚೋಟಿಯಿಂದ ಬಂದ ಅಯ್ಯನವರು ಅಂತಾ ಇಲ್ಲಿಯವರು ನಮ್ಮನ್ನು ರಾಯಚೋಟಿ ಅಯನಾರು ಅಂತಾ ಕರೆಯತೊಡಗಿದರು. ಮುಂದೆ ಬರಬರುತ್ತಾ ರೂಢಿಯಲ್ಲಿ 'ರಾಚಯ್ಯನವರ' ಅಂತಾ ಅಡ್ಡ ಹೆಸರು ಉಳಿದುಕೊಂಡಿದೆ.

ನಮ್ಮ ಅಜ್ಜನಿಗೆ ೫ ಜನ ಗಂಡುಮಕ್ಕಳು, ಇಬ್ಬರು ಹೆಣ್ಣುಮಕ್ಕಳು. ಈ ೭ ಮಕ್ಕಳಲ್ಲಿ ೪ ನೆಯವರೇ ನಮ್ಮ ತಂದೆ ಮಲ್ಲಯ್ಯ. ಮೊದಲಿನಿಂದ ನಮ್ಮದು ಶ್ರೀಮಂತ ಮನೆತನವಲ್ಲ. ಕೂಲಿಕುಂಬಳಿ ಮಾಡುತ್ತ ಜೀವನ ಸಾಗಿಸುತ್ತ ಬಂದವರು. ನಮ್ಮ ಅಪ್ಪ ಅಷ್ಟೇನೂ ಸಾಲಿ ಕಲಿತವನಲ್ಲ. ಆದರೂ ೧೯೩೩ ರಲ್ಲಿ ಮೂರನೆ ಬಿನ್ನೆತ್ತೆ ಕಲಿತಿರುತ್ತೇನೆ ಅಂತಾ ಹೇಳುತ್ತಾರೆ. ನಮ್ಮ ಅಪ್ಪನಿಗೆ ಬರೆಯಲು ಅಷ್ಟು ಚೆನ್ನಾಗಿ ಬರುವುದಿಲ್ಲ, ಆದರೆ ಸಾಧಾರಣವಾಗಿ ಓದುತ್ತಾರೆ.

ನಮ್ಮ ತಂದೆ ವಯಸ್ಸಿಗೆ ಬರುವ ವರೆಗೆ ಮೊದಮೊದಲು ದನ ಕಾಯುತ್ತಿದ್ದರು. ನಂತರ ಒಕ್ಕಲುತನ ಕೂಲಿ ಕೆಲಸಕ್ಕೆ ಹೋಗಲು ಪ್ರಾರಂಭಿಸಿದರು. ಅವರಿಗೆ ಕುಸ್ತಿ ಆಡಬೇಕೆಂಬ ಹಂಬಲ. ಗರಡಿಮನೆ ತಾಲೀಮು ಮಾಡುತ್ತಿದ್ದರು. ಸುತ್ತಮುತ್ತ ಹಳ್ಳಿಯಲ್ಲಿ ಕುಸ್ತಿ ಆಡಿ ಹಲವಾರು ಸಲ ಗೆದ್ದಿದ್ದಾರೆ.

ನಮ್ಮ ಅಜ್ಜ ಬಸಲಿಂಗಯ್ಯನವರು ನಮ್ಮ ತಂದೆಯ ೩೦ ನೆಯ ವಯಸ್ಸಿಗೆ ಮದುವೆ ಮಾಡಬೇಕು ಅಂತಾ ನಿರ್ಧಾರ ಮಾಡಿದರು. ಅಜ್ಜನ ಇಚ್ಛೆಯಂತೆ ಧಾರವಾಡ ತಾಲೂಕ ಲೋಕೂರು ಗ್ರಾಮದ (ಅಲ್ಲಿ ಪ್ರಸಿದ್ಧ ದ್ಯಾಮವ್ವನ ಗುಡಿ ಇದೆ) ಹಿರೇಮಠದ ಶಿವಲಿಂಗಯ್ಯನವರ ಮಗಳಾದ ಪಾರ್ವತಿಯನ್ನು ನಮ್ಮ ತಂದೆ ಮದುವೆ ಮಾಡಿಕೊಂಡರು.

ನಮ್ಮ ತಾಯಿಯ ತಂದೆ ಶಿವಲಿಂಗಯ್ಯ. ಅವನು (ಲೋಕೂರು ಮತ್ತು ಶಿಬಾರಗಟ್ಟಿ ಸೇರಿ ಒಂದೇ ಪಂಚಾಯತಿ ಇತ್ತು) ಪಂಚಾಯತಿಗೆ ಸರಪಂಚನಾಗಿದ್ದ ಅಂತಾ ನಮ್ಮ ಅವ್ವ ತಮ್ಮ ಅಪ್ಪನ ಬಗ್ಗೆ ಮೇಲಿಂದ ಮೇಲೆ ತಾನು ಸರಪಂಚನ ಮಗಳು ಅಂತಾ ಹೆಮ್ಮೆಯಿಂದ ಹೇಳುತ್ತಿರುತ್ತಾಳೆ.

ಲೋಕೂರು ಗ್ರಾಮದೇವತೆ ದ್ಯಾಮವ್ವನ ಮ್ಯಾಲೆ ನಮ್ಮವ್ವನದು ಭಕ್ತಿ ಬಹಳ. ನಿತ್ಯ ಆ ಗ್ರಾಮದೇವತೆಯನ್ನು ನೆನೆಸಲಾರದೆ ಯಾವ ಕೆಲಸವನ್ನೂ ಮಾಡುವದಿಲ್ಲ. ನಮ್ಮ ತಾಯಿಯ ಲಗ್ನವಾಗಿ ೫ ವರ್ಷ ಕಳೆದರೂ ಮಕ್ಕಳು ಆಗಲಿಲ್ಲವಂತೆ, ಆಗ ತವರುಮನೆಗೆ ಅಂತಾ ಲೋಕೂರಿಗೆ ಹೋದಾಗ ದ್ಯಾಮವ್ವನಿಗೆ ಬೇಡಿಕೊಂಡಳಂತೆ, ತದನಂತರ ನಾನು ಹುಟ್ಟಿದ್ದೇನೆ ಅಂತಾ ಅವ್ವ ಈಗಲೂ ಹೇಳುತ್ತಿರುತ್ತಾಳೆ. ಹೀಗೆ ಅವ್ವ ಹೇಳುತ್ತಿರುವುದನ್ನು ಕೇಳಿ ಕೇಳಿ ನನಗೂ ಲೋಕೂರು ದ್ಯಾಮವ್ವನ ಮೇಲೆ ಭಕ್ತಿ ಬಹಳ. ಹೀಗಾಗಿ ವರ್ಷಕ್ಕೊಮ್ಮೆಯಾದರೂ ನಾನು ದ್ಯಾಮವ್ವನ ದರ್ಶನಕ್ಕಾಗಿ ಹೋಗಿ ಬರುತ್ತೇನೆ.

ಈ ವೇಳಿಗೆ ನಮ್ಮ ತಂದೆಯ ಅಣ್ಣ ತಮ್ಮಂದಿರು ಬೇರೆಯಾಗಿ ಕುಟುಂಬಜೀವನ ಸಾಗಿಸಲು ಪ್ರಾರಂಭಿಸಿದರು. ನಮ್ಮ ತಂದೆಯ ಅವ್ವ ಅಪ್ಪ ಮತ್ತು ತಾಯಿಯ ಅಪ್ಪ ತೀರಿಕೊಂಡಿದ್ದರು. ನಮ್ಮ ತಂದೆಯ ಅಣ್ಣ ತಮ್ಮಂದಿರು ಬೇರೆಯಾದ ಕೂಡಲೇ, ಮನೆಯು ಎಲ್ಲರ ನಡುವೆ ಒಂದೇ ಇದ್ದುದರಿಂದ, ಒಬ್ಬರು ಅಡುಗೆಮನೆಯಲ್ಲಿ ಜೀವನ ಪ್ರಾರಂಭಿಸಿದರೆ ಇನ್ನೊಬ್ಬರು ದೇವರ ಮನೆಯಲ್ಲಿಯೇ ಒಲೆ ಹೂಡಿದರು. ಮತ್ತೊಬ್ಬರು ಅಂದರೆ ನಮ್ಮ ತಂದೆ ಎರಡು ಎತ್ತುಗಳನ್ನು ಕಟ್ಟುವ ಹಕ್ಕಿಯಲ್ಲಿ ಒಲೆ ಹೂಡಿದರು. ಇನ್ನೊಬ್ಬರಾದ ನಮ್ಮ ದೊಡ್ಡಪ್ಪ ಇನ್ನೆರಡು ಎತ್ತುಗಳನ್ನು ಕಟ್ಟುವ ಹಕ್ಕಿಯಲ್ಲಿ ನಡುವೆ ಬಿದಿರಿನ ತಟ್ಟಿ ಕಟ್ಟಿ ಒಲೆ ಹೂಡಿದರು. ಮತ್ತೊಬ್ಬ ದೊಡ್ಡಪ್ಪ ಹೊರಗೆ ಇರುವ ಭಾವಣಿಯಲ್ಲೇ ತಟ್ಟಿ ಕಟ್ಟಿ ಕೋಣೆ ಮಾಡಿಕೊಂಡು ಅಲ್ಲಿ ಒಲೆ ಹೂಡಿದರು. ಹೀಗೆ ಜೀವನ ಪ್ರಾರಂಭಿಸಿದ ಕೂಡಲೇ ಮನೆತನದ ಅಡಚಣೆಯ ಸಲುವಾಗಿ ನಮ್ಮ ಅಜ್ಜ ನಟ್ಟು ಕಡಿದು ದುಡಿದು ಗಳಿಸಿದ ಒಂದೂವರೆ ಎಕರೆ ಹೊಲವನ್ನು ಮಾರಿದರು. ಇನ್ನೊಬ್ಬರಲ್ಲಿ ಕೂಲಿ ಕೆಲಸಕ್ಕೆ ಹೋಗುವುದು ಅನಿವಾರ್ಯವಾಯಿತು. ಆದರೆ ನಮ್ಮ ಕಾಕಾ ಚಂದ್ರಯ್ಯನಿಗೆ ಎ. ಜಿ. ಹಿರೇಮಠ ಅವರು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಜವಾನ ಅಂತಾ ನೌಕರಿಗೆ ಸೇರಿಸಿದರು.

ನಮ್ಮ ಅಪ್ಪನಿಗೆ ನಾವು ೫ ಜನ ಗಂಡುಮಕ್ಕಳು, ಒಬ್ಬಳು ಹೆಣ್ಣುಮಗಳು. ಗಂಡುಮಕ್ಕಳಲ್ಲಿ ನಾನೇ ಹಿರಿಯ ಮಗ.

ನಮ್ಮ ಅಪ್ಪನ ಅಕ್ಕ ಚನ್ನವ್ವ, ತಂಗಿ ಸಾವಕ್ಕ. ಅಕ್ಕ ಚನ್ನವ್ವನನ್ನು ಕಲಘಟಗಿ ತಾಲೂಕು ಕೂಡಲಗಿಗೆ, ತಂಗಿ ಸಾವಕ್ಕನನ್ನು ಕೆಲಗೇರಿ ಗುಡ್ಡದಮಠರ ಸಂಗಯ್ಯನಿಗೆ ಲಗ್ನ ಮಾಡಿಕೊಟ್ಟಿದ್ದರು. ನಮ್ಮ ಚನ್ನವ್ವತ್ತಿನ್ನ ಕೊಟ್ಟ ಮನೆತನ ದೊಡ್ಡ ಮನೆತನ. ಅವಳ ಗಂಡ ಚಿಪ್ಪಲಕಟ್ಟಿಮಠ ಬಸಯ್ಯ ಅಂದರ ಇಡೀ ಕೂಡಲಗಿ ಊರೇ ಹೆದರಿ ನಡಗುತಿತ್ತು ಅಂತಾ ಅತ್ತಿ ಹೇಳುತ್ತಿದ್ದಳು. ಕಳೆದ ೪ ವರ್ಷದ ಹಿಂದೆ ಚನ್ನವ್ವತ್ತಿ ತೀರಿಕೊಂಡಳು. ಚನ್ನವ್ವತ್ತಿಯ ಮನ್ಯಾಗ ನಮ್ಮ ಅಪ್ಪ ಒಕ್ಕಲುತನ ಮಾಡಾಕ ಅಂತಾ ಕೂಡಲಗಿಯಲ್ಲಿ ೮ - ೧೦ ವರ್ಷ ಉಳಿದರು. ಆಗ ಒಂದು ವರ್ಷ ಮಳೆ ಬಾರದ್ದಕ್ಕೆ ಬರಗಾಲ ಬಿದ್ದು ಭೂಮಿ ಬೆಳೆಯಲಿಲ್ಲ. ಆಗ ನನಗೆ ೬ ವರ್ಷ ಆಗಿರಬೇಕು. ಆ ಊರಲ್ಲಿ ಬಸವಣ್ಣದೇವರ ಗುಡಿ ಇತ್ತು. ಅಲ್ಲಿ ೪ ನೇ ತರಗತಿ ವರೆಗೆ ಸಾಲಿ ಇತ್ತು. ಕೂಡಲಗಿಯಲ್ಲಿ ಒಂದನೇ ಇಯತ್ತೆ ಆರು ತಿಂಗಳ ವರೆಗೆ ಸಾಲಿಗೆ ಹೋಗಿದ್ದೆ.

ಮುಂದೆ ಒಂದು ದಿನ ನಮ್ಮ ಅವ್ವನ್ನ ನೋಡಾಕ ಅಂತಾ ಲೋಕೂರಿಂದ ನಮ್ಮ ಸೋದರಮಾವ (ಅವ್ವನ ತಮ್ಮ ಬಸವಯ್ಯ) ಕೂಡಲಗಿಗೆ ಬಂದ. ನಮ್ಮ ಅವ್ವ- ಅಪ್ಪನ ಬಡತನ ಪರಿಸ್ಥಿತಿ ನೋಡಿದ. ನನ್ನನ್ನು ಲೋಕೂರಿಗೆ ಕರೆದುಕೊಂಡು ಹೊಕ್ಕೇನಿ ಅಂತ ಅವ್ವ-ಅಪ್ಪಗ ಹೇಳಿ, 'ಶಿವಪುತ್ರಯ್ಯನ ಸಾಲಿ ಕಲಿಸ್ತೀನಿ' ಅಂತಾ ಮಾವ ನನ್ನನ್ನ ಹೆಗಲ ಮ್ಯಾಲ ಕುಂಡ್ರಿಸಿಕೊಂಡು ಕೂಡಲಗಿಯಿಂದ (ಆಗ ಬಸ್ ಇರಲಿಲ್ಲ) ಕಲಘಟಗಿ ವರೆಗೆ ನಡಕೊಂತ ಬಂದ. ಅಲ್ಲಿಂದ ಧಾರವಾಡದ ವರೆಗೆ ಕಟ್ಟಿಗೆ ಹೇರಿಕೊಂಡು ಬರುವ ಟ್ರಕ್ಕಿನಲ್ಲಿ ನನ್ನ ಕರಕೊಂಡ ಬಂದ. ಬಂದು ಟ್ರಕ್ ಇಳೀತೇವು, ಧಾರವಾಡ ಊರಾಗ ಎಲ್ಲ ಪ್ಯಾಟಿ, ಅಂಗಡಿ ಬಂದ ಆಗಿದ್ದವು. ಯಾಕ 'ಬಂದ' ಅಂತಾ ನಮ್ಮ ಮಾವ ಅಡ್ಡಾಡೂ ಮಂದಿನ್ನ ಕೇಳಿದ. ಇವತ್ತ ಭಾರತ ದೇಶದ ಪ್ರಧಾನಮಂತ್ರಿ ನೆಹರೂ ತೀರಿಕೊಂಡರು, ಅದಕ್ಕ ಅಂಗಡಿ, ಪ್ಯಾಟಿ ಬಂದ ಆಗ್ಯಾವು, ಬಸ್ ಸಹಿತ ಬಂದ್ ಆಗ್ಯಾವು ಅಂದರು. ಅಷ್ಟೊತ್ತಿಗೆ ಮಧ್ಯಾಹ್ನ ಆಗಿತ್ತು. ಮಾವಂದು ಹೊಟ್ಟೆ ಹಸಿದಿತ್ತು, ನಂದಂತೂ ಬಹಳ ಹಸಿದಿತ್ತು. ನನಗ ತಿನ್ನಾಕ ಏನಾರ ಕೊಡಸ ಮಾವ ಅಂದೆ. ಮಾವ ಹೆಗಲ ಮ್ಯಾಲ ನನ್ನ ಕುಂಡ್ರಿಸಿಕೊಂಡ ಇಡೀ ಪ್ಯಾಟಿ ತಿರುಗಿದರೂ ತಿನ್ನಾಕ ಏನೂ ಸಿಗಲಿಲ್ಲ.

ಧಾರವಾಡದೊಳಗ ನಿಮ್ಮ ಕಾಕಾಗಳು ದೊಡ್ಡಪ್ಪಗಳದು ಮನಿ ಅದಾವು, ಅಲ್ಲಿ ಹೋಗಿ ಊಟ ಮಾಡೋಣ, ಅವರ ಮನಿಗೆ ಹೋಗುನು ನಡೆ ಅಂದ ಮಾವ. ಮನೆಗೆ ಬಂದು ನೋಡಿದೆವು, ಕೀಲಿ ಹಾಕಿತ್ತು. ಗಾಬರಿಯಾಗಿ ಬಾಜೂ ಮನಿಯವರನ್ನ ಮಾವ ಕೇಳಿದ, ಎಲ್ಲರೂ ಹೊಲಕ್ಕ ಕೆಲಸಕ್ಕ ಹೋಗಿದಾರು ಅಂದರು. ಬಂದ ಹಾದಿಗೆ ಸುಂಕವಿಲ್ಲದಂತೆ ಮಾವ ಮತ್ತ ನನ್ನ ಹೆಗಲಮ್ಯಾಲ ಕುಂಡ್ರಿಸಿಕೊಂಡ ನಡಕೊಂತ ಯಾದವಾಡ ಊರಿಗೆ ಬಂದ (ಯಾದವಾಡ್ದಾಗ ಹಳ್ಳಿಗೇರಿಮಠ ಅಂತಾ ನಮ್ಮ ಮಾವನ ಹೆಂಡತಿ ತವರಮನಿ). ಬೀಗರ ಮನಿಗೆ ಹೋಗಿ ಇಬ್ಬರೂ ಹೊಟ್ಟಿತುಂಬ ಊಟ ಮಾಡಿದೆವು. ಸಂಜೀಮುಂದ ಮಾವ ನನ್ನ ಕರಕೊಂಡ ನಡಕೊಂತ ಶಿಬಾರಗಟ್ಟಿ ಮ್ಯಾಲ ಹಾದು ಲೋಕೂರಿಗೆ ಬರುವದರೊಳಗ ರಾತ್ರಿ ಆಗಿತ್ತು.

ಹೀಂಗ ಮಾವ ಲೋಕೂರಿಗೆ ಕರಕೊಂಡ ಹೋಗಿ ಅಲ್ಲಿಯೇ ಕನ್ನಡ ಶಾಲೆಗೆ ಹೆಸರು ಹಚ್ಚಿದ. ಅಲ್ಲಿ ಒಂದನೇ ಇಯತ್ತೆಯಿಂದ ಏಳನೇ ಇಯತ್ತೆ ವರೆಗೆ ಪ್ರಾಥಮಿಕ ಶಾಲೆ ಮುಗಿಸಿದೆ.

ಲೋಕೂರಾಗ ನಮ್ಮ ಅವ್ವನ ತವರಮನೆತನ ಶ್ರೀಮಂತ ಮನೆತನ. ಮನ್ಯಾಗ ಒಕ್ಕಲುತನ ಇತ್ತು –ಎರಡು ಎತ್ತು, ಎರಡು ಕ್ವಾಣ, ನಾಕಯ್ದು ಎಮ್ಮಿ ಇದ್ದವು. ಹೀಂಗಾಗಿ ಹಾಲು, ಮೊಸರು, ಮಜ್ಜಿಗೆಗೆ ಏನೂ ಕೊರತೆ ಇರಲಿಲ್ಲ. ನಾನು ಲೋಕೂರಾಗ ಇದ್ದಾಗ ಬಡತನ ಅಂದ್ರು ಏನು ಅನ್ನುವುದು ಗೊತ್ತ ಇದ್ದಿರಲಿಲ್ಲ. ಹಾಂಗ ನಾ ಬೆಳೆದೆ.

ನಮ್ಮ ಅವ್ವ ೨ ತಿಂಗಳಿಗೊಮ್ಮೆ ೩ ತಿಂಗಳಿಗೊಮ್ಮೆ ಲೋಕೂರಿಗೆ ಬಂದು ನಮ್ಮ ಮಾವಗಳಂತೇಕ ಕಾಳು, ಕಡಿ, ಸೇಂಗಾ, ಬೆಲ್ಲದ ಪೆಂಟಿ ತಗೊಂಡು ಧಾರವಾಡಕ್ಕೆ ಬರುತ್ತಿದ್ದಳು. ಅವ್ವನ ಕೂಡ ನಾನು ಕಾಳು ಕಡಿ ಹೊತಗೊಂಡ ಬೆಟಗೇರಿಗೆ ಬಂದ ಬಸ್‌ನ್ಯಾಗ ಇಟ್ಟು ಕೊಡತಿದ್ನಿ. ಅವ್ವ ಧಾರವಾಡಕ್ಕೆ ಹೋಗೂಮುಂದ ಹತ್ತು ಪೈಸೆ ಕೊಡುತ್ತಿದ್ದಳು. ಆ ಹತ್ತು ಪೈಸೆದಾಗ ಚುರಮರಿ ಕಾರದಾನಿ ತಗೊಂಡು ತಿನಕೊಂತ ತಿರುಗಿ ಲೋಕೂರಿಗೆ ಬರತಿದ್ನಿ.

ಲೋಕೂರಾಗ ಅವ್ವನ ತಂಗಿ, ಅಂದರ ನಮ್ಮ ಚಿಗವ್ವ ಇದ್ದಳು. ಗೌರವ್ವ ಚಿಗವ್ವಗ ಮದುವೆ ವಯಸ್ಸು ಮೀರಿದ್ದರೂ ಕಂಕಣಬಲ ಕೂಡಿ ಬಂದಿರಲಿಲ್ಲ. ಚಿಗವ್ವ ಅಕ್ಕನ ಮಗ ಅಂತಾ ನನ್ನ ಮ್ಯಾಲ ಬಹಳ ಪ್ರೀತಿ ಇದ್ದಳು. ನನ್ನ ಹೊಟ್ಟಿ ನೆತ್ತಿ ನಮ್ಮ ಚಿಗವ್ವ ನೋಡಿದಂಗ ಯಾರೂ ನೋಡುತ್ತಿರಲಿಲ್ಲ. ನನ್ನ ಬಗ್ಗೆ ಬಹಳ ಕಾಳಜಿ ಮಾಡುತ್ತಿದ್ದಳು. ಹೀಂಗಾಗಿ ಚಿಗವ್ವ ನನಗ ಅವ್ವ ಆದಾಂಗ ಆಗಿದ್ದಳು.

ನಾನು ೩ ನೇ ಇಯತ್ತೆಗೆ ಬಂದಾಗ ನಮ್ಮ ಚಿಗವ್ವಗ ಕಂಕಣಬಲ ಕೂಡಿಬಂತು. ತೇಗೂರು ಹಿರೇಮಠದ ಶಿವಲಿಂಗಯ್ಯಗ ನಮ್ಮ ಚಿಗವ್ವನ ಕೊಟ್ಟು ಮದುವೆ ಮಾಡಿದರು. ಚಿಗವ್ವ ಲೋಕರೂಢಿಯಂತೆ ಗಂಡನ ಮನೆಗೆ ಹೊರಟು ತಯಾರಾದಳು. ಆಗ ನನ್ನ ಬಿಟ್ಟ ಹೋಗಾಕ ಬಹಳ ಒದ್ದಾಡಿದಳು. ಒಂದು ಮಾತು ಹೇಳಿದಳು, 'ಎಪ್ಪಾ ಶಿವು, ಬಹಳ ಜ್ವಾಕೆಪ್ಪಾ' (ಅಂತ ನನ್ನ ತಲಿಮ್ಯಾಲ ಕೈ ಆಡಿಸಿಕೊಂತ) 'ಹಳ್ಳಕ್ಕ ಈಸ್ಯಾಡಕ ಹೋದರ ದಂಡ್ಯಾಗ ಈಸ್ಯಾಡು, ಒಳಗ ಹೋಗಬ್ಯಾಡ. ಮನ್ಯಾಗ ಎಲ್ಲಾರೂ ಹೇಳಿದಂಗ ಕೇಳಪಾ. ಅವರ ಕೈಯಾನ ಬಾಯಾನ ಮಾತು ಕೇಳು, ಅಂದರ ನಿನಗ ಉಣ್ಣಾಕ ತಿನ್ನಾಕ ನೋಡತಾರ. ಯಾರ ಕೂಡೂ ನ್ಯಾಯಾ ಮಾಡಬ್ಯಾಡ' ಅಂತ ನನಗ ಬುದ್ಧಿಮಾತು ಹೇಳಿ ಚಕ್ಕಡಿ ಹತ್ತಿ ಗಂಡನಮನಿಗೆ ಹೋದಳು. ನಮ್ಮ ಚಿಗವ್ವನ ಚಕ್ಕಡಿ ಹಿಂದ ಹಳ್ಳದ ಮಟ ಹೋದೆ, ಶಿವು ನೀನು ಮನೆಗೆ ನಡೀಪಾ ಅಂದಳು. ಆಕಿ ಹತ್ತಿದ ಚಕ್ಕಡಿ ತಿರುಗಿತಿರುಗಿ ನೋಡಿಕೊಂತ ಮನೆಗೆ ಬರುವಾಗ ನಾನು ತಿರುಗಿ ನೋಡಿದಾಗೊಮ್ಮೆ ನಮ್ಮ ಚಿಗವ್ವ ಚಕ್ಕಡಿಯೊಳಗ ಕುತಗೊಂಡ ಮನೆಗೆ ಹೋಗಪಾ ಹೊತ್ತು ಆತು, ಮನೆಗೆ ಹೋಗಪಾ ಹೊತ್ತು ಆತ, ಅಂತ ಕೈಸನ್ನೆ ಮ್ಯಾಲೆ ಹೇಳುತ್ತಿದ್ದಳು. ಕಣ್ಣೀರು ಒರಸಿಕೊಂತ ಮನೆಗೆ ಬಂದೆ. ಚಿಗವ್ವ ಹೋದ ಮ್ಯಾಲೆ ೩-೪ ದಿನ ಜೀವಕ್ಕೆ ಸಮಾಧಾನವಿರಲಿಲ್ಲ.

ಮುಂದ ನಮ್ಮ ಅಮ್ಮ (ನಮ್ಮ ತಾಯಿಯ ಮಲತಾಯಿ) ನನ್ನ ಜ್ವಾಪಾನಾ ಮಾಡಿದಳು. ಏನೇ ಅಂದರೂ ನಮ್ಮ ಚಿಗವ್ವ ನನ್ನ ಹೊಟ್ಟಿ ನೆತ್ತಿ ನೋಡಿದಾಂಗ ಯಾರೂ ನೋಡಲಿಲ್ಲ. ಶಾಲೆ ಬ್ಯಾಸಗಿ ಸೂಟಿ ಬಿಟ್ಟಿತು. ನಮ್ಮ ಅವ್ವನ ಅಪ್ಪನ ನೋಡಾಕ ಅಂತ ಧಾರವಾಡಕ್ಕೆ ಬಂದೆ. ಇಲ್ಲಿ ನಮ್ಮ ಅಪ್ಪ ಕೂಲಿ ಕೆಲಸಕ್ಕೆ ಹೋಗಿದ್ದರು. ಮನ್ಯಾಗ ತಿನ್ನಾಕ ಉಣ್ಣಾಕ ಇರತಿರಲಿಲ್ಲ. ಅದನ್ನ ನೋಡಿ ನನಗೆ ಬಡತನ ಅಂದ್ರ ಏನು ಅನ್ನುವುದು ಗೊತ್ತ ಆಗಾಕ ಹತ್ತಿತು. ಅಷ್ಟೊತ್ತಿಗೆ ನನಗೂ ತಿಳಿವಳಿಕೆ ಬರಾಕ ಶುರು ಆಗಿತ್ತು.

ಅಂತೂ ೭ ನೇ ಇಯತ್ತೆಗೆ ಬಂದೆ. ನಮ್ಮ ಚಿಗವ್ವ ಹಡಿಯಾಕ ಅಂತಾ ತವರಮನಿಗೆ ಲೋಕೂರಿಗೆ ಬಂದಳು. ಬಂದ ಒಂದ ತಿಂಗಳೊಳಗ ಚಿಗವ್ವ ತೀರಿಕೊಂಡಳು. ಆದರ ಕೂಸು ಮಾತ್ರ ಇತ್ತು. ನನಗ ಆಗಾಗ ನಿಮ್ಮ ತಂಗಿ ಎತಗೊಂಬಾರೋ ಶಿಪು ಅಂತ ಕರೀತಿದ್ದಳು. ನಾನು ಹೋಗಿ ನನ್ನ ಖಾಸ ತಂಗಿ ಅಂತ ತಿಳಕೊಂಡ ಎತ್ತಕೊಂಡ ಅಡ್ಡಾಡತಿದ್ನಿ ಮನ್ಯಾಗ. ನಮ್ಮ ಚಿಗವ್ವ ತೀರಿಕೊಂಡ ಬಳಿಕ ನಮ್ಮ ಅಮ್ಮ ಆ ಕೂಸಿನ್ನ ಹೂ ಜ್ವಾಪಾನಾ ಮಾಡಿದಂಗ ಮಾಡಿದಳು. ಆದರೂ ನಮ್ಮ ಚಿಗವ್ವ ಸತ್ತ ೩ ತಿಂಗಳ ಮ್ಯಾಲ ಕೂಸುನೂ ಸತ್ತುಹೋತು. ಇವತ್ತಿಗೂ ನಮ್ಮ ಚಿಗವ್ವನ ನೆನಪು ನನಗೆ ಹೋಗಿಲ್ಲ, ಮನಸ್ಸಿನ್ಯಾಗ ಹಚ್ಚಹಸರಾಗಿ ಉಳದೈತಿ.

ಲೋಕೂರಾಗ ೭ ನೇತ್ತೆಯ ವರೆಗೆ ಶಾಲೆ ಮುಗಿಸಿದೆ. ಆವಾಗ ನಮ್ಮ ಮಾವ (ತಾಯಿ ಅಣ್ಣ) ಶಿವಪುತ್ರಯ್ಯ, ನೀನು ಇಲ್ಲೇ ಇದ್ದುಬಿಡು, ಒಕ್ಕಲುತನ ಮಾಡಿಕೊಂತ ನಮ್ಮ ಮನ್ಯಾಗ, ನೀನು ದೊಡ್ಡವನಾದ ಬಳಿಕ ನಿನಗ ಲಗ್ನಾನೂ ನಾನ ಮಾಡತೇನೆ ಅಂದ. ಆಗ ನಾನು ಸಣ್ಣವ, ತಿಳಿವಳಿಕೆ ಸಾಲದು. ನಮ್ಮ ಅವ್ವನ ಅಪ್ಪನ ಕೇಳತೇನಿ, ಅವರ ಹ್ಯಾಂಗ ಹೇಳತಾರ ಹಂಗ ಮಾಡತೇನಿ ಅಂದೆ. ಮಾವ ಧಾರವಾಡಕ ಟಪಾಲ ಬರದ, ನಮ್ಮ ಅಪ್ಪನ್ನ ಲೋಕೂರಿಗೆ ಕರೆಸಿದ. ಅಪ್ಪ ಲೋಕೂರಿಗೆ ಬಂದ. ಒಂದು ದಿನ ಇದ್ದ. ಮರುದಿನ ನನ್ನ ಕರಕೊಂಡ ಧಾರವಾಡಕ್ಕ ಹೊಂಟ ತಯಾರಾದ. ನಮ್ಮ ಅಮ್ಮಗ ನಮ್ಮ ಮಾವಗ ಹುಡಗನ್ನ ಕರಕೊಂಡ ಧಾರವಾಡಕ್ಕ ಹೋಗತೇನಿ ಅಂತಾ ಹೇಳಿದ. ಅದಕ್ಕ ಅಮ್ಮ ಮಾವ, ಅಲ್ಲೋ ಮಲ್ಲಯ್ಯಾ, ನಿನ್ನ ಬಡತನದಾಗ ಶಿವಪುತ್ರಗ ಸಾಲಿ ಕಲಿಸಾಕ ಆಕ್ಕತೇನೋ ಅಂತ ಕೇಳಿದರು. ನಮ್ಮ ಅಪ್ಪ ಹೇಳಿದ, 'ನಾವು ಗಂಡ ಹೆಂಡತಿ ಉಪವಾಸ ಇದ್ದ ಆದರೂ ನನ್ನ ಮಗನ್ನ ಸಾಲಿ ಕಲಸತೇನಿ' ಅಂತ ಹೇಳಿ ಕರಕೊಂಡ ಬಂದ.

ಇನ್ನೂ ಸಾಲಿ ಚಾಲೂ ಆಗಿರಲಿಲ್ಲ. ಸೂಟಿ ಬಿಟ್ಟಿತ್ತು. ನನಗ ಧಾರವಾಡದಾಗ ಮೊದಮೊದಲು ಜೀವ ಗಮಸಲಿಲ್ಲ. ಮತ್ತ ಲೋಕೂರಿಗೆ ಹೋಗಬೇಕು ಅಂತ ಅನಿಸುತ್ತಿತ್ತು. ನಮ್ಮ ಅಪ್ಪಗ ಅವ್ವಗ ನಾ ಸಾಲಿ ಕಲಿಯಾಕ ಒಲ್ಲೆ, ನನ್ನ ಲೋಕೂರಿಗೆ ಕಳಿಸಿ ಬಿಡಿರಿ, ನಾ ಹೊಕ್ಕೇನಿ ಅಂದೆ. ಆಗ ಅಪ್ಪ ಅವ್ವ ನನಗ ತಿಳಿಸಿ ಹೇಳಿದರು. ನಾ ಹ್ಞೂ ಅಂದೆ. ೧೯೭೨ ರಿಂದ ಧಾರವಾಡದಲ್ಲಿ ಉಳಿದೆ.

ಧಾರವಾಡದಾಗ ಅಪ್ಪ ಕಿತ್ತೂರ ಚೆನ್ನಮ್ಮ ಪಾರ್ಕಿನಲ್ಲಿ ದಿನಗೂಲಿ ಕೆಲಸಕ್ಕ ಹೊಕ್ಕಿದ್ದರು. ದಿನಕ್ಕೆ ಎರಡು ರೂಪಾಯಿ ಪಗಾರ ಇತ್ತು. ನಮ್ಮ ಅವ್ವ ದಿನಾಲೂ ಮಂದೀ ಹೊಲಕ್ಕ ಕೆಲಸಕ್ಕೆ ಹೊಕ್ಕಿದ್ದಳು. ಅವ್ವಗ ದೀಡ ರೂಪಾಯಿ ಕೂಲಿ ಕೊಡುತಿದ್ದರು. ಅದು ವಾರದಾಗ ೪ ದಿನ ಕೆಲಸ ಹತ್ತಿತ್ತು, ೩ ದಿನ ಕೂಲಿ ಇರತಿರಲಿಲ್ಲ. ಹಿಂಗಾಗಿ ನಮ್ಮ ಅವ್ವ ಅಪ್ಪಗ ತಮ್ಮಿಬ್ಬರ ಹೊಟ್ಟಿ, ನಾವು ಐದು ಜನ ಗಂಡುಮಕ್ಕಳು ಒಬ್ಬಾಕಿ ತಂಗಿ ಒಟ್ಟು ಎಂಟು ಮಂದೀ ಹೊಟ್ಟಿ ತುಂಬುಸೂದು ಅಂದರ ದೊಡ್ಡ ಗುಡ್ಡಾನ ಆಗಿತ್ತು.

ಧಾರವಾಡ ಕಮಲಾಪುರದಾಗ ಗದಗೆಯ್ಯ ಹಿರೇಮಠರದು ಬಹಳ ಶ್ರೀಮಂತ ಮನೆತನ. ಅವರದು ೧೬ ಎತ್ತಿನ ಕಮತ ಇತ್ತು. ಅವ್ವ ಅವರ ಹೊಲದ ಕೆಲಸಕ್ಕ ಹೊಕ್ಕಿದ್ದಳು. ಅಕಸ್ಮಾತ್

ಹೊಲದಾಗ ಕೆಲಸ ಇಲ್ಲದೇ ಇದ್ದಾಗ ಅವರ ಮನ್ಯಾಗ ಕಾಳುಕಡಿ ಹಸನು ಮಾಡುವದು, ಕಾರಾ ಕುಟ್ಟುವದು, ದನಗಳ ಚಾಕರಿ ಮಾಡುವದು ಮಾಡುತ್ತಿದ್ದಳು. ಗದಗೆಯ್ಯಜ್ಜನ ಹೆಂಡತಿ ಪಾರ್ವತೆಮ್ಮ. ಈ ಗದಗೆಯ್ಯನವರ ಮಗ ಪ್ರೊ. ಎ. ಜಿ. ಹಿರೇಮಠ ಅವರು. ಇವರ ಮನ್ಯಾಗ ಕಾಳುಕಡಿ ಕಸ ಮಾಡಿ ನಮ್ಮ ಅವ್ವ ಮನಿಗೆ ಬರುವ ಹೊತ್ತಿಗೆ ಪಾರ್ವತೆಮ್ಮ ನಮ್ಮ ಅವ್ವಗ ಉಳಿದಿದ್ದ ರೊಟ್ಟಿ, ಪಲ್ಲೆ, ಕಾರ ಕೊಡುತ್ತಿದ್ದಳು. ಮ್ಯಾಲ ಕೂಲೀನೂ ಕೊಡುತ್ತಿದ್ದಳು. ಅವ್ವ ಅವರ ಮನಿಂದ ಬರುವ ಹಾದಿ ನೋಡಕೊಂತ ನಾವು ಆರೂ ಮಂದಿ ಮಕ್ಕಳು ಕುಂತಿರತಿದ್ದಿವಿ. ಬಂದಕೂಡಲೇ ಅವ್ವ ಇನ್ನೂ ಬಾಗಿಲದಾಗ ಇರತಿದ್ದಳು. ನಮ್ಮ ಅವ್ವನ ಕೈಯಾನ ರೊಟ್ಟಿ ಕಸಗೊಂಡ ಗಪ ಗಪ ತಿಂತಿದ್ದಿವಿ. ಮಕ್ಕಳು ತಿನ್ನಾಕ ಬಡಕೊಳ್ಳೋದ ನೋಡಿ, ಅವ್ವ ಅಪ್ಪ ಬರಿ ನೀರು ಕುಡಿದ ಮಲಕೊಂತಿದ್ದರು. ಇಂಥ ಪ್ರಸಂಗ ನನಗೆ ತಿಳಿದಮಟ್ಟಿಗೆ ಕನಿಷ್ಠ ನೂರು ಸಲ ಆಗಿರಬೇಕು. ಇಷ್ಟಾದರೂ ಅವ್ವ ಅಪ್ಪ ನಮ್ಮನ್ನ ಒಂದ ದಿನಾನೂ ಹೊಡಿಲಿಲ್ಲ, ಬಡಿಲಿಲ್ಲ.

ಇನ್ನೊಂದು ಪ್ರಸಂಗ ಹೇಳತೇನಿ. ಒಂದು ದಿನಾ ಅಪ್ಪ ನನ್ನ ಕರಕೊಂಡ (ರವಿವಾರ ಸೂಟಿ ಅಂತ) ಒಬ್ಬರ ಮನಿಗೆ ಕೆಲಸಕ್ಕ ಹೋಗಿದ್ದ. ಅದು ಹುಳ್ಳಿಕೇರಿ ಚಾಳಿನ್ಯಾಗ ಮಾಲಕರ ಮನಿ. ಮುಂಜಾನೆಯಿಂದ ಸಂಜೆತನ ಕೆಲಸ ಮಾಡಿದೆವು. ಸಂಜೆಗೆ ಆ ಹುಳ್ಳಿಕೇರಿ ಮಾಲಕರು 'ಏ ಮಲ್ಲಯ್ಯ, ನಿನ್ನ ಮಗನ ಕರಕೊಂಡ ಇಲ್ಲೇ ಊಟ ಮಾಡಿ ಹೋಗು' ಅಂದರು. ನಮ್ಮ ಅಪ್ಪ ಅವರಿಗೆ ಅಂದ, 'ಸಾಹುಕಾರ. ನಾವೇನು ಊಟ ಒಲ್ಲೆವರಿ, ನಮಗ ಇಬ್ಬರಿಗೂ ಏನ ಊಟಕ್ಕ ಕೊಡಬೇಕ ಅಂತಾ ಮಾಡಿರಿ ಅದನ್ನ ಕಟ್ಟಿಕೊಟ್ಟಬಿಡಿರಿ. ಮನ್ಯಾಗ ನನ್ನ ಇನ್ನೂ ಐದು ಮಕ್ಕಳ ಅದಾವು, ಎಲ್ಲರೂ ಕೂಡಿ ಮನ್ಯಾಗ ಉಣ್ಣತೇವ್ರಿ' ಅಂದ (ನನಗ ಮಾತ್ರ ಅಲ್ಲೇ ಹೊಟ್ಟೆ ತುಂಬ ಉಂಡು ಹೋಗೂ ಮನಸ್ಸು ಇತ್ತು). ಆದರ ಮನೆಗೆ ಕಟಕೊಂಡ ಬಂದದ್ದೆಲ್ಲ ಮಕ್ಕಳಿಗೆ ಹಾಕಿ ನಮ್ಮ ಅವ್ವ ಅಪ್ಪ ಮಾತ್ರ ಹಂಗ ಮಲಕೊಂಡರು. ಹೀಂಗ ನಮ್ಮ ಅವ್ವ ಅಪ್ಪ ನಮ್ಮ ಹೊಟ್ಟೆ ತುಂಬಿಸಿ ಸಾಲಿ ಕಲಿಸಿದರು.

ಮುಂದ ಬ್ಯಾಸಗಿ ಸೂಟಿ ಮುಗದು ಶಾಲೆ ಪ್ರಾರಂಭವಾದವು. ಅಪ್ಪ ನನ್ನ ಲಿಂಗಾಯತರ ಹಾಯಸ್ಕೂಲಿಗೆ (ಆರ್‌ಎಲ್‌ಎಸ್) ಹೆಸರ ಹಚ್ಚತೇನಿ ಅಂತ ೧೯೭೨ ಜೂನ್ ೧ ನೇ ತಾರೀಖಿಗೆ ಹಾಯಸ್ಕೂಲಿಗೆ ಕರಕೊಂಡ ಬಂದ. ೦ -೨೫ ಪೈಸೆಗೆ ಒಂದು ಫಾರ್ಮ್. ಫಾರ್ಮ್ ತುಂಬಿಕೊಂಡು ಪಾಳೆ ಹಚ್ಚಿದೆವು. ಆಗ ಹೆಡ್‌ಮಾಸ್ಟರ್ ಪಿ. ಯು. ಕೋರೆ ಅಂತ ಇದ್ದರು. ೭ ನೇ ಇಯತ್ತೆಗೆ ೭೦೦ ಕ್ಕೆ ೫೬೦ ಮಾರ್ಕ್ಸ್ ತಗೊಂಡಿದ್ದೆ, ಅಂದರ ೮೦ ಶೇಕಡಾ ಆಗಿತ್ತು. ಅದನ್ನ ಹೆಡ್‌ಮಾಸ್ಟರ್ ನೋಡಿ ಹೆಸರು ಕೇಳಿ 'ಸ್ವಾಮಿನ ನೀನು' ಅಂತ ಅಂದ 'ನಿನಗ ಫೀ ತಕ್ಕೊಳ್ಳಂದಿಲ್ಲ, ಹಂಗ ಹೆಸರು ಹಚ್ಚಗೊಂತೇನಿ' ಅಂತ ಹೆಸರು ಹಚ್ಚಗೊಂಡರು. ಅಂತೂ ಆರ್‌ಎಲ್‌ಎಸ್ ಹಾಯಸ್ಕೂಲಿಗೆ ಪ್ರವೇಶ ಸಿಕ್ಕಿತು. ಹರಕ ಅರಿವಿ ಹಾಕ್ಕೊಂಡು ಸಾಲಿಗೆ ಹೋದೆ. ಅದನ್ನು ನೋಡಿ ಒಂದು ವಾರದೊಳಗೆ 'ಬಿಳಿ ಅಂಗಿ ಖಾಕಿ ಚೊಣ್ಣ' ಹಾಕ್ಕೊಂಡು ಸಾಲಿಗೆ ಬರಬೇಕು ಅಂತಾ ಕ್ಲಾಸ್‌ಮಾಸ್ತರ್ ಹೇಳಿದರು. ಹ್ಞೂ ಅಂದೆ.

ಆದರ ಯುನಿಫಾರ್ಮ್ ಹೊಲಿಸಲಿಕ್ಕೆ ರೊಕ್ಕ ಇರಲಿಲ್ಲ. ದಿನಾಲೂ ಸುಳ್ಳು ಹೇಳಿ ಒಂದು ತಿಂಗಳು ಮುಂದೂಡಿದೆ. ಒಂದು ತಿಂಗಳ ಮ್ಯಾಲೆ ಶಾಲೆಯಲ್ಲಿ ಕೇಳಲಿಲ್ಲ. ೮ ನೇ 'ಸಿ' ಕ್ಲಾಸಿನಲ್ಲಿದ್ದೆ, ಕ್ಲಾಸ್‌ಮಾಸ್ತರು ಜಿ. ಆರ್. ಶಿವಳ್ಳಿ ಅಂತ ಇದ್ದರು. ಫಸ್ಟ್ ಪಿರೇಡಿಗೆ ಅಟೆಂಡನ್ಸ್ ತಗೊಳ್ಳೊಮುಂದ (ಎಲ್ಲರದೂ ಯುನಿಫಾರ್ಮ್ ಚೆಕ್ ಮಾಡತಿದ್ದರು). ಯುನಿಫಾರ್ಮ್ ಹಾಕ್ಕೊಂಡು ಬಾ ಅಂತ ನನ್ನ ಹೊರಗ ಹಾಕಿದರು.

ಹೊರಗ ಹೋದೆ. ಆದರ ಕಿಡಕಿಯ ಬಳಿ ಹೊರಗೆ ಕುಳಿತು ಅವರು ಹೇಳಿದ ಪಾಠವನ್ನೆಲ್ಲಾ ಬರೆದುಕೊಂಡು, ಅವರ ಕ್ಲಾಸ್ ಮುಗಿದ ಕೂಡಲೇ ಮತ್ತೆ ಓಡಿ ಹೋಗಿ

ಒಳಗೆ ಕ್ಲಾಸಿನಲ್ಲಿ ಕುಳಿತುಕೊಳ್ಳುತ್ತಿದ್ದೆ. ಹೀಗೆ ೮-೧೦ ದಿನ ಮಾಡಿದೆ. ಆದರೂ ನಡೆಯಲಿಲ್ಲ. ಈ ವಿಷಯ ಅಪ್ಪನ ಮುಂದೆ ಹೇಳಿರಲಿಲ್ಲ. ಹೇಳಿದರೂ ಅವರ ಹತ್ತಿರ ಯುನಿಫಾರ್ಮ್ ಹೊಲಿಸಲು ರೊಕ್ಕ ಹತ್ತು ಪೈಸೆ ಇರಲಿಲ್ಲ. ಹೊಟ್ಟೆ ತುಂಬಿಕೊಳ್ಳುವುದೇ ದೊಡ್ಡದಾಗಿತ್ತು.

ಕಡೆಗೆ ಒಂದು ಉಪಾಯ ಮಾಡಿದೆ. ಕಮಲಾಪುರದಾಗ ನಮ್ಮ ಮನೆಹೊಂದಿಗೆ ಚೆನ್ನಯ್ಯ ಗುಮ್ಮಗೋಳಮಠ ಅಂತಾ ಇದ್ದಾರೆ. ಅವರ ಮಗ ಬಸವರಾಜ ಆರ್‌ಎಲ್‌ಎಸ್ ಹಾಯಸ್ಕೂಲಿಗೆ ಬರುತ್ತಿದ್ದ. ನಾನು ಅವನು ಕೂಡಿ ಶಾಲೆಗೆ ಹೋಗುತ್ತಿದ್ದೆವು. ಅವನಿಗೆ ಹೇಳಿ ಅವರ ಅಪ್ಪನ ಹತ್ತಿರ ೫ ರೂಪಾಯಿ ಸಾಲ ಕೊಡಿರಿ ಅಂತಾ ಕೇಳಿದೆ. ಶನಿವಾರ ಮಧ್ಯಾಹ್ನ ಮತ್ತು ರವಿವಾರ ನಿಮ್ಮ ಹೊಲದ ಕೆಲಸಕ್ಕೆ ಬಂದು ಆ ಸಾಲ ತೀರಿಸುತ್ತೇನೆ ಅಂತಾ ಹೇಳಿದೆ. ಅವರು ನನಗೆ ಐದು ರೂಪಾಯಿ ಸಾಲ ಕೊಟ್ಟರು (ಇವರನ್ನು ನಾನು ಎಂದೂ ಮರೆಯುವುದಿಲ್ಲ). ಆರ್‌ಎಲ್‌ಎಸ್ ಹಾಯಸ್ಕೂಲ ಕಂಪೌಂಡ್‌ದಲ್ಲಿಯೇ ಲಿಂಗಾಯತ ಬೌನಹಾಲದಲ್ಲಿ ಆಗ 'ಜನತಾ ಬಜಾರ' ಅಂತಾ ಇತ್ತು. ಅಲ್ಲಿ ರೂ. ೧-೨೫ ಗೆ ಒಂದು ಮೀಟರ್ ಬಿಳಿ ಅರಿವೆ ಮತ್ತು ೧-೭೫ ಗಳಿಗೆ ಖಾಕಿ ಚೊಣ್ಣದ ಅರಿವೆ ಸಿಗುತ್ತಿತ್ತು. ಅಲ್ಲಿ ಒಂದು ಮೀಟರ ಖಾಕಿ ಅರಿವೆ (ಹಾಫ್ ಪ್ಯಾಂಟಿಗೆ), ಒಂದೂವರೆ ಮೀಟರ್ ಬಿಳಿ ಅರಿವೆ ಖರೀದಿಸಿದೆ (ಹಾಫ್ ಶರ್ಟಿಗೆ). ೫ ರೂ. ಗಳಲ್ಲಿ ೩-೬೫ ಹೋಗಿ ೧-೩೫ ಪೈಸೆ ಉಳಿಯಿತು. ಆದರೆ ಹೊಲಿಯಲು ಹಾಫ್ ಪ್ಯಾಂಟಿಗೆ ೧-೨೫ ಇತ್ತು, ಹಾಫ್ ಶರ್ಟಿಗೆ ೦-೭೫ ಇತ್ತು. ಎರಡೂ ಹೊಲಿಯಲು ಹಾಕಿದೆ. ಹೊಲಿಗೆ ಕೂಲಿ ಎರಡೂ ಸೇರಿ ೨ ರೂ. ಆಯಿತು. ಆದರೆ ನನ್ನ ಹತ್ತಿರ ೧-೩೫ ಪೈಸೆ ಮಾತ್ರ ಉಳಿದಿತ್ತು. ಇನ್ನೂ ೦-೬೫ ಪೈಸೆ ಏನು ಮಾಡುವುದು ಅಂತಾ ವಿಚಾರ ಮಾಡಿದೆ. ಮತ್ತೆ ಅದೇ ಗುಮ್ಮಗೋಳಮಠ ಚೆನ್ನಯ್ಯನವರ ಹತ್ತಿರ ಹೋದೆ. ಇದ್ದ ವಿಷಯ ತಿಳಿಸಿದೆ. ಅವರು ಒಂದು ಕೆಲಸ ಕೊಟ್ಟರು. ನಮ್ಮ ಹೊಲದಲ್ಲಿ ೯ ಚಕ್ಕಡಿ ಗೊಬ್ಬರದ ಗುಂಪಿಗಳನ್ನು ಅಲ್ಲಲ್ಲಿ ಬಿಟ್ಟಿದೆ. ಆ ಗೊಬ್ಬರ ಗುಂಪಿಗಳನ್ನು ಹೊಲದ ತುಂಬಾ ಸೂರ ಮಾಡಿದರೆ (ಹೊಲದಲ್ಲಿ ಹರವಿದರೆ) ಒಂದು ಚಕ್ಕಡಿಗೆ ೧ ರೂ. ನಂತೆ ಒಟ್ಟು ೯ ರೂ. ಕೊಡುತ್ತೇನೆ ಅಂತಾ ಹೇಳಿದರು. ಮಾರನೆ ದಿನ ರವಿವಾರ ಇತ್ತು, ಹ್ಞೂ ಅಂದೆ. ಬೆಳಿಗ್ಗೆ ೬ ಗಂಟೆಗೆ ಹೊಲಕ್ಕೆ ಹೋಗಿ ಗೊಬ್ಬರ ಹರವಲು ಶುರು ಮಾಡಿದೆ. ಹೊತ್ತು ಮುಳಗಿ ಕತ್ತಲಾದರೂ ಬಿಡಲಿಲ್ಲ. ಎಲ್ಲ ಗೊಬ್ಬರ ಹೊಲದ ತುಂಬಾ ಹರವಿ ಬಂದೆ. ಮನೆಗೆ ಬಂದು ಕೈಕಾಲು ಮುಖ ತೊಳೆದುಕೊಂಡು ಅವರ ಮನೆಗೆ ಹೋದೆ. ಎಲ್ಲ ಕೆಲಸ ಮುಗಿಸಿದ್ದೇನೆ. ಒಂಬತ್ತು ರೂಪಾಯಿಗಳಲ್ಲಿ ನೀವು ಕೊಟ್ಟ ೫ ರೂ. ಸಾಲ ಮುರಿದುಕೊಂಡು ಉಳಿದ ೪ ರೂ. ಕೊಡಿರಿ ಎಂದೆ.

ಆಗ ಚೆನ್ನಯ್ಯನವರು ಹೌಹಾರಿದರು. ಒಂದೇ ದಿನದಲ್ಲಿ ೯ ಚಕ್ಕಡಿ ಗೊಬ್ಬರ ಹೇಗೆ ಹರವಿದೆ ಅನ್ನುತ್ತಾ. ನಾಳೆ ಹೋಗಿ ನೀನು ಮಾಡಿದ ಕೆಲಸ ನೋಡಿ ನಿನ್ನ ಕೂಲಿ ಕೊಡುತ್ತೇನೆ ಅಂತಾ ಅಂದರು. ಸರಿ ಹ್ಞೂ ಅಂದೆ. ಮಾರನೇ ದಿನ ಶಾಲೆಗೆ ಹೋಗುವ ಮುನ್ನವೇ ಅವರನ್ನು ಕರೆದುಕೊಂಡು ಹೊಲಕ್ಕೆ ಹೋಗಿ ಮಾಡಿದ ಕೆಲಸ ತೋರಿಸಿದೆ. ಚೆನ್ನಯ್ಯನವರು ಬಹಳ ಖುಶಿಪಟ್ಟರು. ಅಷ್ಟೇ ಅಲ್ಲದೆ ನನ್ನ ಬೆನ್ನ ಚಪ್ಪರಿಸಿ ೧೦ ರೂ. ಕೂಲಿ ಕೊಡುತ್ತೇನೆ ಅಂತಾ ಹೇಳಿ ೫ ರೂ. ಮುರಿದುಕೊಂಡು ಉಳಿದ ೫ ರೂ. ಕೊಟ್ಟರು. ನನಗೆ ಆಗ ಒಂದು ಕೋಟಿ ರೂಪಾಯಿ ಸಿಕ್ಕಷ್ಟೇ ಸಂತೋಷವಾಯಿತು. ಮನೆಗೆ ಬಂದು ಅಪ್ಪನ ಮುಂದೆ ಹೇಳಿದೆ. ಅದಕ್ಕೆ ಅಪ್ಪ 'ಎಪ್ಪಾ. ನೀನು ಇನ್ನೂ ಸಣ್ಣಾವ್ನ. ನಿನ್ನ ರಟ್ಟಿ ಇನ್ನೂ

ಬಲತಿಲ್ಲ. ಇಂಥಾ ದೊಡ್ಡ ದೊಡ್ಡ ಕೆಲಸಕ್ಕ ಹೋಗಬೇಡಪ್ಪಾ' ಅಂದಳು. ಹೌದವ್ವ ಯಪ್ಪಾ. ನೀನು ಹೇಳೂದು ಖರೆ ಐತಿ. ಸುಮ್ಮನ ಕುಂತಿದ್ದರ ೧೦ ರುಪಾಯಿ ಯಾರ ಕೊಡತಿದ್ದರು ಹೇಳವ ಅಂದೆ. ಅದಕ್ಕೆ ಮತ್ತೆ ಅವ್ವ. ಎಪ್ಪಾ. ನಾ ಹಡದೇನಿ ಅಂತಾ ನಿಮ್ಮ ಹಣೆಬರಹ ಬೇರೆ ಬರದಿಲ್ಲ. ನಿಮ್ಮ ನಸೀಬದಾಗ ಏನ ಐತಿ ಅದ ಆಕ್ಕೇತಿಪಾ. ನಾನರ ಏನ ಮಾಡಲಿ. ದೇವರ ದೊಡ್ಡಾವ್ನು. ನೀನು ಶಾಣ್ಯಾ ಆಗಿ ದುಡಿಯೋಕ ಹತ್ತಿದ ಬಳಿಕರ ನಮ್ಮ ಬಡತನ ಕಡಿಮೆಯಾದೀತು. ಅದಕ್ಕೆ ನೀನು ಶಾಣ್ಯಾ ಆಗಬೇಕಪಾ' ಅಂತ ಅಂದಳು.

೮ ನೇತ್ತ ಮುಗಿಯೂ ವರೆಗೂ ಒಂದೆ ಹಾಫ್ ಪ್ಯಾಂಟ್ ಒಂದು ಹಾಫ್ ಶರ್ಟ್ ಯುನಿಫಾರ್ಮ್‌ನಲ್ಲಿ ಶಾಲೆ ಕಲಿತೆ. ನಂತರ ಬೇಸಿಗೆಯ ಸೂಟಿಯಲ್ಲಿ ಮನೆಯನ್ನು ಕಟ್ಟುವ ಕೆಲಸಕ್ಕೆ (ಗೌಂಡಿಯ ಕೈಯಲ್ಲಿ ಆಳಿನ ಕೆಲಸಕ್ಕೆ) ಹೋಗಲು ಪ್ರಾರಂಭಿಸಿದೆ. ಆಗ ದಿನಕ್ಕೆ ನನಗೆ ೧-೭೫ ರೂ. ಕೂಲಿ ಕೊಡುತ್ತಿದ್ದರು. ೨ ತಿಂಗಳ ಸೂಟಿಯೊಳಗ ದುಡಿದು ಒಂದುನೂರು ರೂಪಾಯಿ ಮಾಡಿಕೊಂಡೆ. ಅದರಲ್ಲಿ ಅರ್ಧ ಹಣ ಮನೆಯ ಸಂತಿಗೆ ಕೊಟ್ಟು ಉಳಿದ ಅರ್ಧದಲ್ಲಿ ಯುನಿಫಾರ್ಮ್, ನೋಟಬುಕ್ಸ್. ಪುಸ್ತಕ ತಗೊಂಡೆ.

ನಾನು ೯ ನೇ ಇಯತ್ತೆಗೆ ಬರುವ ಹೊತ್ತಿಗೆ ಅವ್ವ ಕೂಲಿ ಕೆಲಸ ಬಿಟ್ಟು (ದುಡಿದ ಕೂಲಿ ಹೊಟ್ಟೆಗೆ ಸಾಲದ್ದಕ್ಕೆ) ಪೇಟೆಯಲ್ಲಿ ಕಾಯಿಪಲ್ಲೆ ವ್ಯಾಪಾರ ಶುರು ಮಾಡಿದಳು. ಬೆಳಿಗ್ಗೆ ಅಪ್ಪ ಕೆಲಸಕ್ಕೆ ಹೋದ ನಂತರ ಅವ್ವ ನಮಗೆ ಅಡುಗೆ ಮಾಡಿ ಇಟ್ಟು ಬೆಳಿಗ್ಗೆ ೯ ಗಂಟೆಗೆ ಭಾಗವಾನರ ಅಂಗಡಿಯಲ್ಲಿ ಕಾಯಿಪಲ್ಲೆ ಉದ್ರಿ ತೆಗೆದುಕೊಂಡು ಬೆಳಿಗ್ಗೆಯಿಂದ ಸಂಜೆಯ ವರೆಗೆ ಪೇಟೆಯಲ್ಲಿ ಕುಳಿತು ಮಾರಿ ಅವರ ಹಣ ಕೊಟ್ಟು ಉಳಿದ ೫ - ೧೦ ರೂ. ಗಳಲ್ಲಿ ದಿನಾಲು ಸಂತಿ ಮಾಡಿಕೊಂಡು ಬರುತ್ತಿದ್ದಳು.

ನಾನು ಸಂಜೆ ೫-೩೦ ಕ್ಕೆ ಶಾಲೆ ಬಿಟ್ಟ ಕೂಡಲೇ ಪೇಟೆಯಲ್ಲಿ ಅವ್ವನ ಹತ್ತಿರ ಹೋಗಿ ಮೊದಲು ಆಕೆ ಹತ್ತಿರ ಇದ್ದ ಹಸಿ ಕಾಯಿಪಲ್ಲೆಯಲ್ಲಿ ಸೌತೆಕಾಯಿ, ಟೊಮೆಟೊ ಹಣ್ಣು ತಿಂದು ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದೆ. ನಂತರ ನನ್ನ ಕೈಯಲ್ಲಿ ಅರ್ಧ ಕಿಲೋ ಅಕ್ಕಿ ಕೊಡಿಸುತ್ತಿದ್ದಳು. ಅಕ್ಕಿ ಮತ್ತು ಟೊಮೆಟೊ ಹಣ್ಣು ಮನೆಗೆ ತಂದು. ಅಕ್ಕಿ ಹಸನು ಮಾಡಿ. ಅಕ್ಕಿ ಅನ್ನ ಮಾಡಿದರೆ ಎಲ್ಲರಿಗೂ ಸಾಲುವದಿಲ್ಲ ಅಂತ ಬಹಳಷ್ಟು ನೀರು ಹಾಕಿ ಅಕ್ಕಿಹುಗ್ಗಿ ಮಾಡುತ್ತಿದ್ದೆ. ನಂತರ ನಾನೇ ಟೊಮೆಟೊ ಹಣ್ಣಿನ ಸಾರು ಮಾಡುತ್ತಿದ್ದೆ. ತಮ್ಮಂದಿರು ಕನ್ನಡ ಶಾಲೆಗೆ ಹೋಗುತ್ತಿದ್ದರು. ಅವ್ವ ಕಾಯಿಪಲ್ಲೆ ಮಾರಿಕೊಂಡು ರಾತ್ರಿ ೯-೩೦ ಕ್ಕೆ ಅಥವಾ ೧೦ ಗಂಟೆಗೆ ಮನೆಗೆ ಬರುತ್ತಿದ್ದಳು. ಹೀಂಗಾಗಿ ಅವ್ವ ಅಪ್ಪ ಬರುವುದರೊಳಗೆ ತಮ್ಮಂದಿರನ್ನು ತಂಗಿಯನ್ನು ಊಟ ಮಾಡಿಸಿ ಮಲಗಿಸಿ, ನನ್ನ ಅಭ್ಯಾಸ ಮಾಡಿಕೊಳ್ಳುತ್ತಿದ್ದೆ.

ನಮ್ಮ ಅವ್ವ ಕಾಯಿಪಲ್ಲೆ ವ್ಯಾಪಾರ ಪ್ರಾರಂಭಿಸಿದ ಬಳಿಕ ನಮ್ಮ ಬಡತನ ಸ್ವಲ್ಪ ಕಡಿಮೆಯಾಯಿತು. ಇದೇ ರೀತಿ ಅವ್ವ ಕಾಯಿಪಲ್ಲೆ ವ್ಯಾಪಾರ ಮಾಡುತ್ತ, ನಮ್ಮ ತಂದೆ ಕೆ. ಸಿ. ಪಾರ್ಕನಲ್ಲಿ ದಿನಗೂಲಿ ಕೆಲಸ ಮಾಡುತ್ತ ನನ್ನ ಎಸ್‌ಎಸ್‌ಎಲ್‌ಸಿ ವರೆಗೆ ಓದಿಸಿದರು. ಮುಂದಿನ ಅಭ್ಯಾಸಕ್ಕೆ ಕಾಲೇಜಿಗೆ ಹೆಸರು ಹಚ್ಚಲು ನಮ್ಮ ತಂದೆ ತಾಯಿಗೆ ಆಗಲಿಲ್ಲ. ಅನಿವಾರ್ಯವಾಗಿ ಶಾಲೆಯನ್ನು ಬಿಡಬೇಕಾಯಿತು.

ಹಾಯಸ್ಕೂಲ್ ಮುಗಿಸಿ ಧಾರವಾಡ ಸುಭಾಸ ರಸ್ತೆಯಲ್ಲಿರುವ ಡಿ. ಎಸ್. ಹದಳಗಿ ಅವರ ಭಾಂಡೆ ಅಂಗಡಿಯಲ್ಲಿ ಕೆಲಸಕ್ಕೆ ಸೇರಿದೆ. ವಾರಕ್ಕೆ ೨೦ ರೂಪಾಯಿ ಪಗಾರ ಕೊಡುತ್ತಿದ್ದರು. ಇಷ್ಟೊತ್ತಿಗೆ ನನ್ನ ಎರಡನೇ ತಮ್ಮ ಸಿಂಗಯ್ಯನದು ೭ ನೇತ್ತ ಮುಗಿಯಿತು. ಅವನಿಗೂ ಮುಂದೆ ಶಾಲೆ ಕಲಿಸಲು ನಮ್ಮ ತಂದೆ ತಾಯಿಗೆ ಆಗಲಿಲ್ಲ. ಅವನು ಶಾಲೆ

ಬಿಟ್ಟು ಗುಳೇದಗುಡ್ಡ ಅವರ ಸಿದ್ದಬಟ್ಟೆ ಅಂಗಡಿಯಲ್ಲಿ ಕೆಲಸಕ್ಕೆ ಸೇರಿದ. ಅವನಿಗೆ ವಾರಕ್ಕೆ ೧೦ ರೂ. ಪಗಾರ ಕೊಡುತ್ತಿದ್ದರು.

ನಾವಿಬ್ಬರೂ ಕೆಲಸಕ್ಕೆ ಸೇರಿದ ಬಳಿಕ ನಮ್ಮ ಬಡತನ ಸ್ವಲ್ಪ ಕಡಿಮೆಯಾಯಿತು. ೩ ತಿಂಗಳು ಮಾತ್ರ ಭಾಂಡೆ ಅಂಗಡಿಯಲ್ಲಿ ಕೆಲಸಕ್ಕೆ ಇದ್ದೆ. ಅಷ್ಟೊತ್ತಿಗೆ ನಮ್ಮ ಕಾಕಾ ನನ್ನನ್ನು ೧೯-೭-೧೯೭೫ ನೇ ದಿನ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ (ಆಗಿನ ಸಂಘದ ಪ್ರಧಾನ ಕಾರ್ಯದರ್ಶಿಗಳಾಗಿದ್ದ ಡಾ. ಎಂ. ಎಂ. ಕಲಬುರ್ಗಿ ಅವರಿಗೆ ಹೇಳಿ) ಜವಾನ ಅಂತಾ ಕೆಲಸಕ್ಕೆ ಸೇರಿಸಿದರು. ಕೆ. ಎಸ್. ದೇಶಪಾಂಡೆ ಅವರು ಸಂಘದ ಕಾರ್ಯಾಧ್ಯಕ್ಷರಾಗಿದ್ದರು. ಕೆಲಸಕ್ಕೆ ಸೇರಿದೆ. ಪಗಾರ ಇನ್ನೂ ಗೊತ್ತು ಮಾಡಿರಲಿಲ್ಲ. ಸಂಘದಲ್ಲಿ ಕಾರ್ಯಕಾರಿ ಸಮಿತಿ ಸಭೆಯು ನಡೆದಿತ್ತು. ಕೆ. ಎಸ್. ದೇಶಪಾಂಡೆ ಅವರು ಮತ್ತು ಡಾ. ಕಲಬುರ್ಗಿ ಅವರು ಚರ್ಚೆ ಮಾಡಿ ತಿಂಗಳಿಗೆ ೧೦೦ ರೂ. ಪಗಾರ ಗೊತ್ತು ಮಾಡಿದರು. ಮನೆಗೆ ಹೋಗಿ ನಮ್ಮ ತಂದೆ ತಾಯಿಗೆ ನೂರು ರೂ. ಪಗಾರ ಗೊತ್ತುಮಾಡಿದ ವಿಷಯ ತಿಳಿಸಿದೆ. ನನ್ನ ಅಪ್ಪ ಅಮ್ಮನಿಗೆ ಎಲ್ಲಿಲ್ಲದ ಸಂತೋಷವಾಯಿತು. ಆಗ ಮೊದಲನೆಯ ತಿಂಗಳ ಪಗಾರವನ್ನು ಕೊಟ್ಟ ಕೂಡಲೇ ನಮ್ಮ ಅವ್ವ ಅಪ್ಪ ಲೋಕೂರಿಗೆ ಹೋಗಿ ದ್ಯಾಮವ್ವನಿಗೆ ಹಣ್ಣುಕಾಯಿ ಮಾಡಿಸಿಕೊಂಡು ಬಂದರು. ದ್ಯಾಮವ್ವನ ಪ್ರಸಾದ ಕೊಟ್ಟ ನಮ್ಮ ಅವ್ವ, 'ಎಪ್ಪಾ, ನಿನ್ನ ನಸೀಬ ತೆರೆಯಲಿ' ಎಂದು ಆಶೀರ್ವಾದ ಮಾಡಿದಳು. ಆ ಮಾತು ನನಗೆ ದಿನಾ ನೆನಪು ಆಕ್ಕಯ್ತಿ. ನಮ್ಮ ಅವ್ವ ಎಷ್ಟು ದೊಡ್ಡ ಗುಣದಾಕಿ. ತಾನು ಉಪವಾಸ ವನವಾಸ ಮಾಡಿದ್ದನ್ನು ಮರೆತಳು. ಮಕ್ಕಳಿಗೆ ಮಾತ್ರ ಒಳ್ಳೆಯದಾಗಲಿ ಅಂತಾ ಮನಸ ತುಂಬಾ ಹರಸಿದಳು.

ಬರಬರುತ್ತ ನನ್ನ ಇನ್ನುಳಿದ ೩ ಮಂದಿ ತಮ್ಮಂದಿರು ಶಾಲೆಗೆ ಹೊರಟರು. ಖರ್ಚು ಹೆಚ್ಚಾತು. ಅದಕ್ಕ ನಾನು ಸಂಘಕ್ಕೆ ಕೆಲಸಕ್ಕೆ ಬರುವುದಕ್ಕಿಂತ ಮೊದಲು ಮುಂಜಾನೆ ಬೆಳಿಗ್ಗಿ ಎದ್ದು ಹೊಲದ ಕಡೆ ಹೋಗಿ ಉರವಲಕ್ಕೆ ಹತ್ತಿಕಟ್ಟಿಗೆ ಮೆಣಸಿನ ಕಟ್ಟಿಗೆ ಕಿತ್ತುಕೊಂಡು ಬರುತ್ತಿದ್ದೆ. ನಮ್ಮ ತಂದಿನೂ ಕೆ. ಸಿ. ಪಾರ್ಕಿನಲ್ಲಿ ಬಿದ್ದ ಟೆಂಗಿನಗರಿ ಮನೆಗೆ ತಂದು ಅಡಿಗೆ ಮಾಡಲು ಇಡುತ್ತಿದ್ದರು. ಕಟ್ಟಿಗೆ ಸಿಗದಿದ್ದಾಗ ಯಾದವಾಡ ದಾರಿಗುಂಟ ಪತ್ರೆಪ್ಪಜ್ಜನ ಮಠದ ವರೆಗೆ ಹೋಗಿ ನಾನು ದನಗಳ ಶೆಗಣೆ ಹಿಡಿದುಕೊಂಡು ಬರುತ್ತಿದ್ದೆ. ಅವ್ವ ಕುಳ್ಳ ಬಡದ ಒಣಗಿಸಿ ಇಟ್ಟು ಅಡಗಿ ಮಾಡುತ್ತಿದ್ದಳು.

ಹಿಂಗ ಮಾಡಿಕೊಂತ ೧೯೮೨ ನೇ ಇಸ್ವಿಗೆ ನಮ್ಮ ೩ ಮಂದಿ ತಮ್ಮಂದಿರ ಎಸ್‌ಎಸ್‌ಎಲ್‌ಸಿ ಮುಗಿತು. ಅವರನ್ನು ಮುಂದಕ್ಕ ಶಾಲೆಗೆ ಕಳಿಸಲಾಗಲಿಲ್ಲ. ನಮ್ಮ ಅಪ್ಪ ಒಬ್ಬನ್ನ ಕಾಳಿನ ಅಂಗಡಿಯೊಳಗ ಕೆಲಸಕ್ಕ ಸೇರಿಸಿದ. ಇನ್ನೊಬ್ಬನ್ನ ಬ್ಯಾಂಕಿನ ಪಿಗ್ಮಿ ಕೆಲಸಕ್ಕ ಹಚ್ಚಿದ. ಇನ್ನೊಬ್ಬ ತಮ್ಮನ್ನ ಅರಿವೆ ಅಂಗಡಿಯೊಳಗ ಇಟ್ಟಿದ್ದರು. ಕೆ. ಸಿ. ಪಾರ್ಕಿನಲ್ಲಿ ಕೆಲಸ ಮಾಡುತ್ತಿದ್ದ ನಮ್ಮ ಅಪ್ಪಗ ವಯಸ್ಸಾಗೆದ. ಇನ್ನು ನಿನಗೆ ಕೆಲಸ ಸಿಗುವದಿಲ್ಲ ಅಂತಾ ಕೆಲಸದಿಂದ ತೆಗೆದರು. ಆಗ ನಮ್ಮ ಕಾಕಾ ಚಂದ್ರಯ್ಯ. ಶ್ರೀ ಕಡಿ ಅಂತಾ ಕಮೀಶನರ್ ಅವರನ್ನು ಭೆಟ್ಟಿ ಆಗಿ, ಡಾ. ಆರ್. ಸಿ. ಹಿರೇಮಠ ಅವರ ಕಡೆಯಿಂದ ಕಮೀಶನರರಿಗೆ ಹೇಳಿಸಿ, ನಮ್ಮ ತಂದೆ ಕೆಲಸ ಮಾಡುತ್ತಿದ್ದ ದಿನಗೂಲಿ ಮಾಲಿ ಹುದ್ದೆಗೆ ನಮ್ಮ ತಮ್ಮ ಸಿಂಗಯ್ಯನನ್ನು ಸೇರಿಸಿದರು. ಅವನು ಹತ್ತು ವರ್ಷ ದಿನಗೂಲಿ ಕೆಲಸ ಮಾಡಿದ ಮ್ಯಾಲ ೧೯೮೭ ರಲ್ಲಿ ಸುಪ್ರೀಮ ಕೋರ್ಟು ಆದೇಶದ ಪ್ರಕಾರ ಕರ್ನಾಟಕ ಸರಕಾರದ ಎಲ್ಲ ದಿನಗೂಲಿ ನೌಕರರು ಖಾಯಂ ಅಂತಾ ಆದೇಶ ನೀಡಿದರು. ಅದರೊಳಗ ನಮ್ಮ ತಮ್ಮನ ಹೆಸರು ಸೇರಿತ್ತು.

ನಾನು ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ೧೯೭೫ ರಿಂದ ಜವಾನ ಅಂತಾ ಕೆಲಸಕ್ಕೆ ಸೇರಿದ್ದೆ. ಆಗ ಶ್ರೀ ಎ. ಬಿ. ಮುರಗೋಡ ಅಂತ ಹೆಡ್‌ಕ್ಲಾರ್ಕ್ ಇದ್ದರು. ಅವರು ನನಗೆ ಮಾರ್ಗದರ್ಶನ ಮಾಡಿದರು. 'ಏ ತಮ್ಮಾ ಶಿವಪುತ್ರ, ಎಸ್‌ಎಸ್‌ಎಲ್‌ಸಿ ಆಗೇತಿ ಅಂತೀ. ನೀ ಹೀಂಗ ಎಷ್ಟು ದಿವಸ ಅಂತ ಕಸಗೂಡಿಸುವ ಕೆಲಸ ಮಾಡತಿ. ಕನ್ನಡ ಇಂಗ್ಲೀಷ ಟೈಪಿಂಗ್ ಕಲಿ. ಮುಂದ ನಿನಗ ಬಹಳ ಉಪಯೋಗ ಆಗತದ' ಅಂದರು. ಮುರಗೋಡ ಅವರು ಹೇಳಿದ ಪ್ರಕಾರ ೧೯೭೭ ರಲ್ಲಿ ಮೊದಲು ಇಂಗ್ಲೀಷ ಟೈಪಿಂಗ್ ಕಲಿಯಲಿಕ್ಕೆ ಶುರು ಮಾಡಿದೆ. ನಂತರ ಕನ್ನಡ ಟೈಪಿಂಗ್ ಕಲಿಯಲಿಕ್ಕೆ ಶುರು ಮಾಡಿದೆ. ೧೯೮೧ ಕ್ಕೆ ಅಂದರೆ ಎರಡೂ ಜ್ಯೂನಿಯರ್, ಸೀನಿಯರ್ ಪರೀಕ್ಷೆ ಸೆಕೆಂಡ ಕ್ಲಾಸಿನಲ್ಲಿ ಪಾಸಾದೆ.

೧೯೭೫ ರಿಂದ ೧೯೮೧ ರ ವರೆಗೆ ಸಂಘದಲ್ಲಿ ಜವಾನ ಅಂತಾ ಸೇವೆ ಸಲ್ಲಿಸಿದ್ದನ್ನು ಗಮನಿಸಿ, ಕನ್ನಡ ಮತ್ತು ಇಂಗ್ಲೀಷ ಟೈಪಿಂಗ್ ಪಾಸಾಗಿದ್ದನ್ನು ಪರಿಶೀಲಿಸಿ ಟೈಪಿಸ್ಟ್ ಕಮ್ ಕ್ಲಾರ್ಕ ಅಂತಾ ಪ್ರಮೋಶನ್ ಕೊಟ್ಟರು. ಅಷ್ಟೊತ್ತಿಗೆ ಮುರಗೋಡ ಅವರು ಸಂಘದ ಸೇವೆಯಿಂದ ನಿವೃತ್ತರಾಗಿ ಪುಣೆಗೆ ಹೊರಟರು. ಹೋಗುವಾಗ ಅವರನ್ನು ರೇಲ್ವೆ ಸ್ಟೇಶನದ ವರೆಗೆ ಟ್ರೇನ್ ಹತ್ತಿಸಲು ಹೋಗಿದ್ದೆ. ಆಗ ನನಗೆ ಒಂದು ಮಾತು ಹೇಳಿದರು. 'ಏ ಶಿವಪುತ್ರ, ನೀನು ಶ್ಯಾಣ್ಯಾ ಅದಿ, ಎಕ್ಸ್‌ಟರ್ನಲ್ ಪರೀಕ್ಷೆ ಕುಳಿತು ಡಿಗ್ರಿ ಮಾಡಿಕೊ. ಸಂಘದ ಹಣದ ವ್ಯವಹಾರದಾಗ ಬಹಳ ಹುಷಾರ. ಸಂಘದ ಹಣ ಅಂದರ ಸಾರ್ವಜನಿಕರ ರೊಕ್ಕ. ಪ್ರಾಮಾಣಿಕತನದಿಂದ ಕೆಲಸ ಮಾಡಬೇಕು. ದೇವರು ನಿನಗ ಸುಖ ಕೊಡತಾನ' ಅಂತಾ ಹೇಳಿ ರೇಲ್ವೆ ಹತ್ತಿದರು.

ಮುರಗೋಡ ಅವರ ಹುದ್ದೆಗೆ ಶ್ರೀ ಎಲ್. ಎಲ್. ಯರಗಟ್ಟಿ ಅಂತಾ ಸಂಘದ ಸೇವೆಗೆ ಬಂದರು. ಅವರು ನನಗೆ ಅಕೌಂಟ್ಸ್ ಬರೆಯಲಿಕ್ಕೆ ಕಲಿಸಿದರು. ಸಂಘದ ಚುನಾವಣೆಯಾಗಿ ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ ಅವರು ಪ್ರಧಾನ ಕಾರ್ಯದರ್ಶಿ ಅಂತಾ ಆಯ್ಕೆಯಾಗಿ ಬಂದರು. ಅವರ ಕೈಯೊಳಗ ೬-೭ ವರ್ಷ ಕೆಲಸ ಮಾಡಿದೆ. ನಾನು ಟೈಪಿಂಗ್ ಕಲಿತರೂ ಭಾಷಾಜ್ಞಾನ ಅಷ್ಟು ಚೆನ್ನಾಗಿರಲಿಲ್ಲ. ಸಂಘದ ಪತ್ರವ್ಯವಹಾರ ಮಾಡುವಾಗ ಡಾ. ಪಟ್ಟಣಶೆಟ್ಟಿ ಅವರು ನನಗೆ ಟೈಪಿಂಗ್ ಮಾಡಲಿಕ್ಕೆ ಡಿಕ್ಟೇಶನ್ ಕೊಡುತ್ತಿದ್ದರು. ಇದರಿಂದ ನನಗೆ ಸಾಕಷ್ಟು ಭಾಷಾಜ್ಞಾನ ಆಯಿತು. ೧೯೮೫ ರಲ್ಲಿ ಸಂಘದ ಸೇವೆಯಿಂದ ಯರಗಟ್ಟಿ ಅವರು ನಿವೃತ್ತರಾದ ಕೂಡಲೇ ಖಾಲಿಯಾದ ಕಚೇರಿ ಅಧೀಕ್ಷಕ ಹುದ್ದೆಗೆ ನನಗೆ ಸಂಘದವರು ಪ್ರಮೋಶನ್ ಕೊಡುತ್ತಾರೊ ಇಲ್ಲವೋ ಅಂತಾ ವಿಚಾರಮಗ್ನನಾಗಿದ್ದೆ. ಆದರೆ ಆಗಿನ ಕಾರ್ಯಾಧ್ಯಕ್ಷರಾದ ಡಾ. ಎಂ. ಎಸ್. ಸುಂಕಾಪುರ ಅವರು ಮತ್ತು ಪ್ರಧಾನ ಕಾರ್ಯದರ್ಶಿಗಳಾಗಿದ್ದ ಡಾ. ಪಟ್ಟಣಶೆಟ್ಟಿ ಅವರು ನನ್ನ ಪ್ರಮೋಶನ್ ವಿಷಯ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಪ್ರಸ್ತಾಪಿಸಿ ಠರಾವು ಪಾಸು ಮಾಡಿ ಪ್ರಮೋಶನ್ ಕೊಟ್ಟರು.

ಈ ವಿಷಯ ನಮ್ಮ ತಂದಿ ತಾಯಿಗೆ ತಿಳಿಸಿದೆ. ಅವರಿಗೆ ಬಹಳ ಸಂತೋಷ ಆಯಿತು. 'ನಿನ್ನ ಗುಣಕ ಮೆಚ್ಚಿ ನಿನಗ ಹೆಚ್ಚಿನ ಕೆಲಸ ಕೊಟ್ಟಾರು, ಬಹಳ ಜ್ವಾಕಿಂದ ಕೆಲಸಾ ಮಾಡಪಾ' ಅಂತಾ ಹೇಳಿದರು. ಅವರ ಪಾದಗಳಿಗೆ ನಮಸ್ಕರಿಸಿದೆ.

೧೯೮೬ ನೇ ಇಸ್ವಿ ಮಾರ್ಚ್ ೧೭ ಕ್ಕೆ ನನ್ನದು ಮತ್ತು ನನ್ನ ತಮ್ಮ ಸಿಂಗಯ್ಯನದು ಇಬ್ಬರದೂ ಮದುವಿ ಧಾರವಾಡ ಉಳವಿ ಬಸವೇಶ್ವರ ದೇವಸ್ಥಾನದಲ್ಲಿ ಮಾಡಿದರು. ೧-೪-೧೯೮೬ ರಿಂದ ಸಂಘದಲ್ಲಿ ನನ್ನ ನೌಕರಿ ಖಾಯಂ ಮಾಡಿ ಸರಕಾರಿ ವೇತನಶ್ರೇಣಿ

ಕೊಡಲಿಕ್ಕೆ ಶುರು ಮಾಡಿದರು. ಇಲ್ಲಿಗೆ ನಮ್ಮ ಬಡತನ ಪೂರ್ಣ ಕಡಿಮೆ ಆಯಿತು. ದುಡಿದ ಹಣದೊಳಗೆ ಸ್ವಲ್ಪ ಸ್ವಲ್ಪ ಹಣ ಕೂಡಿ ಇಡಲು ಪ್ರಾರಂಭಿಸಿದೆ. ನಮ್ಮ ತಮ್ಮಂದಿರುಗಳಿಗೆ ನೌಕರಿ ಸಿಕ್ಕಿರಲಿಲ್ಲ. ಅವರಿಗೆ ಗೂಡ್ಸ್ ಟೆಂಪೂ ಕೊಡಿಸಿದೆ. ನಮ್ಮ ತಮ್ಮಂದಿರು ಬಹಳ ಒಳ್ಳೆಯ ರೀತಿಯಿಂದ ದುಡಿದು ಒಂದು ಗಾಡಿಗೆ ಎರಡು ಗಾಡಿ ಮಾಡಿದರು. ಮುಂದೆ ಟ್ರಕ್ ತಗೊಂಡರು. ಹಿಂಗ ಎಲ್ಲರದೂ ಜೀವನ ಸಂತೋಷದಿಂದ ಸಾಗಿತು.

ನನಗೆ ಮೊದಲಿನಿಂದಲೂ ಡಿಗ್ರಿ ಪಡಕೋಬೇಕು ಅಂತಾ ಆಸೆ ಇತ್ತು. ಅವಕಾಶ ಸಿಕ್ಕಿರಲಿಲ್ಲ. ಆದರೆ ಒಂದು ದಿನ ಅಕಸ್ಮಾತ್ ಶ್ರೀ ವೆಂಕಟೇಶ ಕುಲಕರ್ಣಿ ವಕೀಲರು ಮತ್ತು ಶ್ರೀ ಎಚ್. ಸಿ. ಮೊಗಲಿ ವಕೀಲರು ಸೇರಿ ಸಂಘದಲ್ಲಿ ಕುಳಿತ ಕಾಲಕ್ಕೆ, 'ಶಿವಪುತ್ರಪ್ಪ, ನೀನು ಬಿ.ಎ. ಪರೀಕ್ಷೆಗು ಯಾಕ ಕುಳಿತುಕೊಳ್ಳಬಾರದು ?' ಅಂತಾ ಕೇಳಿದರು. ನಾನು ಸಂಘದ ಎಡೆಬಿಡದ ಕೆಲಸಗಳಲ್ಲಿ ನನಗೆ ಅಭ್ಯಾಸ ಮಾಡಲು ವೇಳೆ ಸಿಗುವುದಿಲ್ಲ. ಹೀಗಾಗಿ ಬಿಟ್ಟಿದ್ದೇನೆ ಅಂತ ಹೇಳಿದೆ. ಆದರೆ ಕುಲಕರ್ಣಿ ಅವರು ಮಾತ್ರ, 'ಮನಸ್ಸು ಮಾಡಿದರೆ ಎಲ್ಲಾ ಆಗುತ್ತದೆ. ನೀನು ಪ್ರಯತ್ನ ಮಾಡು' ಅಂದರು. ಹೂಂ ಅಂದೆ. ಮುಂದೆ ನಿಷ್ಕಾಳಜಿ ಮಾಡಿದೆ, ಮತ್ತೆ ವೆಂಕಟೇಶ ಕುಲಕರ್ಣಿ ಅವರು ಪುನಃ ಪುನಃ ನನ್ನನ್ನು ಕೇಳಲು ಪ್ರಾರಂಭಿಸಿದರು. ನನಗೂ ಸುಳ್ಳ ಹೇಳಿ ಹೇಳಿ ಸಾಕಾಯಿತು. ಕೊನೆಗೆ ಪರೀಕ್ಷೆ ಕುಳಿತುಕೊಳ್ಳಬೇಕು ಅಂತಾ ಗಟ್ಟಿ ಮನಸ್ಸು ಮಾಡಿದೆ. ಆಗ ನೇರವಾಗಿ ಬಿ.ಎ. ಪರೀಕ್ಷೆಗೆ ಕೂಡ್ರಬೇಕೋ ? ಅಥವಾ ಎಂ. ಎ. ಪರೀಕ್ಷೆಗೆ ಕುಳಿತುಕೊಳ್ಳಬೇಕೋ ಅಂತಾ ಮನಸ್ಸಿನ್ಯಾಗ ಗೊಂದಲ ಪ್ರಾರಂಭವಾಯಿತು. ಆವಾಗ ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ ಅವರನ್ನು ಭೆಟ್ಟಿ ಆಗಿ ವಿಚಾರಿಸಿದೆ. ಅವರು 'ಶಿವಪುತ್ರ, ಕೂಡ್ರುವುದು ಕೂಡತೀರಿ, ೩ ವರ್ಷ ಹೋದರ ಹೋಗಲಿ. ನೀವು ನೇರವಾಗಿ ಎಂ.ಎ. ಪರೀಕ್ಷೆಗೆ ಕೂಡ್ರಿ' ಅಂದರು. ನನಗೆ ಯಾಕೋ ಧೈರ್ಯ ಸಾಲವಲ್ಲದರಿ ಅಂದೆ. ಆಗ ಡಾ. ಪಟ್ಟಣಶೆಟ್ಟಿ ಅವರು ನನ್ನ ಬೆನ್ನ ಚಪ್ಪರಿಸಿ 'ನೀವು ಪ್ರಯತ್ನ ಮಾಡರಿ ಶಿವಪುತ್ರ, ಪಾಸ ಆಕ್ಕೀರಿ' ಅಂದರು. ಅವರು ಹೇಳಿದ ಧೈರ್ಯದ ಮ್ಯಾಲ ಮೈಸೂರು ಯುನಿವರ್ಸಿಟಿ ಎಂ.ಎ. ಕನ್ನಡ ವಿಷಯ ತಗೊಂಡು ಪರೀಕ್ಷೆ ಕುಳಿತೆ. ೧೯೯೮ ಕ್ಕೆ ಎಂ.ಎ. ಅಂತಿಮ ಪರೀಕ್ಷೆ ದ್ವಿತೀಯ ದರ್ಜೆಯಲ್ಲಿ ಪಾಸಾದೆ.

ನಮ್ಮ ತಂಗಿ ಅನಸೂಯಾನ್ನ ನಮ್ಮ ಅತ್ತಿ ಮಗ ರುದ್ರಯ್ಯಗ ಕೊಟ್ಟು ಲಗ್ನ ಮಾಡಿದ್ವಿವಿ. ಆಗಿ ನಾಲ್ಕು ವರ್ಷ ಆದರೂ ಮಕ್ಕಳಾಗಿರಲಿಲ್ಲ. ಆದರ ೧೯೯೯ ಜೂನ್ ೩೦ ನೇ ತಾರೀಖಿನ ದಿನ ಡಿಲೆವರಿ ಆಗುವ ವೇಳೆಯಲ್ಲಿ ಫಿಟ್ಸ್ (ಶೆಟಿಬ್ಯಾನಿ) ಬಂದು ಮಧ್ಯಾಹ್ನ ಕೂಸು ತೀರಿಕೊಂಡಿತು. ಸಂಜೆಯ ಹೊತ್ತಿಗೆ ತಂಗಿ ತೀರಿಕೊಂಡಳು. ಆವಾಗಿನಿಂದ ನಮ್ಮ ತಂದಿ ತಾಯಿಗೆ ಸ್ವಲ್ಪ ಮಾನಸಿಕ ಪರಿಣಾಮವಾಯಿತು. ಆವಾಗ ಆವಾಗ ನಮ್ಮ ತಂಗಿ ನೆನಪ ಮಾಡಿಕೊಂಡ ಅಳತಿರತಾರ ಮತ್ತು ನಮ್ಮನ್ನ, ಮೊಮ್ಮಕ್ಕಳನ್ನ ನೋಡಿ ದುಃಖ ಮರಿತಾರ. ಈ ರೀತಿಯೊಳಗೆ ನಮ್ಮ ಅವ್ವ ಅಪ್ಪ ನಮ್ಮ ಸಲುವಾಗಿ ಕಷ್ಟಪಟ್ಟಿದ್ದ ನೋಡಿದರ ಏಳುಜನ್ಮ ಎತ್ತಿ ಬಂದರೂ ಅವರ ಋಣ ತೀರಸಲಿಕ್ಕೆ ಆಗುವುದಿಲ್ಲ. ಈಗ ನಮ್ಮ ಅವ್ವಗ ೭೦ ವಯಸ್ಸು. ಅಪ್ಪಗ ೭೫. ಇಷ್ಟೆಲ್ಲ ಕಷ್ಟಪಟ್ಟು ನಮ್ಮನ್ನ ದೊಡ್ಡವರನ್ನ ಮಾಡಿದ ತಂದಿ ತಾಯಿ ನಮ್ಮ ಕಣ್ಣಿಗೆ ಕಾಣುವ ದೇವರು.

■ ▼

ಶಿವಪುತ್ರ ಮ. ರಾಚಯ್ಯನವರ, ಅಧೀಕ್ಷಕರು
ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ - ೫೮೦ ೦೦೧ ☎ : ೦೮೩೬ - ೪೪ ೦೨೮೩

ಏಳು ಕವಿತೆಗಳು

ಎಸ್. ಜಿ. ಸಿದ್ಧರಾಮಯ್ಯ

೧. ಹೂತ ಮೌನ

ಕೊಡುವ ಸ್ಥಾನದಲ್ಲಿ ಕುಳಿತಿದ್ದೇನೆಂದರೆ
ಕೊಡಲು ನೀನಾರು ಪಡೆಯಲು ನಾನಾರು ?
ಕೊಡು - ಪಡೆಗಳೆಂಬುವು
ನಾನು ನೀನಿನ
ನೀನು ನಾನಿನ
ಅಪಸ್ವರಗಳು.
ನಾನೆಂಬುದು ನಾನಲ್ಲ
ನೀನೆಂಬುದು ನೀನಲ್ಲ
ನೀನಾ ನಾದದ ಬೇರ ಬೆಂಕಿಗೊಡ್ಡಲು
ನಾನೀ ನಾದವ ನೀ ಕೇಳುವೆ
ನೀನಾ ನಾದವ ನಾ ಕೇಳುವೆ
ಕೇಳುವೆನೆಂಬುದು ಕೆಪ್ಪರ ಮಾತು
ಮಾತೆಂಬುದು ಮಾತಲ್ಲ
ಸೋತ ಶಬ್ದದಲ್ಲಿ ಹೂತ ಮೌನ
ಅಂಗೈಯ ಹುಣ್ಣಿಗೆ ಕನ್ನಡಿ ಹುಡುಕುವಲ್ಲಿ
ಬೆನ್ನ ಫಣಿಗೆ ಬೇರನೆಲ್ಲಿ ಬೆದಕಲಿ ?
ಅಪರಿಮಿತದ ವಿಪರೀತದಲ್ಲಿ
ಆದಿಯೆಂಬುದು ಅನಾದಿ
ಅನಾದಿಯೆಂಬುದು ನಿನಾದ.
ನಾದದ ಹಾದಿಯಲ್ಲಿ
ವೇದ ಮೃಗಜಲ
ಗಾದೆ ಗಂಗಾಜಲ.

೨. ದೀಪ

ಊರೂರು ಸುತ್ತಿ ನೂರಾರು ಕೆರೆ ಬಾವಿ
ನೀರ ಕುಡಿದರು ನಿಲುಕಲಿಲ್ಲ ನಿಜದ ಬೇರು
ನನ್ನದೆನ್ನುವ ಗನ್ನಗತಕ ದಂದುಗ ಕೋಟೆ
ತಿರುಗಣೆಯಲ್ಲಿ ಗಾಣದೆತ್ತು
ತಂಪಾಗಲಿಲ್ಲ ನೆತ್ತಿ
ತವರೂರ ತಿಟ್ಟತ್ತಿ ತಿರುಗಿದರೆ
ಹೊಳೆದಂಡೆ ರಸಬತ್ತಿ
ಬಯಲು ಬೆಂಡಾಗಿತ್ತು

ತಳಮನೆ ತೊರೆದವನ ಎದೆ ಮಾಳದಲ್ಲಿ
ಮುಸುರೆಯಾದ ಬಿತ್ತನೆ
ಅಲುಚಿ ಹೊಡೆದಂತೆ ಒಡಮುರಿದ ಕುಡಿ
ನಡ ಮುರಿಯುವ ದಿಗಿಲು
ಮನೆಯ ಮೂಲೆ ಮುಡುಕುಗಳಲ್ಲಿ
ಕನಸು ಚೆಲ್ಲಿ ಆಕಾಶದಂಗಳದಲ್ಲಿ
ಉರಿ ಮಾರಿ ಸಾಲು ಸುದ್ದಿಯಾದ ಸಮರ ಸಖಿ
ತನುವಾಗದ ಬೀಳಲ್ಲಿ
ಅನುವಾಗದ ನೆಲಬಳ್ಳಿ
ಹೊಗೆಯ ಹೊಯ್ಗೆಯ ಕವುಚಿ
ಮಾತು ಮೂಗುಬ್ಬಸ
ಮನಸು ಕನಸಿನ ನಡುವೆ
ರೆಕ್ಕೆ ಮುರಿದ ಹಕ್ಕಿ ಪಯಣ
ನೆತ್ತರಿಗೆ ಸೀಳುನಾಲಿಗೆ
ಚಾಚಿದ ಕೀಳುದಾರಿ
ಮಾತಿಗೆ ಮೈಯ್ಯಾನುವುದೆಂದರೆ
ಮೌನದ ಮಹಾಗುಡಿಯಲ್ಲಿ
ದೀಪವಾಗುವುದು.

೩. ಬಯಲ ಜೋಗಿ

ನಿಗಿ ನಿಗಿ ಉರಿಯುವ ನಿಜವು
ನಿಚ್ಚಳವಾಗಿ ಕಾಲವಶವಾದ ಜೋಗಿ
ನಡುಮನೆಗೆ ನಡೆದು ಬಂದ
ಬ್ರಹ್ಮಾಂಡ ಹಸಿವಿನಲಿ ಶಬ್ದ ಸ್ಫೋಟಿಸಿ ನಿಂದ.
ನಿಜರೂಪ ಕಂಡದ್ದೆ ಹಸ್ತಮಸ್ತಕದಲ್ಲಿ
ಹಸಿವೆ ಮರೆಯಾಗಿತ್ತು ಕರುಳು ಕೂಗಾಡಿತ್ತು
ಕೂಗು ತಾ ನಿಶಬ್ದ ಕಲ್ಲು ಕರಗುವ ಶಬ್ದ
ರಣ ನಿದ್ದೆಯೊಳಗಿರುವ ಜಗವ ಜಾಗರಿಸೆಂದು
ನಿಗಿ ನಿಗಿ ನಿಚ್ಚಳದಿ ಕರುಳನೆಚ್ಚರಿಸಿದನೆ
ಅಳುವು ಅರತೋಗಿತ್ತು ನಗುವು ಸೆಲೆಯೊಡದಿತ್ತು
ತಪ್ಪು ನುಂಗಿದ ತೆರದಿ ಉಪ್ಪು ನೀರಿನ ಭಾವ
ಬಯಲು ಆಲಯದೊಳಗೊ ಆಲಯವು ಬಯಲೊಳಗೊ
ಬಿಟ್ಟ ಕಣ್ಣುಗಳೆದುರು ಬಯಲು ಜಂಗಮ ಜೋಗಿ

೪. ಚಿತ್ತ

ಚಿತ್ತವೆಂಬುದು ಹುತ್ತದ ಕ್ವಾವೆ
ಮೈಲಾರಲಿಂಗ ॥

ಒಂದರೊಳಗೆ ಒಂದು ಸೇರಿ
ಏಕದೊಳಗನೇಕವಾಗುವ
ಚಿತ್ರವೆಂಬುದು ಹುತ್ತದ ಕ್ವಾವೆ.
ಏನು ಬಂದು ಏನು ಹೋದರು
ಬಾಗು ಬಳುಕಿನ ಆಗು ಹೋಗು
ತೋರದೇನೂ ಒಳಗಿನಾ ಮರುಮ.
ಹೇಳಿ ಕಳೆಯದ ಮಾತಿನಲ್ಲಿ
ಹೆಡೇ ಮಣಿಯ ಜೀವ ಫಲವೋ
ಮಾತು ಸೂತಕವಾದ ಮನದಲಿ
ಕಚ್ಚಿಕೊಲ್ಲುವ ವಿಷದ ಹಲ್ಲೋ
ಚಿತ್ರವೆಂಬುದು ಹುತ್ತದ ಕ್ವಾವೆ
ಮೈಲಾರ ಲಿಂಗ ॥

೫. ಹಾಡು

ಚರಕವೆಂದರೆ ಚಕ್ರ
ಚಕ್ರವೆಂದರೆ ಚರಕ
ಸೌರಮಂಡಲದಲ್ಲಿ ಗತಿ ಹಿಡಿದು
ತಿರುಗೋದು ಭೂಮಿಚಕ್ರ
ಅದ ಹಿಡಿದು ನಡೆದೈತೆ
ಋತುಮಾನ ಚಕ್ರ
ಋತುಶೀಲ ಗತಿಶೀಲ ಕಾಯಕದ ಚಕ್ರ.

೬. ಬುದ್ಧ ನಗು

ಈ ಭೂಮಿ ಒಂದು ಮನೆ ಕೈ ಬೆರಳುಗಳಂತೆ
ಹೆಬೆಟ್ಟು ಕಿರುಬೆಟ್ಟು ನಡುವೆ ಮೂಬೆಟ್ಟು
ಪೈಪೋಟಿಗೆಂದು ಹುಟ್ಟಿದ್ದಲ್ಲ; ಪೂರಕದಲ್ಲಿ
ಕೈ ಕೆಸರು ಬಾಯಿ ಮೊಸರಿನ ತತ್ವ. ಇದು ನಿತ್ಯ
ಜಂಗಮತ್ವ. ದೊಡ್ಡಣ್ಣನೆಂದುಕೊಂಡು ಹರಿವ
ನೀರಿಗೆ ಡೊಣ್ಣೆನಾಯಕನ ಪಾತ್ರವೆ ? ಏನಾಯಿತು
ನೀನು ಕಟ್ಟಿದ ವಿಶ್ವಯಾಪುಲ್ಲಿಯ ಸಾವಿರದಡಿಯ
ಸೌಧ ? ನಿನ್ನ ಸೊಕ್ಕೇ ನಿನಗೆ ವಕ್ಕರಿಸಿದ ಲ್ಯಾಡನ್
ಭೂತ ! ಕುತಂತ್ರವೆಂದರೆ ತನ್ನ ಬುಡಕ್ಕೆ ತಾನೇ
ಹಚ್ಚಿಕೊಟ್ಟ ಸಿಡಿಮದ್ದು. ತನ್ನ ತಾನರಿದಡೆ ನುಡಿಯೆಲ್ಲಾ
ತತ್ವ. ತನ್ನ ತಾ ಮರೆದಡೆ ಮಾತೆಲ್ಲ ಮಾಯೆ
ದುರ್ಯೋಧನನ ತೊಡೆಗೂ ಅಧರ್ಮದ ಗದಾಘಾತ
ನೆರೆ ಹೊರೆಯವರ ತನ್ನಂತೆ ಬಗೆಯದ ದುರಾಸೆಗೆ
ಕುಸೇಡಿನರ್ಥ ಯಾವ ಧರ್ಮದ ಪುರುಷಾರ್ಥ !
ಹಿಂಸೆಯಿಂದಲೆ ಜಗವ ಗೆಲ್ಲುವ ನೆತ್ತರ ಪಿಪಾಸೆಗೆ
ಜೆಹಾದಿನ ಹೆಸರು ಯಾವ ಧರ್ಮದ ಉಸಿರು ?

ಇರಾಕು ಕ್ಯೂಬಾ ಕಾಂದಹಾರ್ ಕಾಶ್ಮೀರ ಕಣಿವೆಗಳ
ಹೆತ್ತೊಡಲ ಆಕ್ರಂದನ ಕದ ತಟ್ಟಿದೆ ಜಗದೆಲ್ಲೆಡೆ
ಅಣ್ವಸ್ತ್ರಗಳ ಅರಗಿನ ಮನೆ ಕಟ್ಟುವ ನಿಜಘಾತುಕ
ತಟ್ಟಲಿಲ್ಲವೆ ನಿನಗೆ ಸಾವು ನೋವಿನ ಸಂಕಟ ಸೂತಕ !

ಬುದ್ಧಂ ಶರಣಂ ಗಚ್ಛಾಮಿ ಸಂಘಂ ಶರಣಂ ಗಚ್ಛಾಮಿ
ಮೂಡಣದ ಮುಗಿಲಲ್ಲಿ ನಿತ್ಯ ನಗುವಿನ ಸೂರ್ಯ
ನಮ್ಮೂರ ಕರಿಯಜ್ಜಿಯು ತೊಡೆತಟ್ಟಿ ಅಲ್ಲಿ ಕಣ್ತೆರೆವ
ಕೂಸಿನ ತುಟಿಗಳಲ್ಲಿ ಪಾರಿವಾಳ ಪಾದದ ಕೆಂಪು.

೭. ಮಾಯದ ಮಳೆ

ಮಾಯದಂತ ಮಳೆಯು ಸುರಿದಿತ್ತೊ
ನಮ್ಮೂರ ಬಾರೆಲಿ
ಮುತ್ತುಗದ ಮರವೆ ಅರಳಿತ್ತೋ
ನಮ್ಮೂರ ಬಾರೆಲಿ.

ನೀರ ತರಲು ಹೋದ ನಾರಿ
ಭೂರಿ ಕೆಂಡವ ತುಳಿದ ಹೊತ್ತು
ಬಾವಿಯೊಳಗೆ ಹಗ್ಗ ಬಿತ್ತು
ಬಿಂದಿಗೇಯು ದಡದಲಿತ್ತು

ಮಾಯದಂತ ಮಳೆಯು ಸುರಿದಿತ್ತೋ
ನಮ್ಮೂರ ಬಾರೆಲಿ.

ಜೋಗಿ ಹೊಳೆಯು ಬಯಲ ತಬ್ಬಿ
ಜೋಡಿ ನಾಗರ ಗುಡಿಯ ಸುತ್ತಿ
ಬೂತಾಳೆ ಮರವೆ ಕೂಗಿತ್ತೋ । ಅಲ್ಲಿ
ಕೆಂದಾವರೆ ತಾಮೆ ಅರಳಿತ್ತೋ

ನಮ್ಮೂರ ಬಾರೆಲಿ
ಮುತ್ತುಗದ ಮರವೆ ನರಳಿತ್ತೋ

ಗುಡೀ ಕಟ್ಟೆ ಗುಡುಗಲಿಲ್ಲ
ಹೊಂಚಿನಾಗರ ಮಿಂಚಲಿಲ್ಲ
ದಾರಿ ತುಳಿದು ನಾರಿ ಮತ್ತೆ
ಮರಳಿ ಮನೆಗೆ ಬರಾಲಿಲ್ಲ

ನಮ್ಮೂರ ಬಾರೆಲಿ
ಮಾಯದಂತ ಮಳೆಯು ಸುರಿದಿತ್ತೋ.

●

ಎಸ್. ಜಿ. ಸಿದ್ಧರಾಮಯ್ಯ, ಹೊಂಬೆಳಗು, ನಲಂದ ಶಾಲೆ ಪಕ್ಕ, ಶೆಟ್ಟಿಹಳ್ಳಿ ಗೇಟ್ ಹತ್ತಿರ,
ತುಮಕೂರು - ೫೭೨ ೧೦೩

ನಮ್ಮ ವಿಮರ್ಶೆಯ ಮುಂದಿರುವ ಹಲವು ಸವಾಲುಗಳು

ರಾ. ಕ. ನಾಯಕ ವಿಮರ್ಶೆ

ಇಂಗ್ಲಿಷ್ ಶಿಕ್ಷಣದ ಪರಿಣಾಮದಿಂದ ನಮ್ಮ ಸಾಹಿತ್ಯ ಹಳೆಯ ಪರಂಪರೆಯನ್ನು ಬಿಟ್ಟು ಹೊಸ ಪರಿಚಿತ ವಿಧಾನಗಳನ್ನು ಕನ್ನಡದಲ್ಲಿ ಅಳವಡಿಸಿಕೊಳ್ಳಲು ಯತ್ನಿಸಿತು. ಇದರ ಫಲವಾಗಿ ಮಹಾಕಾವ್ಯಗಳು ಹಿಂದೆ ಬಿದ್ದು ಚಿಕ್ಕ ಕವನಗಳು ಹುಲುಸಾಗಿ ಬೆಳೆಯತೊಡಗಿದವು. ದೀರ್ಘ ಕಥೆಯ ಹಸಿವನ್ನು ಹಿಂಗಿಸಲು ಕಥೆ-ಕಾದಂಬರಿಯಂಥ ಗದ್ಯರೂಪಗಳು ಬೆಳೆದುಬಂದವು. ಸಂಸ್ಕೃತಕ್ಕಿದ್ದ ಆದರ್ಶ ಪಟ್ಟ ಇಂಗ್ಲಿಷಿಗೆ ಬಂತು. ಎಲ್ಲಕ್ಕಿಂತ ಮುಖ್ಯ ಮಾರ್ಪಾಟೆಂದರೆ ಸಾಹಿತ್ಯವು ಸಾಮಾನ್ಯರ ಭಾಷೆಯಲ್ಲಿ ಸಾಮಾನ್ಯರ ವರೆಗೆ ಮುಟ್ಟಿತು. ಹೀಗಾಗಿ ಹೆಚ್ಚು ದನಿ ಎದ್ದವು. ಹೆಚ್ಚು ಕಿವಿ ನಿಮಿರಿದವು. ಹೆಚ್ಚು ಮನಸ್ಸು ಬಿಚ್ಚಿಕೊಂಡವು. ಸಾಹಿತ್ಯ ಸಾಮಾನ್ಯರ ವ್ಯವಹಾರಗಳಲ್ಲೊಂದಾಯಿತು.

ಔರಂಗಜೇಬನು ಸಂಗೀತಕ್ಕೆ 'ಮುಕ್ತಾಯ' ಮಾಡಿದ್ದರಿಂದ ಆಸ್ಥಾನದಿಂದ ಹೊರಬಿದ್ದ ಸಂಗೀತ ಕೊನೆಗೆ ನಾಟಕದ ಕಟ್ಟೆ ಏರಿ ಸಾಮಾನ್ಯರ ಮಡಿಲಲ್ಲಿ ಪ್ರೋತ್ಸಾಹ ಹೊಂದತೊಡಗಿತು. ಇಂಗ್ಲಿಷ್‌ನಲ್ಲಿ ನಾಟಕಗಳನ್ನೂ ರಾಜಾಜ್ಞೆ 'ಮುಕ್ತಾಯ' ಮಾಡಿದಾಗ ಶೇಕ್ಸ್‌ಪಿಯರನ ನಾಟಕಗಳನ್ನು ಪುಸ್ತಕರೂಪದಲ್ಲಿ ಹೇಗೆ ಹೊರತರಬೇಕೆಂಬ ಯೋಚನೆ ಮೊದಲಾಯಿತು. ಸಂಸ್ಕೃತವು ಬೆರಳೆಣಿಕೆಯ ಕೆಲವರದೇ ಸೊತ್ತಾಗಿ ಉಳಿದ ಅಸಂಖ್ಯ ಸಾಮಾಜಿಕರಿಗೆ ಅಲ್ಲಿ 'ಮುಕ್ತಾಯ' ಆದುದರಿಂದ ಇಂಥ ಬಹುಸಂಖ್ಯ ಶ್ರೀಸಾಮಾನ್ಯರ ಸಲುವಾಗಿ ಇಂಗ್ಲಿಷ್ ಪರಂಪರೆಯ ಪಡಿನೆಳಲಲ್ಲಿ ಆಧುನಿಕ ಸಾಹಿತ್ಯ ಮೈದೋರಿತು.

ಈ ರೀತಿ ಸಾಹಿತ್ಯದ ಕಲಾತ್ಮಕ ಸಾರ್ವತ್ರೀಕರಣಕ್ಕೆ ಹೊಸ ದ್ವಾರಗಳು ನಮ್ಮೆದುರು ತೆರೆದುಕೊಂಡುದು 'ಲಾಭ'ವೆನ್ನಬಹುದಾದರೂ ನಮ್ಮ ದೇಶದಲ್ಲಿ ಸಾವಿರಾರು ವರ್ಷಗಳಿಂದ ಬೆಳೆಸಿಕೊಂಡು ಬಂದಿದ್ದ ಒಂದು ವೈಚಾರಿಕ ಪ್ರವಾಹವು ಒಮ್ಮೆಲೇ ಖಂಡಿತವಾಯಿತು. ನವೋದಯ ಕಾಲದ ಬಹುತರ ಎಲ್ಲ ಹಿರಿಯ ಸಾಹಿತಿಗಳು ಪ್ರಾಚೀನ ಪರಂಪರೆ ಮತ್ತು ಆಧುನಿಕ ಧಾರೆ– ಎರಡನ್ನೂ ಸಂಗಮಿಸಿಕೊಳ್ಳಲು ತಮ್ಮ ಪಾಲಿಗೆ ತಕ್ಕ ಪ್ರಾಮಾಣಿಕ ಪ್ರಯತ್ನಗಳನ್ನು ಮಾಡಿದರು. ಅದರ ಫಲವಾಗಿ ನಮ್ಮದನ್ನು ಪಳೆಯುಳಿಕೆ ಎಂದು ಬಿಂಬಿಸುತ್ತ ಬರುವಾಗಲೆ ಪ್ರವಾಹದೊಂದಿಗೆ ಮುನ್ನಡೆಯಲು ಆಧುನಿಕ ಧಾರೆಯನ್ನು ಹಮ್ಮಿಕೊಂಡೆವು. ಹೀಗಾಗಿ ಆಧುನಿಕ ಧಾರೆಯು ಪ್ರಾರಂಭ ಗ್ರೀಕರಿಂದ ಆದುದರಿಂದ ನಾವೂ ಅದನ್ನೇ ಮೂಲವಾಗಿ ಗ್ರಹಿಸಿ, ರೋಮನ್ನರ ಕೈಯಲ್ಲಿ, ಮುಂದೆ ಫ್ರಾನ್ಸ್, ಜರ್ಮನ್ ಮುಂತಾದ ಯುರೋಪಿಯನ್ನರ ಕೈಯಲ್ಲಿ ಹೇಗೆ ಬೆಳೆದುಬಂತೆಂಬುದನ್ನು ಐತಿಹಾಸಿಕ ಸೂತ್ರ ರೂಪದಲ್ಲಿ ಗ್ರಹಿಸುತ್ತ, ಆಮೇಲೆ ಇಂಗ್ಲಿಷ್ ಮೇಲೆ ಈ ಪಾಶ್ಚಾತ್ಯ ಪ್ರವಾಹ ಬೀರಿದ ಪ್ರಭಾವವನ್ನು ವಿವರವಾಗಿ ಅಧ್ಯಯನ ಮಾಡಿ ನಮ್ಮ ವೈಚಾರಿಕತೆಗೆ ಪಾಶ್ಚಾತ್ಯ ದೀಕ್ಷೆಯನ್ನು ಕೊಟ್ಟು ನಮ್ಮ ವ್ಯಕ್ತಿತ್ವದಲ್ಲಿ ಮೌಲ್ಯಪರಿವರ್ತನೆ (transvaluation) (ತಿರುವು) ಉಂಟಾಗುವಂತೆ ಇಂಬುಗೊಟ್ಟೆವು.

ನವೋದಯ ಕಾಲದವರು ಪ್ರತ್ಯಕ್ಷ ಸಂಬಂಧದಿಂದ ಶ್ರದ್ಧಾಭಾವದಿಂದ ಶ್ರಾದ್ಧವಿಧಿಯಂತೆ ಪ್ರಾಚೀನ ಪರಂಪರೆಯ ಅಧ್ಯಯನವನ್ನು ಅವಲಂಬ್ಯ ಸಾಧನಗಳ ಮಾರ್ಗವಾಗಿ ಪ್ರಾಮಾಣಿಕ ಕಾಪಿಟ್ಟುಕೊಳ್ಳುವಂತೆ ಜೋಪಾನ ಮಾಡುತ್ತ ಬಂದರು. ಅದನ್ನು ವ್ಯವಹಾರಕ್ಕೆ ಬಳಸುತ್ತಿರಲಿಲ್ಲ. ಹೀಗಾಗಿ ಅದೊಂದು ಬೇಕೆಂಬಂತೆ 'ಅಶನಾಲ' ರೋಗದಂತೆ ನಮ್ಮೊಡನೆ ಉಳಿದುಕೊಂಡಿತು. (ಈ ಮಾತನ್ನು ಬರೆಯುವಾಗ ಕೆಲವರಿಗೆ ರೋಷವುಂಟಾಗುತ್ತದೆಯ

ಶಂಕೆ ನನಗೆ ಇಲ್ಲದಿಲ್ಲ. ಆದರೆ ನನ್ನ ವಿವೇಚನೆಯು ಅನಿವಾರ್ಯತೆಗಾಗಿ ಈ ರೀತಿ ಬರೆಯಲೇಬೇಕಾಗಿದೆ.) ಇಂದಿನ ತಲೆಮಾರಿನ ಸ್ವತಂತ್ರ ಭಾರತದ ಯುವ, ಪ್ರೌಢ - ಪ್ರಜ್ಞೆ ಈ ದೇಶೀಯ ಪರಂಪರೆಯ ಹಂಗುದೊರೆದು ನಿರ್ಭಯವಾಗಿ ನಿಂತಿದೆ. ಹಾಗಾಗಿ ನಮ್ಮ ದೇಶದಲ್ಲಿ ಸಹಸ್ರಾರು ವರ್ಷಗಳಲ್ಲಿ ಬೆಳೆದುಬಂದ ವಿಮರ್ಶಾಸ್ತ್ರವನ್ನು ಇಂದು ಯಾವ ಆತಂಕವೂ ಇಲ್ಲದೆ, ಡಿಸೆಂಬರ್ ಮೂವತ್ತೊಂದರ ರಾತ್ರಿ ೧೨ ಗಂಟೆಗೆ ಹಳೆ ವರ್ಷವನ್ನು ಆಹುತಿಗೈಯುವಂತೆ ಆಹುತಿಗೈದು ಕೈ ಜಾಡಿಸಿದಂತಿರಲು ಸಾಧ್ಯವಾಗಿದೆ.

ಆದರೆ ಪರಂಪರೆಯು ಇಷ್ಟು ಸುಲಭವಾಗಿ ಅಳಿದು ಹೋಗುವದಿಲ್ಲ. ಅದು ಮಾನವ ವಿಕಾಸಶಾಸ್ತ್ರಕ್ಕೂ ಮಾನಸಶಾಸ್ತ್ರಕ್ಕೂ ಸೋಲುವುದೂ ಇಲ್ಲ. ಅಂತೆಯೆ ಹಿಂದಿನ ತಲೆಮಾರಿನವರು ಹಳೆ ಪರಂಪರೆ ಮತ್ತು ಹೊಸ ಧಾರೆಗಳನ್ನು ಸಮಸಮಾನವಾಗಿ ಎರಡೂ ತೆಕ್ಕೆಗಳಲ್ಲಿರಿಸಿಕೊಂಡು ಬಂದರು; ಮಾತ್ರವಲ್ಲ, ಎರಡರಲ್ಲೂ ಸಾಮ್ಯವೈಷಮ್ಯಗಳನ್ನು ತೂಗಿ, ತೌಲನಿಕವಾಗಿ ಎರಡನ್ನೂ ಅಧ್ಯಯನ ಮಾಡಿ ಹಲವು ನಿಲವುಗಳನ್ನು ಕಂಡುಕೊಂಡಿದರು. ಈ ಕಾರ್ಯ ಇಂದಿನ ಪರಂಪರಾ ರಾಹಿತ್ಯದ ಕಾಲದಲ್ಲೂ ಎಷ್ಟೇ ಇಲ್ಲೆಂದರೂ ತೌಲನಿಕ ಅಧ್ಯಯನವು ಜಾಗ್ರತವಾಗಿಯೆ ಇವೆ. ಇಂದಿನ ನಮ್ಮ ಕನ್ನಡದ ಬಹುತೇಕ ಹಿರಿಯ ವಿಮರ್ಶಕರೆಲ್ಲ ಇಂಗ್ಲಿಷ್ ಪ್ರಾಧ್ಯಾಪಕರೇ ಇದ್ದರೂ ಧ್ವನಿ, ರಸ, ಮುಂತಾದ ಗುಹ್ಯ ಪರಿಕಲ್ಪನೆಗಳ ಕುರಿತು ಎಚ್ಚರ ವಹಿಸಿರುವವನ್ನು ನೋಡುತ್ತೇವೆ. ಇದಕ್ಕೆ ಸಿ. ಎನ್. ರಾಮಚಂದ್ರನ್, ಕುರ್ತಕೋಟಿ, ಕೀರಂ, ಗಿರಡ್ಡಿ ಗೋವಿಂದರಾಜ, ಶಂಕರ ಮೊಕಾಶಿ ಪುಣೇಕರ, ಜಿ. ಎಸ್. ಆಮೂರ, ಅನಂತಮೂರ್ತಿ –ಹೀಗೆ ಬೇಕಾದಷ್ಟು ವಿಮರ್ಶಕರ ಹೆಸರನ್ನು ಕೊಡಬಹುದು. ಇವರೆಲ್ಲ ಸಿದ್ಧೌಷಧಿ ಅಲೋಪಥಿಗೆ ಶರಣು ಹೋಗುತ್ತಿದ್ದರೂ ನಮ್ಮ ಔಷಧಿಗಳನ್ನು ತಿಪ್ಪೆಗೆ ಚೆಲ್ಲುವ ಆಂದೋಲನವನ್ನಂತೂ ಮಾಡುವದಿಲ್ಲ. ಆಲೋಪಥಿಯ ಉಪಚಾರ ನಮ್ಮ ಗ್ರಾಮ್ಯ ಮುದುಕನಿಗೂ ಕೊಟ್ಟು ನೋಡುತ್ತಾರೆ. ಕಾಷ್ಠೌಷಧಿಗಳಲ್ಲೂ ಆಧುನಿಕ ಫಾರ್ಮುಲಾ ಕೆಲಮಟ್ಟಿಗೆ ಇರುವದನ್ನು ಗುರುತಿಸುತ್ತಾರೆ.

ಹೀಗಾಗಿ ಈಗ ನಾವೆಲ್ಲ 'ಜಾಗತೀಕರಣ'ದ ಬ್ರಹ್ಮರಾಕ್ಷಸದ ಭಯವನ್ನು ಸಾರ್ವಜನಿಕವಾಗಿ ಉಲ್ಲೇಖಿಸುತ್ತಿರುವಾಗ ನಾಳಿನ ಕನ್ನಡ ಚಿಂತಕರಿಗೂ ಈ ಉಭಯ ಚಿಂತನೆಯನ್ನು ಹೀಗೇ ಮುಂದರಿಸಿಕೊಂಡು ಹೋಗುವದು ಅಗತ್ಯವಾಗಿದೆ. ನಿಜವಾಗಿ ಹೇಳಲೇಬೇಕಾದರೆ ನಮ್ಮ ಚಿಂತನೆಗೆ ಬಲ ಬರುವದು ಮೂರು ಕಡೆಯಿಂದ. ತ್ರಿವೇಣಿ ಸಂಗಮದಿಂದ. ಈ ಮೂರು ವೇಣಿಗಳೆಂದರೆ ಪಾಶ್ಚಾತ್ಯ ಪರಂಪರೆ, ಭಾರತದ ಪ್ರಾಚೀನ (ಸಂಸ್ಕೃತ) ಪರಂಪರೆ, ಮತ್ತು ಮೂರನೆಯದು ಕನ್ನಡ ಲಕ್ಷಣ ಗ್ರಂಥಗಳ ಧಾರೆ.

ಹಿಂದಿನ ತಲೆಮಾರಿನವರು ನಮ್ಮದು 'ಬಟ್ಟೆದೋರಿಪ' (ಆದರ್ಶವಾದಿ) ಸಾಹಿತ್ಯ ಪರಂಪರೆ ಎಂದೂ ಪಾಶ್ಚಾತ್ಯರದು ಸ್ವೈಜ ಚಿತ್ರಣದ (ವಾಸ್ತವವಾದಿ) ಶೈಲಿ ಎಂದೂ ಎರಡನ್ನೂ ವಿಮರ್ಶಿಸಿ ಹತ್ತಿರ ಹತ್ತಿರ ತಂದಿರಿಸಿದರು. ಇನ್ನು ಮುಂದಿನವರು ಈ ಆಹ್ವಾನವನ್ನು ಸ್ವೀಕರಿಸಿ ಇನ್ನು ಮುಂದೆ ಆಳವಾದ ಚಿಂತನೆ ನಡೆಸಿ ಇವೆಲ್ಲವನ್ನು ಅಳವಡಿಸಿದ ಒಂದು 'ಅಶ್ವತ್ಥ' ಪರಂಪರೆಯನ್ನು ನಿರೂಪಿಸುವಂತೆ ವ್ಯಾಖ್ಯಾನಿಸಬೇಕಾಗಿದೆ. ಆಗ ಅವರ 'ಕ್ಯಾಥಾರ್ಸಿಸ್'ಗೂ ನಮ್ಮ 'ರಸ' ಕಲ್ಪನೆಗೂ ಇರುವ ಅಂತಃಸಂಬಂಧಗಳ ಮರುವಿಶ್ಲೇಷಣೆಯಾಗಬೇಕು. ನಮ್ಮ 'ಭಾವ-ವಿಭಾವ'ಗಳಿಗೆ ಸಮಾಂತರವಾಗಿ ethos, pathos, praxis ಗಳ ಹೋಲಿಕೆಯಾಗಬೇಕಾಗಿದೆ. ನಮ್ಮ 'ಅನುಕೃತಿ'ಗೂ ಅವರ 'mimesis'ಗೂ ಏನಾದರೂ ಸಂಬಂಧ ಸಿಗುವದೇ ಹುಡುಕಬೇಕಾಗಿದೆ. ಇದು ಅಷ್ಟು ಸುಲಭದ ಕೆಲಸವಲ್ಲ.

ಕೆಲಸ ಸುಲಭದ್ದೋ ಕಷ್ಟದ್ದೋ ಎನ್ನುವದಕ್ಕಿಂತ ಮುಖ್ಯವಾಗಿ ಇಂಥ ಕೆಲಸ ನಡೆಯಬೇಕಾದುದು ಅವಶ್ಯಕವೋ ಇಲ್ಲವೋ ಮೊದಲು ನಿರ್ಧಾರವಾಗಬೇಕು. ಅದಾಗಬೇಕಾದರೂ ಮೊದಲು ಸ್ಥೂಲವಾಗಿ ಈ ತ್ರಿವೇಣಿಗಳ ವಿಹಂಗಮ ದರ್ಶನವನ್ನು ಮಜ್ಜಿಗೀ ರಾಮಾಯಣದಂತೆ ಮುಗಿಸಿ ಆಮೇಲೇ ಈ ಪ್ರಶ್ನೆಯನ್ನು ಎದುರಿಗಿರಿಸಿಕೊಂಡು ಇದನ್ನು ಉತ್ತರಿಸಲು ಹವಣಿಸಬೇಕು. ಹೌದೆಂದರೆ ಹೊಣೆ ಹೆಚ್ಚುವದು. `ಜಾಗತೀಕರಣ`ದ ಭೀತಿಯನ್ನು ಕತ್ತರಿಸಲು ಕೈದುವೊಂದು ಕೈಗೆ ಸಿಕ್ಕಂತಾಗುವದು. ಇಲ್ಲ ಎಂದಾದರೆ ಜಾಗತೀಕರಣವನ್ನು ಅನಿರೋಧವಾಗಿ ಸ್ವಾಗತಿಸಲು ಸಜ್ಜಾಗಬೇಕಾಗುವದು.

• • •

ಒಂದು ಸಿದ್ಧಾಂತ ರೂಪದಲ್ಲಿ ವಿಮರ್ಶೆಯ ಕುರಿತು ಬರೆದವನು. (ಜರಿದವನು !) ಅಂದರೆ ವಿಶ್ವಕ್ಕೆಲ್ಲ ಪ್ಲೇಟೋ ಮೊದಲಿಗನು. ಆದರೆ ಅವನ ಹುಟ್ಟಿನ ಮೊದಲೇ ಅನೇಕ ಶತಮಾನಗಳಿಂದ ಈ ದಿಶೆಯಲ್ಲಿ ಚಿಂತನೆ, ಕ್ರಿಯೆ ನಡೆದಿತ್ತು. ಕೆಲವು ಗ್ರಹಿಕೆಗಳು ರೂಪತಾಳಿದ್ದವು. ಪ್ಲೇಟೋನ ಗುರುವಾದ ಸಾಕ್ರೇಟಿಸ್ `ಪ್ರಶ್ನೆ, ಪರಿಪ್ರಶ್ನೆ`ಗಳನ್ನು ಕೇಳಿ `ಜಿಜ್ಞಾಸೆ`ಯನ್ನು ಹೇಗೆ ಹುಟ್ಟಿಸಬೇಕೆಂಬುದಕ್ಕೆ ಹೊಸಹಾದಿ ಹಾಕಿಕೊಟ್ಟವ. ಗ್ರೀಕರ ಆದಿಕವಿ ಹೋಮರನ ಕಾವ್ಯಗಳಷ್ಟು ಹಿಂದೇ ಈ ಜಿಜ್ಞಾಸಾ ಪ್ರವೃತ್ತಿ ಹಾಗೂ ಆ ಕುರಿತ ಕುತೂಹಲ, ಗ್ರಹಿಕೆಗಳು –ಇವುಗಳ ಬಗ್ಗೆ ಹೆಜ್ಜೆ ಗುರುತುಗಳು ನಮಗೆ ಸಿಗುತ್ತವೆ. ಇವನ ಅಪೋಲೋ ಸ್ತೋತ್ರ (hymn to Apollo) ದಲ್ಲಿ ಮೊಟ್ಟಮೊದಲು ಮೈಮೆಸಿಸ್ ಶಬ್ದ ಬಳಕೆಯಾದುದು ಸಿಗುತ್ತದೆ. ಹೋಮರನ ಕಾವ್ಯದಲ್ಲಿ ಡೆಮೊಡೇಕಸ್, ಫೆಮಿಯಸ್ ಮುಂತಾದ ಹಾಡುಗಾರ ಕವಿಗಳ ವರ್ಣನೆಗಳು ಬರುತ್ತವೆ. ಹಾಡು ಕೇಳುವವರೂ ಹಾಡಿನ ಲಯಕ್ಕೆ ತಾಳ ಹಿಡಿದು ದನಿಗೂಡಿಸಿ ಕುಣಿಯುತ್ತಿದ್ದರು. ಇದನ್ನು ನಮ್ಮ ಸೋಬಾನೆ ಹಾಡುಗಳಲ್ಲಿ ದನಿಗೂಡಿಸುವಿಕೆಗೆ ಹೋಲಿಸಬಹುದಲ್ಲವೆ ? ಇದನ್ನು ಅವರಲ್ಲಿ imitate (ಅನುಕರಣೆ) ಎನ್ನಲಾಗಿದೆ. ಕೇಳುಗರು, ಪ್ರೇಕ್ಷಕರು ಅನುಕರಿಸುತ್ತಾರೆ. (ಅನುಸರಿಸುತ್ತಾರೆ !) ಹಾಡು ಅನುಕರಣೀಯ (imitative) ಆಗಿರುವದು. ಇಲ್ಲಿ ಅನುಕರಣೆ ಎಂದರೆ ಅಣಕಿಸುವದು ಎಂದಲ್ಲ. ಅವರು ಹಾಡಿನಲ್ಲಿ ಮೈಮರೆಯುತ್ತಾರೆ. ಆ ಹಾಡು mimetic ಆಗಿರುವದು. ಅಂದರೆ `ಪ್ರಾತಿನಿಧಿಕ' (ಪ್ರತಿನಿಧಿಸುವಂತಹ) ಆಗಿರುವದು. ಹೆರೊಡೊಟಸನ ಕಾಲಕ್ಕಂದರೆ ಕವಿಗಳನ್ನು poietes ಅಂದರೆ ಕರ್ತಾರರೆಂದು ಭಾವಿಸಲಾಗತೊಡಗಿತು. ಗ್ರೀಕರು ಕವಿಗಳನ್ನು ಗುರಿಕಾರರು –ಶಿಕ್ಷಕರು, ಮಾರ್ಗದರ್ಶಕರು ಎಂದು ಭಾವಿಸುತ್ತಿದ್ದರು. ಹೀಗಾಗಿ ಅವರು ಮಾಡುವ ವಿಮರ್ಶೆ ನೈತಿಕ ಅಂಶಗಳ ಮೂಲ್ಯಮಾಪನವಾಗಿರುತ್ತಿತ್ತು. ಈ ಮಾತೂ ನಮ್ಮಲ್ಲಿ ಹೆಚ್ಚುಕಡಿಮೆ ಹೀಗೇ ಇತ್ತು. ಅಂತೆಯೇ ನೀತಿಬೋಧೆ ಕಾವ್ಯದ ಅಗತ್ಯ ಗುಣವಾಗಿ ಕಾಣುವ ರೂಢಿ ಬಂತು.

ಕ್ರಿ. ಪೂ. ಐದನೆ ಶತಮಾನದ ಸೈಮೋನೈಡಸ ಕಾವ್ಯ ಮತ್ತು ಚಿತ್ರಕಲೆಗಳನ್ನು ಒಂದಕ್ಕೊಂದು ಹೋಲಿಸುತ್ತಾನೆ. Painting is silent poetry and poetry is speaking picture ಎನ್ನುತ್ತಾನೆ. ಚಿತ್ರಕಲೆಗೂ ಸಾಹಿತ್ಯಕ್ಕೂ ಅವರಷ್ಟು ಹಿಂದೇ ನಮ್ಮಲ್ಲಿ ಹೋಲಿಕೆಯಾದಂತೆ ಕಂಡುಬರುವುದಿಲ್ಲ. ಆದರೂ ದೃಶ್ಯಕಾವ್ಯವೆಂದರೆ ನಾಟಕ ಶ್ರಾವ್ಯಕಥನವೆಂದರೆ ಕಾವ್ಯ ಎಂಬ ಭಾವ ನಮ್ಮಲ್ಲೂ ಇತ್ತು. ಕವಿಗೆ ದೇವತೆಗಳು ಕಾವ್ಯವನ್ನು ಅವನ ಮನದಲ್ಲಿ ಮೂಡಿ ಹೇಳಿಕೊಡುತ್ತಾರೆ ಎಂದು ಗ್ರೀಕರ ವ್ಯಾಖ್ಯಾನ. ಕಾಳಿದಾಸನಂಥ ದಡ್ಡನ ನಾಲಿಗೆಯ ಮೇಲೆ ಕಾಲಿಮಾತೆ (ದೇವತೆ !) 'ಅಸ್ತಿಕಶ್ಚಿತ್‌ವಾಕ್‌ವಿಶೇಷಃ' ಅಂತ ಬರೆದಳಂತೆ. ಕೂಡಲೆ ಆತ ಆ ಸೂತ್ರದೊಳಗಿನ ಒಂದೊಂದು ಶಬ್ದದಿಂದ ಒಂದೊಂದು ಕಾವ್ಯವನ್ನೇ ಪ್ರಾರಂಭಿಸಿ ರಚಿಸಿದನೆಂದು

ಕಥೆ. ಇವರೀರ್ವರಿಗಿದ್ದ ವ್ಯತ್ಯಾಸ ನಮ್ಮ ಮುಂದಿನ ಪ್ರಶ್ನೆಯಲ್ಲ. ಗ್ರೀಕರ ಮತ್ತು ನಮ್ಮ ವಿಚಾರಧಾರೆಗಳು ಸಮಾಂತರವಾಗಿ ಸಾಗಿದ್ದುದೊಂದು ಇಲ್ಲಿ ಗಮನಾರ್ಹವಾದ ಅಂಶ.

ಪ್ಲೇಟೋನ ಶಿಷ್ಯ ಅರಿಸ್ಟಾಟಲ್. ಈತ ಪ್ಲೇಟೋನ ಅನುಕರಣ ಸಿದ್ಧಾಂತವನ್ನು ಒಪ್ಪಿಯೂ ಕವಿಯ ಕೆಲಸ ಕೃತ್ರಿಮವೆಂದು ತೀರ್ಮಾನಿಸುವ ಬದಲು ಕವಿಯ ಅನುಕರಣೆ ಎಂದರೆ 'ಸೃಷ್ಟಿ'ಕರ್ಮವೆಂದು ಹೇಳಿ ಶ್ರೇಷ್ಠವೆಂದು ತೀರ್ಮಾನಿಸಿದ. ಅಂದು ಆ ಗುರು-ಶಿಷ್ಯರು ಹಾಕಿದ ಹಾದಿ ಗಟ್ಟಿಗ ಇಂದಿನ ವರೆಗೂ ಒಂದೊಂದು ಪಥದಲ್ಲಿ ಪುನರ್ವ್ಯಾಖ್ಯಾನಗೊಳ್ಳುತ್ತ ಬಂದಿದೆ.

ಪ್ಲೇಟೋ: ಕಾವ್ಯಕ್ಕೆ ಉಳಿಯಬೇಕಾದರೆ ತನ್ನ ಉಪಯುಕ್ತತೆಯನ್ನು ಅದು ಗದ್ಯದಲ್ಲಿ ತೋರಬೇಕೆಂದ. (Lovers of poetry should defend it in prose.) ಇದಕ್ಕೆ ಉತ್ತರಿಸುವ ಹೊಣೆ ಅರಿಸ್ಟಾಟಲ್ ಹೊತ್ತ. ಅರಿಸ್ಟಾಟಲ್ ಒಮ್ಮೆ ಸಿದ್ಧಾಂತ ಮಂಡಿಸಿ ಅದಕ್ಕೆ ಉದಾಹರಣೆ ಒದಗಿಸುತ್ತಾನೆ. ಇನ್ನೊಮ್ಮೆ ಉದಾಹರಣೆಗಳನ್ನು ಹೇಳಿ ಅದರಿಂದ ಸಿದ್ಧಾಂತಕ್ಕೆ ಬರುತ್ತಾನೆ. ಇವನ ಮಾತುಗಳ ಅನುಸರಣೆಯಿಂದೇ classical criticism ಬೆಳೆದು ಬಂತು. [ಸೈದ್ಧಾಂತಿಕ ವಿಮರ್ಶೆ ಅನ್ನೋಣ !] ಅರಿಸ್ಟಾಟಲ್ ಭೌತಿಕ, ಅಧಿಭೌತಿಕ, ನಿಯಮ (Laws) ಮುಂತಾಗಿ ಅನೇಕ ಶಾಸ್ತ್ರಗಳನ್ನು ಬರೆದು ಅವುಗಳಲ್ಲಿ ಈ ಅನುಕರಣ ಸಿದ್ಧಾಂತವನ್ನು ವಿಸ್ತಾರವಾಗಿ ವಿವರಿಸುತ್ತಾನೆ. ಇವನೇ ಎಲ್ಲ ಕಲೆಗಳನ್ನು ಸಾಮಾನ್ಯೀಕರಿಸಿ ವಿಶ್ಲೇಷಿಸುವಾಗ ethos, pathos, ಮತ್ತು praxis ಎಂಬ ಶಬ್ದಗಳನ್ನು ಬಳಸುತ್ತಾನೆ. ethos ಅಂದರೆ ಸ್ಥಾಯೀಭಾವ. pathos ಅಂದರೆ ವಿಭಾವ, ಅನುಭಾವ, ವ್ಯಭಿಚಾರಿಭಾವ– (ethos = permanent mental disposition, pathos = feelings and emotions). paroxis - action, physical energy translated into activity. 'ಹಾವ ಭಾವ' ಎಂಬೊಂದು ಪದಪ್ರಯೋಗ ನಮ್ಮಲ್ಲಿ ಬಳಕೆ ಇದೆ. ethos, pathos ಎಂದರೆ ಭಾವ ಮತ್ತು paroxis ಎಂದರೆ ಹಾವ ಎನ್ನಬಹುದೆ? ಯೋಚನೆ ಮುನ್ನಡೆಯಬೇಕು.

ಸಂಗೀತವನ್ನು ಒಂದು ಆದರ್ಶ ಕಲೆ ಎನ್ನುತ್ತಾನೆ. ಏಕೆಂದರೆ ಅಲ್ಲಿ form ಮತ್ತು matter ಅಥವಾ content ಅಭಿನ್ನವಾಗಿರುತ್ತವೆ. ಇಲ್ಲಿನ ಈ form ಮತ್ತು content ಗಳ ಅಭಿನ್ನತೆಯು ಕಲಾಕೃತಿಯ ಶ್ರೇಷ್ಠತೆಯ ಅಳತೆಗೋಲಾಗಿರುವ ಅಂಶ ಮುಂದಿನ ಇಂದಿನ ವರೆಗಿನ ವಿಮರ್ಶೆಗೆ ಬುನಾದಿಯಾಗಿಯೇ ಬಂದಿದೆ. ಈ ಮಾತಿನ ಅರಿವೂ ನಮ್ಮಲ್ಲಿಯವರಿಗೆ ಇತ್ತು. ಕಾಳಿದಾಸ 'ವಾಗರ್ಥಾವಿವ ಸಂಪೃಕ್ತೌ' ಎಂದು ಕಾವ್ಯವನ್ನು ಪ್ರಾರಂಭಿಸುವಾಗ ಶಿವಪಾರ್ವತಿಯರನ್ನು ಸ್ತುತಿಸಲು ಕೊಡುವ ಹೋಲಿಕೆಯ ದೃಷ್ಟಾಂತ - ವಾಕ್ - ಮಾತು ಇದನ್ನು form ಎನ್ನಬಹುದಲ್ಲವೆ? ಅರ್ಥ – ಇದನ್ನು content ಎನ್ನಬಹುದಲ್ಲವೆ? ಹಾಗಿದ್ದರೆ form ಮತ್ತು content ಗಳು ಶಿವಪಾರ್ವತಿ (ಅರ್ಧನಾರೀನಟೇಶ್ವರ ಪರಿಕಲ್ಪನೆ) ಯಂತೆ ಅಭಿನ್ನವಾಗಿದ್ದರೇನೇ ಆ ರಚನೆ ಒಳ್ಳೇ ಕಾವ್ಯಾನಂದ ನೀಡಬಲ್ಲುದಾಗಿದೆ ಎಂದೇ ಕಾಳಿದಾಸನ ಮೂಲ ಗ್ರಹಿಕೆ ಇರಬಹುದಲ್ಲವೆ!

ಕಾವ್ಯ ಮತ್ತು ನಾಟಕಗಳೆರಡೂ ಕಾವ್ಯ ಎಂಬ ಕಲ್ಪನೆಗೂ ನಾವು ಅಪರಿಚಿತರಲ್ಲ. 'ಕಾವ್ಯೇಷು ನಾಟಕಂ ರಮ್ಯಂ' ಎಂದು ವ್ಯಾಖ್ಯಾನಿಸುವಾಗ ನಾಟಕವನ್ನು ಕಾವ್ಯವೆಂದೇ ನಾವೂ ಸ್ವೀಕರಿಸಿದಂತಾಗಿಲ್ಲವೆ! ಕಾವ್ಯ - ನಾಟಕಗಳ ನಡುವಿನ ಭೇದವನ್ನು ಸ್ಪಷ್ಟಪಡಿಸಲು ಅರಿಸ್ಟಾಟಲ್ ಒಂದು ಉದಾಹರಣೆ ಕೊಡುತ್ತಾನೆ. ಎಕಿಲಿಸ್ ಹೆಕ್ಟರನನ್ನು ಟ್ರಾಯ್‌ನ ಕೋಟೆಯ ಗೋಡೆಗುಂಟ ಅಟ್ಟಿಸುವುದು. ಈ ದೃಶ್ಯ ಕಾವ್ಯಕ್ಕೆ ಯೋಗ್ಯವೇ ವಿನಾ ನಾಟಕಕ್ಕಲ್ಲ ಎನ್ನುತ್ತಾನೆ.

ಕಾವ್ಯದಲ್ಲಾದರೆ ಅಕಿಲಸನ ಹುಡುಕಾಟದ ನೆಪದಲ್ಲಿ ಕೋಟೆಯ ಗೋಡೆಯ ವರ್ಣನೆ. ವಿವರಗಳನ್ನು ಒದಗಿಸಬಹುದು. ನಾಟಕದಲ್ಲಾದರೆ ರಂಗಸ್ಥಳವನ್ನು ಕೋಟೆಯ ಗೋಡೆಯಂತೆ ತಿರುಗಿಸಲು ಸಾಧ್ಯವಿಲ್ಲ. (ಈಗಿನವರು. ಸಿನೆಮಾದವರು ಮಾಡಬಹುದು. ಆದರೂ ಅದು 'ನಾಟ್ಯಾನುಭವ'ವಲ್ಲ. ಕಥಾನುಭವವೇ) ದೇವ-ದೇವತೆಗಳ ಸಂಚಾರದಿಂದ ಕಾವ್ಯದಲ್ಲಿ ಪ್ರರಾಣಕ್ಕೆ ಚಮತ್ಕಾರಗಳಿಗೆ ಅವಕಾಶ ಸಿಗುವಂತೆ ಮಾಡಬಹುದಾದರೂ ಅದನ್ನೇ ನಾಟಕದಲ್ಲಿ ಮಾಡಲಾಗದು. (ಅದೇ ಮುಂದೆ ಮಾಡ 'ಬಾರದು' ಎಂದಾಯ್ತು.).

ಗ್ರೀಕರಲ್ಲಿ ರುದ್ರನಾಟಕ ಪ್ರಗಲ್ಭವಾಗಿ ಬೆಳೆದು ನಿಂತಂತೆ ನಮ್ಮಲ್ಲಿ ಬೆಳೆಯಲಿಲ್ಲ ಮಾತ್ರವಲ್ಲ ಅದು ನಿಷಿದ್ಧವೆಂದು ಪರಿಗಣಿಸಲಾಯ್ತು. ಈ ಅಂಶವನ್ನು ಡಾ. ಪುಣೇಕರ ಅವರು ಮಾರ್ಮಿಕವಾಗಿ ವಿವೇಚಿಸುತ್ತಾರೆ. "ಸ್ವೇಚ್ಛಾಪರರಾದ ದೇವತೆಗಳು. ಅವರ ಸ್ವೇಚ್ಛೆಗೆ ಬಲಿಯಾಗಿ ದುಃಖಪಡುವ ಮಾನವರು. ಇಂಥ ವಿಚಾರ ರಚನೆಯಲ್ಲಿ ಸಿಕ್ಕಿಕೊಂಡ ಗ್ರೀಕರು ಇದಕ್ಕೆ ತಕ್ಕ ಸ್ಪಂದನೆಯಾಗಿ ರುದ್ರನಾಟಕದ ಜನಕರಾದರು." ಇದನ್ನೇ ನೀಟ್ಸೆ ಹೀಗೆ ವರ್ಣಿಸಿದ್ದಾನೆ : "ಬಾಳು ದುಃಖ. ಸಾವು ಸುಖ. ಹುಟ್ಟದಿರುವುದು ಪರಮ ಸುಖ." ಇದರಲ್ಲಿ ಭಾರತೀಯರ ಜೀವನದ ಮಿಥ್ಯಾವಾದವೇ ಸುಳಿದಾಡುತ್ತಿಲ್ಲವೆ ?

ನಾಗರಿಕ ಮೌಲ್ಯಗಳನ್ನು ಎತ್ತಿಹಿಡಿಯಲು ಸಾಕ್ರೇಟಿಸ್ ಧರ್ಮವಿರೋಧಿಯಾಗಿ ವಿಚಾರಪರನಾಗಲು ಪ್ರತಿಪಾದಿಸಿದ. ಮರಣದಂಡನೆ ಹೊಂದಿದ. ಕೊನೆಗೆ ಗ್ರೀಸ್ ಅಂಧಶ್ರದ್ಧಾಮಯ ಧರ್ಮದಲ್ಲೇ ತನ್ನ ಆಯುಷ್ಯವನ್ನು ಮುಗಿಸಿತು.

ಆಮೇಲೆ ರೋಮನ್‌ರಲ್ಲಿ ಈ ವಿಮರ್ಶಾಪ್ರಜ್ಞೆ ತಲೆ ಎತ್ತಿತು. ರೋಮನ್‌ರಲ್ಲಿ ಹೋರೇಸ್, ಲಾಂಜಿನಸ್ ದೊಡ್ಡ ಹೆಸರುಗಳು. ಹೋರೇಸನು judicial criticism ದ ಮೊದಲಿಗ. ನಿಯಮಗಳ ಒರೆಗೆ ಹಚ್ಚಿ ಕಾವ್ಯದ ಮೌಲ್ಯಮಾಪನ ಮಾಡಬೇಕೆಂದು ಅವನ ವಾದ. ಅವನಲ್ಲಿ content ಗಿಂತ form ಗೇ ಹೆಚ್ಚಿನ ಮಹತ್ವ ಬಂತು. 'ನಾಟಕದಲ್ಲಿ ಐದೇ ಅಂಕಗಳಿರಬೇಕು, ಒಂದು ವೇಳೆಗೆ ಮೂರೇ ಪಾತ್ರಗಳು ರಂಗದ ಮೇಲೆ ಕಾಣಿಸಬೇಕು. ಮೂವರೇ ಸಂಭಾಷಿಸಬೇಕು. ನಾಟಕದ ಕಥನವನ್ನು ಕ್ರಿಯೆಯ ಮುಖ್ಯಾಂಶದಿಂದೇ ಪ್ರಾರಂಭಿಸಬೇಕು. ಕೊಲೆ - ಮರಣ ಇಂಥವನ್ನು ರಂಗದ ಮೇಲೆ ತೋರಿಸಬಾರದು' ಎಂಬೆಲ್ಲ ನಿಯಮಗಳನ್ನು ಕಡ್ಡಾಯಗೊಳಿಸಿದ. ಇವುಗಳಲ್ಲಿ ಗುಣಭಾಗವೂ ಇದೆ, ಪ್ರಯೋಗಶೀಲತೆಯ ಹರಣವೂ ಇದೆ. ಈ ನಿಯಮಗಳೊಂದಿಗೆ ನಮ್ಮ ನಾಡಿನ ಆಸ್ಥಾನ ಕಾವ್ಯಗಳ ಸ್ಥಿತಿಯನ್ನು ಹೋಲಿಸಿ ಚರ್ಚಿಸಬಹುದು. ಹೋರೇಸ್ 'ಅತಿನಾಗರ' ಇದ್ದುದರಿಂದ ಕಾವ್ಯದಲ್ಲಿ ಸುಸಂಸ್ಕೃತ, ಸುಧಾರಿತ ಬದುಕಿನ ಬಗೆಯನ್ನು ಸುಂದರ ಶಬ್ದಗಳನ್ನು ಪ್ರೋತ್ಸಾಹಿಸಿದ. ಇಂಥದೇ ವಾತಾವರಣ ನಮ್ಮಲ್ಲೂ ಬೆಳೆದಿರಬೇಕೆಂದೇ ನಮ್ಮ ಜಾನಪದ ಕಾವ್ಯ ಶಿಷ್ಟಕಾವ್ಯದ ಮುಂದೆ ಮೂಲೆಗುಂಪಾಗಿ ಹಿಂದೆ ಬಿದ್ದಿತು.

ಲಾಂಜಿನಸ್‌ನ ಗ್ರಂಥದಲ್ಲಿ ಗ್ರೀಕ್ ಅಧ್ಯಯನದ ಪಾಠಗಳು ಪುನಃ ರಚನೆಗೊಂಡಿವೆ. ಇವನ ಕೃತಿ ಕಾಲಗರ್ಭದಲ್ಲಿ ಸಿಕ್ಕಿ ೧೭ ನೇ ಶತಮಾನದ ವರೆಗೆ ಲುಪ್ತವಾಗಿದ್ದವು. 'ಪಾಶ್ಚಾತ್ಯರಲ್ಲಿ ಆಧಿಭೌದಿಕ ಎಚ್ಚರವಿಲ್ಲದ್ದರಿಂದ ಭಾರತೀಯರು ಪರಿಕಲ್ಪಿಸಿದ ರಸವಿಚಾರವನ್ನವರು ಅರಗಿಸಿಕೊಳ್ಳಲಾಗಲಿಲ್ಲ ! —ಎಂದು ಡಾ. ಪುಣೇಕರರ ವಾದ. ಇಂಥ ಹೇಳಿಕೆಗಳು ಇನ್ನೂ ಆಳವಾಗಿ ಅಧ್ಯಯನಗೊಂಡು ಸ್ಪಷ್ಟೀಕರಣ ಪಡೆಯಬೇಕು.

ಇಂಗ್ಲಿಷರಲ್ಲಿ ಫ್ರಾನ್ಸ್. ಇಟಲಿ, ಜರ್ಮನಿಗಳಲ್ಲಿ ನಡೆದ ವಿಮರ್ಶಾಪ್ರವಾಹದ ಪರಿಣಾಮವಾಗಿ ವಿಮರ್ಶೆಯ ಉದಯವಾಯಿತು. ಸಂಸ್ಕೃತದ ನೆರಳಿನಲ್ಲಿ ಕನ್ನಡ ಲಕ್ಷಣ ಗ್ರಂಥಗಳು ಹುಟ್ಟಿಕೊಂಡಂತೆ. ಹಾಗೆ ಇಂಗ್ಲಿಷ್‌ನಲ್ಲಿ ವಿಮರ್ಶೆಯನ್ನು ಬೆಳೆಸಿದವರಲ್ಲಿ ಡ್ರಾಯ್‌ಡನ್,

ಸಿಡ್ನಿ, ಮ್ಯಾತ್ಯು ಅರ್ನಾಲ್ಡ್, ಪೋಪ್ –ಹೀಗೆ ಕೆಲವರನ್ನು ಹೆಸರಿಸಿ ಹೆಚ್ಚು ವಿವರಗಳನ್ನು ಅಂದರೆ ಅವರ ವೈಯಕ್ತಿಕ ವಿಷಯದಲ್ಲಿ ವಿವರ ಕೊಡುತ್ತ ಕೂಡದೆ ಫ್ರೆಂಚ್ ಕ್ರಾಂತಿಯ ಸುಮಾರಿಗೆ ತಲೆ ಎತ್ತಿದ ರಮ್ಯ ಅಥವಾ ರೋಮ್ಯಾಂಟಿಸಿಜಂ ಕಡೆಗೆ ಹೊರಳೋಣ. ವರ್ಡ್ಸ್‌ವರ್ತ್ ಮತ್ತು ಕೋಲರಿಜ್‌ರು ಕೂಡಿ ೧೮ ನೇ ಶತಮಾನದ ಕೊನೆಗೆ ಒಂದು ಪುಸ್ತಕ ಪ್ರಕಟಿಸಿ ಇಂಗ್ಲಿಷ್‌ನಲ್ಲಿ ರೋಮ್ಯಾಂಟಿಕ್ ಚಳವಳಿ ಪ್ರಾರಂಭಿಸಿದರು. ಶೆಲಿ, ಬಾಯ್‌ರನ್, ಕೀಟ್ಸ್ –ಈ ಚಳವಳಿಯ ಇನ್ನಿತರ ಕವಿಗಳು. ಈ ರೋಮ್ಯಾಂಟಿಸಿಜಂ ಅಂದರೆ ಕವಿಗಳಿಗೆ ವಿಚಾರದ, ಅಭಿವ್ಯಕ್ತಿಯ ಸ್ವಾತಂತ್ರ್ಯ ಕೊಡುವ ವಾದ. ರೋಮ್ಯಾಂಟಿಸಿಜಂನ ಐದು ಕವಿಗಳು ಒಂದೇ ಗುಂಪಿಗೆ ಸೇರಿದವರೂ ಅಲ್ಲ. ಒಂದೇ ವಿಚಾರಗಳನ್ನು ಪುರಸ್ಕರಿಸಿದವರೂ ಅಲ್ಲ. ಆದರೆ ಅವರ ಮೊದಲಿಗರು ರೂಢಿಸಿದ್ದ ಗ್ರೀಕ್ - ರೋಮನ್ ಪರಂಪರಾನುಕರಣವಾದವನ್ನು ವಿರೋಧಿಸಿದವರು. ನಾಗರಪ್ರಜ್ಞೆಯನ್ನು ವಿರೋಧಿಸಿ ಗ್ರಾಮೀಣದತ್ತ ಹೊರಳಿದರು. ಹಾಗೆಂದರೆ ವರ್ಡ್ಸ್‌ವರ್ತ್‌ನ ಕವಿತೆಗಳಲ್ಲಿ ಗ್ರಾಮ್ಯ ಶಬ್ದಗಳಿವೆ ಎಂದೇನೂ ಅರ್ಥವಲ್ಲ. ಈ ಕವಿಗಳ ಕವನಗಳ ಗಾಢ ಪರಿಣಾಮದ ನೆರಳಿನಲ್ಲಿ ನಮ್ಮ ನವೋದಯ ಕಾವ್ಯ ರೂಪಗೊಂಡಿತು. (ಇಲ್ಲಿ ಒಂದು ಮೋಜಿನ ವಿಚಾರ. ನವೋದಯ ಕಾಲವನ್ನು ಭಾರತದ Renaissance ಅಂತಾರೆ. ರೆನಾಯಿಸ್ಸನ್ಸ್ ಎಂದರೆ ಪುನರುಜ್ಜೀವನ ಕಾಲ. ರೋಮ್ಯಾಂಟಿಸಿಜಂನ ಅನುಕರಣೆ ಅದು ಹೇಗೆ ಪುನರುಜ್ಜೀವನವಾಗುವುದು ? ಇಲ್ಲಿ ಆ ಕಾಲಕ್ಕೆ ನವೋದಯಕಾಲ ಎಂದು ಅಂದದ್ದಿದೆ. ಆ ಚರ್ಚೆಗೆ ಇಳಿಯುವದು ಇಲ್ಲಿ ಪ್ರಸ್ತುತವಲ್ಲ.)

೧೯ ನೇ ಶತಮಾನವನ್ನು ವಿಕ್ಟೋರಿಯನ್ ಕಾಲವೆಂದು ಕರೆಯುವರು. ಏಕೆಂದರೆ ಆಗ ವಿಕ್ಟೋರಿಯಾ ಆಳುತ್ತಿದ್ದಳು. ಕಳೆದ ೨೦ ನೆ ಶತಮಾನದಲ್ಲಿ ಅಮೇರಿಕ, ರಷ್ಯ, ಜರ್ಮನ್, ಇಟಲಿ, ಫ್ರಾನ್ಸ್ ಮುಂತಾದ ಕಡೆಯ ಸಾಹಿತ್ಯಿಕ ಪ್ರಯೋಗಗಳು ಇಡೀ ಜಗತ್ತಿನ ಸಾಹಿತ್ಯದ ಮೇಲೆ ಪ್ರಭಾವ ಬೀರತೊಡಗಿದವು. ಸಿಂಬಾಲಿಜಂ (ಸಂಕೇತವಾದ), ಇಮೇಜಿಜಂ (ಪ್ರತಿಮಾವಾದ) ಮುಂತಾದ ಅನೇಕ ಪ್ರಯೋಗಗಳು ನಡೆದವು. ಮನೋವಿಜ್ಞಾನದ ತಳಹದಿಯ ಮೇಲೆ ಸಾಹಿತ್ಯ ರಚನಾಕ್ರಮದಲ್ಲೂ ಅನೇಕ ಮಾರ್ಪಾಟುಗಳಾದವು. ಮಾರ್ಕ್ಸ್ ವಿಚಾರಸರಣಿಯೂ ಸಾಹಿತ್ಯ ಪ್ರವಾಹದಲ್ಲಿ ಪ್ರಭಾವಿಯಾಗದೇ ಇರಲಿಲ್ಲ. ಹೀಗಾಗಿ ೨೦ ನೇ ಶತಮಾನದಲ್ಲಿ ಸಾಹಿತ್ಯಕ್ಕೊಂದು ಜಾಗತಿಕ ಭಾಷೆ ಲಭಿಸಿತು. ಜಾಗತಿಕ ಸ್ಪಂದನೆ ಶುರುವಾಯಿತು. ಅನೇಕ ದೇಶಗಳು ಪಾರತಂತ್ರ್ಯವನ್ನು ತೊರೆದು ಸ್ವತಂತ್ರವಾದವು. ಶಿಕ್ಷಣ ಪ್ರಸಾರವು ಎಂದಿಲ್ಲದಂತೆ ಹೆಚ್ಚಾಯಿತು. ಹೀಗಾಗಿ ಸಾಹಿತ್ಯವು ವೈಶ್ವೀಕರಣಗೊಳ್ಳುತ್ತ ಹೋಗಿದೆ. ಗ್ಲೋಬಲಾಯ್‌ಜೇಶನ್ ಹೊಸದೇನಲ್ಲ. ಆದರೆ ಇಂದು ಗ್ಲೋಬಲಾಯ್‌ಜೇಶನ್‌ದ ಭಯ ಮೂಡುವ ಪ್ರಮುಖ ಕಾರಣವೆಂದರೆ ವೈಜ್ಞಾನಿಕ, ಆರ್ಥಿಕ ಪ್ರಗತಿಯಿಂದಾಗಿ ಮುಂದುವರಿದ ದೇಶಗಳು ತನ್ನ ತೆಕ್ಕೆಗೆ ತೆಗೆದು ಎರಡನೇ ದರ್ಜೆ ಕೊಟ್ಟು ಶೋಷಣೆಗೊಳಪಡಿಸಿ ಸಾಂಸ್ಕೃತಿಕವಾಗಿ ಬಡವಾಗಿಸುವವು ಎಂಬುದು.

• • •

ಇನ್ನು ಭಾರತದ ವಿಮರ್ಶಾಶಾಸ್ತ್ರ ಬೆಳೆದು ಬಂದುದನ್ನು ಸ್ವಲ್ಪ ನೋಡೋಣ. ತೀ. ನಂ. ಶ್ರೀಕಂಠಯ್ಯನವರು ರಚಿಸಿಕೊಟ್ಟ 'ಭಾರತೀಯ ಕಾವ್ಯಮೀಮಾಂಸೆ' ಎಂಬ ಗ್ರಂಥ ಈ ದಿಕ್ಕಿನಲ್ಲಿ ಆಧಾರ ಗ್ರಂಥ. ಆಚಾರ್ಯಕೃತಿ.

ಭಾರತದಲ್ಲಿ ಭರತನ ನಾಟ್ಯಶಾಸ್ತ್ರವೇ ಮೊದಲ ವಿಮರ್ಶಾಗ್ರಂಥ. ಅದು ಸುಮಾರು ಕ್ರಿಸ್ತ ಶಕದಷ್ಟೇ ಹಳೆಯದು. ಇದರಲ್ಲೇ 'ರಸ' ಪರಿಕಲ್ಪನೆಯ ಮಾಹಿತಿಯನ್ನೂ ಅದರ ವ್ಯಾಖ್ಯೆಯನ್ನೂ ವಿಶ್ಲೇಷಣೆಯನ್ನೂ ಕೊಡಲಾಗಿದೆ. ಆದರೆ ಗ್ರೀಕರಂತೆ ನಮ್ಮಲ್ಲಿಯೂ ಭರತನಿಗಿಂತ ಹಿಂದೇ ಭಾಷೆಯ.

ಭಾಷಾಕೃತಿಯ ವಿಶ್ಲೇಷಣೆ ಮಾಡುವ ವಿಧಾನ ಹಲವಾರು ಶತಕಗಳ ವರೆಗೆ ರೂಪುಗೊಳ್ಳುತ್ತಲೆ ಇತ್ತು. ಶಿಲಾಲಿ, ಕೃಶಾಶ್ವರು 'ನಟಸೂತ್ರ' ಎಂಬ ರಚನೆ ಮಾಡಿದ್ದು ತಿಳಿದುಬರುತ್ತದೆ. ಕೃತಿ ಸಿಕ್ಕಿಲ್ಲ. ಹಾಗಾಗಿ ಅವರ ವಿಚಾರ ಹೇಗಿತ್ತು ಹೇಳಲಾಗದು. ಕ್ರಿ. ಪೂ. ೫೦೦ ವರ್ಷದ ಹಿಂದೆ ಪಾಣಿನಿ ವ್ಯಾಕರಣಗ್ರಂಥ ರಚಿಸಿದ. ಪತಂಜಲಿ ಅವನ ನಂತರ ಮೂರು ಮೂರುವರೆ ಶತಕಗಳ ನಂತರ ಇದ್ದ. ನಾಟ್ಯದಲ್ಲಿ ಅಭಿನಯ, ಗಾಯನಾದಿಗಳು ಹೇಗೋ ಹಾಗೆ ಶಬ್ದಗಳೂ ರಸ ನಿಷ್ಪತ್ತಿಯ ಸಾಧನೆಗಳಾಗಿದ್ದು ವಾಚಿಕವೆಂಬ ಬಲುಮಹತ್ವದ ಅಂಗವಾಗಿವೆ ಎಂದು ಹೇಳಲಾಗಿದೆ.

ನಮ್ಮ ಶಾಸ್ತ್ರಕಾರರ ಚಿಂತನೆ ಪ್ರಾರಂಭಕ್ಕೆ ಶಬ್ದದಿಂದ ಪ್ರಾರಂಭವಾದರೂ ವಾಕ್ಯವನ್ನೇ ಮೂಲ ಘಟಕವೆಂದು ಭಾವಿಸಿ 'ವಾಕ್ಯಂ ರಸಾತ್ಮಕಂ ಕಾವ್ಯಂ' ಎಂಬ ಪರಿಕಲ್ಪನೆ ಬೆಳೆಯಿತು. ಹೀಗಾಗಿ ಈ ರಸವನ್ನು ಅರ್ಥಮಾಡಿಕೊಳ್ಳಲು ಸಾಧಕವಾಗುವಂತೆ ಶಬ್ದಗಳನ್ನು ಅರ್ಥೈಸಲಾಗಿದೆ. ಶಬ್ದಗಳಿಗೆ ಸಾಮಾನ್ಯವಾಗಿ ಒಂದು ಅರ್ಥವಿರುತ್ತದೆ. ಇದನ್ನು ವಾಚ್ಯಾರ್ಥವೆನ್ನುವರು. ವಾಚ್ಯಾರ್ಥವನ್ನು ತಿಳಿಯಪಡಿಸುವದು ಅಭಿಧಾವೃತ್ತಿ. ಆದರೆ ಕಾವ್ಯದಲ್ಲಿ ಶಬ್ದಗಳು ವಾಚ್ಯಾರ್ಥವನ್ನು ಮೀರಿ ಬೇರೆಯದನ್ನೂ ಸೂಚಿಸುವವು. ಹೀಗೆ ವಾಚ್ಯಾರ್ಥ ಹೊಂದದವಿದ್ದಲ್ಲಿ ಹೊಂದಿಸುವಂತೆ ಮಾಡುವದು ಲಕ್ಷಣಾವೃತ್ತಿ. ಈ ಮೂಲಕ ಶಬ್ದಕ್ಕೆ ಬರುವ ಅರ್ಥ ಲಕ್ಷ್ಯಾರ್ಥ. ಶಬ್ದಗಳಿಗೆ ಇನ್ನೊಂದು ಶಬ್ದ ಇದೆ. ಅದೇ ವ್ಯಂಜನಾವೃತ್ತಿ; ಅದರಿಂದಾಗಿ ಗೋಚರವಾಗುವ ಅರ್ಥವೇ ಕಾವ್ಯಾರ್ಥ. ಉದಾ :- ಪಂಪಭಾರತದಲ್ಲಿ ಸೇನಾಪತಿಪಟ್ಟ ಕಟ್ಟಲು ಭೀಷ್ಮರನ್ನು ಆಯ್ಕೆ ಮಾಡಿದಾಗ ಕರ್ಣ ತಕರಾರು ಮಾಡುತ್ತಾನೆ. ಆಗ ದ್ರೋಣರು ಅವನಿಗೆ ಹೇಳುತ್ತಾರೆ. 'ಎಲೈ ಕರ್ಣ, ಇದು ಭಾರತಯುದ್ಧ, ಎದುರಾಳಿ ಅರ್ಜುನ. ಎಂದಾಗ ಎಲ್ಲರಿಗೂ ಸರದಿ ಬರುತ್ತದೆ. ಸೂಟ್ಸುಡೆಯಲಪ್ಪುದು ಕಣಾ ಮಹಾಜಿರಂಗದೊಳ್' ಎಂತಾರೆ. ಸೂಳ್– ಶಬ್ದಕ್ಕೆ ಸರದಿ ಎಂಬ ಸಾಮಾನ್ಯ ಅರ್ಥವಿದ್ದರೂ ಇಲ್ಲಿ ಅದು ಇನ್ನೂ ಹೆಚ್ಚಿನ ಅರ್ಥ ಸೂಚಿಸುತ್ತದೆ. ಎಲ್ಲರಿಗೂ ಸೇನಾಪತಿಗಳಾಗುವ ಯೋಗವಿದೆಯೆ ಹೊರತು ಗೆಲ್ಲುವ ಭಾಗ್ಯವಿಲ್ಲ. ಅಂದರೆ ಸರದಿ ಬಂದಾಗ ಸೇನಾಪತಿಯಾಗುವದು. ಆಗಿ ಸಾಯುವದು. ಆಮೇಲೆ ಮುಂದಿನವ ಆ ಹುದ್ದೆಗೇರುವದು ಎಂಬುದನ್ನು ಈ ಸೂಳ್ ಶಬ್ದ ಇಲ್ಲಿ ಧ್ವನಿತಮಾಡುತ್ತದೆ. ಇದು ಇಲ್ಲಿಯ ವ್ಯಂಗ್ಯಾರ್ಥ. ಇದೇ ಕಾವ್ಯಾರ್ಥ. ತೀ. ನಂ. ಶ್ರೀ. ಅವರು ಈ ವ್ಯಂಗ್ಯಾರ್ಥ ಅಥವಾ ಕಾವ್ಯಾರ್ಥ ಪರಿಕಲ್ಪನೆಯನ್ನು ಸ್ಪಷ್ಟಪಡಿಸಲು ಇನ್ನೊಂದು ಉದಾಹರಣೆ ಕೊಡುತ್ತಾರೆ. ಅಭಿಜ್ಞಾನ ಶಾಕುಂತಲದಲ್ಲಿ ಪತಿಗೃಹಕ್ಕೆ ಹೊರಟ ಶಕುಂತಲೆ ತಾನು ಕೈಯಾರ ಬೆಳೆಸಿದ ಜ್ಯೋತ್ಸ್ನೆ ಎಂಬ ಲತೆಯನ್ನು ಸಖಿಯರಿಗೆ ಒಪ್ಪಿಸುತ್ತ, 'ಸಖಿಯರೆ, ಇದನ್ನು ನಿಮ್ಮಿಬ್ಬರ ಕೈಯಲ್ಲಿರಿಸುವೆ' ಎನ್ನುವಳು. ಆಗ ಸಖಿಯರು ಕೇಳುತ್ತಾರೆ. 'ನಮ್ಮನ್ನು ಯಾರ ಕೈಗೊಪ್ಪಿಸುವೆ ?' ಅಗಲಿಕೆಯ ದುಃಖದ ಗಾಢತೆ ಇಲ್ಲಿಯ ಕಾವ್ಯಾರ್ಥ. ಯಾವ ಅರ್ಥವನ್ನೇ ಇರಲಿ, ಬಿಡಿಸಿ ಹೇಳುವುದಕ್ಕಿಂತ ಸೂಚಿಸುವುದರಲ್ಲಿ ಹೆಚ್ಚು ರಮ್ಯತೆ ಇರುವದು.

ಅಲಂಕಾರ, ರಸ, ಧ್ವನಿ, –ಈ ಮೂರು ಶಬ್ದಗಳು ಭಾರತೀಯ ಕಾವ್ಯಮೀಮಾಂಸೆಯ ಮೂಲ ಸ್ರೋತಗಳಾಗಿವೆ.

'ನಾಟ್ಯಶಾಸ್ತ್ರ' ದ ನಂತರ ಬಂದವರು ದಂಡಿ, ಭಾಮಹರು - ದಂಡಿಯ ಕಾವ್ಯಾದರ್ಶ, ಭಾಮಹನ ಕಾವ್ಯಾಲಂಕಾರ ಕೃತಿಗಳು ಬಂದವು. ಮುಂದೆ ಒಂದು ಶತಮಾನದಲ್ಲಿ ವಾಮನ, ಉದ್ಭಟ, ರುದ್ರಟ, ರುದ್ರಭಟ್ಟ ಬಂದರು. ಇವರೆಲ್ಲ ಎಂಟನೆ ಶತಮಾನದವರು. ಮುಂದೆ ಮತ್ತೆ ನೂರು ವರ್ಷ ಕಳೆದಾಗ ಬಂದಾತ ಆನಂದವರ್ಧನ. ೯ ನೇ ಶತಮಾನದ ಈತನ ಕೃತಿ ಧ್ವನ್ಯಾಲೋಕ. ಮುಂದೆ ಮತ್ತೊಂದು ನೂರು ವರ್ಷದ ನಂತರ ೧೦ ನೇ ಶತಮಾನದಲ್ಲಿ

ಆಗಿಹೋದ ವಿಮರ್ಶಾಶಾಸ್ತ್ರಕಾರನೆಂದರೆ ಅಭಿನವಗುಪ್ತ. ಇವರಿಬ್ಬರ ನಡುವೆ ಭಟ್ಟನಾಯಕನೆಂಬುವನಿದ್ದ. ಅವನು ಧ್ವನಿಯೇ ಕಾವ್ಯದ ಆತ್ಮ ಎಂಬ ಮಾತನ್ನು ವಿರೋಧಿಸಿದವ. ಲೊಲ್ಲಟ, ಶಂಕುಕ, ಕುಂತಕ – ಇವರ ನಂತರದವ ಧನಂಜಯ. ಅವನ ಕೃತಿ ದಶರೂಪಕ. ೧೧ ನೇ ಶತಮಾನದ ಮಹಿಮ ಭಟ್ಟ, ಮಮ್ಮಟ, ಹೇಮಚಂದ್ರ ಹೀಗೆ ವಿಮರ್ಶಾ ಶಾಸ್ತ್ರಗಳನ್ನು ನಿರೂಪಿಸಿದವರ ಪರಂಪರೆ ಬೆಳೆಯುತ್ತದೆ. ಎಂಟನೆ ಶತಮಾನದಿಂದ ೧೧ ನೇ ಶತಮಾನದ ನಡುವಿನ ಎರಡೂವರೆ - ಮುನ್ನೂರು ವರ್ಷಗಳು ಭಾರತೀಯ ಕಾವ್ಯಚಿಂತನೆಯ ಅಮೋಘ ಕಾಲ.

ಮೇಲೆ ಉಲ್ಲೇಖಿಸಿದವರಲ್ಲಿ ದಂಡಿ ದಕ್ಷಿಣ ಭಾರತದವ. ಆಗಲೇ ಭಾರತವು ಒಂದಾಗಿ ಯಾವ ಮೂಲೆಯ ಪ್ರತಿಭೆಯೂ ಅಖಿಲ ಭಾರತ ಮಟ್ಟದಲ್ಲಿ ಪ್ರತಿನಿಧಿತ್ವ ನಿರ್ವಹಿಸಬಹುದಾಗಿತ್ತು. ವಾಮನ, ಉದ್ಭಟ, ಆನಂದವರ್ಧನ, ಅಭಿನವಗುಪ್ತ ಹೀಗೆ ಅನೇಕ ಪ್ರಮುಖ ಚಿಂತಕರು ಕಾಶ್ಮೀರದಿಂದ ಬಂದವರು. ಹಾಗಾಗಿ ನಮ್ಮ ಕಾವ್ಯಮೀಮಾಂಸೆಗೆ ಕಾಶ್ಮೀರದ ಕೊಡುಗೆ ಅಪೂರ್ವವಾದುದು, ಅಮೂಲ್ಯವಾದುದು.

ಇಲ್ಲಿನ ವ್ಯಂಜನಾ ಕಲ್ಪನೆಗೂ ಪಾಶ್ಚಾತ್ಯ ಚಿಂತನೆಯಲ್ಲಿ ಮೂಡಿಬಂದ ಪ್ರತಿಮಾ ಕಲ್ಪನೆಗೂ ನಡುವೆ ಹೋಲಿಕೆಯ ಸಾಧ್ಯತೆ ಸಾಕಷ್ಟು ಇದೆ. ಈ ದಿಕ್ಕಿನಲ್ಲಿ ತೌಲನಿಕ ಅಧ್ಯಯನ ನಡೆಸಿದವರಲ್ಲಿ ಡಾ. ಎಸ್. ಕೆ. ಡೇ (Dey) ಪ್ರಮುಖ ವಿದ್ವಾಂಸರು. ಅವರ ಕೃತಿ, 'Some problems of Sanskrit poetics' ಗ್ರಂಥ ಒಂದು ಮೈಲಿಗಲ್ಲು. ವೈಯಾಕರಣಿಕರ 'ಸ್ಫೋಟವಾದ'ಕ್ಕೆ ದಾರ್ಶನಿಕರು ಒಪ್ಪಲಿಲ್ಲ. ಕಾವ್ಯಾಲಂಕಾರದಲ್ಲಿ ಭಾಮಹನೂ ವಿರೋಧಿಸಿರುವನು. ಸ್ಫೋಟವಾದ ಎಂದರೆ ಅರ್ಥವನ್ನು ಸ್ಫುಟಗೊಳಿಸುವದು. ನಾಲ್ಕಕ್ಷರದ ಒಂದು ಶಬ್ದವನ್ನು ಉಚ್ಚರಿಸುವಾಗ ಒಂದಾದ ಮೇಲೊಂದರಂತೆ ಅಕ್ಷರಗಳು ಪ್ರಕಟವಾಗುವವು. ನಾಲ್ಕೂ ಅಕ್ಷರಗಳು ಪ್ರಕಟಗೊಂಡು ಮಾಯವಾದಾಗ ಒಂದು ಬೇರೆಯೇ ಅರ್ಥ ನಮಗೆ ಗೊತ್ತಾಗುವದು. ಇದು ಸ್ಫೋಟವಾದದ ಸ್ಥೂಲ ವಿವರಣೆ.

ಹೀಗೆ ವಿಧವಿಧವಾಗಿ ವಿವರಿಸುವ ಪ್ರಯತ್ನಗಳನ್ನು ನೋಡಿದರೆ ಒಂದೇ ಸತ್ಯವನ್ನು ಒಬ್ಬೊಬ್ಬರು ಒಂದೊಂದು ಕಡೆಯಿಂದ ದೃಷ್ಟಿಬೀರಿ ಗ್ರಹಿಸುತ್ತಿರುವಂತೆ ತೋರದಿರದು. ಕಳೆದ (೨೦ನೇ)ಶತಮಾನದಲ್ಲಿ ವಿಶ್ವಸಾಹಿತ್ಯದಲ್ಲಿ ಮೂಡಿಮೂಡಿ ಮರೆಯಾದ ಅನೇಕ ವಾದಗಳಲ್ಲೂ ಇದೇ ಪ್ರವೃತ್ತಿಯನ್ನು ನಾವು ನೋಡುತ್ತೇವೆ. The philosophy of Sanskrit Grammar ಎಂಬ ಪಿ. ಸಿ. ಚಕ್ರವರ್ತಿಯವರ ಕೃತಿಯೂ ಇಲ್ಲಿ ಉಪಯುಕ್ತ. ರಸ, ಧ್ವನಿಗಳು ಕಾವ್ಯದ ಗುಣಾಲಂಕಾರ ಎಂಬ ವಿಶ್ಲೇಷಣೆಯೂ ಇದೆ. ಹೀಗಾಗಿ ಅಲಂಕಾರ, ರಸ, ಧ್ವನಿ ಈ ಮೂರು ಶಬ್ದಗಳು ಮೀಮಾಂಸಾ ಸಾಮ್ರಾಜ್ಯದ ಆಧಿಪತ್ಯ ನಡೆಸಿದರೂ ಮೂರೂ ಒಂದೇ ಸತ್ಯವನ್ನು ಸ್ಫುಟಗೊಳಿಸುವ ಪ್ರಯತ್ನಗಳಾಗಿವೆ ಎಂದು ತಿಳಿಯಬಹುದು.

ಕನ್ನಡದಲ್ಲಿ ರುದ್ರಟನ ಸಮಕಾಲೀನನೆನ್ನಬಹುದಾದ 'ಕವಿರಾಜಮಾರ್ಗ'ಕಾರನು ಆದ್ಯ ಲಕ್ಷಣಗ್ರಂಥಕಾರನು. ೧ ನೇ ನಾಗವರ್ಮ ಕಾದಂಬರಿ, ಛಂದೋಂಬುಧಿ ಬರೆದನೆಂದು ತಿಳಿಯುವದು. ಎರಡನೆ ನಾಗವರ್ಮ 'ಕಾವ್ಯಾವಲೋಕನ' ಬರೆದ. ಈತ ೧೨ ನೆ ಶತಮಾನದವನು. ಒಟ್ಟಿನಲ್ಲಿ ಕನ್ನಡ ಕಾವ್ಯಮೀಮಾಂಸೆ ಭಾರತದ ಕಾವ್ಯಮೀಮಾಂಸೆಯ ಮಹಾಪ್ರವಾಹದ್ದೇ ಒಂದು ಅಲೆಯಾಗಿತ್ತೇ ವಿನಾ ಹೊಸ ದರ್ಶನವಾಗಿರಲಿಲ್ಲ ಎಂಬುದು ಇಲ್ಲಿ ಬಲು ಮುಖ್ಯವಾದ ವಿಷಯ.

• • •

ಗ್ರೀಕರ ಕಾಲ ಕ್ರಿ. ಪೂ. ೫ ನೇ, ೪ ನೇ ಶತಮಾನಗಳು. ರೋಮನ್ನರದು ಕ್ರಿ. ಪೂ. ಮತ್ತು ಕ್ರಿ. ಶ. ಗಳ ಕೊಂಡಿಯಾದ ಎರಡು ಶತಮಾನಗಳು. ಯುರೋಪಿನ ಇತಿಹಾಸದಲ್ಲಿ

ಕ್ರಿ. ಶ. ೧೦೦೦ ವರೆಗಿನ ಕಾಲವು ಅಂಧಕಾರಯುಗ. ಮುಂದಿನ ೫೦೦ ವರ್ಷ ಮಧ್ಯಯುಗ. ಹೀಗಾಗಿ ಈ ಕಾಲದಲ್ಲಿ ಪಾಶ್ಚಾತ್ಯ ಕಾವ್ಯಮೀಮಾಂಸೆ ಲುಪ್ತವೇ ಆಗಿತ್ತು. ಮತ್ತು ಇದೇ ೧೫೦೦ ವರ್ಷಗಳ ಅವಧಿಯಲ್ಲಿ ಕಾವ್ಯಮೀಮಾಂಸೆ ಭಾರತದಲ್ಲಿ ತುಂಬ ಪ್ರಗಲ್ಭವಾಗಿ ವಿಜೃಂಭಿಸಿತು. ಮುಂದೆ ಭಾರತದಲ್ಲಿ ಹೊಸದೇನೂ ಬರಲಿಲ್ಲ. ಬಂದುದು ಬ್ರಿಟಿಷರ ಸಂಪರ್ಕ. ಪುನರುಜ್ಜೀವನ ಅಥವಾ ನವೋದಯ.

ಹಾಗಾಗಿ ಗ್ರೀಕರ ಸಮಕಾಲೀನವಾಗಿ ಪ್ರಾರಂಭವಾದ ಭಾರತೀಯ ಚಿಂತನೆ ಬ್ರಿಟಿಷರ ಸಂಪರ್ಕದ ವರೆಗೆ ತನ್ನದೇ ಆದ ರೀತಿಯಲ್ಲಿ ಬೆಳೆದು ಒಮ್ಮೆಲೆ ತ್ರಿಶಂಕು ನರಕದಲ್ಲಿ ಬಿದ್ದಿತು. ಗ್ರೀಕರ ಸಾಮ್ರಾಜ್ಯ ಅಳಿಯಿತು. ಕಾವ್ಯ - ಸೃಷ್ಟಿ - ಚಿಂತನೆಯೂ ನಿಂತುಹೋಯಿತು. ರೋಮನ್ ಸಾಮ್ರಾಜ್ಯ ಉದಯಿಸಿತು. ಅವರಲ್ಲಿ ಗ್ರೀಕ್ ವಿಚಾರ ಪುನರ್ಜೀವಿತವಾಯಿತು. ಮುಂದೆ ಬೇಗನೆ ಈ ಸಾಮ್ರಾಜ್ಯವೂ ಲೋಪವಾಯಿತು. ರೋಮನ್ ಚಿಂತನೆಯೂ ಮೊಟಕಾಯಿತು. ಈ ರೀತಿ ಲೋಪಗೊಂಡ ಚಿಂತನೆ ಯುರೋಪಿನ ಬೇರೆ ರಾಷ್ಟ್ರಗಳಲ್ಲಿ ಜೀವ ಹಿಡಿದು ಬೆಳೆಯಿತು. ಅದೇ ಮುಂದೆ ಇಂಗ್ಲಿಷರಲ್ಲೂ ಪ್ರಸಾರಗೊಂಡಿತು. ಇಂಗ್ಲಿಷರ ಸಾಮ್ರಾಜ್ಯ ವಿಸ್ತಾರಗೊಂಡಂತೆ ಎಲ್ಲೆಡೆ ಇಂಗ್ಲಿಷ ವಿಚಾರವಾಹಿನಿಯೂ ಪ್ರವಹಿಸಿ ಪ್ರಸ್ಥಾಪಿತವಾಯಿತು.

ಈಗ ಜಾಗತೀಕರಣದ ಹೊಸ ಆಹ್ವಾನವನ್ನು ಎದುರಿಸುತ್ತಿರುವ ನಾವು ಇಡೀ ವಿಶ್ವದ ಸಾಹಿತ್ಯ ಚಿಂತನೆಯನ್ನು ಒಂದೊಂದು ಅಧ್ಯಯನ ಮಾಡಿ ಅದರಲ್ಲಿ ಭಾರತೀಯ ಚಿಂತನೆಯನ್ನು ಮುಖ್ಯ ಪ್ರವಾಹಕ್ಕೆ ಸಮೀಕರಿಸಬೇಕು. ಆಗ ಭಾರತವು ಜಾಗತೀಕರಣದಿಂದ ಲೋಪಹೊಂದುವ ಬದಲು ಲೋಕಮನ್ನಣೆ ಪಡೆಯಲು ಸಾಧ್ಯ. ಜಾಗತೀಕರಣದ ಪ್ರಕ್ರಿಯೆಯಲ್ಲಿ ಕರಗುವ ಬದಲು ಜಗತ್ತಿಗೆ ನಾವೂ ಕೊಟ್ಟಿದ್ದೇವೆ ಎಂಬ ಹೆಮ್ಮೆಯಿಂದ ತಲೆ ಎತ್ತಿ ಅಭಿಮಾನದಿಂದ ನಿಲ್ಲಬಹುದು. ಆಗ ನಮ್ಮ ಕಾಲಕೆಳಗೆ Abyss (ನೀತ್ಸೆ ಹೇಳುವಂತಹದು) ನಿರ್ಮಾಣವಾಗುವ ಬದಲು Primitivism ದ ಸಂಪರ್ಕದಲ್ಲಿ ಇಲ್ಲವಾಗುವಂತೆ ಇಲ್ಲವಾಗಬಹುದು. ಜರ್ಮನ್ ತತ್ವವೇತ್ತರ ಮೇಲೆ, ಮೀಮಾಂಸಾಕಾರರ ಮೇಲೆ, ಇಮರ್ಸನ್ ಮುಂತಾದ ಅಮೇರಿಕನ್ನರ ಮೇಲೆ ಭಾರತೀಯ ಚಿಂತನೆ ಪ್ರಭಾವ ಬೀರಿರುವದನ್ನು ನೋಡಿದರೆ ಮೇಲಿನ hypothesis ಆಧಾರವಿದೆ ಎನ್ನಿಸದಿರದು. Hypothesis ಸಿದ್ಧವಾಗುವಂತೆ ಸಂಶೋಧನೆಯ ಶ್ರಮ ವಹಿಸಬೇಕಾದುದು ತುರ್ತು ಅಗತ್ಯವಾಗಿದೆ. ಈ ರೀತಿಯ ಸಮನ್ವಯ ಸಾಧ್ಯತೆಯನ್ನು ಪಾಶ್ಚಾತ್ಯರೂ ಮನಗಾಣತೊಡಗಿದ್ದಾರೆ.

● ▼

ಡಾ. ಕ. ನಾಯಕ. ೮೧೩. ಆಚಾರ್ಯಗಲ್ಲಿ, ಶಹಾಪುರ. ಬೆಳಗಾವಿ-೩. ✆:೦೮೩೧-೪೧ ೫೨೨೦

ಎಸ್. ವಿ. ಪ್ರಭಾವತಿಯವರ ಕಾದಂಬರಿ 'ದ್ರೌಪದಿ'

ಎಚ್. ಎಲ್. ಪುಷ್ಪ ವಿಶ್ಲೇಷಣೆ

ಪಾಶ್ಚಾತ್ಯ ಸಾಹಿತ್ಯದ ನಿರಂತರ ಓದು ಹಾಗೂ ಪಾಶ್ಚಾತ್ಯ ಸಾಹಿತ್ಯದ ವಿಮರ್ಶೆ ನಮ್ಮ ಸಾಹಿತ್ಯವನ್ನು ನೇರವಾಗಿ ಅಲ್ಲದಿದ್ದರೂ ಹಲವು ಹತ್ತು ರೀತಿಯ ಬದಲಾವಣೆಗೆ ಒಡ್ಡುತ್ತಲೇ ಇವೆ. ಸೃಜನಾತ್ಮಕ ಮತ್ತು ಸೃಜನೇತರ ಎಂಬ ವರ್ಗೀಕರಣಗಳ ಚರ್ಚೆಯ ನಡುವೆ, ಹಲವು ಹೊಸ ವಿಚಾರಧಾರೆಗಳ ನಡುವೆಯೂ ಸಾಹಿತ್ಯದ ಹಲವು ಪ್ರಕಾರಗಳು ನಿರಂತರ ಪ್ರಯೋಗಶೀಲತೆಯಲ್ಲಿ ಕಣ್ತೆರೆಯುತ್ತಿವೆ. ಇದೆಲ್ಲದರ ಮಧ್ಯೆ ದೇಸಿ ಸಾಹಿತ್ಯದ

ಚರ್ಚೆ ಬಲಗೊಳ್ಳುತ್ತಿದೆ. ವಿಮರ್ಶಾ ಪ್ರಪಂಚಕ್ಕೆ ಬಂದರೆ ಕೃತಿಯ ರಚನೆಗೆ ಕಾರಣವಾಗುವ ಒಳಗಿನ ಪ್ರೇರಕ ಅಂಶಗಳನ್ನು ಗುರುತಿಸಿದಂತೆಯೇ ಕೃತಿಯನ್ನು ಅನ್ಯ ಶಾಸ್ತ್ರಗಳ ಮೂಲಕ ಚರ್ಚಿಸುವ ಶಿಸ್ತು ನಮ್ಮಲ್ಲಿ ಬೆಳೆದು ಬಂದಿದೆ.

ಒಂದು ಬೆಳೆದು ನಿಂತ ವಿಕಾಸದ ಹಾದಿಯಲ್ಲಿರುವ ಸಮಾಜದ ಅಧ್ಯಯನಕ್ಕೆ ಕೈ ಹಾಕಿದವರು ಆ ನೆಲದ್ದೇ ಆದ ಜಾನಪದ ಅಂಶಗಳು, ಪುರಾಣ, ಚರಿತ್ರೆ, ರಾಜಕೀಯ, ಸಾಮಾಜಿಕ, ಮನಶ್ಶಾಸ್ತ್ರೀಯ ಅಂಶಗಳನ್ನು ಕಡೆಗಣಿಸುವಂತಿಲ್ಲ. ರಾಮಾಯಣ, ಮಹಾಭಾರತದಂತಹ ನಮ್ಮ ಮಹಾಕಾವ್ಯಗಳನ್ನು ಕುರಿತು ಮಾತನಾಡುವಾಗ ಈ ಮೇಲಿನ ಎಲ್ಲ ಅಂಶಗಳನ್ನು ಗಮನಿಸಬೇಕಾಗುತ್ತದೆ. ಪುರಾಣ ಎನ್ನುವುದು ಮತ್ತೆ ಮತ್ತೆ ಹಲ್ಲಿಗೆ ಸಿಕ್ಕಿಕೊಂಡು ನರಳಿ ಹೊಸ ರೂಪವನ್ನು ಪಡೆಯುತ್ತಲೇ ಇರುವ ಕೃತಿ. ಈ ಹೊಸ ಆಕೃತಿಯ ಸಮರ್ಥನೆಗೆ ಆಯಾ ಕವಿಗಳು ಬಳಸಿಕೊಳ್ಳುವ ಹತಾರಗಳು ವಿಭಿನ್ನವಾಗಿರುತ್ತವೆ. ಕುಮಾರವ್ಯಾಸನ ಕೃಷ್ಣ, ಪಂಪನ ಅರ್ಜುನ, ರನ್ನನ ದುರ್ಯೋಧನ ಹೀಗೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಒಬ್ಬೊಬ್ಬ ಕವಿಗೆ ಒಂದೊಂದು ಪಾತ್ರ ಇಷ್ಟವಾಗಿ ಆ ಪಾತ್ರಗಳು ಕೃತಿಯ ಕೇಂದ್ರವಾಗುವುದಲ್ಲದೆ ಆ ಪಾತ್ರದ ಒಳಿತು ಕೆಡುಕುಗಳು ಮಾನವಸಹಜ ದೌರ್ಬಲ್ಯಗಳು ಎನ್ನುವಂತೆ ಕವಿಯಿಂದ ಸಮರ್ಥಿಸಲ್ಪಡುತ್ತವೆ.

ನಮ್ಮ ಸಮಾಜದಲ್ಲಿ ಹೆಣ್ಣನ್ನು ತಾಯಿಯಾಗಿ ಅಥವಾ ಸಮಸ್ತ ಧಾರಣಶಕ್ತಿಯುಳ್ಳ ತಾಳ್ಮೆಯ ಸ್ತ್ರೀಚೈತನ್ಯವಾಗಿ ನೋಡಲಾಗುತ್ತದೆ. ಬಹುಸಂಸ್ಕೃತಿಯ ಮಾದರಿಯನ್ನಾಗಿ ನೋಡಬಹುದಾದ ಈ ಕೃತಿಯಲ್ಲಿ ಅಸಹಜ ಸಂತಾನಗಳು, ನಿಯೋಗಗಳು, ಬಹುಪತಿತ್ವ, ಬಹುಪತ್ನಿತ್ವ ಹೇರಳವಾಗಿ ಕಾಣಸಿಗುತ್ತವೆ. ದಾಯಾದಿ ರಾಜಕುಟುಂಬಗಳ ದೀರ್ಘಕಾಲದ ಕತೆಯಿದಾದರೂ ಮಾನವರು, ದೇವತೆಗಳು, ರಾಕ್ಷಸರು, ಸಮಾಜದ ವಿವಿಧ ವರ್ಗಕ್ಕೆ ಸೇರಿದವರು ಎಲ್ಲರೂ ಪಾತ್ರಧಾರಿಗಳಾಗುವ ವಿಶಿಷ್ಟತೆ ಇಲ್ಲಿದೆ. ಗಂಗೆ, ಸತ್ಯವತಿ, ಕುಂತಿ, ಗಾಂಧಾರಿ, ಮಾದ್ರಿ, ದ್ರೌಪದಿಯರಂತಹ ವಿಶಿಷ್ಟ ವ್ಯಕ್ತಿತ್ವವುಳ್ಳ ಪಾತ್ರಗಳು ಇಲ್ಲಿವೆ. ಮಹಾಭಾರತವನ್ನು ವಸ್ತುವನ್ನಾಗಿ ಉಳ್ಳ ಹಲವು ಕೃತಿಗಳು ಕನ್ನಡದಲ್ಲಿ ಬಂದಿದ್ದರೂ ಭೈರಪ್ಪನವರ 'ಪರ್ವ' ವಿಶಿಷ್ಟ ಕೃತಿಯಾಗಿದ್ದು ಎಲ್ಲ ರೀತಿಯ ಆಳವಾದ ಅಧ್ಯಯನ, ಸಂಶೋಧನೆಗಳ ಫಲವಾಗಿ ಬಂದ ಕೃತಿಯಾಗಿದೆ. ಡಾ. ಎಸ್. ವಿ. ಪ್ರಭಾವತಿಯವರ 'ದ್ರೌಪದಿ' ದ್ರೌಪದಿಯನ್ನೇ ಕೇಂದ್ರದಲ್ಲಿರಿಸಿ ಬರೆದ, ಸ್ತ್ರೀವಾದದ ಹಿನ್ನೆಲೆಯಲ್ಲಿ ರಚಿಸಿದ ಕಾದಂಬರಿಯಾಗಿದೆ.

ಪಾಶ್ಚಿಮಾತ್ಯ ಸಮಾಜದಲ್ಲಿನ ಪಲ್ಲಟಗಳ ಫಲವಾಗಿ ಕೆಲವು ಹೊಸ ವಿಚಾರಗಳು ಸಾಹಿತ್ಯಕೃತಿಗಳಲ್ಲೂ ಬದಲಾವಣೆ ತಂದವು. ಈ ಬದಲಾವಣೆಗಳು ಆ ಸಂದರ್ಭದ ಚಾರಿತ್ರಿಕ ಅಗತ್ಯವಾಗಿತ್ತು. ಹಲವು ದಶಕಗಳ ನಂತರ ಅವು ಭಾರತೀಯ ಸಾಹಿತ್ಯವನ್ನು ನೇರವಾಗಿ ಪ್ರವೇಶಿಸಿದಾಗ ಸಾಹಿತ್ಯಕ್ಕೂ ಸಮಾಜಕ್ಕೂ ಅಂತರವುಂಟಾಯಿತು. ಬದಲಾಗದ ಸಮಾಜ, ಬದಲಾದ ಸಾಹಿತ್ಯಕೃತಿ ಈ ಅಂತರ ಹಾಗೆಯೇ ಉಳಿದವು. ನವ್ಯಸಾಹಿತ್ಯದ, ಸ್ತ್ರೀವಾದದ ಕೆಲ ವಿಚಾರಗಳು ಇಂತಹ ಗೊಂದಲವನ್ನು ಹುಟ್ಟುಹಾಕಿದವು. ಕೆಲವು ಬಾರಿ ವಿಚಾರಗಳಿಗಾಗಿಯೇ ಸಾಹಿತ್ಯ ಸೃಷ್ಟಿಸುವ ಪ್ರಾಯೋಗಿಕ ವಾತಾವರಣವೂ ಉಂಟಾಯಿತು. ನವ್ಯ ಸಂದರ್ಭದ ಹೆಣ್ಣು ಕಟ್ಟುಪಾಡುಗಳಿಂದ ಹೊರಬಂದು ಕ್ರಿಯಾಶೀಲಳಾಗುವ ಮತ್ತು ಅದರ ಫಲಕ್ಕೆ ತಾನೇ ಜವಾಬ್ದಾರಳಾಗುವ ಹೊಣೆ ಹೊತ್ತಳು. ಆದರೆ ಆ ಸಂದರ್ಭದ ಆವೇಶ ಮಾತ್ರ ಇತ್ತೇ ಹೊರತು ದೂರಗಾಮಿತ್ವ ಇರಲಿಲ್ಲ. ಬಂಡಾಯ ಸಂದರ್ಭದಲ್ಲಿ ಚಿತ್ರಿತವಾದ ಹೆಣ್ಣಿಗೆ ವ್ಯವಸ್ಥೆಯೊಂದರ ವಿರುದ್ಧ ದಂಗೆಯೇಳುವ ಪ್ರವೃತ್ತಿಯಿದ್ದರೂ ಸಂದರ್ಭವನ್ನು ಅನುಕೂಲಕರವಾಗುವಂತೆ ಮಾರ್ಪಡಿಸಿಕೊಳ್ಳುವ ತಾಳ್ಮೆಯಿರಲಿಲ್ಲ. ಬಂಡಾಯ ಸಾಹಿತ್ಯ ಕ್ರಿಯಾಶೀಲವಾಗಿದ್ದಾಗಲೇ ಸ್ತ್ರೀವಾದದ ಪ್ರಸ್ತುತೆಯ ಚರ್ಚೆಗಳು ಕಾವಿನಿಂದಲೇ ಆರಂಭವಾದವು.

ಬಹುತೇಕ ಎಲ್ಲ ಲೇಖಕಿಯರಲ್ಲೂ ಅವರ ಸಾಹಿತ್ಯ ಪ್ರಕಾರಗಳಲ್ಲೂ ಸ್ತ್ರೀವಾದ ಹಲವು ರೀತಿಯಲ್ಲಿ ಕಾಲಿಟ್ಟಿತ್ತು. ಬರಹಕ್ಕೆ ವೈಚಾರಿಕ ನಿರ್ದಿಷ್ಟತೆ ಮೂಡಿದ್ದು ಈ ಸಂದರ್ಭದಲ್ಲೇ ಎಂದು ಹೇಳಬಹುದಾಗಿದೆ. ಸ್ತ್ರೀವಾದ ಯಾಕೆ, ಸ್ತ್ರೀವಾದವೆಂದರೆ ಯಾವುದು, ಯಾರು ನಿಜವಾದ ಸ್ತ್ರೀವಾದಿಗಳು ಎಂಬ ಚರ್ಚೆಗಳು ಉತ್ತರ ಕಂಡುಕೊಳ್ಳುವ ನಿಟ್ಟಿನಲ್ಲಿ ನಡೆದವು. ಈ ಹಿನ್ನೆಲೆಯಲ್ಲೇ ಆದರ್ಶದ ಎತ್ತರದ ಸ್ಥಿತಿಯಲ್ಲಿ ನೋಡಲಾಗುತ್ತಿದ್ದ ಸೀತೆ, ದ್ರೌಪದಿ, ಅಹಲ್ಯೆ, ಯಶೋಧರಾ, ಅಕ್ಕಮಹಾದೇವಿ ಇವರುಗಳನ್ನು ಸಾಮಾನ್ಯ ಸ್ತ್ರೀಯ ಹಿನ್ನೆಲೆಯಲ್ಲಿ ಇಟ್ಟು ಅಧ್ಯಯನ ಮಾಡಲಾಯಿತು. ಜನ್ನನ ಅಮೃತಮತಿಯನ್ನು ಒಳಗೊಂಡಂತೆ ಎಲ್ಲ ವಿಶಿಷ್ಟ ಸ್ತ್ರೀಪಾತ್ರಗಳು ಮರುಪರಿಶೀಲನೆಗೆ ಒಳಗಾದವು. ಮಹಾಕಾವ್ಯಗಳ ಕಾಲದಲ್ಲಿ ಜೀವಿಸಿದ್ದ ಪ್ರಸಿದ್ಧ ಸ್ತ್ರೀಪಾತ್ರಗಳ ವಿವೇಚನೆ ನಡೆದದ್ದು ಮೌಲ್ಯಪರಿವರ್ತನೆಗೆ ಒಳಗಾದ ಯುಗದಲ್ಲಿ ಎಂಬುದನ್ನು ಮರೆಯುವಂತಿಲ್ಲ.

ನಮ್ಮ ಭಾರತೀಯ ಸಮಾಜದಲ್ಲಿ ಕುಟುಂಬದಲ್ಲಿನ ಹೆಣ್ಣಿನ ಸ್ಥಾನಮಾನವನ್ನು ನಿರ್ದೇಶಿಸುತ್ತ ಬಂದದ್ದು ಪಿತೃಪ್ರಧಾನ ವ್ಯವಸ್ಥೆಯೇ. ಇದನ್ನೇ ನಾವು ಧರ್ಮವೆನ್ನುವ ರೀತಿಯಲ್ಲಿ ಕಾಣಬೇಕಾಯಿತು. ಹೆಂಡತಿಯ ಮನೋಕಾಮನೆಗಳನ್ನು ಗೃಹಸ್ಥಾಶ್ರಮದ ಮೌಲ್ಯಗಳನ್ನು ಕಡೆಗಣಿಸಿ ಗೌತಮ ತಪಸ್ಸಿಗೆ ತೊಡಗಿದಾಗ ದೇಹ ಮತ್ತು ಮನಸ್ಸಿನ ದ್ವಂದ್ವಗಳಿಗೆ ಒಳಗಾದ ಅಹಲ್ಯೆ ನಮ್ಮೆದುರಿಗಿದ್ದಾಳೆ. ತಂದೆ ಯಯಾತಿ ಕೊಟ್ಟ ಮಾತಿನಂತೆ ಗಾಲವನೊಂದಿಗೆ ಹೊರಟ ಮಾಧವಿ ಚಕ್ರಾಧಿಪತಿಯಾಗಬಲ್ಲ ಮಕ್ಕಳನ್ನು ಹೆರಲು ಹಲವು ರಾಜರಿಗೆ, ಋಷಿಗಳಿಗೆ ಪತ್ನಿಯಾಗುತ್ತಾಳೆ. ತನ್ನ ದೈಹಿಕ ಕಾಮನೆಗಳ ಪೂರೈಕೆಗಾಗಿ ಅಮೃತಮತಿ ಪತಿ ಯಶೋಧರನಿಗೆ ವಿಷವುಣಿಸಿ ಬದಗನನ್ನು ಕೂಡುತ್ತಾಳೆ. ಅಸಹಜ ಸಂತಾನಗಳ, ನಿಯೋಗಗಳ ಭಾರದಿಂದ ಕುಸಿದ ದ್ರೌಪದಿ ಕುಂತಿಯರಿದ್ದಾರೆ. ಇಲ್ಲೆಲ್ಲಾ ಅವರಿಗೆ ಸಮರ್ಥನೆ ಸಿಗುವುದು ಇದೇ ಖಿಲವಾದ ಅವಸ್ಥೆಯಲ್ಲಿನ ಧರ್ಮದಿಂದ.

ಮಹಾಕಾವ್ಯ ಪರಂಪರೆಯಲ್ಲಿನ ಇಂತಹ ಹಲವು ಹೆಣ್ಣುಗಳ ನೋವುಗಳನ್ನು ಒಳಗೊಂಡ ಕೃತಿ ಮಹಾಭಾರತ. ದ್ರೌಪದಿ ಇಲ್ಲಿನ ಅಂತಹ ಪಾತ್ರಗಳಲ್ಲಿ ವಿಶಿಷ್ಟಳಾದವಳು. ಪಾಂಡವರಂತಹ ಮಹಾವೀರರ ಹೆಂಡತಿಯಾಗಿ ಸಮಾಜದಿಂದ ಪುರಸ್ಕೃತಳಾದವಳು ಮತ್ತು ಅಷ್ಟೇ ತಿರಸ್ಕೃತಳಾದವಳು. ದ್ರುಪದ ರಾಜನ ಏಕೈಕ ಪುತ್ರಿಯಾದರೂ ಹಲವು ಕಷ್ಟಗಳ ಪರಂಪರೆಯನ್ನು ಎದುರಿಸಬೇಕಾಯಿತು. ದ್ರುಪದನ ಮಗಳಾದ್ದರಿಂದ ದ್ರೌಪದಿ, ಯಾಜ್ಞಸೇನಿ, ಪಾಂಚಾಲಿ, ಯಜ್ಞೋದ್ಭವೆ ಹಾಗೂ ಕೃಷ್ಣೆ ಅವಳಿಗಿರುವ ಹಲವು ಹೆಸರುಗಳು. ಮಹಾಭಾರತದಲ್ಲಿನ ಅಸಹಾಯಕತೆ, ಹೆಚ್ಚು ಶೌರ್ಯ, ಆತ್ಮಾಭಿಮಾನಗಳ ಏಕೈಕ ಸಾಂಕೇತಿಕ ಪಾತ್ರ ದ್ರೌಪದಿಯಾಗಿದ್ದಾಳೆ. ಪಂಚಪತಿತ್ವವನ್ನು ಪಡೆದರೂ ಮಾನಸಿಕವಾಗಿ ದುರ್ಬಲರಾಗಿಯೋ, ಧರ್ಮದ ಕಟ್ಟುಪಾಡಿಗೆ ಒಳಗಾಗಿಯೋ ಸುಮ್ಮನಿರುವ ಪಾಂಡವರ ಪತ್ನಿ ಅವರೆಲ್ಲರಿಗಿಂತ ಸಬಲೆ. ಏಕಕಾಲಕ್ಕೆ ಪಂಚಪಾಂಡವರ ಪತ್ನಿ ಮರುಕ್ಷಣ ಯಾರೊಬ್ಬರ ಪ್ರೇಯಸಿಯಲ್ಲದ ದುರಂತ ಸ್ಥಿತಿ ದ್ರೌಪದಿಯದು. ಐದು ಜನರಿದ್ದರೂ ಆರನೆಯವನಾದ ಕರ್ಣನಿಗಾಗಿ ಕಾತರಿಸಿದವಳು ಎಂಬ ಟೀಕೆಗೆ ಒಳಗಾದವಳು. ಈ ಎಲ್ಲ ಅಂಶಗಳನ್ನು ಪ್ರಭಾವತಿಯವರು ದ್ರೌಪದಿಯ ಪಾತ್ರದ ಪರಕಾಯ ಪ್ರವೇಶ ಮಾಡಿ ಎಳೆಎಳೆಯಾಗಿ ಅವಳ ಮನಃಸ್ಥಿತಿಯನ್ನು ಚಿತ್ರಿಸಿದ್ದಾರೆ.

ಮಹಾಭಾರತದ ಯುದ್ಧ ಮುಗಿದು ಅಶ್ವತ್ಥಾಮನಿಂದ ಹತರಾದ ತನ್ನ ಮಕ್ಕಳಾದ ಉಪಪಾಂಡವರು ಹಾಗೂ ತನ್ನ ಅಣ್ಣನ ಶವದ ಮುಂದೆ ಕುಳಿತ ದ್ರೌಪದಿ ಶೂನ್ಯವನ್ನು ನಿಟ್ಟಿಸುತ್ತಿದ್ದಾಳೆ. ಶವದ ಮುಂದೆ ಕುಳಿತು ನಡೆದು ಹೋದ ಎಲ್ಲ ಘಟನೆಗಳ ಹಿಂದಿನ ನೋವನ್ನು ಅನುಭವಿಸುವವಳಾಗಿ ಚಿತ್ರಿತಳಾಗಿದ್ದಾಳೆ. ತನ್ನ ಜೀವನದಲ್ಲಿ ಬೆರೆತು ಹೋದ ಹಲವು ವ್ಯಕ್ತಿಗಳ ಕಡೆ ದ್ರೌಪದಿಯ ನೋಟ ಹಾಗೂ ಸ್ವಗತ ಸಾಗುತ್ತದೆ. ಮಕ್ಕಳ ಶವದ

ಮುಂದೆ ಕೂತ ದ್ರೌಪದಿ ಮಿಂಚಿನಂತೆ ಗತಕಾಲಕ್ಕೆ ಚಲಿಸುವುದು, ಮರಳಿ ಇರುವ ವಾಸ್ತವಕ್ಕೆ ಕಾಲಿಡುವುದರ ಚಿತ್ರವನ್ನು ಪರಿಣಾಮಕಾರಿಯಾಗಿ ಚಿತ್ರಿಸಲಾಗಿದೆ.

ಈ ಕೃತಿಯಲ್ಲಿನ ದ್ರೌಪದಿ ಕೇವಲ ಮಹಾಭಾರತದ ಪಂಚಪಾಂಡವರ ಪತ್ನಿಯಲ್ಲ. ಆಧುನಿಕ ಪುರುಷಾಮಿತ್ರ ಸಮಾಜದಲ್ಲಿದ್ದು 'ಸ್ವಾತಂತ್ರ್ಯಕ್ಕಾಗಿ, ಸ್ವಂತಿಕೆಗಾಗಿ ತನ್ನ ಅಸ್ತಿತ್ವಕ್ಕಾಗಿ' ಚಿಂತಿಸಬಲ್ಲ, ಸ್ತ್ರೀವಾದಿ ವಿಚಾರಗಳನ್ನು ತನ್ನ ಚಿನ್ಹೆಯಾಗಿ ಇಟ್ಟುಕೊಂಡ ದಿಟ್ಟ ಹೆಣ್ಣು. ಸಭಾಪರ್ವದಲ್ಲಿ ಅವಳು ನಡೆಸುವ ವಾದ, ಕೇಳುವ ಧರ್ಮಸೂಕ್ಷ್ಮದ ಪ್ರಶ್ನೆಗಳು 'ಕಾಮುಕನಾದ ಪತಿಗಳು ಕೈಬಿಟ್ಟಾಗ, ಹಿರಿಯರು ಕಣ್ಣುಮುಚ್ಚಿಕೊಂಡಾಗ' ಮಾನ ಉಳಿಸಿಕೊಳ್ಳುವ ಪ್ರಯತ್ನಗಳಾಗಿವೆ. ಧರ್ಮರಾಯನನ್ನು ನಿಂದಿಸುವ, ಭೀಷ್ಮನೊಂದಿಗೆ ವಾಗ್ವಾದಕ್ಕೆ ನಿಲ್ಲಬಲ್ಲ, ಗಟ್ಟಿಗಾತಿ ದ್ರೌಪದಿ ಇಲ್ಲಿದ್ದಾಳೆ. ಈ ಕಾದಂಬರಿಯಲ್ಲಿನ ದ್ರೌಪದಿಯ ಆಲೋಚನಾ ಲಹರಿಗಳು ಪುರಾಣ ಕಾಲದ ಸ್ತ್ರೀಯ ವಿಚಾರಗಳಲ್ಲ. ಅಪ್ಪಟ ಸ್ತ್ರೀವಾದಿಯೊಬ್ಬಳು ತನ್ನತನಕ್ಕಾಗಿ ನಡೆಸುವ ಹೋರಾಟಗಳಾಗಿ ಅವಳ ಪ್ರಯತ್ನಗಳು ಕಾಣುತ್ತವೆ. ಆದರೂ ವೇದಕಾಲದ ಆಯಾ ಸಮಾಜದ ವ್ಯವಸ್ಥೆಯಲ್ಲಿ ಬದುಕಿದ್ದ ಹೆಣ್ಣೊಬ್ಬಳನ್ನು ಇಂದಿನ ಆಧುನಿಕ ವಿಚಾರಧಾರೆಗಳ ಹಿನ್ನೆಲೆಯಲ್ಲಿ ನೋಡುವುದು ಎಷ್ಟರ ಮಟ್ಟಿಗೆ ಸರಿ ಎಂಬ ಪ್ರಶ್ನೆಯೂ ಇಲ್ಲಿ ಮೂಡಿ ಮರೆಯಾಗುತ್ತದೆ. ಕೃಷ್ಣ ಚರಿತೆಯಿಂದೇ ಪ್ರಸಿದ್ಧವಾದ ಮಹಾಭಾರತದ ದ್ರೌಪದಿ ಈ ಆಧುನಿಕ ವಿಚಾರಧಾರೆಗಳ ಹತಾರಗಳಿಂದ ಎಷ್ಟರ ಮಟ್ಟಿಗೆ ಬೆಳಕಿಗೆ ಬರುತ್ತಾಳೆ ಎಂಬುದು ಇಲ್ಲಿನ ಮುಖ್ಯ ಪ್ರಶ್ನೆಯಾಗಿ ಉಳಿದುಬಿಡುತ್ತದೆ. ಇದು ಪುರಾಣಪಾತ್ರಗಳನ್ನು ಪುನಃಸೃಷ್ಟಿಸುವಲ್ಲಿ ಇರುವ ತೊಡಕೂ ಹೌದು.

ಅರ್ಜುನನ ಕೈ ಹಿಡಿಯಲೆಂದೇ ಹುಟ್ಟಿದ ದ್ರೌಪದಿ ಅರ್ಜುನನನ್ನೂ ಒಳಗೊಂಡಂತೆ ಪಂಚಪಾಂಡವರ ಕೈ ಹಿಡಿದು ಮಹಾಭಾರತ ಯುದ್ಧ ಮುಗಿದ ನಂತರ ತನ್ನ ಮಕ್ಕಳ ಹೆಣದ ಮುಂದೆ ದಿಕ್ಕುಗೆಟ್ಟವಳಾಗಿದ್ದಾಳೆ. ತನ್ನ ಐದೂ ಜನ ಮಕ್ಕಳು ಅವರವರ ತಂದೆಯ ಪ್ರೀತಿಗೆ ವಂಚಿತರಾಗಿದ್ದು ಯಾರೊಬ್ಬರ ಪ್ರೀತಿಗೆ ಒಳಗಾಗದೆ ಬೆಳೆದದ್ದು ಅವಳ ಮನಸ್ಸನ್ನು ಸಂತಪ್ತಗೊಳಿಸುತ್ತದೆ. ತನ್ನನ್ನು ನಿರ್ಲಕ್ಷಿಸಲೆಂದೇ ಅರ್ಜುನ ಸುಭದ್ರೆಯೊಡನೆ ಮಾಡಿಕೊಂಡ ವಿವಾಹ, ವಯಸ್ಸಿಗೆ ಬಂದ ತನ್ನ ಮಕ್ಕಳಿದ್ದೂ ಅಭಿಮನ್ಯುವಿನೊಡನೆ ನಡೆದ ಉತ್ತರೆಯ ವಿವಾಹ ಅವಳನ್ನು ಕೆಣಕುತ್ತಾ ಹೋಗುತ್ತವೆ. ಗಂಡಂದಿರಿದ್ದೂ ಉಪೇಕ್ಷೆಗೆ ಒಳಗಾದ ಅಸಹಾಯಕ ಹೆಣ್ಣಿನ ಚಿತ್ರಣ ಮನಮುಟ್ಟುವಂತಿದೆ.

ಮಹಾಭಾರತದಲ್ಲಿ ದಾಂಪತ್ಯಧರ್ಮದ ಮಿತಿಯೊಳಗಿನ ಈ ಹೆಣ್ಣುಗಳು ಗಂಡಂದಿರ ಆದರ್ಶ ಪರಿಪಾಲನೆಗೆ ಕೊರಳು ಕೊಟ್ಟವರು. ಇಂತಹ ಪತ್ನಿಯೊಬ್ಬಳ ಅಥವಾ ಅವಳ ಪತಿವ್ರತಾ ಧರ್ಮದ ಮೂಲಕ ಸಾಧನೆಗೆ ತೊಡಗಿದ ಗಂಡಂದಿರು ಆ ಮೂಲಕವೇ ಪ್ರಸಿದ್ಧಿಗೆ ಬಂದವರಾಗಿದ್ದಾರೆ. ಅರ್ಜುನನನ್ನು ಬಯಸಿ ಸ್ವಯಂವರದಲ್ಲಿ ಅವನ ಕೊರಳಿಗೆ ಮಾಲೆ ಹಾಕಿದರೂ ಉಳಿದೆಲ್ಲರನ್ನು ಸ್ವ ಇಚ್ಛೆಯಿಂದ ಮದುವೆಯಾದ ದ್ರೌಪದಿ ನಮ್ಮೆಲ್ಲರ ಪಾಲಿಗೆ ಇಂದಿಗೂ ಸೋಜಿಗದ ಪ್ರಶ್ನೆಯೇ. ವಿಧಿಗಳನ್ನು ಇಷ್ಟವಿಲ್ಲದೆ ಪಾಲಿಸುವುದು ಬೇರೆ. ತಾನೇ ಇಷ್ಟಪಟ್ಟು ಆರಿಸಿಕೊಳ್ಳುವುದು ಬೇರೆಯೇ ಆಗಿರುತ್ತದೆ. ಅವಳ ಬಾಲ್ಯ, ದ್ರೋಣ-ದ್ರುಪದನ ಕಲಹಗಳು, ಸ್ವಯಂವರ, ಐವರ ರಾಣಿಯಾಗಿ ಅವಳ ಯಶಸ್ವೀ ದಾಂಪತ್ಯ, ದಾಯಾದಿ ಕಲಹದಲ್ಲಿ ನೊಂದು ಅಪಮಾನಗಳನ್ನು ಎದುರಿಸಿದ್ದು ಇವೆಲ್ಲದರ ನೇರ ಚಿತ್ರಣವನ್ನು ಕೆಲವು ಬಾರಿ ಹಸಿಹಸಿಯೆನ್ನುವಂತೆಯೇ ಚಿತ್ರಿಸಲಾಗಿದೆ. ಐವರಿದ್ದು ಆರನೆಯವನಾದ ಕರ್ಣನ ಬಗ್ಗೆ ಇದ್ದ ಅವಳ ಒಳಬಯಕೆ, ಐವರು ಮಕ್ಕಳಿದ್ದೂ ಮಕ್ಕಳಿಗಾಗಿ ಅವಳ ಬಯಕೆ ನಿರಂತರ ಸೃಷ್ಟಿಕ್ರಿಯೆಯಲ್ಲಿ ತೊಡಗಿದ ಭೂಮಿತಾಯಿಯ ಕ್ಷೇತ್ರವನ್ನು ನೆನಪಿಗೆ ತರುವಂಥದ್ದಾಗಿದೆ.

ಭೀಷ್ಮನನ್ನು ಕುರಿತು ಅವಳ ವಿಚಾರಸರಣಿಯೇ ಬೇರೆ. ಕೌರವರಿಗೆ ಪಾಂಡವರಿಗೆ ಹಿರಿಯನಾಗಿ ಮಾರ್ಗದರ್ಶಕನಾಗಿದ್ದ ಭೀಷ್ಮ ದ್ರೌಪದಿ ಭಾವಿಸುವಂತೆ ಹೇಡಿ. ಧರ್ಮವಿಚಾರಗಳನ್ನು

ನೇರವಾಗಿ ಹೇಳಲಾರದವನು. ವಸ್ತ್ರಾಪಹರಣ ಪ್ರಸಂಗದಲ್ಲಿ ಹಾಗೂ ಶರಶಯ್ಯೆಯಲ್ಲಿದ್ದ ಭೀಷ್ಮನೊಂದಿಗೆ ಮಾತನಾಡುವಲ್ಲಿ ಈ ಭಾವನೆಗಳು ಪ್ರಕಟಗೊಳ್ಳುತ್ತವೆ. ಸ್ವಯಂವರದ ನಂತರದ ಐದು ದಿನಗಳು ಹಾಗೂ ಐದು ರಾತ್ರಿಗಳ ವಿವರಗಳಲ್ಲಿ ಅವಳ ದಾಂಪತ್ಯದ ಸವಿನೆನಪುಗಳು. ಪಂಚಪಾಂಡವರನ್ನು ಅವಳು ಅರ್ಥೈಸಿಕೊಂಡ ರೀತಿಯನ್ನು ಎಳೆಎಳೆಯಾಗಿ ಬಿಡಿಸಿ ಇಡಲಾಗಿದೆ. ಪಾಂಡವರೊಂದಿಗಿನ ದಾಂಪತ್ಯದಲ್ಲಿ ಅವಳು ಉಣಿಸುವ ತಾಯಿಯೂ ಹೌದು ಕಾಮನೆಗಳನ್ನು ಪೂರೈಸುವ ಪತ್ನಿಯೂ ಹೌದು. ಹೀಗಿದ್ದೂ ಅವಳು ಅಸಹಾಯಕಳೇ. ಭೀಮನನ್ನು ಬಿಟ್ಟು ಯಾರೂ ಅವಳ ನೋವಿಗೆ ಕಿವಿಕೊಡುವರಿಲ್ಲ. ಎಲ್ಲೂ ತನ್ನ ಅಸಹಾಯಕತೆ ತೋರಿಸಿಕೊಳ್ಳದ ದ್ರೌಪದಿ ಕಾದಂಬರಿಯ ಒಟ್ಟು ಬಂಧದಲ್ಲಿ ಗೆಲುವಿಗಾಗಿ, ಸೇಡಿಗಾಗಿ ಹಾತೊರೆಯುವ ವಿಭಿನ್ನ ಮನಃಸ್ಥಿತಿಯವಳು. ರಾಜಸೂಯಯಾಗದಲ್ಲಿ ಧರ್ಮರಾಯನ ಜೊತೆ ಕುಳಿತು ಯಾಗಕಾರ್ಯದಲ್ಲಿ ಭಾಗವಹಿಸಿದ್ದರೂ ಅವಳ ಮನಸ್ಸು ನೆನಪಿಸಿಕೊಳ್ಳುವುದು ತನಗೆ ಮತ್ತೆ ಮತ್ತೆ ಅವಮಾನ ಮಾಡಿದ ದುರ್ಯೋಧನನನ್ನು ಮತ್ತು ತನ್ನೆದುರಿಲ್ಲದ ಮಕ್ಕಳನ್ನು. ಮಗನೊಂದಿಗೆ ಕುಳಿತ ಸುಭದ್ರೆಯನ್ನು ಕಂಡು ಒಂದು ಕ್ಷಣ ಮಾತ್ಸರ್ಯ ಅವಳಲ್ಲಿ ಚಿಮ್ಮುವುದು ಅತಿ ಸಹಜವೆನ್ನುವಂತೆ ಬಂದಿದೆ.

ದ್ರೌಪದಿಯನ್ನು ಸಬಲೆ, ನಿಷ್ಠುರವಾದಿ, ಧೈರ್ಯವಾಗಿ ಚಿಂತಿಸಬಲ್ಲವಳು ಎಂಬ ಹಲವು ದೃಷ್ಟಿಕೋನಗಳಲ್ಲಿ ನೋಡಲಾಗಿದೆ. ದ್ಯೂತದಲ್ಲಿ ಪಾಂಡವರು ಸೋತು ದ್ರೌಪದಿ ಭೀಷ್ಮನೊಂದಿಗೆ ನಡೆಸುವ ಧರ್ಮಸೂಕ್ಷ್ಮದ ಬಗೆಗಿನ ಸಂಭಾಷಣೆ, ಎತ್ತುವ ಪ್ರಶ್ನೆ ಅವಳ ಪ್ರಶ್ನೆಯಿಂದ ಪೇಲವನಾಗಿ ಉತ್ತರಿಸುವ ಭೀಷ್ಮ, ಸೆಳೆವ ಸೀರೆಯನ್ನು ಅಕ್ಷಯ ವಸ್ತ್ರವನ್ನಾಗಿಸಿದ ಕೃಷ್ಣ ಎಲ್ಲವೂ ಹೊಸ ಬೆಳಕನ್ನು ಪಡೆದಿವೆ. ದುಶ್ಯಾಸನನನ್ನು ಎಡಗಾಲಿನಿಂದ ಒದ್ದು ಅವನ ಎದೆಯ ಮೇಲೆ ಕಾಲೂರಿ ನಿಂತು ಗಂಟಲನ್ನು ಒತ್ತತೊಡಗಿದ ದ್ರೌಪದಿ ನಮಗೆ ಗೋಚರಿಸದಿರುವ ಹೊಸ ಕಲ್ಪನೆ.

ಈ ಕಾದಂಬರಿಯಲ್ಲಿ ಮತ್ತೆ ಮತ್ತೆ ಕುಂತಿ ಹಾಗೂ ಧರ್ಮರಾಯ ಹೇಳುವ 'ಸೀತೆಯಂತಿರಬೇಕು' ಎಂಬ ದ್ರೌಪದಿ ಕುರಿತ ಮಾತು ಅವಳಿಗೆ ಹೊಂದುವಂಥದ್ದಲ್ಲ. ಸೀತೆ ಆದರ್ಶಕ್ಕಾಗಿಯೇ ಪಡೆದು ನಿಲ್ಲಿಸಿದ ಮೂರ್ತಿ. ದ್ರೌಪದಿ ಹಸಿರಕ್ತಮಾಂಸಗಳನ್ನು ಉಳ್ಳ, ಕಾಮಕ್ರೋಧಗಳನ್ನು ವಿಜೃಂಭಿಸುವ, ಜ್ವಲಿಸುತ್ತಲೇ ತಾನು ಬದುಕುವ ಪರಿಸರದಲ್ಲಿ ಸಿಡಿಯುವ ಸ್ವಭಾವವುಳ್ಳವಳು. ಇಡೀ ಮಹಾಭಾರತವನ್ನು ದ್ರೌಪದಿಯ ತೆರೆದ ಕಣ್ಣಿನಿಂದ ಗ್ರಹಿಸುವ ಹೊಸ ಪ್ರಯತ್ನವಿದಾಗಿದೆ. ಉಳಿದ ಪಾತ್ರಗಳು ಇಲ್ಲಿ ಮುಖ್ಯವೆನಿಸುವುದಿಲ್ಲ. ದ್ರೌಪದಿಯ ಪಾತ್ರಪೋಷಣೆಗೆ ಹೆಚ್ಚು ಒತ್ತು ನೀಡಲಾಗಿದೆ.

ಸ್ತ್ರೀವಾದದ ದಿಟ್ಟತನದಿಂದಲೇ ಚಿತ್ರಿತವಾದ ದ್ರೌಪದಿಯನ್ನು ಆ ಯುಗದ ಸಂದರ್ಭದಿಂದ ಹೊರನಿಲ್ಲಿಸಿ ನೋಡುವ ಪ್ರಯತ್ನ ಇದಾಗಿದೆ. ಪಿತೃಪ್ರಧಾನ ವ್ಯವಸ್ಥೆಯಡಿ, ದೌರ್ಜನ್ಯಕ್ಕೆ ಒಳಗಾದರೂ ಅಲ್ಲಲ್ಲಿ ಕಿಡಿ ಹಾಯಿಸುವ ಸ್ವಭಾವದ ದ್ರೌಪದಿ ಇಲ್ಲಿ ಮುಕ್ತವಾಗಿ ಚಿಂತಿಸಬಲ್ಲ, ನೇರವಾಗಿ ನುಡಿಯಬಲ್ಲ ಹೊಸ ಶರೀರವನ್ನು ಪಡೆದಿದ್ದಾಳೆ. ದ್ರೌಪದಿ ಹಿಡಿಯುವ ವಿಪರೀತ ಕಲ್ಪನೆಗಳ ದಾರಿ ಅಲ್ಲಲ್ಲಿ ಕಾದಂಬರಿಯ ಓಟಕ್ಕೆ ತಡೆಯೊಡ್ಡುತ್ತದೆ ಎನ್ನುವುದನ್ನು ಬಿಟ್ಟರೆ ಇದೊಂದು ಸ್ತ್ರೀವಾದದ ಕಲ್ಪನೆಯಿಂದಲೇ ಕಣ್ಣುತೆರೆದ ಹೊಸ ಕೂಸು ಎಂದು ಧಾರಾಳವಾಗಿ ಹೇಳಬಹುದಾಗಿದೆ.

ಎಚ್. ಎಲ್. ಪುಷ್ಪ, ೬೭/೨ ಎ, ನಿಸರ್ಗ, ನಾಗರಬಾವಿ ರಸ್ತೆ, ವಿಜಯನಗರ,
ಬೆಂಗಳೂರು-೫೬೦ ೦೪೦ ✆ : ೦೮೦ - ೩೪೦ ೪೨೪೪

ತಾಯಿ - ತಂತು - ಆಗಂತುಕ ಬೇರು

ಮಲ್ಲಿಕಾರ್ಜುನ ವಿ. ಬನ್ನಿ

ತಾಯಿ ಬೇರಿನಿಂದ ಬೆಳೆದು
ಬಿರಿದ ಬೀಜಕೆ ಹೊರ - ಹೊಸ
ಜಗದಲಿ ಮೊಗವೆತ್ತಿ, ತಾನೂ
ಉಸುರಿಸಿ ಸೂರ್ಯ ಶಾಖ ಹೀರಿ
ಬೆಳಕಿನೊಳು ಬೆಳಕಾಗಿ
ಇತರ ಮರಗಳಿಗೂ ಮೀರಿ ಬೆಳೆದು
ಹೆಮ್ಮರವಾಗಿ ಹೊರಹೊಮ್ಮುವಾಶೆ.
ಹಸಿದ ಹೊಟ್ಟೆಯ, ಬಿರಿದೆದೆಯ
ಬಸಿರೊಡೆದು ಬಂದು
ಹಸಿನೆಲದಲ್ಲಿ ಪುನಃ ಬೀಜ
ತನ್ನ ಹೊಸ ವಂಶ ಬೆಳೆಸಲು
ಆಳದಾಳಕ್ಕೂ ಬೇರುಗಳ ಇಳಿಸಿ
ತಾಯಿಬೇರಿಗೆ - ತಂತುಬೇರುಗಳಾಗಿ
ಆಗಂತುಕ ಬೇರಿಗೆ ಕೈ ಚಾಚಿ
ಮೈ ಬಾಚಿ ತಬ್ಬಿಕೊಳ್ಳುವ
ಕ್ರಿಯೆ, ಪ್ರಕೃತಿ ರಹಸ್ಯದ
ಪ್ರೀತಿಪೂರ್ವಕ ಪ್ರಕ್ರಿಯೆ.

ಭೂತ - ಭವಿಷ್ಯತ್ತು
ವರ್ತಮಾನದ ಹರುಷದ ಹೊನಲು
ಹರಿಸುತ್ತ, ಸ್ಫುರಿಸುತ್ತ
ಸಾವಿರ ಸಾವಿರ ಬೀಜಗಳನಿರಿಸಿ
ಸಾವಿರದ ಸಂತೆಯಲಿ ಬದುಕಿಗರಸಿ
ಭೂಮಿಯಂಗಳದಲಿ ಪ್ರೇಮದ
ರಂಗೋಲಿ ಹಾಕುವ ಹಸುರಿನ
ಚೈತ್ರಯಾತ್ರೆ
ಅವರುಗಳಿಗಿರಿಸಿದ ಮಧು ತುಂಬಿದ ಪಾತ್ರೆ.

ಮಲ್ಲಿಕಾರ್ಜುನ ವಿ. ಬನ್ನಿ, ಮಾಜಿ ಶಾಸಕರು, ತಾಯಿ ಪ್ರಕಾಶನ, ಪಿ. ಬಿ. ನಂ. ೪೬.
ಗುಳೇದಗುಡ್ಡ - ೫೮೭ ೨೦೩ ಜಿ. ಬಾಗಲಕೋಟ ✆ : ೫೦ ೩೭೯, ೫೦ ೪೫೩

ಅಮರೇಶ ನುಗಡೋಣಿಯವರ 'ತಮಂಧದ ಕೇಡು'

ಬಸವರಾಜ ಸಬರದ **ವಿಶ್ಲೇಷಣೆ**

'ಮಣ್ಣು ಸೇರಿತು ಬೀಜ' ಕಥಾಸಂಕಲನದ ಮೂಲಕ ಗಮನ ಸೆಳೆದ ಅಮರೇಶ ನುಗಡೋಣಿಯವರ 'ತಮಂಧದ ಕೇಡು' ಎರಡನೆಯ ಕಥಾಸಂಕಲನ. ಹೈದ್ರಾಬಾದ ಕರ್ನಾಟಕ-ಪ್ರದೇಶದ ಸತ್ವಶಾಲಿ ಕಥೆಗಾರರಾಗಿ ಅಮರೇಶ ಈ ಸಂಕಲನದ ಮೂಲಕ ಗುರುತಿಸಿಕೊಂಡಿದ್ದಾರೆ. ಇದರಲ್ಲಿ ಒಟ್ಟು ಒಂಬತ್ತು ಕಥೆಗಳಿವೆ. ಇವುಗಳಲ್ಲಿ ಒಂದೆರಡನ್ನು ಹೊರತುಪಡಿಸಿದರೆ ಉಳಿದೆಲ್ಲ ಕಥೆ ಗ್ರಾಮೀಣ ಬದುಕಿಗೆ ಸಂಬಂಧಿಸಿವೆ. ಎಡೆದೊರೆ ನಾಡೆಂದೇ ಪ್ರಸಿದ್ಧವಾಗಿರುವ ರಾಯಚೂರು ಪ್ರದೇಶದ ಭಾಷಾವೈಶಿಷ್ಟ್ಯವನ್ನಿಲ್ಲಿ ಕಾಣಬಹುದಾಗಿದೆ. ಈ ಜಿಲ್ಲೆಯ ಹಿರಿಯ ಕಥೆಗಾರರಾದ ಶಾಂತರಸ, ನೀರಮಾನ್ವಿಯವರ ಕಥೆಗಳ ಭಾಷೆಗಿರುವ ಸಹಜತೆ, ನುಗಡೋಣಿಯವರ ಕಥೆಗಳಲ್ಲಿ ಜಟಿಲಗೊಂಡಂತೆ ಕಾಣಿಸುತ್ತದೆ. ಆದರೆ ಪ್ರಾದೇಶಿಕ ಭಾಷಾದೃಷ್ಟಿಯಿಂದ ಇಲ್ಲಿಯ ಕಥೆಗಳು ಪ್ರತ್ಯೇಕ ಅಧ್ಯಯನವನ್ನು ಬಯಸುತ್ತವೆ.

ಅಮರೇಶರ ಕಥೆಗಳು ಘೋಷಣೆಗಳ ಸಪ್ಪಳದಿಂದ ದೂರವಾಗಿರುವಂತೆ, ವಿವರಗಳ ವೈಭವೀಕರಣದಿಂದಲೂ ತಪ್ಪಿಸಿಕೊಂಡಿವೆ. ಹೀಗಾಗಿ ಈ ಪ್ರದೇಶದ ಕಥೆಗಾರರಲ್ಲಿಯೇ ಅಮರೇಶ ವಿಶಿಷ್ಟವಾಗಿ ಕಾಣಲು ಸಾಧ್ಯವಾಗಿದೆ. ದೇವನೂರ ಮಹಾದೇವರ ಕಥೆಗಳ ಶೈಲಿ ಇಲ್ಲಿ ಪ್ರಭಾವ ಬೀರಿದೆಯೆಂದೆನಿಸುತ್ತದೆ. ಮಹಾದೇವರ ಕಥೆಗಳಂತೆ ಅಮರೇಶರ ಕಥೆಗಳು ಸಂಕೀರ್ಣ ಬದುಕಿನ ಕಲಾತ್ಮಕ ಅಭಿವ್ಯಕ್ತಿಯಾಗಿ ಪ್ರಕಟವಾಗಿರುವುದು ಬಹುಮುಖ್ಯವಾದ ಬೆಳವಣಿಗೆ.

ಗ್ರಾಮೀಣ ಬದುಕಿನ ಬಡತನ, ಮೌಢ್ಯತೆ, ಜೀವನೋತ್ಸಾಹದಂತಹ ವಿಷಯಗಳು ಇಲ್ಲಿಯ ಕಥೆಗಳಿಗೆ ಪ್ರಮುಖ ವಸ್ತುಗಳಾಗಿವೆ. ಶೋಷಣೆಯ ಮುಖಗಳನ್ನು ಕಪ್ಪು-ಬಿಳುಪಿನ ರೀತಿಯಲ್ಲಿ ಸರಳೀಕರಣಗೊಳಿಸದೆ, ಜೀವನಾನುಭವದ ಸೂಕ್ಷ್ಮ ನೆಲೆಗಳ ಮೂಲಕ ಕಟ್ಟಿಕೊಟ್ಟಿರುವುದು ಅಮರೇಶರ ಕಲಾಕೌಶಲ್ಯಕ್ಕೆ ಸಾಕ್ಷಿಯಾಗಿದೆ. ಸಂಪ್ರದಾಯವಾಗಿ ಲೇಖಕರ ಪೊಳ್ಳು ಆದರ್ಶ ಹಾಗೂ ಬಂಡಾಯದ ಅಬ್ಬರಗಳೆರಡರಿಂದಲೂ ದೂರ ನಿಂತು ಧ್ಯಾನಸ್ಥವಾಗಿದ್ದುಕೊಂಡೇ ಬದುಕಿನ ಹತಾಶೆ, ವಿಷಣ್ಣತೆಗಳನ್ನು ಬಿಚ್ಚಿಡುವ ಇಲ್ಲಿಯ ಕಥೆಗಳು ತೀವ್ರವಾದ ಪರಿಣಾಮವನ್ನುಂಟು ಮಾಡುತ್ತವೆ, ವಸ್ತು ಆಶಯಗಳ ದೃಷ್ಟಿಯಿಂದ ತುಂಬಾ ಕುತೂಹಲಕಾರಿಯಾಗಿವೆ.

ಮಾನವೀಯ ಅಂತಃಕರಣದ ಜಲಧಾರೆಯಂತಿರುವ ಇಲ್ಲಿಯ ಕಥೆಗಳು ಗ್ರಾಮೀಣ ಬದುಕಿನ ಸೂಕ್ಷ್ಮ ಹೊಳಹುಗಳನ್ನು ಮೂಡಿಸುತ್ತವೆ. ಮನುಷ್ಯ ಮಾತ್ರ ಕೇಂದ್ರಬಿಂದುವಾಗಿರದೆ, ಇಡೀ ಜೀವಸಂಕುಲವೇ ಇಲ್ಲಿ ಪ್ರಧಾನವಾಗಿದೆ. 'ತಮಂಧದ ಕೇಡು' ಕಥೆಯಲ್ಲಿ ಶಾಂತಗೌಡ ಮರಗಳನ್ನು "ಈ ಮರಗಳು ಅಂದ್ರ ನನ್ನ ಜೀವ ಇದ್ದಂಗ! ಯಪ್ಪ, ಜೀವ ಅಂದ್ರ.... ಚಂದವ್ವ ಇದ್ದಂಗ" ಎನ್ನುವ ದುರುಗನ ಮಾತಿನಲ್ಲಿ ಜೀವವಿರುವ ಮರಗಳಲ್ಲಿ ಚಂದವ್ವ ಜೀವಂತವಾಗಿ ಕಾಣಿಸಿಕೊಳ್ಳುವ ಪರಿಕಲ್ಪನೆ ಆಕರ್ಷಕವಾಗಿದೆ. ಆ ಮರಗಳ ತುಂಬ ಸಂಸಾರ ಹೂಡಿದ್ದ ನೂರಾರು ಪಕ್ಷಿಗಳು ತಮ್ಮ ಗೂಡುಗಳನ್ನು ಮರಿಹಕ್ಕಿಗಳನ್ನು ಕಳೆದುಕೊಂಡು ಪರಿತಪಿಸುವ ಚಿತ್ರಣ ಮನಮಿಡಿಯುವಂತಿದೆ. ಕಡಿದ ಮರಗಳನ್ನು ಕಂಡು ದುರುಗ ಅತ್ತುಬಿಡುವ ಪ್ರಸಂಗ ಕರುಣಾಜನಕವಾಗಿದೆ– 'ಹೆಜ್ಜೆಗೆ ಸಿಗುವ ನೆಲ' ಕಥೆಯಲ್ಲಿ ಗುರುಲಿಂಗಯ್ಯ ತಾತನ ಸಸ್ಯಗಳ ಪ್ರೀತಿ ಅಗಾಧವಾಗಿದೆ. ಈಶ್ವರ ಗುಡಿಯ ಮುಂದೆ ತೆಂಗಿನ ಸಸಿಗಳನ್ನು ನೆಡುವುದು, ಊರಿನಲ್ಲಿದ್ದ ನುಗ್ಗೇಗಿಡದ ಬಗೆಗೆ ನಿಗಾವಹಿಸುವುದು, ಆತನಲ್ಲಿರುವ ಪರಿಸರದ ಬಗೆಗಿನ ಕಾಳಜಿಯನ್ನು ಸ್ಪಷ್ಟಪಡಿಸುತ್ತದೆ. ಹೀಗೆ ಇಲ್ಲಿಯ ಅನೇಕ ಕಥೆಗಳಲ್ಲಿ ಜೀವಪರ ಕಾಳಜಿಗಳು ಎದ್ದುಕಾಣುತ್ತವೆ.

ದಲಿತಪರ ಕಾಳಜಿಗಳು ಹಾಗೂ ಮಹಿಳಾ ಸಾಧ್ಯತೆಗಳಿಂದ ಇಲ್ಲಿಯ ಹೊಸ ಕಥೆಗಳ ವಸ್ತು ಹೊಸ ಆಯಾಮ ಪಡೆದುಕೊಂಡಿದೆ. ರಾಯಚೂರ ಜಿಲ್ಲೆಯ ಗ್ರಾಮೀಣ ಬದುಕಿನ ದಲಿತರ ಜೀವನಾನುಭವದ ಒಳನೋಟಗಳನ್ನು ಬಿಚ್ಚಿಡುವಲ್ಲಿ ಈ ಸಂಕಲನದ ಕಥೆಗಳು ಯಶಸ್ವಿಯಾಗಿವೆ. 'ನೀರು ತಂದವರು' ಕಥೆ ದಲಿತರ ಔದಾರ್ಯವನ್ನು ಹೇಳಿದರೆ, 'ತಮಂಧದ ಕೇಡು' ಕಥೆ ದುರುಗನಂಥವರ ತಾಳ್ಮೆ - ತ್ಯಾಗದ ಗುಣಗಳನ್ನು ತಿಳಿಸುತ್ತದೆ. 'ಉತ್ತ್ರ ಮಣಿ' ಕಥೆಯಲ್ಲಿ ಧೂಳಪ್ಪ ತನ್ನ ಮಗಳು ಗಂಗವ್ವನಿಗಾಗಿ ಜಂಗಮನಲ್ಲಿ ನ್ಯಾಯ ಕೇಳುವ ರೀತಿ ದಲಿತ ಬದುಕಿನ ಜಾಗ್ರತಿಯ ಸಂಕೇತವಾಗಿ ಮೂಡಿ ಬಂದಿದೆ.

ಮೇಲು ಜಾತಿ - ಕೆಳ ಜಾತಿಯವರ ನಡುವೆ ನಡೆಯುವ ಬದುಕಿನ ಸಂಘರ್ಷವನ್ನು ಲೇಖಕರು ಸೂಕ್ಷ್ಮವಾಗಿ ಹೇಳಿದ್ದಾರೆ. 'ತಮಂಧದ ಕೇಡು' ಕಥೆಯಲ್ಲಿ ದುರುಗಾ ತುಂಗಭದ್ರಾ ನದಿಯಲ್ಲಿ ತಾನೂ ಮುಳುಗಿ ಜತೆಗೆ ಶಾಂತಗೌಡನೂ ಮುಳುಗುವಂತಾಗಿ ದುರಂತದಲ್ಲಿ ಕಥೆಯು ಕೊನೆಗೊಂಡರೆ, 'ನೀರು ತಂದವರು' ಕಥೆಯಲ್ಲಿ ಸಿದ್ದಪ್ಪನಂಥವರು ದ್ವೇಷದ ಬದಲು ಜೀವನಪ್ರೀತಿಯನ್ನು ಹುಟ್ಟುಹಾಕಿ ಸಮಸ್ಯೆಯ ಪರಿಹಾರಕ್ಕೆ ಕಾರಣರಾಗುತ್ತಾರೆ. ದುರಗನಂಥವರು ಪ್ರತಿಭಟಿಸಲಾರದೆ, ಸಾವಿನಲ್ಲಿ ಬದುಕಿನ ಕೊನೆಯನ್ನು ಕಂಡುಕೊಂಡರೆ, ಸಿದ್ದಪ್ಪನಂಥವರು ಮಲ ತಿನ್ನಿಸಿದವರ ಕೈಗೆ ಅನ್ನ ನೀಡುವುದರ ಮೂಲಕ ದೊಡ್ಡವರಾಗಿ ಬೆಳೆದು ನಿಲ್ಲುತ್ತಾರೆ.

ಅಮರೇಶರ ಕಥೆಗಳಲ್ಲಿ ಮಹಿಳಾ ಸಾಧ್ಯತೆಗಳು ಸಹಜವಾದ ರೀತಿಯಲ್ಲಿ ಚಿತ್ರಿತವಾಗಿವೆ. ಇಲ್ಲಿಯ ಅನೇಕ ಕಥೆಗಳಲ್ಲಿ ಮಹಿಳೆಯೇ ಕೇಂದ್ರಬಿಂದುವಾಗಿದ್ದಾಳೆ. ಇನ್ನೂ ಒಂದು ವಿಶೇಷವೆಂದರೆ ಈ ಮಹಿಳೆಯರಲ್ಲಿ ದಲಿತ ಮಹಿಳೆಯರೇ ಪ್ರಮುಖ ಪಾತ್ರಗಳಾಗಿ ಬೆಳೆದಿದ್ದಾರೆ. 'ತಮಂಧದ ಕೇಡು' ಕಥೆಯ ಚಂದವ್ವ, 'ಕಾಗೀ ಕೂಟ' ಕಥೆಯ ಸುಮ್ಮಿ, 'ಉತ್ತ್ರ ಮಣಿ' ಕಥೆಯ ನೀಲಮ್ಮ ಹಾಗೂ 'ಊರಮ್ಮ' ಕಥೆಯ ಊರಮ್ಮ ಈ ಮುಂತಾದ ಮಹಿಳಾ ಪಾತ್ರಗಳು ನುಗಡೋಣಿಯವರ ಮಹತ್ವದ ಸೃಷ್ಟಿಗಳಾಗಿವೆ. 'ಧರೆ ಉರಿದರೆ' ಕಥೆಯ ಪರಕ್ಕನ ಪಾತ್ರ ಮನಮಿಡಿಯುವಂತಿದೆ.

ಇಲ್ಲಿಯ ಕಥೆಗಳಲ್ಲಿ ಲಿಂಗಾಯತ ಪುರುಷ ಪಾತ್ರಗಳು ದಲಿತ ಮಹಿಳೆಯರೊಂದಿಗೆ ಅನೈತಿಕ ಸಂಬಂಧವನ್ನಿಟ್ಟುಕೊಂಡಿರುವ ಚಿತ್ರಣ ಅನೇಕ ಕಡೆ ಕಂಡುಬರುತ್ತದೆ. ಈ ಭಾಗದ ಹಿರಿಯ ಕಥೆಗಾರರು ತಮ್ಮ ಕಥೆಗಳಲ್ಲಿ ಹಿಂದೆಯೇ ಇಂತಹ ವಸ್ತುವಿನ ಬಗೆಗೆ ಬರೆದಿದ್ದಾರೆ. ಆದರೆ ನುಗಡೋಣಿಯವರ ಈ ಕಥೆಗಳಲ್ಲಿ ಹಿಂದಿನ ಕಥೆಗಾರರಲ್ಲಿರದ ಸೂಕ್ಷ್ಮ ಒಳನೋಟಗಳಿವೆ. 'ತಮಂಧದ ಕೇಡು' ಕಥೆಯಲ್ಲಿ ಬರುವ ಶಾಂತಗೌಡ - ಚಂದವ್ವ, 'ಕಾಗೀ ಕೂಟ' ಕಥೆಯಲ್ಲಿ ಕಾಣಿಸಿಕೊಳ್ಳುವ ಚಾದಂಗಡಿ ಮಾಲಿಂಗ - ಸುಮ್ಮಿ, 'ಉತ್ತ್ರ ಮಣಿ' ಕಥೆಯಲ್ಲಿ ಬರುವ ಬಸವರಾಜಪ್ಪಗೌಡ - ಗಂಗವ್ವ ಇಂತಹ ಅನೈತಿಕ ಸಂಬಂಧಗಳಲ್ಲಿ ಸೂಕ್ಷ್ಮ ಸಂಗತಿಗಳು ಹೆಣೆದುಕೊಂಡು ಕಥೆಯ ಸನ್ನಿವೇಶಗಳನ್ನು ಸಂಕೀರ್ಣಗೊಳಿಸಿವೆ. ಇಲ್ಲೆಲ್ಲಾ ಕಥೆಗಾರರ ಜೀವಪರ ಆಶಯಗಳು ಎದ್ದು ಕಾಣುತ್ತವೆ. ಚಂದವ್ವ, ಗಂಗವ್ವ, ಸುಮ್ಮಿ, ಊರಮ್ಮನಂತಹ ಪಾತ್ರಗಳು ಎದುರಿಸುವ ಸಮಸ್ಯೆಗಳು ತುಂಬಾ ಸಂಕೀರ್ಣವಾಗಿವೆ. ಪುರುಷಪ್ರಧಾನ ಸಂಸ್ಕೃತಿಯ ವೈರುಧ್ಯಗಳಿಂದ, ಊಳಿಗಮಾನ್ಯ ಸಂಸ್ಕೃತಿಯ ಹಿತಾಸಕ್ತಿಗಳಿಂದ ಇಲ್ಲಿಯ ದಲಿತ ಮಹಿಳೆಯರು ಶೋಷಣೆಗೊಳಗಾದರೂ ಇದ್ದ ಬದುಕಿನಲ್ಲಿಯೇ ಹೊಸ ಸಾಧ್ಯತೆಗಳನ್ನು ಕಂಡುಕೊಳ್ಳುವುದು, ಜೀವನದಿಯಾಗಿ ಹರಿದು ಬದುಕಿಗಾಗಿ ಹಾತೊರೆಯುವುದು ಕುತೂಹಲಕಾರಿಯಾಗಿದೆ. ದಲಿತರ ಶೋಷಣೆ ಇಲ್ಲಿ ಕಪ್ಪು - ಬಿಳುಪಿನ ನೇರ ವರದಿಯಾಗಿರದೆ, ಆಯಾ ಸಂದರ್ಭದ ಸೂಕ್ಷ್ಮತೆಗಳನ್ನು ಕಟ್ಟಿಕೊಂಡ ಸಹಜ ಅಭಿವ್ಯಕ್ತಿಯಾಗಿದೆ. ಚಂದವ್ವನ ತ್ಯಾಗ, ಗಂಗವ್ವನ ಜೀವನಪ್ರೀತಿ, ಊರಮ್ಮನ ಪ್ರತಿಭಟನೆ ಒಂದೊಂದು ರೀತಿಯ ವಿಶಿಷ್ಟ ಅನುಭವವನ್ನು ಕಟ್ಟಿಕೊಡುತ್ತವೆ. ಹೀಗಾಗಿ ಈ ಕಥೆಗಳ ದಲಿತ ಮಹಿಳಾ ಪಾತ್ರಗಳು ವಿಶೇಷ ಗಮನ ಸೆಳೆಯುತ್ತವೆ.

ಈ ಸಂಕಲನದ ಕಥೆಗಳಲ್ಲಿ ವಸ್ತುವೈವಿಧ್ಯತೆಯಿದೆ. `ಧರೆ ಉರಿದರೆ` ಕಥೆಯಲ್ಲಿ ಪಂಚಾಯಿತಿ ರಾಜಕೀಯ ಅಡಕವಾಗಿದ್ದರೆ, `ತಮಂಧದ ಕೇಡು` ಕಥೆ ಹೊಸ ಅನುಭವವೊಂದನ್ನು ಕೊಡುತ್ತದೆ. ಇಲ್ಲಿಯ ಅನೇಕ ಕಥೆಗಳು ಗ್ರಾಮೀಣ ಬದುಕಿಗೆ ಸ್ಪಂದಿಸಿದರೆ, `ಮಹಾನದಿಯು ಮತ್ತು ಜೀವನದಿಯು` ಹಾಗೂ `ಬೇಟೆ`ಯಂತಹ ಕಥೆಗಳು ನಗರಜೀವನಕ್ಕೆ ಸಂಬಂಧಿಸಿದ ಬಡವರ ಗೋಳನ್ನು ಹೇಳುತ್ತವೆ.

`ಉತ್ತ್ರಮಣಿ` ಕಥೆಯಲ್ಲಿ ಬರುವ ತೆಕ್ಕೆ ಕಾಯಕದ ಚಂದ್ರಶೇಖರಯ್ಯ, ಅಸ್ತ್ರ ಕಾಯಕದ ಮೃತ್ಯುಂಜಯ ಸ್ವಾಮಿ, ಮುಖ್ಯಾಪಗಿ ಜಂಗಮ ಹಾಗೂ ಶರಣಮ್ಮ ಈ ಮುಂತಾದ ಪಾತ್ರಗಳು ಉತ್ತರ ಕರ್ನಾಟಕದ ಗ್ರಾಮೀಣ ಬದುಕಿನ ಜನಪದ ನ್ಯಾಯಪದ್ಧತಿಯ ಪ್ರತೀಕಗಳಾಗಿವೆ.

ಈ ಸಂಕಲನದಲ್ಲಿ ಬಳಸಿರುವ ನುಡಿಗಟ್ಟುಗಳು ಪಡೆನುಡಿಗಳು ಕುತೂಹಲಕಾರಿಯಾಗಿವೆ. "ಅರಮನೆ ಹೊಕ್ಕರೆ ಹೆಣದ ಕುಣಿ ಪೊಕ್ಕಂತಾಗುತ್ತಿತ್ತು" (ತಮಂಧದ ಕೇಡು, ಪುಟ : ೫). "ತಿಪ್ಪಮ್ಮನ ಮನೆಗೆ ಬಂದಾಗ ಹೊತ್ತು ಬಾಗಿತ್ತು" (ಹೆಜ್ಜೆಗೆ ಸಿಗುವ ನೆಲ, ಪುಟ : ೧೨೯). "ನದಿಯೊಂದು ಹರದು ಬಂದು ಎದ್ದಾಗ ಹೊಕ್ಕಂತಾಯಿತು" (ಊರಮ್ಮ, ಪುಟ : ೧೪೬). ಇಂತಹ ಅನೇಕ ನುಡಿಗಟ್ಟುಗಳನ್ನು ಇಲ್ಲಿಯ ಕಥೆಗಳಿಂದ ಉದಾಹರಿಸಬಹುದು. ವಸ್ತು - ಭಾಷೆ - ಅಭಿವ್ಯಕ್ತಿಯ ದೃಷ್ಟಿಯಿಂದ ತುಂಬಾ ನವೀನವಾಗಿ ಕಾಣುವ ಈ ಕೃತಿ ಹೈದ್ರಾಬಾದ ಕರ್ನಾಟಕ ಪ್ರದೇಶದ, ಹೆಮ್ಮೆಯ ಕೊಡುಗೆಯಾಗಿದೆ. ರಾಯಚೂರ ಪ್ರದೇಶದ ಗ್ರಾಮೀಣ ಬದುಕಿನ ಸಂಕೀರ್ಣತೆಯನ್ನು ಕಟ್ಟಿಕೊಡುವ ಅಮರೇಶರ ಈ ಸಂಕಲನ ಹೆಚ್ಚು ಚರ್ಚೆಗೊಳಗಾಗಬೇಕಾದ ಕೃತಿ. `ತಮಂಧದ ಕೇಡು` ಕಥೆಯ ಚೆನ್ನ ಮತ್ತು ಅಕ್ಕಮ್ಮ ಒಂದೇ ವಾರಿಗೆಯವರಾಗಿ ಮೊದಲು ಕಾಣಿಸುತ್ತಾರೆ. ನಂತರ ಚೆನ್ನ ಕಾಲೇಜು ಉಪನ್ಯಾಸಕನಾಗಿ, ಅಕ್ಕಮ್ಮ ವಿದ್ಯಾರ್ಥಿನಿಯಾಗಿ ಚಿತ್ರಿತವಾಗಿದ್ದಾರೆ. `ಊರುಕೇರಿ` ಎಂಬ ಈ ಪದ ಪ್ರತಿ ಪುಟದಲ್ಲೂ ಮತ್ತೆಮತ್ತೆ ಬಳಕೆಯಾಗಿದೆ. ಇಂತಹ ಕೆಲವು ಮಿತಿಗಳೂ ಇಲ್ಲಿವೆ. ಆದರೆ ಹೊಸ ಸಾಧ್ಯತೆಗಳೆದುರು ಇಂತಹ ಮಿತಿಗಳು ಕಾಣದಾಗಿ ಕೃತಿ ತನ್ನ ಪ್ರಾಮುಖ್ಯವನ್ನು ಕಳೆದುಕೊಳ್ಳದೆ ಕಥಾಲೋಕದಲ್ಲಿ ಹೊಸ ಅಲೆಯೊಂದನ್ನು ಸೃಷ್ಟಿಸುತ್ತದೆ.

● ▼

ಡಾ. ಬಸವರಾಜ ಸಬರದ, ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ - ೫೮೫ ೧೦೬

ಬಿ. ಆರ್. ಲಕ್ಷ್ಮಣರಾವ್ ಅವರ 'ಇತ್ಯಾದಿ'

ಜಿ. ಎನ್. ರಂಗನಾಥ ರಾವ್ ಅವಲೋಕನ

'ಇತ್ಯಾದಿ' ಬಿ. ಆರ್. ಲಕ್ಷ್ಮಣರಾವ್ ಅವರ ಮೊದಲ ಆಯ್ದ ಲೇಖನಗಳ ಸಂಗ್ರಹ. ಈ ಸಂಕಲನಕ್ಕೆ 'ಇತ್ಯಾದಿ' ಎಂದು ಏಕೆ ಹೆಸರಿಟ್ಟರೋ ನನಗೆ ತಿಳಿಯದು. ಇದು ಇಂಗ್ಲಿಷ್‌ನ ಎಟ್‌ಸೆಟ್ರಾ ಅಲ್ಲ ಎಂದು ನಾನು ಭಾವಿಸುವೆ. ಏಕೆಂದರೆ ಇಂಗ್ಲಿಷ್‌ನ ಎಟ್‌ಸೆಟ್ರಾಗೆ ಚಿಲ್ಲರೆ ವಿಷಯಗಳು ಎಂಬ ಧ್ವನಿವಕ್ರತೆಯೂ ಸೇರಿಕೊಳ್ಳುತ್ತದೆ. ಕನ್ನಡದಲ್ಲಿ ಇತ್ಯಾದಿ ಎಂದರೆ ಇವೇ ಮುಂತಾದವು. ಲಕ್ಷ್ಮಣರಾಯರ ಈ ಸಂಕಲನದ `ಇವೇ ಮುಂತಾದವು` ಆಗಿ `ಇತ್ಯಾದಿ`ಯೇ ಅರ್ಥಪೂರ್ಣವೆನಿಸುತ್ತದೆ.

ಲಕ್ಷ್ಮಣರಾವ್ ಹೇಳಬೇಕಾದ ಇವೇ ಮುಂತಾದವು ವಿಷಯಗಳಲ್ಲಿ ಕೆಲವನ್ನು ಇಲ್ಲಿ ಸಂಕಲಿಸಿದ್ದಾರೆ. ಈ ಸಂಕಲನದಲ್ಲಿ ನಾಲ್ಕು ವಿಭಾಗಗಳಲ್ಲಿ ಇಪ್ಪತ್ತೆರಡು ಲೇಖನಗಳಿವೆ. ವಿಚಾರ, ವಿನೋದ, ವಿಮರ್ಶೆ, ವ್ಯಕ್ತಿ —ಹೀಗೆ ಇಲ್ಲಿನ ಲೇಖನಗಳನ್ನು ವರ್ಗೀಕರಿಸಲಾಗಿದೆ. ಈ

ಲೇಖನಗಳನ್ನೆಲ್ಲ ಓದಿ ಒಟ್ಟಾರೆಯಾಗಿ ಗ್ರಹಿಸಿದಾಗ ನಮಗೆ ದಕ್ಕುವುದು. ವಿಮರ್ಶೆಯೇ. ಸಮಾಜ ವಿಮರ್ಶೆ, ಸಾಹಿತ್ಯ ವಿಮರ್ಶೆ, ವ್ಯಕ್ತಿ ವಿಮರ್ಶೆ, ಆತ್ಮ ವಿಮರ್ಶೆ –ಹೀಗೆ ವಿಮರ್ಶೆ ವಿವಿಧ ಮಜಲುಗಳಲ್ಲಿ ಇಲ್ಲಿ ನಮಗೆ ಎದುರಾಗುತ್ತದೆ. ವಿನೋದ ಎಂದು ವರ್ಗೀಕರಿಸಿರುವ ಲೇಖನಗಳಲ್ಲೂ ಪತ್ರೊಡೆಯೆಂಬ ಖಾದ್ಯವಸ್ತುವೊಂದು ಗಂಡು-ಹೆಣ್ಣಿನ ಸಂಬಂಧದ ನಿಕಷವಾಗುವುದು; ಮಧ್ಯರಾತ್ರಿಯಲ್ಲಿ Absolute Truth ನಂಥ ಜೀವನ ಪ್ರಶ್ನೆ ಉದ್ಭವಿಸುವುದು; ಇಂಥ ಗಂಭೀರ ವಿಚಾರ ವಿಮರ್ಶೆಗಳಿರುವುದರಿಂದ ನಾನು ಈ ಸಂಕಲನವನ್ನು ವಿನೋದ ವಿಮರ್ಶೆ ಎಂದು ಕರೆಯಲಾರೆ. ಹಾಗೆ ಮಾಡುವುದರಿಂದ ಲಕ್ಷ್ಮಣರಾವ್‌ಗೆ ತುಂಟು ಕವಿ ಎಂದು ಹಣೆಪಟ್ಟಿ ಹಚ್ಚಿದಷ್ಟೇ ಅನ್ಯಾಯ ಮಾಡಿದಂತಾಗುತ್ತದೆ. ಲಕ್ಷ್ಮಣರಾಯರ ಇಲ್ಲಿನ ಲೇಖನಗಳಲ್ಲಿ ವಿಮರ್ಶೆ ಮತ್ತು ಲಲಿತಪ್ರಬಂಧದ ಲಾಲಿತ್ಯ ಲಾವಣ್ಯಗಳ ಒಂದು ವಿಶಿಷ್ಟ ಹದವನ್ನು ನಾವು ಕಾಣುತ್ತೇವೆ. ಹಾಗೆಂದೇ ಇದೊಂದು ಗಮನಿಸಬೇಕಾದ ವಿಶಿಷ್ಟ ಮಾದರಿಯ ಗದ್ಯ.

ವಿಮರ್ಶೆಯ ಮಾತು ಬಂದಾಗ ಕನ್ನಡ ವಿಮರ್ಶೆ ಇಂದು ಅನೇಕ ಗೊಂದಲಗಳಲ್ಲಿ ತಡಕಾಡುತ್ತಿರುವ ಪ್ರಸ್ತುತ ಚಿತ್ರ ಕಣ್ಣೆದುರು ಮೂಡುತ್ತದೆ. ಕೆಲವರಿಗೆ ವಿಮರ್ಶೆ ಎಂದರೆ Poetics ಮಾತ್ರ –ಕಾವ್ಯಮೀಮಾಂಸೆಯಷ್ಟೇ ವಿಮರ್ಶೆ. ಇನ್ನು ಕೆಲವರಿಗೆ ಇಸಮ್‌ಗಳು, ತತ್ವಸಿದ್ಧಾಂತಗಳು ಮಾತ್ರ ವಿಮರ್ಶೆ. ಮತ್ತೆ ಕೆಲವರಿಗೆ ಸಾಹಿತ್ಯ ವಿಮರ್ಶೆಗಾಗಿ ಹೊಸ ತತ್ವ ಸಿದ್ಧಾಂತಗಳನ್ನು ಅನ್ವೇಷಿಸುವ ತವಕ. ಆಕೆಡಮಿಕ್ ಎನ್ನಲಾದ ವಲಯದಲ್ಲಂತೂ practical criticism ಎನ್ನುವುದು ವಿಮರ್ಶೆಯೇ ಅಲ್ಲ. ಕೃತಿಯನ್ನು ಹೊರಗಿಟ್ಟು ಕಾವ್ಯಮೀಮಾಂಸೆಯನ್ನು ವಿಜೃಂಭಿಸುವುದು ಎಷ್ಟು ಉಚಿತವೋ ?

ಇಂಥ ಗೊಂದಲಗಳಲ್ಲಿ ವಿಮರ್ಶೆಯ ಕೆಲಸವನ್ನೇ ನಾವು ಮರೆಯುತ್ತಿರುವುದರಿಂದ ಈ ಮಾತುಗಳನ್ನು ಹೇಳಬೇಕಾಯಿತು. ವರ್ತಮಾನದಲ್ಲಿ ವಿಮರ್ಶೆ ಮಾಡಬೇಕಾದ ಕೆಲಸವೆಂದರೆ– *ಒಂದು : ಒಳ್ಳೆಯ ಸಾಹಿತ್ಯ ಗುರುತಿಸಿ ಅದನ್ನು ಓದುಗರಿಗೆ ಪರಿಚಯಿಸುವುದು. ತನ್ಮೂಲಕ ಓದುವ ರುಚಿ ಹಾಗೂ ಓದುಗರಲ್ಲಿ ಹೊಸ ಅಭಿರುಚಿ ಬೆಳೆಸುವುದು. ಎರಡು : ಇಂಥ ಗುರುತಿಸುವಿಕೆಯಿಂದ ಲೇಖಕರನ್ನೂ ಬೆಳೆಸುವುದು.*

ಕೃತಿಯ ಬೆಲೆ ಕಟ್ಟುವಂಥ ಕೆಲಸ ಪ್ರಾಸಂಗಿಕವಾಗಿ ನಡೆಯಬಹುದಾದರೂ ಅದು ವರ್ತಮಾನದ ಉತ್ಸಾಹ, ಆವೇಶಗಳ ಉಬ್ಬರವಿಳಿತಗಳು ತಗ್ಗಿದ ನಂತರವೇ ಭವಿಷ್ಯದಲ್ಲಿ ಆಗಬೇಕಾದ ಕೆಲಸ.

ಒಂದು ಸಾಹಿತ್ಯಕೃತಿಯೊಳಗೇ ಲಭ್ಯವಾಗುವ ಮಾನದಂಡ ಮತ್ತು ವಸ್ತುನಿಷ್ಠತೆ ಇಂಥ ವಿಮರ್ಶನ ಕಾರ್ಯದಲ್ಲಿ ಮುಖ್ಯವಾಗುತ್ತವೆ.

ಲಕ್ಷ್ಮಣರಾವ್ ಅವರ ಈ ಸಂಕಲನದ ಲೇಖನಗಳಲ್ಲಿ ವಿಮರ್ಶೆಯ ಈ ಗುಣವನ್ನು ನಾವು ಧಾರಾಳವಾಗಿ ಕಾಣುತ್ತೇವೆ.

ವಿಮರ್ಶೆಯ ಮುಖ್ಯಗುಣವಾದ ವಸ್ತುನಿಷ್ಠತೆ ಇಲ್ಲಿನ ಲೇಖನಗಳಲ್ಲಿ ಧಾಳವಾಗಿ ಗೋಚರಿಸುತ್ತದೆ. ಸ್ವಂತ ವಿಷಯಗಳನ್ನು ಬರೆಯುವಾಗಲೂ ಭಾವುಕತೆ, ಸಂಕೋಚಗಳಿಂದ ಕೆರಳದ ಅಥವಾ ಮುದುಡಿಕೊಳ್ಳದಂಥ ವಸ್ತುನಿಷ್ಠ ಪ್ರವೃತ್ತಿ ಇದು. ಅಂತೆಯೇ ಪೂರ್ವಾಗ್ರಹಗಳಿಲ್ಲದ ಮುಕ್ತ ಮನಸ್ಸು ಈ ಲೇಖನಗಳ ಹಿಂದಿನ ಇನ್ನೊಂದು ಗುಣ.

ಈ ಮಾತುಗಳಿಗೆ ನಿದರ್ಶನವಾಗಿ ಲಂಕೇಶರ ಕಾವ್ಯ ಮತ್ತು ವ್ಯಕ್ತಿಚಿತ್ರ, ಲಕ್ಷ್ಮೀನಾರಾಯಣ ಭಟ್ಟರ ವ್ಯಕ್ತಿಚಿತ್ರ ಮತ್ತು ಕಾವ್ಯ, ಸುಮತೀಂದ್ರ ನಾಡಿಗರ ಕಾವ್ಯ ಇವೇ ಮೊದಲಾದ ಲೇಖನಗಳನ್ನು ಗಮನಿಸಬಹುದು.

ವಿಚಾರ ವಿಭಾಗದಲ್ಲಿನ ಬದುಕು, ಸಂಸ್ಕೃತಿ, ಅಂತರಂಗ ಬೆಳಕಿಗಾಗಿ ಒಳ್ಳೆಯತನ ಮೊದಲಾದ ಲೇಖನಗಳಲ್ಲಿನ ಆಲೋಚನೆಗಳು ಕೇವಲ ಬೇರೆಯವರಿಗಾಗಿ ಬರೆದ

ಉಪದೇಶಗಳಲ್ಲ ಎಂಬುದಕ್ಕೆ ಮುಂದಿನ ಲೇಖನಗಳೇ ಒರೆಗಲ್ಲಾಗುತ್ತವೆ. ಸಾಹಿತ್ಯ, ಸಂಸ್ಕೃತಿ ಎನ್ನುವುದು ಕೇವಲ ಆತ್ಮಪ್ರತ್ಯಯವಲ್ಲ. ಬೇರೊಬ್ಬರಲ್ಲೂ ಇರಬಹುದಾದ ಅವುಗಳನ್ನು ಗುರುತಿಸುವುದರಲ್ಲಿ, ಮೆಚ್ಚಿಕೊಳ್ಳುವುದರಲ್ಲಿ, ತನಗೆ ಇಷ್ಟವಾಗದ್ದನ್ನೂ ಸಹಿಸಿಕೊಳ್ಳುವುದರಲ್ಲಿ ಒಟ್ಟು ಸಮಾಜದ ಬೆಳವಣಿಗೆ, ಸೌಖ್ಯಗಳಿವೆ ಎಂಬ ಪ್ರಬುದ್ಧ ವಿಚಾರಸರಣಿ ಲಕ್ಷ್ಮಣರಾಯರ ಕೃತಿವಿಮರ್ಶೆಗಳಲ್ಲಿ, ವ್ಯಕ್ತಿಪರಿಚಯಗಳಲ್ಲಿ ಕಾಣಸಿಗುತ್ತವೆ.

ಕೃತಿ ವಿಮರ್ಶೆಯಲ್ಲಿ ನಾಡಿಗ್, ಲಂಕೇಶ್, ನಿಸಾರ್ ಅಹಮದ್, ಲಕ್ಷ್ಮೀನಾರಾಯಣ ಭಟ್ಟ, ಎಚ್. ಎಸ್. ವೆಂಕಟೇಶಮೂರ್ತಿಯವರ ಕಾವ್ಯಕೃತಿಗಳ ವಿಮರ್ಶಾಲೇಖನವಿದೆ. ಜೊತೆಗೆ ನೆರೆಯ ಆಂಧ್ರದ ಪ್ರಮುಖ ಬಂಡಾಯ ಕಾವ್ಯಮಾರ್ಗದ ದಿಗಂಬರ ಕವಿಗಳ ಪರಿಚಯ ಲೇಖನವೊಂದಿದೆ.

ನಾಡಿಗರ ಪದ್ಯಗಳಲ್ಲಿನ ಕಾವ್ಯದ ಮಾಂತ್ರಿಕಸ್ಪರ್ಶವನ್ನು ಗುರುತಿಸುವ ಲಕ್ಷ್ಮಣರಾವ್ ಜೊತೆಗೆ ನಾಡಿಗರಲ್ಲಿ ಕಂಡುಬರುವ ಚುರುಕು, ವ್ಯಂಗ್ಯ, ವಿಷಾದ ಮತ್ತು ಘೋಷಣೆಯ ಪ್ರವೃತ್ತಿಗಳನ್ನೂ ಗಮನಿಸುತ್ತಾರೆ.

"ನನ್ನ ಕಾವ್ಯದ ಹಸಿರು ಉದುರಿ ಒಣರೆಂಬೆಗಳು ॥
ಆಣಕಿಸುತ್ತಿವೆ ನನ್ನ ಜೀವದ್ರವ ಕೊರತೆಯನ್ನು"

ಮೊದಲಾದ ಸಾಲುಗಳಲ್ಲಿ ನಾಡಿಗರ ರೂಪಕಸೃಷ್ಟಿ ಸಾಮರ್ಥ್ಯ, ಸಂಕೀರ್ಣ ಶೈಲಿ, ಜೀವದ್ರವ್ಯವಾದ ಮಳೆಗಾಗಿ ಕವಿಯ ತುಡಿತ ಇದೆಲ್ಲವನ್ನೂ ಮೆಚ್ಚಿಕೊಳ್ಳುತ್ತಾರೆ. ಜೊತೆಗೆ ಕಾವ್ಯ ವಾಚ್ಯವಾದಾಗ ಮಾತುಗಳು ಹುಸಿಯಾಗಿ ಪೋಸ್ ಆಗುವ ಅಪಾಯವಿದೆ ಎಂದು ನಿದರ್ಶನ ಸಹಿತವಾಗಿ ಹೇಳುವುದನ್ನೂ ಮರೆಯುವುದಿಲ್ಲ.

'ಲಂಕೇಶರ ಕಾವ್ಯ' ಲೇಖನದಲ್ಲೂ ಇಂಥ ವಸ್ತುನಿಷ್ಠತೆಯನ್ನು ಕಾಣಬಹುದು. ಲಂಕೇಶರ ಬಹುಜನ ಪ್ರಿಯವಾದ 'ಅವ್ವ' ಪದ್ಯ ಹಾಗೂ ಇನ್ನಿತರ ಕೆಲವು ಪದ್ಯಗಳನ್ನು ವಿಶ್ಲೇಷಿಸುವ ಮೂಲಕ ಲಂಕೇಶರ ಕಾವ್ಯಪ್ರತಿಭೆ, ಸೃಜನಶೀಲತೆ, ಪ್ರಯೋಗಶೀಲತೆಗಳನ್ನು ಗುರುತಿಸಿ ತೋರಿಸುವ ಕೆಲಸ ಮಾಡಿದ್ದಾರೆ. ಅಡಿಗರ ಪ್ರಭಾವದಿಂದ ಪಾರಾಗುವ ಹಾಗೂ ಪಾರಾಗಲೇಬೇಕಾದ ಅನಿವಾರ್ಯತೆಗಳು ಲಂಕೇಶರನ್ನು ಎಷ್ಟು ಗಾಢವಾಗಿ ಕಾಡಿತ್ತು ಎಂಬುದನ್ನು 'ಅಡಿಗರು' ಕವನದ ವಿಶ್ಲೇಷಣೆಯಲ್ಲಿ ತೋರಿಸಿದ್ದಾರೆ. ಇಲ್ಲಿ ಮುಖ್ಯವಾದ ಒಂದು ಅಂಶವನ್ನು ಲಕ್ಷ್ಮಣರಾವ್ ಹೇಳುತ್ತಾರೆ. 'ಅಡಿಗರು' ಪದ್ಯ ತನ್ನಷ್ಟಕ್ಕೇ ಒಂದು ಅತ್ಯುತ್ತಮ ಕವನವೂ ಆಗಿ ಹಾಗೆಯೇ ಲಂಕೇಶರ ಸ್ವವಿಮರ್ಶೆಯೂ ಆಗಿ ಏಕಕಾಲದಲ್ಲಿ ಪ್ರಕಟಗೊಳ್ಳುವ ಪರಿಯನ್ನು – ಅದು ಅಚ್ಚರಿ, ಅನುಮಾನ, ವ್ಯಂಗ್ಯ, ಹೊಟ್ಟೆಕಿಚ್ಚು ಇವೆಲ್ಲ ಇದ್ದೂ ಸಮತೋಲ ತಪ್ಪದ ಪರಿಯನ್ನು ಮುಕ್ತಮನಸ್ಸಿನಿಂದ ವಿಶ್ಲೇಷಿಸಿದ್ದಾರೆ.

ಇನ್ನು ಈ ಸಂಕಲನದಲ್ಲಿ ಎಂಟು ವ್ಯಕ್ತಿಚಿತ್ರಗಳಿವೆ. 'ನಾನು' ಒಂದು ಆತ್ಮವೃತ್ತಾಂತ.

ವ್ಯಕ್ತಿಚಿತ್ರಗಳಲ್ಲಿ ಎರಡು ಬಗೆ. ಒಂದು, ವ್ಯಕ್ತಿಯ ವಿಶೇಷ ಚಹರೆಯನ್ನೋ, ವಿಶೇಷ ಗುಣವನ್ನೋ ವಿರಾಟ್‌ರೂಪದಲ್ಲಿ ಚಿತ್ರಿಸುವ carricature ಮಾದರಿಯದು. ಇನ್ನೊಂದು, ಒಬ್ಬ ವ್ಯಕ್ತಿಯ ಜೀವನ ವಿವರಗಳು, ವ್ಯಕ್ತಿವಿಶಿಷ್ಟತೆಗಳು, ಕೃತಿ ವೈಶಿಷ್ಟ್ಯಗಳು, ಇಷ್ಟ ಅನಿಷ್ಟಗಳು ಇವೆಲ್ಲದರ ಮುಖೇನ ಸಮಗ್ರ ಚಿತ್ರವೊಂದನ್ನು ಕಟ್ಟಿಕೊಡುವ ಬಗೆಯದು. ಲಕ್ಷ್ಮಣರಾವ್ ಅವರ ಈ ಸಂಕಲನದ ವ್ಯಕ್ತಿಚಿತ್ರಗಳು ಎರಡನೆಯ ಮಾದರಿಗೆ ಸೇರಿದವು.

ವ್ಯಕ್ತಿಚಿತ್ರ ಬರೆಯುವುದು ಸುಖಾಸುಮ್ಮನೆ ಮಾಡುವಂಥ ಕೆಲಸವಲ್ಲ. ಬಹುಶಃ ನಾವು ಬರೆಯುವ ವ್ಯಕ್ತಿಯಲ್ಲಿ ಕೊಂಚವಾದರೂ ಪ್ರೀತಿ ಗೌರವ, ಕೊಂಚವಾದರೂ ಭಿನ್ನಮತ ಇಲ್ಲದಿದ್ದಲ್ಲಿ ವ್ಯಕ್ತಿಚಿತ್ರ ಬರೆಯುವುದು ಕಷ್ಟವಾಗುತ್ತದೆ ಎಂದು ನನಗೆ ಅನ್ನಿಸುತ್ತದೆ. ಇವೆರಡು ಇದ್ದಲ್ಲಿ ಮಾತ್ರ ಒಬ್ಬ ವ್ಯಕ್ತಿಯನ್ನು ವಸ್ತುನಿಷ್ಠವಾಗಿ, ಅವರ ನಿಜರೂಪದಲ್ಲಿ ಕಾಣುವುದು ಸಾಧ್ಯವಾದೀತು.

ಪ್ರೀತಿ ಎಂದರೆ ನಮಗಿಷ್ಟವಾದ ಗುಣಶೀಲಗಳನ್ನು ಮೆಚ್ಚಿಕೊಳ್ಳುವುದು ಮಾತ್ರ ಪ್ರೀತಿಯಲ್ಲ. ನಾವು ಇಷ್ಟಪಡದ ಗುಣಗಳನ್ನೂ ದೌರ್ಬಲ್ಯಗಳನ್ನೂ ಒಪ್ಪಿಕೊಂಡು ಒಬ್ಬ ವ್ಯಕ್ತಿಯನ್ನು ಸ್ವೀಕರಿಸುವುದು ಪ್ರೀತಿಯಾಗುತ್ತದೆ. ನಮಗಿಷ್ಟವಾಗದ ವಿಚಾರಗಳನ್ನು ಒಪ್ಪಿಕೊಳ್ಳದೆಯೂ ಒಬ್ಬ ವ್ಯಕ್ತಿಯನ್ನು ಇಷ್ಟಪಡುವುದು ಪ್ರೀತಿಯಾಗುತ್ತದೆ. ಈ ಮಾತಿಗೆ ಉದಾಹರಣೆಯಾಗಿ ಎರಡು ವ್ಯಕ್ತಿಚಿತ್ರಗಳನ್ನು ಇಲ್ಲಿ ನೋಡಬಹುದು. ಲಕ್ಷ್ಮೀನಾರಾಯಣ ಭಟ್ಟರ ಬಗ್ಗೆ, ಲಂಕೇಶ್ ಬಗ್ಗೆ ಲಕ್ಷ್ಮಣರಾವ್‌ಗೆ ಪ್ರೀತಿಗೌರವಗಳಿವೆ. ಆದರೆ ಇಲ್ಲಿ ಕಾಣುವುದು ಅಂಧವಾದ ಪೂಜನೀಯ ಪ್ರೀತಿಯಲ್ಲ. ಅವರಲ್ಲಿ ತಾನು ಇಷ್ಟಪಡಲಾಗದ ಗುಣಗಳನ್ನು ದೌರ್ಬಲ್ಯಗಳನ್ನು ಭಿನ್ನಾಭಿಪ್ರಾಯಗಳನ್ನು ಗಮನಿಸಿಯೂ ಒಪ್ಪಿಕೊಳ್ಳುವ ಮಾನವ ಘನತೆಯ ಪ್ರೀತಿ ಗೌರವಗಳ ಪರಿ.

ಭಟ್ಟರ ಮಾತಿನ ಮನಾಪಲಿ. ಸದಾ ಕೊರಗುವ ಪ್ರವೃತ್ತಿ, ಚಡಪಡಿಕೆ ಇವೆಲ್ಲ ಒಳಗಣ್ಣಿಗೆ ಕಾಣುವ ಆತ್ಮೀಯ ಹಿರಿಯಣ್ಣನ ಚಿತ್ರದ ಮುಂದೆ ಚಂದ್ರನಲ್ಲಿನ ಕಲೆಗಳಂತೆ ಲಕ್ಷ್ಮಣರಾವ್‌ಗೆ ಗೌಣವಾಗುತ್ತವೆ.

ಹಾಗೆಯೇ ಜೀವನಪ್ರೇಮಿ. ಪ್ರತಿಭಾವಂತ ಬರಹಗಾರ. ಸಾಹಸಿ, ಒರಟ, ಮುಗ್ಧ ಹಳ್ಳಿಗ ಇವೆಲ್ಲ ಆದ ಲಂಕೇಶರ ವ್ಯಕ್ತಿತ್ವ ತುಂಬ ಸಂಕೀರ್ಣವಾಗಿ ಕಂಡರೆ ಆಶ್ಚರ್ಯವೇನಿಲ್ಲ. ಇಂಥ ಸಂಕೀರ್ಣತೆ, ವೈರುಧ್ಯಗಳಿಂದಾಗಿಯೂ ಅವರನ್ನು ಪ್ರೀತಿಸಲು ಸಾಧ್ಯವಾಗುತ್ತದೆ. ಜೈಸಿಕೊಂಡು, ಜಗಳವಾಡಿ ದೂರವಾದರೂ ಅವರ ಮೇಲಿನ ಪ್ರೀತಿ ಮಾಸುವುದಿಲ್ಲ.

ಇವೆರಡೂ ತುಂಬ ಆಪ್ತವಾದ ವ್ಯಕ್ತಿಚಿತ್ರಗಳು.

ಜಿ. ಎಸ್. ಶಿವರುದ್ರಪ್ಪ, ಎಚ್. ಎಸ್. ವೆಂಕಟೇಶಮೂರ್ತಿ, ಶಿವಮೊಗ್ಗ ಸುಬ್ಬಣ್ಣ, ಸಿ. ಅಶ್ವಥ್ – ಇವರುಗಳ ವ್ಯಕ್ತಿಚಿತ್ರಗಳೂ ಅವರ ಸಾಧನೆಗಳ ಜೊತೆಗೆ ಅವರ ವ್ಯಕ್ತಿತ್ವದ ವೈಶಿಷ್ಟ್ಯಗಳನ್ನು ಇಂಥದೇ ಪ್ರೀತಿಯ ಒಳನೋಟಗಳಿಂದ ಗ್ರಹಿಸಿದ ಚಿತ್ರಗಳು.

'ನನ್ನ ತಾಯಿ' – ಮೇಲಿನ ಕಾರಣಗಳಿಂದಾಗಿ ಮಾತ್ರವಲ್ಲದೆ, ಇಂದಿನ ನಮ್ಮ ದೇಶದಲ್ಲಿ ಆಗುತ್ತಿರುವ ಆತಂಕಕಾರಿ ಬೆಳವಣಿಗೆಗಳ ಹಿನ್ನೆಲೆಯಲ್ಲೂ ನನಗೆ ತುಂಬ ಗಾಢವಾಗಿ ತಟ್ಟಿದ ವ್ಯಕ್ತಿಚಿತ್ರ.

ವಸುಧೈವಕ ಕುಟುಂಬಂ, ಕ್ಷಮಯಾ ಧರಿತ್ರಿ ಎಂಬಂಥ ಭಾರತೀಯ ಸಾಮುದಾಯಿಕ ಸಾಂಸ್ಕೃತಿಕ ಕಲ್ಪನೆಗಳೆಲ್ಲ ಈಗ ಅರ್ಥಾಂತರಗೊಳ್ಳುತ್ತ ದುರ್ಗೆ, ಕಾಳಿಯರ ರೂಪಾಂತರವಾಗುತ್ತಿರುವ ಯುದ್ಧೋನ್ಮಾದ ಆತಂಕ ಸ್ಥಿತಿಯಲ್ಲಿ ನಾವಿದ್ದೇವೆ. ಪ್ರೀತಿ, ಸಹನೆ, ಸಹಿಷ್ಣುತೆ ಮಾಯವಾಗಿ ಹಗೆತನ ಬಿತ್ತುತ್ತಿರುವ ಇಂದಿನ ಈ ಹಿನ್ನೆಲೆಯಲ್ಲಿ, ಅನ್ಯಧರ್ಮೀಯನೊಬ್ಬನನ್ನು ಪ್ರೀತಿಸಿ ಮದುವೆಯಾದ ಮಗಳ ಪ್ರೀತಿಯನ್ನು ಗೌರವಿಸಿ ಕ್ಷಮಾಶೀಲೆಯಾಗಿ ತಾಯ್ತನ ಮೆರೆಸಿದ ಲಕ್ಷ್ಮಣರಾಯರ "ನನ್ನ ತಾಯಿ" ನಮಗೆ ಭರವಸೆಯ ಬೆಳಕಾಗಿ ಕಾಣುತ್ತಾಳೆ. ಗೋಧ್ರಾ, ಮತ್ತು ನಂತರದ ಗುಜರಾತಿನ ಅಮಾನವೀಯ ಘಟನೆಗಳ ಹಿನ್ನೆಲೆಯಲ್ಲಿ 'ನನ್ನ ತಾಯಿ' ಹಾಗೂ ಈ ಕ್ಷಣ ನನ್ನ ನೆನಪಿಗೆ ಬರುತ್ತಿರುವ ಜಯಂತ ಕಾಯ್ಕಿಣಿಯವರ 'ಅಮೃತಬಳ್ಳಿ ಕಷಾಯ' (ಅಯೋಧ್ಯಾ ನಂತರ ಮುಂಬಯಿ ಬಾಂಬ್ ಸರಣಿ ಸ್ಫೋಟದ ತರುವಾಯ ಬರೆದ ಕತೆ ಇಂಥವು) ಆತಂಕದ ಕ್ಷಣಗಳಲ್ಲಿ ಭರವಸೆಯ ಬೆಳಕಾಗಿ ಕಾಣುತ್ತವೆ. ಸಾಹಿತ್ಯ ನಿಜವಾಗಿ ಮಾಡಬೇಕಾದ ಕೆಲಸ ಇದು.

■

▼

ಜಿ. ಎಸ್. ರಂಗನಾಥರಾವ್, ನಂ. ೨೬೬, ೩ ನೇ ಮೇನ್, ೮ ನೇ ಬ್ಲಾಕ್, ಕೋರಮಂಗಲ, ಬೆಂಗಳೂರು - ೫೬೦ ೦೯೫

ಹಿರೇಮಠ ಎಸ್. ಎಸ್. **ಚಿಂತನೆ**

ನಮ್ಮ ನಾಡಿನ ಪ್ರಖ್ಯಾತ ಮತ್ತು ಪ್ರಾಚೀನ ಸ್ತ್ರೀ ದೈವ ‘ಬಳರಿ’. ಇದರ ಬಗ್ಗೆ ಬೆಂಗಳೂರು ವಿಶ್ವವಿದ್ಯಾಲಯ ಪ್ರಕಟಿಸುತ್ತಿದ್ದ ‘ಸಾಧನೆ’ ಎಂಬ ಪತ್ರಿಕೆಯ ಜೂನ್ ೧೯೭೮ ಮತ್ತು ಜುಲೈ ೧೯೮೦ ರ ಸಂಚಿಕೆಗಳಲ್ಲಿ ನನ್ನ, ‘ಬಳರಿ (ಬಳಾರಿ) – ಉಗ್ರ ಹೆಣ್ಣು ದೇವತೆ’, ಮತ್ತು ‘ಬಳರಿ ಮತ್ತು ವೀರವ್ರತಗಳ ಬಗ್ಗೆ ಹೆಚ್ಚಿನ ವಿವರಗಳು’ ಎಂಬ ಲೇಖನಗಳು ಪ್ರಕಟವಾಗಿದ್ದವು. ಆ ನಂತರ ಈ ವಿಷಯದ ಕುರಿತು ಡಾ. ಎಂ. ಎಂ. ಕಲಬುರ್ಗಿ ಮತ್ತು ಡಾ. ಬಿ. ಮಲಶೆಟ್ಟಿ ಅವರ ಲೇಖನಗಳು ಪ್ರಕಟಗೊಂಡವು. ಇಷ್ಟಾಗಿಯೂ ಈ ವಿಷಯದ ಬಗ್ಗೆ ಮಹತ್ವದ ಚರ್ಚೆಯನ್ನು ಬೆಳೆಸಲು ಅವಕಾಶವಿದೆ ಎಂದು ಶಾಸನ ಸಂಪುಟಗಳನ್ನು ಅವಲೋಕಿಸುವ ಸಂದರ್ಭದಲ್ಲಿ ಕಂಡುಬಂತು.

ಕನ್ನಡದ ಮೊಟ್ಟಮೊದಲ ಲಭ್ಯ ಶಾಸನವೇ (ಹಲ್ಮಿಡಿ) ಈ ವಿಷಯದ ಮೇಲೆ ವಿಶೇಷ ಬೆಳಕು ಚೆಲ್ಲುತ್ತದೆ. ಕ್ರಿ.ಶ. ೪೫೦ ರಲ್ಲಿ ರಚಿತವಾದ ಬೇಲೂರು ತಾಲೂಕಿನ ಈ ಶಾಸನದಲ್ಲಿ (ಎಪಿಗ್ರಾಫಿಯ ಕರ್ನಾಟಿಕ, ಸಂಪುಟ ೯, ಪುಟ-೨೨೨) ೧) ಭಟ್ಟೋರ; ೨) ಭಟಹರ್; ೩) ಬಟರಿ ಕುಲ; ೪) ಭಟರಿ; ೫) ಬಟಾರಿ ಕುಲ; ೬) ಭಟ್ಟರ್ ಎಂಬ ಆರು ರೂಪಗಳು ಸಿಕ್ಕುವುದು ಕುತೂಹಲಕಾರಿಯಾಗಿದೆ. ಇದು ಬಳರಿಯ ಅಭ್ಯಾಸಕ್ಕೆ ಮಹತ್ವದ ಪುಟವನ್ನು ಸೇರಿಸುತ್ತದೆ. ಕನ್ನಡದ ಪ್ರಥಮ ಶಾಸನವೆಂಬ ಕಾರಣದಿಂದ ಈ ಶಾಸನಕ್ಕೆ ವಿಶೇಷ ಮಹತ್ವ ಪ್ರಾಪ್ತವಾಗಿದ್ದು, ಹಲವಾರು ವಿದ್ವಾಂಸರ ಚರ್ಚೆಗೆ ಗ್ರಾಸವಾಗಿದೆ. ‘ಬಳರಿ’ಗೆ ಸಂಬಂಧಪಟ್ಟಂತೆ ಇದನ್ನು ಒಂದಿಷ್ಟು ವಿವರವಾಗಿ ನೋಡುವ ಅಗತ್ಯವಿದೆ.

೧. (ಕಕುಸ್ಥ) ಭಟ್ಟೋರ = ದೊರೆ;

೨. (ಮೃಗೇಶ ನಾಗೇಂದ್ರ) ಭಟಹರ್ = ವೀರರು, ಸೈನಿಕರು;

೩. (ಅಳಪಗಣ ಪಶುಪತಿ) ಬಟರಿ ಕುಲ = ಕುಲದ ಹೆಸರು;

೪. (ಆಸರಕ್ಕೆಲ್ಲ) ಎಲ್ಲ ಬಟರಿ = ಅಂಕಿತ ನಾಮ (ಬಟರಿ ಕುಲದವ);

೫. ಬಟಾರಿ ಕುಲ = ಕುಲದ ಹೆಸರು;

೬. ಭಟ್ಟರ್ = ಬ್ರಾಹ್ಮಣ.

ಹೀಗೆ ಶಾಸನದಲ್ಲಿ ನಾನಾರ್ಥದಲ್ಲಿ ಬಳಕೆಯಾದ ಭಿನ್ನ ಭಿನ್ನ ಪದಗಳ ರಚನೆಯಲ್ಲಿ ಒಂದು ಸಾಮ್ಯತೆ ಇದೆ. ಅದು ‘ಭಟ’ ಅಥವಾ ‘ಬಟ’. ಶಾಸನಗಳಲ್ಲಿ ಭಟರಿ ಮತ್ತು ಭಳರಿ ಎಂಬ ಪದಗಳು ಸಮಾನಾರ್ಥದಲ್ಲಿ ಕಾಣಸಿಗುವುದರಿಂದ ಹಲ್ಮಿಡಿ ಶಾಸನದ ಬಟರಿ, ‘ಬಳರಿ’ಯೇ. ‘ಟ’, ‘ಳ’ ಆಗುವುದಕ್ಕೆ ಕೇಶಿರಾಜ ಅನೇಕ ಉದಾಹರಣೆಗಳನ್ನು ಕೊಡುತ್ತಾನೆ. ಉದಾ : ಕುಕ್ಕುಟಂ = ಕೋಳಿ; ಲಾಟಂ = ಲಾಳಂ; ಘಟಿಕೆ = ಗಳಿಗೆ; ಸ್ಫೋಟಕ = ಹೋಳಿಗೆ; ಸ್ಫಟಿಕ = ಪಳಿಕು; ಪೀಠಿಕೆ = ಪೀಳಿಗೆ ಇತ್ಯಾದಿ. (ಶಬ್ದಮಣಿದರ್ಪಣ : ಡಿ. ಎಲ್. ಎನ್. ಸೂತ್ರಗಳು : ೩೧, ೨೭೧, ೨೭೩ ಇತ್ಯಾದಿ) ‘ಬಟರಿ’, ‘ಬಳರಿ’ ಇವುಗಳಲ್ಲಿ ಯಾವುದು ಮೂಲ ? ‘ಬಟರ’, ‘ಬಟರಿ’ ಅಥವಾ ‘ಬಳರ’, ‘ಬಳರಿ’ ಇವು ಪುಲ್ಲಿಂಗ ಮತ್ತು ಸ್ತ್ರೀಲಿಂಗ ಸೂಚಕ ಪದಗಳು. ಇವುಗಳಿಂದ ಭಟ್ಟೋರ ಮೊದಲಾದ ಪದಗಳು ಉತ್ಪನ್ನವಾದವು. ಊಳಿಗಮಾನ್ಯ ಕಾಲದ ಮೊದಲ ಘಟ್ಟದ ಸಾಹಿತ್ಯ ಮತ್ತು ಶಾಸನ ಪ್ರಪಂಚದ ಪ್ರಕಾರ ಹಲವು ಮತ, ಪಂಥಗಳಲ್ಲೂ ಈ ಪದ ವ್ಯಾಪಕವಾಗಿ ಬಳಕೆಯಲ್ಲಿತ್ತು. ವಡ್ಡಾರಾಧನೆಯ ಕಥೆಗಳ ಶೀರ್ಷಿಕೆಯಲ್ಲಿ ಜೈನಯತಿ

ಎಂಬರ್ಥದಲ್ಲಿ 'ಭಟಾರರು' ಪದವಿದೆ. ಹಲ್ಮಿಡಿ ಶಾಸನದಲ್ಲಂತೂ ಬಟ ಮೂಲದ ಹಲವು ಪದಗಳ ನಡುವೆ ಸ್ಪಷ್ಟ ವ್ಯತ್ಯಾಸವಿರುವುದರಿಂದ ಅರ್ಥವೂ ಖಚಿತವಾಗಿದೆ.

ಇವುಗಳಲ್ಲಿ ಬಟರಿ ಅಥವಾ ಬಟಾರಿ ಎಂಬ ಪದದ ಕುರಿತು ವಿಶೇಷ ಗಮನ ಹರಿಸಬೇಕಿದೆ. ಇಲ್ಲಿ ಇದು 'ಜಾತಿ'ಯಲ್ಲ. ಒಂದು 'ಕುಲ'ದ ಹೆಸರಾಗಿಯೂ ಬಂದಿರುವುದು ಗಮನಾರ್ಹ. ಇಂಗ್ಲೀಷಿನ 'ಕ್ಲಾನ್'ಗೆ ಸಮಾನವಾದ 'ಕುಲ' ಹಿಂದೆ ಬುಡಕಟ್ಟಿನ ಮುಖ್ಯ ವಿಭಾಗ ಎಂಬರ್ಥದಲ್ಲಿ ಬಳಕೆಯಾಗುತ್ತಿತ್ತು. 'ಜಾತಿ' ರಚನೆಗಿಂತ ಹಿಂದಿದ್ದ ಸಾಮಾಜಿಕ ಸ್ಥಿತಿಯನ್ನು ಇದು ಸೂಚಿಸುತ್ತದೆ.

ಹಲ್ಮಿಡಿ ಶಾಸನದ ಪ್ರಕಾರ, 'ಅಳಪಗಣ ಪಶುಪತಿ'. ಬಟರಿ ಕುಲದವ. ಕುಲದಲ್ಲಿ ಹಲವಾರು ಬೆಡಗುಗಳಿರುತ್ತಿದ್ದವು. ಇವಕ್ಕೆ 'ಗೋತ್ರ', 'ಸೂತ್ರ', 'ಬಳಿ', 'ಗಣ' ಎಂದೂ ಕರೆಯುತ್ತಿದ್ದರು. 'ಬಟರಿ' ಕುಲದಲ್ಲಿ (ಕ್ಲಾನ್) ಇದ್ದ ಇಂಥ ಬಳಿಗಳಲ್ಲಿ ಒಂದಾಗಿತ್ತು 'ಅಳಪ'. ಈಗಾಗಲೇ ವಿದ್ವಾಂಸರು ಗುರುತಿಸಿರುವಂತೆ ಹಲ್ಮಿಡಿ ಶಾಸನಕಾರ ಸಂಸ್ಕೃತದ ಪ್ರಭಾವವಲಯದಲ್ಲಿ ಸಿಕ್ಕವನಾಗಿರುವುದರಿಂದ ಕನ್ನಡದ 'ಬಳಿ', 'ಬೆಡಗು'ಗಳನ್ನು ಬಳಸದೇ 'ಗಣ' ಎಂಬ ಸಂಸ್ಕೃತ ಪದವನ್ನು ಬಳಸಿದ್ದಾನೆ. ಈ ಚರ್ಚೆ ಸಹಜವಾಗಿ ನಮ್ಮನ್ನು ವರ್ಣ, ವರ್ಗಪೂರ್ವ ಕನ್ನಡ ಬುಡಕಟ್ಟು ಸಮಾಜಕ್ಕೆ ಕರೆದೊಯ್ಯುತ್ತದೆ.

ಬಟರಿ ಕುಲಕ್ಕೆ ಸಂಬಂಧಿಸಿ, 'ಬಟರಿ', 'ಬಟಾರಿ', 'ಭಟರಿ' ಎಂಬ ಮೂರು ರೂಪಗಳು ಹಲ್ಮಿಡಿ ಶಾಸನದಲ್ಲಿವೆ. ಕ್ರಿ.ಶ. ೪೫೦ ರಷ್ಟರಲ್ಲಾಗಲೇ 'ಬಳರಿ' ಸಂಸ್ಕೃತೀಕರಣಕ್ಕೆ ಒಳಗಾಗಿ ಹಲವಾರು ರೂಪಗಳನ್ನು ಧಾರಣ ಮಾಡಿತ್ತು. ಬುಡಕಟ್ಟು ರಾಜ್ಯಗಳು ವರ್ಗಾಧಾರಿತ ರಾಜ್ಯಗಳಾಗಿ ಪರಿವರ್ತನೆಯಾಗುತ್ತಿದ್ದುವೆಂಬುದಕ್ಕೆ ಸೂಚನೆಯಾಗಿ 'ಬಟರಿ ಕುಲಾಮಲವ್ಯೋಮ ತಾರಾಧಿನಾಥನ್ ಅಳಪಗಣ ಪಶುಪತಿ', ಎಂಬ ಮಾತಿದೆ. ಅಲ್ಲದೇ 'ಸರಕ್ಕೆಲ್ಲ ಭಟರಿ'ಯ ಪ್ರೇಮಾಲಯಸುತ ನೆಂಬಲ್ಲಿ (ಮನೆಮಗ = ಕುಲಪುತ್ರ, ವೀರ ಅನುಯಾಯಿ : ನೋಡಿ : ಡಾ. ಎಂ. ಎಂ. ಕಲಬುರ್ಗಿ, 'ಮಾರ್ಗ' ೨ : 'ಹಲ್ಮಿಡಿ ಶಾಸನದ ಪ್ರೇಮಾಲಯಸುತನ್') ಊಳಿಗಮಾನ್ಯ ಪರಿಭಾಷೆಯಾದ 'ಪ್ರೇಮಾಲಯಸುತ'ನೆಂಬ ಪದ ಬಳಕೆಯೂ; ಅದು ಶಾಸನಸ್ಥಗೊಳ್ಳುತ್ತಿರುವ ಕ್ರಮವೂ ಮತ್ತು ಶಾಸನ ವಸ್ತುವೂ ವರ್ಗ ಸಮಾಜ ಸ್ವರೂಪವನ್ನೇ ನಿವೇದಿಸುತ್ತವೆ.

'ಸಳ್ಬಂಗ', 'ಕುರುಂಬಿಡಿ', 'ಬಾಳ್ಗಚ್ಚು', 'ನರಿದಾವಿಳೆ' ಇವೂ ಕೂಡ ಮೇಲಿನ ವಿಚಾರಕ್ಕೆ ಪೋಷಕವಾಗಿರುವ ಅಂಶಗಳು. 'ಕುರುಂಬಿಡಿ'ಯನ್ನು ತೆರಿಗೆಯ ಹೆಸರೆಂದು ಭಾವಿಸಲಾಗಿದೆ. 'ಕಿರಿದು' ಪದ 'ಕುರು' ಆಗುತ್ತದೆ. 'ಕಿರಿದು ಪಿಡಿ'ಯು 'ಕುರುಂಬಿಡಿ' ಎಂದಾಗುವುದಾದರೆ 'ಪಿಡಿ' ಕರದ ಹೆಸರಾಗುತ್ತದೆ. 'ಸಣ್ಣ ಹಿಡಿ'ಯಷ್ಟು (ಮುಷ್ಟಿ) ಪ್ರಮಾಣದ ಧಾನ್ಯ ತೆರಿಗೆ ಇದಾಗಿರಬಹುದು. ಹೆಬ್ಬಾಲೆಯ ಕ್ರಿ.ಶ. ೧೧೫೯ ರ ಶಾಸನದ ಪ್ರಕಾರ (ಎ.ಕ. ೮, ಪುಟ ೧೧೧) 'ತಲೆವಿಡಿ', 'ತೊಡುವಿಡಿ' ಎಂಬ ಸುಂಕಗಳಲ್ಲಿ 'ಪಿಡಿ' ಎಂಬ ಪದವೇ ಇದೆ. 'ಪ', 'ವ' ಆಗುವುದಕ್ಕೆ 'ಬೆಳೆವೊಲ', 'ಎಳವರೆ', 'ನೀರ್ವೂ' ಮೊದಲಾದ ಪದಗಳನ್ನು ಕೇಶಿರಾಜ ಕೊಡುತ್ತಾನೆ (ಶ.ಮ.ದ. ಸೂತ್ರ ೭೭). ಕೌಟಲ್ಯನ 'ಅರ್ಥಶಾಸ್ತ್ರ'ದಲ್ಲಿ ಬರುವ 'ಷಡ್ಭಾಗ'ವೇ 'ಸಳ್ಬಂಗ'.

ಒಟ್ಟಾರೆ 'ಬಳರಿ' ಎಂಬ ರೂಪವೇ ಮೊದಲಿನದು. ಇದರ ಪರಿಷ್ಕೃತ ರೂಪ 'ಬಟರಿ'. ಬಟಾರ, 'ಬಳಾರ' ಸಮಾನ ಪದಗಳು. ನಮ್ಮ ನಾಡಿನ ಪ್ರಾಚೀನ, ಪ್ರಸಿದ್ಧ ಸ್ತ್ರೀ ದೈವವಾದ 'ಬಳರಿ'ಗೂ 'ಬಟರಿ' ಕುಲಕ್ಕೂ ಸಂಬಂಧವಿದೆಯೇ ಎಂಬುದು ಇಲ್ಲಿ ನಮ್ಮ ಮುಂದಿರುವ ಮುಖ್ಯ ಪ್ರಶ್ನೆ. 'ಕುಲಲಾಂಛನ' (ಟೋಟೆಮಿಸಂ), 'ಪಂಥ' ಇವು ಬುಡಕಟ್ಟು ಕುಲಗಳ ಸಾಮಾನ್ಯ ಲಕ್ಷಣ. ಇದರಿಂದ ಕುಲದೈವ ಪಂಥವೂ ಬೆಳೆಯುತ್ತವೆ. ಈ ಹಿನ್ನೆಲೆಯಲ್ಲಿ

ಪ್ರಾಚೀನ ಕನ್ನಡ ಬುಡಕಟ್ಟೊಂದರ `ಬಳರಿ ಕುಲ'ದ ಸ್ತ್ರೀ ದೈವ `ಬಳರಿ'. ಸಾಮಾಜಿಕ ಬೆಳವಣಿಗೆಯ ಸ್ವಭಾವವನ್ನು ಅನುಸರಿಸಿ ಹೇಳುವುದಾದರೆ `ಬಳರಿ ದೈವಪಂಥ' ಬಹು ಕಾಲದ ವರೆಗೆ ಬದುಕಿ, `ಬಳರಿ ಕುಲ' ಬೇಗನೆ ನಾಶವಾದಂತೆ ತೋರುತ್ತದೆ. ಬುಡಕಟ್ಟುಗಳು ನಾಶವಾಗಿ `ಜಾತಿ' ವ್ಯವಸ್ಥೆ ಸಮಾಜದ ಅಡಿಪಾಯವಾದಾಗ `ಬಟರಿ ಕುಲ'ವೂ ನಾಶವಾಯಿತು. ಆದರೂ ನಮ್ಮ ಸಾಮಾಜಿಕ ಬೆಳವಣಿಗೆಯಲ್ಲಿ ಅಸಮಾನ ಪ್ರಗತಿ ಇರುವುದರಿಂದ ಅಲ್ಲಲ್ಲಿ ಕುಲಗಳು. ಬಳಿಗಳು ಉಳಿದದ್ದು ಕಂಡುಬರುತ್ತದೆ. ಶಾಸನಗಳಲ್ಲೇ ಇಂಥ ಬೇಕಾದಷ್ಟು ಉದಾಹರಣೆಗಳಿವೆ. `ಬಳರಿ' ದೈವ ವ್ಯಾಪಕವಾಗಿ ಪ್ರಸರಣಗೊಂಡಾಗ ಅದು ಪಂಥವಾಗಿ ಬೆಳೆಯಿತು. 'ಮಾತೃದೈವ'ವು ಮಾತೃಪ್ರಧಾನ ಸಮಾಜದ ಸಹಜ ಸೃಷ್ಟಿಯಾದ್ದರಿಂದ `ಬಟರಿ ಕುಲ'ವು ಮಾತೃಮೂಲೀಯ 'ಹಳ್ಳಿ ಸಂಸ್ಕೃತಿ'ಗೆ ಸೇರಿತ್ತು. ಬೇಸಾಯಕ್ಕೂ, ಹಳ್ಳಿ ಸಂಸ್ಕೃತಿಗೂ,, ಮಾತೃಮೂಲಕ್ಕೂ, ದಲಿತರಿಗೂ ಅಂತರ್‌ಸಂಬಂಧವಿದೆ (ವಿವರಗಳಿಗೆ ನನ್ನ `ಜಾತ್ರೆಗಳು' ನೋಡಿ).

'ಬಟರಿ ಕುಲ' ಎಷ್ಟು ವ್ಯಾಪಕವಾಗಿತ್ತೆಂಬುದಕ್ಕೆ ಐಹೊಳೆಯ ಪ್ರಖ್ಯಾತ ವ್ಯಾಪಾರಿ ಸಂಘದ ಬಿರುದಾವಳಿಗಳನ್ನು ನೋಡಬೇಕು. ಅಯ್ಯಾವೊಳೆ ಐನೂರ್ವರು ಬಳರಿಯ ಮಕ್ಕಳು ಎಂಬುದು ಅಲ್ಲಿ ಬರುವ ಸಂಗತಿ. ಕೃಷಿಯನ್ನಾಧರಿಸಿಯೇ ವ್ಯಾಪಾರವೂ ಬೆಳೆದುದರಿಂದ, ಕೃಷಿ ಮೂಲದ ದೈವ, ವ್ಯಾಪಾರಿ ವರ್ಗಕ್ಕೂ ಪ್ರವೇಶಿಸಿದ್ದರೆ ಅದು ಸಹಜವೇ. ಪಿತೃಪ್ರಧಾನ ಸಮಾಜ, ವರ್ಗಸಮಾಜದ ಅನಿವಾರ್ಯ ಲಕ್ಷಣವಾದುದರಿಂದ ಕಾಲಾಂತರದಲ್ಲಿ ವ್ಯಾಪಾರಿವರ್ಗದಲ್ಲಿ ಪುರುಷ ದೈವಗಳ ಪ್ರಭಾವ ಹೆಚ್ಚಾಯಿತು. ಆಗ 'ಗವರೇಶ್ವರ', 'ನಗರೇಶ್ವರ'ದಂಥ ವ್ಯಾಪಾರಿದೈವಗಳು ಪ್ರಕಾಶಮಾನವಾದವು. ಹಲ್ಮಿಡಿ ಶಾಸನದಲ್ಲೇ ಕಾಣುವ `ಪಶುಪತಿ' ಎಂಬ ಶೈವ ಮೂಲದ ಹೆಸರು ಈ ಬಗೆಯ ಪರಿವರ್ತನೆಯ ದ್ಯೋತಕವೇ. ಇಲ್ಲಿ ಕದಂಬ, ಸೇಂದ್ರಕ, ಬಾಣ, ಪಲ್ಲವ, ಕಲಭೋರ; ಕೇಕಯ, ಭಟರಿ ಎಂಬ ಏಳು ಕುಲ ರಾಜ್ಯಗಳ ಹೆಸರಂತೂ ಇವೆ. ಭಟರಿ ಕುಲ ಈಗಿನ ಬಳ್ಳಾರಿ ಪ್ರದೇಶದಲ್ಲಿ ಇದ್ದಿರಬಹುದೇ ?

ನಾನು ನೋಡಿದ ಕೆಲವು ಶಾಸನ ಸಂಪುಟಗಳಲ್ಲಿ ಕಾಲಕ್ರಮದಲ್ಲಿ ಈ ಕೆಳಗಿನಂತೆ 'ಬಳರಿ'ಗೆ ಸಂಬಂಧಿಸಿದ ಮಾಹಿತಿಗಳಿವೆ :

೧. ೪-೫ ನೇ ಶತಮಾನದ ತಾಮ್ರಶಾಸನದಲ್ಲಿ (ಎ.ಕ. ೧, ಮಡಿಕೇರಿ) 'ಭಟಾರ', `ಬಟಾರ'ಗಳು ಜೈನಯತಿಗಳಿಗೆ ಅನ್ವಯಿಸಿ ಬಂದಿವೆ. ಈ ಶಾಸನದ ಕೊನೆಗೆ ಸಾಕ್ಷಿಗಳ ಹೆಸರುಗಳಲ್ಲಿ "ಬೆಳ್ಳರರು" ಎಂಬವರೂ ಇದ್ದು ಇವರು 'ಬಳರಿ' ಕುಲದವರಿರುವಂತಿದೆ.
೨. ಚಾಲುಕ್ಯ ಎರೆಯಮ್ಮನ ಆಳ್ವಿಕೆಯಲ್ಲಿ (೭ ನೇ ಶತಮಾನ) ಲಕ್ಷ್ಮೇಶ್ವರದ ಸಂಸ್ಕೃತ ಶಾಸನದಲ್ಲಿ `ಭಟಾರಿ ಕ್ಷೇತ್ರಂ' ಎಂದು ಗಡಿಯ ಹೆಸರು ಬಂದಿದೆ. (ಎಸ್.ಐ.ಐ. XX ಪು. ೩)
೩. ನವಲಗುಂದ ತಾಲೂಕು ಬೆನ್ನೂರಿನ ಚಾಲುಕ್ಯ ಅರಸರ ಕಾಲದ ಶಾಸನದಲ್ಲಿ (ತ್ರುಟಿತ) 'ಭಳಾರಿಗೆ' ಎಂದಿದೆ. ಬಹುಶಃ ಈ ದೈವಕ್ಕೆ ದಾನವನ್ನು ಕೊಟ್ಟ ವಿವರಗಳಿರುವಂತಿದೆ. (ಎಸ್.ಐ.ಐ. XV)
೪. ಹಿರೇಕೆರೂರ ತಾಲೂಕ ಖಂಡೇಬಾಗೂರಿನ ರಾಷ್ಟ್ರಕೂಟ ಮೂರನೇ ಗೋವಿಂದನ ಕಾಲದ ಶಾಸನದಲ್ಲಿ `ಭಟಾರಿ... ಮ ದೇವಗು ಕೊಟ್ಟಾರ್' ಎಂದಿದ್ದು ಈ ಪದ ಇಲ್ಲಿ ದೈವವನ್ನು ಸೂಚಿಸುತ್ತದೆ. (ಕೆ.ಐ. vi)
೫. ರೋಣ ತಾಲೂಕ ಕವಜಗೇರಿಯ ಕ್ರಿ.ಶ. ೧೦೩೩ ರ ಶಾಸನದಲ್ಲಿ `ಬಳ್ಳಜ್ಜ' ೫ ದೇವಾಲಯಗಳನ್ನು ಮಾಡಿಸಿದ ವಿಷಯವಿದ್ದು ಅದರಲ್ಲಿ `ಭಟರಿಯ' ದೇಗುಲವೂ ಒಂದು. ಉಳಿದವು ವಿನಾಯಕ, ಮಟುವಮದೇರ, ಕೇಶವಾದಿತ್ಯ, ಸಿದ್ಧೇಶ್ವರ. ಇವುಗಳಲ್ಲಿ 'ಭಟರಿ'ಯೊಂದೇ ಸ್ತ್ರೀ ದೈವ. (ಎಸ್.ಐ.ಐ. xi)

೬. ಕುಕನೂರಿನ (ಎಲಬುರ್ಗಾ ತಾಲೂಕ) ಗಂಗಕುಲದ ಇಮ್ಮಡಿ ಮಾರಸಿಂಹನ ಕಾಲದ (೯೭೮ ?) ಸಂಸ್ಕೃತ ಶಾಸನದಲ್ಲಿ `ಬಳಾರಿ`ಯ ಪ್ರಸ್ತಾಪವಿದೆ. (ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ, ೨)

೭. ದೊಡ್ಡಹೊಮ್ಮದ ಕ್ರಿ.ಶ. ೯೭೭ ರ ಶಾಸನದಲ್ಲಿ ಕೆಲವು ಪದಗಳು ಅಸ್ಪಷ್ಟವಿದ್ದರೂ, `ಭಳರಿ`ಗೆ ಸಂಬಂಧಿಸಿದ ಮಹತ್ವದ ಸಂಗತಿಗಳಿವೆ. (ಎ.ಕ. ೩) ಗಂಗರ ನಾಲ್ಕನೇ ರಾಚಮಲ್ಲ ಅಧಿಕಾರದಲ್ಲಿದ್ದಾಗ ಎಡೆನಾಡ `ಪಿರಿಯಹೊಮ್ಮ`ದ ೧೨ ಜನ, ಒಲಭರ ಶಿವಮಾರಗಾವುಂಡನ ಮಗ ಅಯ್ಯಪಗಾವುಂಡನು ಕೂಡಿ ಬಾಳಶಕ್ತಿ ಭಟರರ ಶಿಷ್ಯ ಕೂಚಿಭಟರರಿಗೆ `ಭಳರಿ', `ಮಹಾದೇವರ್', `ಭಗವತಿ' ಎಂದಿಂತು ಐವರು ದೈವಗಳಿಗೆ ಎಲ್ಲ ಸ್ವಾಮ್ಯವನ್ನು ಧಾರೆ ಎರೆದು ಕೊಡುತ್ತಾರೆ. `ಶಕ್ತಿ ಪರಿಷೆಯ ಸ್ಥಾನ`. ನಂದಿಯ `ಬಳುಕ್ಕ', ದೇವತಾಭೋಗಕ್ಕೆ ಸಲ್ಲುವ ಮಣ್ಣನ್ನು, ಆ ಸ್ಥಾನವನ್ನು `ಭಳರಿಯುಂ' ಬಂದು `ಸಿಸಿಕೆಬ್ಬಾಯುಂ'. `ಚಿಕ್ಕೇಶ್ವರಕ್ಕೆ ಈಶಾನ್ಯದ ಭೂಮಿ` ಇತ್ಯಾದಿ ಅಸ್ಪಷ್ಟವಾದ ಮಾತುಗಳಿವೆ.

ಈ ಶಾಸನದಿಂದ ತಿಳಿಯಬಹುದಾದ ಸಂಗತಿಗಳನ್ನು ಹೀಗೆ ಪಟ್ಟಿ ಮಾಡಬಹುದು :

ಅ. `ಬಳರಿ`ಯೇ `ಭಳರಿ' ಆಗಿದೆ. `ಮಹದೇವ`, `ಭಗವತಿ', `ಚಿಕ್ಕೇಶ್ವರ' ದೈವಗಳ ಜತೆ `ಭಳರಿ`ಯನ್ನು ಸೇರಿಸಿರುವುದರಿಂದ ಇದು ಪ್ರತಿಷ್ಠಿತ ದೈವವೆಂದು ಪರಿಗಣಿಸಲ್ಪಡುತ್ತಿತ್ತು.

ಬ. `ಬಳರಿ' ಶಕ್ತಿಪರ್ಷೆಯ ಸ್ಥಾನದಲ್ಲಿರುವುದು ಮೇಲಿನ ಮಾತಿಗೆ ಪೂರಕಾಂಶವಾಗಿದೆ.

ಕ. ಶಕ್ತಿಪರಿಷೆಯಲ್ಲಿ ಪೀಠಾಧಿಕಾರಿಯಾಗಿ ಬಾಳಶಕ್ತಿಭಟರ ಶಿಷ್ಯ ಕೂಚಿಭಟರರಿದ್ದಾರೆ. ಇಲ್ಲಿ ಭಟರ್ ಎಂಬ ಮಾತು `ಭಟರಿ`ಗೆ ಸಮೀಪವಿರುವುದರನ್ನು ಗಮನಿಸಿ. ಇದು ಇಲ್ಲಿ ಶೈವ ಸನ್ಯಾಸಿ ಎಂಬ ಅರ್ಥದಲ್ಲಿದೆ. ಜೈನ ಯತಿಗಳಿಗೂ ಕೂಡ ಈ ಪದ ವ್ಯಾಪಕವಾಗಿ ಬಳಸಲ್ಪಡುತ್ತಿತ್ತು. ಇದಕ್ಕೆ ಸಮಾನವಾದ ಪದ ಗೊರವರ್. ಕರ್ನಾಟಕದಲ್ಲಿ ಹೆಚ್ಚು ಪ್ರಸಾರಗೊಂಡಿದ್ದ ಜೈನಧರ್ಮವು ಇಲ್ಲಿಯ ಶೈವ ಪಂಥೀಯ ಪರಿಭಾಷೆಯನ್ನು ಸ್ವೀಕರಿಸಿರುವ ಸಾಧ್ಯತೆಯಿದೆ. ತಮಿಳುನಾಡು ಮತ್ತು ಆಂಧ್ರಪ್ರದೇಶಗಳಲ್ಲಿ ಈ ಪದಗಳಿಗೆ ಪರ್ಯಾಯವಾಗಿ ಯಾವ ಪದಗಳಿವೆ ನೋಡಬೇಕು. ಅಂದರೆ `ಭಟಾರ`, `ಗೊರವರ್' `ಗುರವರ್` ಶೈವಮೂಲದವ್ರೋ, ಜೈನ ಪದಗಳೋ ? ಒಂದು ಪದವನ್ನು ಪುಲ್ಲಿಂಗವಾಗಿಯೂ ಸ್ತ್ರೀಲಿಂಗವಾಗಿಯೂ ಬಳಸುವುದು ನಮ್ಮ ದೇಸಿ ಸಾಂಸ್ಕೃತಿಕ ಪರಂಪರೆಯೇ. ಆ ಪದಕ್ಕೆ ಪುಲ್ಲಿಂಗ ಅಥವಾ ಸ್ತ್ರೀಲಿಂಗವಾಚಿ ಪ್ರತ್ಯಯಗಳನ್ನು ಸೇರಿಸಿದಾಗ ಅದು ಆಯಾ ಲಿಂಗ ರೂಪ ತಾಳುತ್ತದೆ. ಭಟಾರ-ಭಟಾರಿ, ಗೊರವ-ಗೊರವಿ (ಈಗ –ಗೊರವಪ್ಪ –ಗೊರವಮ್ಮ) ಹೀಗೆ ಹುಟ್ಟಿಕೊಂಡಿರುವ ಪದಗಳು. ಭಟಾರ ಪದ ಸಂದರ್ಭದಲ್ಲಿ ಬಳರಿಯೆಂಬ ಸ್ತ್ರೀ ರೂಪವೇ ಮೊದಲಿನದಿರಬೇಕು. ಈ ಪದದಿಂದಲೇ `ಭಟಾರ`, `ಭಟಾರಕ`, `ಭಟ್ಟಾರಿಕೆ`, `ಭಟೋರ`, `ಭಟ್ಟರ್' ಮೊದಲಾದ ಪದಗಳು ಹುಟ್ಟಿರುವಂತಿದೆ. ಎಲ್ಲ ಶಿಷ್ಟ ಧರ್ಮಗಳೂ ಈ ಪದಗಳನ್ನು ಮುಲಾಜಿಲ್ಲದೇ ಸ್ವೀಕರಿಸಲು ಕಾರಣಗಳೇನು ?

೮. ಶಿರಗುಪ್ಪ ತಾಲೂಕು ಕಂಚುಗಾರಬೆಳಗಲ್ಲಿನ ಕ್ರಿ.ಶ. ೯೮೧ ರ ಶಾಸನದಲ್ಲಿ `ಭಳಾರಿ' ದೇವತೆಗೆ ಆರು ಮತ್ತರು ಭೂಮಿಯಿದ್ದ ವಿಷಯವಿದೆ. ಇದು ಪೂರ್ವದ ಸ್ಥಾನಮಾನ್ಯದಲ್ಲಿ ಬಂದಿದೆ. ಅಂದರೆ ಭಳರಿಗೆ ಹಿಂದಿನಿಂದಲೇ ಭೂಮಿದಾನ ಮಾಡಲಾಗಿತ್ತು. ಇದೂ ಕೂಡ ಭಳರಿ ಸಾಮಾಜಿಕವಾಗಿ ಉತ್ತಮ ಸ್ಥಾನದಲ್ಲಿದ್ದುದನ್ನು ಸೂಚಿಸುತ್ತದೆ.

೯. ಹರಪನಹಳ್ಳಿ ತಾಲೂಕು ಸತ್ತೂರಿನ ಕ್ರಿ.ಶ. ೧೦೪೪ ರ ಶಾಸನದಲ್ಲಿ ದತ್ತಿಯ ಭೂಮಿಯ ಗುರುತು ಹೇಳುವಾಗ 'ಬನದ ಭಳಾರಿ'ಯ ಹೆಸರಿದೆ.

೧೦. ಬಾಗಲಕೋಟ ತಾಲೂಕು ಕೊಪ್ಪದ ಕ್ರಿ.ಶ. ೧೦೭೫ ರ ಶಾಸನದಲ್ಲಿ 'ಊರಿಂ ಬಡಗ ದೂರಪಲ್ಗೆರೆಯ ಭಳಾರಿಯ ಮಾನ್ಯದಿಂ ಪಡುವಲ್ ಪೂದೋಂಟಂ' ಎಂದಿರುವುದರಿಂದ ಭಳಾರಿ ದೇವತೆಗೆ ಭೂಮಿ ಇದ್ದುದು ಸ್ಪಷ್ಟ.

೧೧. ಕಲ್ಲೂರಿನ (ಯಲಬುರ್ಗ ತಾಲೂಕು) ಮೂರು ಅವಧಿಗಳಿರುವ ಒಂದು ಶಾಸನದಲ್ಲಿ (ಕ್ರಿ.ಶ. ೧೦೯೮, ೧೧೨೫, ೧೧೫೪) 'ಭಳಾರಿಯ ಕೆಯಿಂ ತೆಂಕ' ಮತ್ತು 'ಬಳಾರಿಯ ಕೆಯ ಸೀಮೆಯಿಂ' ಎಂಬ ರೂಪಗಳಿವೆ. ಕ್ರಿ.ಶ. ೧೦೯೮ ರಲ್ಲಿ 'ಭಳಾರಿ', ಕ್ರಿ.ಶ. ೧೧೫೪ ರಲ್ಲಿ 'ಬಳಾರಿ' ರೂಪಗಳಿರುವುದರಿಂದ ಈ ಪದದಲ್ಲಿ ಕಾಲಾಂತರದಲ್ಲಿ ಆದ ಬದಲಾವಣೆಯನ್ನು ಗುರುತಿಸಬಹುದಾಗಿದೆ. ಎರಡೂ ಕಡೆ ಬಳಾರಿಗೆ ಜಮೀನಿರುವುದು ದಾಖಲಾಗಿರುವುದರಿಂದ ಈ ದೈವದ ಪ್ರಸಿದ್ಧಿಯ ಕಲ್ಪನೆ ಬರುತ್ತದೆ.

೧೨. ೧೧ ನೇ ಶತಮಾನದ ಕೋಳೂರು ಶಾಸನದಲ್ಲಿ (ಬಳ್ಳಾರಿ ತಾಲೂಕು) 'ಬಳ್ಳಾರೆ ೩೦'ರ ಪ್ರಸ್ತಾಪವಿದೆ. ಇಲ್ಲಿ ಬಳ್ಳಾರೆ ಊರಿನ ಹೆಸರಾಗಿದೆ.

೧೩. ಹಿಂದೆ ಬಾಳಂಬೀಡಿಗೆ (ಹಾನಗಲ್ ತಾಲೂಕು) ಬಳ್ಳಾರೆ ಎಂಬ ಹೆಸರಿದ್ದಿರಬೇಕು. ಅಲ್ಲಿಯ ಶಾಸನಗಳ ಆಧಾರದಲ್ಲಿ ಹೇಳುವುದಾದರೆ 'ಬಳ್ಳಾರೆಬೀಡು' ಎನ್ನುವುದೇ ಕಾಲಾಂತರದಲ್ಲಿ 'ಬಾಳಂಬೀಡು' ಆಗಿದೆ. ಕ್ರಿ.ಶ. ೧೧೧೮ ರ ಶಾಸನದಲ್ಲಿ 'ಬಳ್ಳಾರೆಯ ಬೀಡಿನ ಪ್ರಜೆಗಳು' ಎಂಬ ಉಲ್ಲೇಖ ಮೂರು ಸಲ ಬಂದಿದೆ. ಇದು ನಿಜವಿದ್ದರೆ 'ಬಳರಿ' ದೇವತೆಯ ಮೂಲ ಈ ಪ್ರದೇಶವಿರಬಹುದೇ ? ೧೧೭೫ ರ ಶಾಸನದಲ್ಲೂ 'ಬಳ್ಳರಬೀಡು' ಹೆಸರಿದೆ. (ಎಸ್.ಐ.ಐ. XX ಪು. ೧೮೧)

೧೪. ಕ್ರಿ.ಶ. ೧೧೨೪ ರ 'ಚಲ್ಯ' ಶಾಸನದ ಸೀಮಾ ಸಂಬಂಧ ಹೇಳುವಾಗ 'ಬಡಗಣ ಕೋಡಿಯ ಭಳಾರಿಯುಂ' ಎಂದಿದೆ. (ಎ.ಕ. ೨, ಪು ೩೫೪)

೧೫. ಬೈಲೂರಿನ (ಬಳ್ಳಾರಿ ತಾಲೂಕ) ಕ್ರಿ.ಶ. ೧೧೩೧ ರ ಶಾಸನದಲ್ಲಿ 'ಬಳ್ಳಾರೆಯ ಬೀವರಸ'ರ ಪ್ರಸ್ತಾಪವಿದೆ. ಇಲ್ಲಿ ಇದು ಗ್ರಾಮನಾಮವಾಗಿದೆ.

೧೬. ಸಿಂದಿಗೆರೆಯ ಕ್ರಿ.ಶ. ೧೧೪೧ ರ ಎರಡು ಶಾಸನಗಳಲ್ಲಿ 'ಬಳ್ಳಾರೆ ರಾಚಮಲ್ಲ ದೇವರಸರ' ಪ್ರಸ್ತಾಪವಿದೆ.

೧೭. ಕುಂದಗೋಳ ತಾಲೂಕು ಸಂಶಿಯ ೧೧೪೪ ರ ಶಾಸನದಲ್ಲಿ ಐನೂರ್ವರ ನಾಮಾವಳಿಯಲ್ಲಿ 'ಭಳಾರಿಯ ಮಕ್ಕಳು' ಎಂಬ ವಿಶೇಷಣವಿದೆ. ಭಳಾರಿ ದೇವತೆಯ ಭಕ್ತರು ಎಂಬ ಅರ್ಥಕ್ಕಿಂತ ಉಗ್ರದೇವಿಯ ಮಕ್ಕಳಂತೆ ಶೂರರಾಗಿದ್ದರು ಎಂಬರ್ಥವೇ ಹೊಂದುವಂತೆ ತೋರುತ್ತದೆ.

೧೮. ಕೋಳೂರಿನ ೧೧೪೭ ರ ಶಾಸನದಲ್ಲಿ 'ಬಳ್ಳರೆಯ ದಾರಿ' ಎಂದು ಊರ ಹೆಸರಾಗಿ ಬಂದಿದೆ.

೧೯. ಕ್ರಿ.ಶ. ೧೧೫೭ ರ ಐಹೊಳೆಯ ಶಾಸನದಲ್ಲಿ ಭಗವತಿಯ ಕೊಳ್ಳದಲ್ಲಿ 'ಬಳರ' ನೀಲಣ ಚಿಕ್ಕೇಶ್ವರ ದೇವರಿಗೆ ದಾನ ನೀಡಿದ ವಿಷಯವಿದೆ. ಇಲ್ಲಿ 'ಬಳರ' ಕುಲದ ಹೆಸರು. (ಎಸ್.ಐ.ಐ. XV ಪು. ೧೧೩)

೨೦. ಶ್ರವಣಬೆಳ್ಗೊಳದ ಒಂದು ಶಾಸನದಲ್ಲಿ (೧೧೫೯) ದತ್ತಿಯ ಗ್ರಾಮಸೀಮೆಯನ್ನು ಹೇಳುವಾಗ 'ಬಳರಿಯ ಬನ'ದ ಪ್ರಸ್ತಾಪವಿದೆ.

೨೧. ಜಮಖಂಡಿಯ ೧೧೭೪ ರ ಒಂದು ಶಾಸನದಲ್ಲಿ ಹೊಲ ಮೇರೆ ಹೇಳುವಾಗ 'ಭಳಾರಿ'ಯ ಉಲ್ಲೇಖವಿದೆ.

೨೨. ಓರೇಹಳ್ಳಿಯ (ಎ.ಕ. : ೯) ೧೧೮೨ ಮತ್ತು ೧೨೪೭ ರ ಶಾಸನಗಳಲ್ಲಿ 'ಬಳ್ಳಾರೆ' ಎಂದು ಬಳ್ಳಾರಿ ಊರ ಹೆಸರಾಗಿ ಬಂದಿದೆ.

೨೩. ಎ.ಕ. : ೭ ರಲ್ಲಿ ಅಳೀಸಂದ್ರದ ೧೧೮೩ ರ ಶಾಸನದಲ್ಲಿ ಗಡಿ ವಿವರದಲ್ಲಿ 'ಭಳಾರಿಯಾಲ'ವೆಂದಿದೆ. ಭಳಾರಿಯಾಲವು ಶ್ರವಣಬೆಳ್ಗೊಳ ಶಾಸನದಲ್ಲಿ ಬರುವಂತೆ 'ಬಳರಿ ಬನ'ವನ್ನೇ ಸೂಚಿಸುತ್ತದೆ. ಇನ್ನೂ ಬೇರೆ ಹಲವು ಕಡೆ ಬಳರಿಬನದ ಉಲ್ಲೇಖ ಬರುತ್ತವೆ. ಸಾಮಾನ್ಯವಾಗಿ ಬಳರಿ ದೈವ ಊರ ಹೊರಗೆ ಬನಗಳಲ್ಲಿ ಇರುತ್ತಿತ್ತು. ಸೀಮಾಸಂಬಂಧದಲ್ಲೆ ಹೆಚ್ಚಾಗಿ ಬರುತ್ತಿರುವುದು ಈ ಊಹೆಗೆ ಆಧಾರವಾಗುತ್ತದೆ.

೨೪. ರಾಯದುರ್ಗ ತಾಲೂಕು ನಾಗೇನಹಳ್ಳಿಯ 'ಭಳಾರಿ ಚೋದುಂಬೆಯುಂಗೆ ಮತ್ತರು ೧' ಎಂದಿರುವಲ್ಲಿ ಭಳಾರಿ 'ಕುಲ'ದ ಹೆಸರಾಗಿ ಚೋದುಂಬೆ ವ್ಯಕ್ತಿನಾಮವಾಗಿ ಬಂದಿದೆ. (ಎಸ್.ಐ.ಐ. ix-I ಪು. ೩೨. ೧೧೯೭)

೨೫. ಕೊಲ್ಲಾಪುರದ ೧೨ ನೇ ಶತಮಾನದ ಒಂದು ಶಾಸನದಲ್ಲಿ 'ಭಳಾರಿಯ ಭೂಮಿ'ಯ ಪ್ರಸ್ತಾಪವಿದೆ. ಅಲ್ಲಿಯೇ ಮುಂದಿರುವ ಗೃಹಂ ಹಸ್ತ ಎಂಬುದು ಈ ದೇವಿಯ ಗುಡಿಯನ್ನೇ ಕುರಿತಿರಬಹುದು. (ಕ.ವಿ.ವಿ. ಪ್ರಕಟಣೆ)

೨೬. ಸಿಂದಗಿ ತಾಲೂಕು ಕೊಂಡುಗುಳಿಯ ೧೨ - ೧೩ ನೇ ಶತಮಾನದ ಶಾಸನದಲ್ಲಿ 'ಮೂಡ ಶಾಲೆಯ ಕೇರಿಯಿಂ ತೆಂಕ ಭಳಾರಿಯ ದೇಗುಲದ' ವಿಷಯವಿದೆ. ಊರಲ್ಲೂ ಬಳಾರಿಯ ದೇಗುಲಗಳಿರುತ್ತಿದ್ದುದಕ್ಕೆ ಇದು ಸಾಕ್ಷಿಯಾಗುತ್ತದೆ. (ಎಸ್.ಐ.ಐ. XX ಪು. ೩೪೫)

೨೭. ಹಿರೇಹಡಗಲಿಯ ೧೨೧೨ ರ ಶಾಸನದಲ್ಲಿ 'ಬಳ್ಳರೆಯ ಹೊಲ' ಎಂದು ಗಡಿಮೇರೆಯ ಸಂದರ್ಭದಲ್ಲಿದೆ. (ಬಳ್ಳಾರಿ ಜಿಲ್ಲೆ. ಪೂರ್ವೋಕ್ತ. ಪು. ೩೬೬)

೨೮. ಹಿರೇಕೆರೂರ ತಾಲೂಕ ನೂಲಗೇರಿಯ ವೀರಗಲ್ಲಿನಲ್ಲಿ. (ಕೆ.ಐ. iv. ಕ್ರಿ.ಶ. ೧೨೦೦) 'ಜೆಸವಕ್ಕಳ' (ಸಾಮಾನ್ಯ ಜನ) ಪಟ್ಟಿಯಲ್ಲಿ 'ಬಳಾರ ಕಲೋಜ'ನಿಗೆ ನೆತ್ತರುಗೆಯಿ ನೀಡಿದ ವಿಷಯವಿದೆ. ಇಲ್ಲಿ 'ಬಳಾರ'ವು 'ಕುಲ'ದ ಹೆಸರು.

೨೯. ಕ್ರಿ.ಶ. ೧೫೬೧ ರ ಶಾಸನವೊಂದರಲ್ಲಿ (ಕೋಗಳಿ, ಬಳ್ಳಾರಿ ಜಿಲ್ಲೆ) 'ಬಳಾರಿಯ ಮೊಹೆಯ ತಿಪ್ಪಿಶೆಟ್ಟಿ'ಯ ಹೆಸರಿದೆ. ಬಳ್ಳಾರಿಗೆ ಇಲ್ಲಿ ಬಳಾರಿ ಎಂಬ ರೂಪವೇ ಇರುವುದನ್ನು ಗಮನಿಸಬಹುದು.

೩೦. ಶಿರಗುಪ್ಪ ತಾಲೂಕು (ಬಳ್ಳಾರಿ ಜಿಲ್ಲೆ) ಎಸ್. ಮಣೂರಿನ ವೆಂಕಟಪತಿರಾಯನ ಕಾಲದ ಒಂದು ಶಾಸನದಲ್ಲಿ 'ಬಳಾರಿ ಸೀಮೆ' ಎಂದಿದೆ.

೩೧. ಬಳ್ಳಾರಿ ತಾಲೂಕು ಅಂದ್ರಾಳು ಶಾಸನದಲ್ಲಿ (ಕ್ರಿ.ಶ. ೧೬೬೭) 'ಬಳ್ಳಾರಿ ದುರ್ಗ'ದ ಪ್ರಸ್ತಾಪವಿದೆ.

೩೨. ಹೊಸಪೇಟೆಯ ಕೊಟ್ಟೂರುಸ್ವಾಮಿ ಮಠದ ಸನ್ನದುಗಳಲ್ಲಿ (೧೭೨೬) 'ಬಳ್ಳಾರಿ' ಗ್ರಾಮನಾಮವಾಗಿ ಬಂದಿದೆ.

೩೩. ಕಾಲದ ಸೂಚನೆಯಿಲ್ಲದ ನಂದಿಬೆಟ್ಟದ ಒಂದು ಶಾಸನದಲ್ಲಿ (ಎ.ಕ. : xvii. ಕೋಲಾರ) 'ಗೂಳೂರು ಬಟಾಳ ಕಾಳಿವಿರಶೆಟ್ಟಿ ಸೊಸೆ ಚಿಕಮುನ ಮಗ ಚೆಂನಣ' ಎಂಬ ಮಾತಿದ್ದು ಇಲ್ಲಿ ಬಂದಿರುವ 'ಬಟಾಳ'ವು ಕುಲಸೂಚಕವೆಂದು ತೋರುತ್ತದೆ.

ನಾನು ನೋಡಿದ ಶಾಸನಗಳಲ್ಲಿ ಇವಿಷ್ಟು ಬಳರಿಯ ಬಗೆಗಿನ ಉಲ್ಲೇಖಗಳು. ಇನ್ನೂ ಅನೇಕ ಶಾಸನ ಸಂಪುಟಗಳನ್ನು ನೋಡಬೇಕಿದೆ. ಕನಿಷ್ಠ ಇಲ್ಲಿ ಕೊಡಲಾಗಿರುವ ನಿದರ್ಶನಗಳಿಂದ ಬಳಾರಿಯ ಬಗ್ಗೆ ಹಲವಾರು ಮಹತ್ವದ ಸಂಗತಿಗಳು ತಿಳಿಯುವಂತಿವೆ. 'ಭಳರಿ', 'ಭಳಾರಿ', 'ಭಟಾರಿ', 'ಭಟರಿ', 'ಬಳಾರಿ', 'ಬಳರಿ', 'ಬಳ್ಳರೆ', 'ಬಳಾರ', 'ಬಳ್ಳಾರಿ', 'ಬಟಾಳ' ಇಷ್ಟು ರೂಪಗಳು ಮೇಲಿನ ದಾಖಲೆಗಳಲ್ಲಿವೆ. ಕನ್ನಡದಂತೆ ಸಂಸ್ಕೃತ ಶಾಸನಗಳಲ್ಲೂ 'ಭಟಾರಿ' ಮತ್ತು 'ಬಳಾರಿ' ಈ ಎರಡೂ ರೂಪಗಳಿರುವುದನ್ನು ನೋಡಬಹುದು. ಮಹಾಪ್ರಾಣ

ಸಹಿತ (ಭಟಾರಿ, ಭಳಾರಿ) ಪದ ಸ್ಥಾನಕ್ಕೆ ಪ್ರತಿಯಾಗಿ ಕಾಲಾಂತರದಲ್ಲಿ 'ಬಳ್ಳಾರಿ' ಎಂಬ ಸಜಾತಿದ್ವಿತ್ವ ಬಂದಿರುವಂತಿದೆ.

ಕಾವ್ಯಕೃತಿಗಳು ಕೊಡುವ ಬಳರಿಯ ಬಗೆಗಿನ ಚಿತ್ರಕ್ಕೂ ಶಾಸನಗಳಲ್ಲಿ ಕಂಡುಬರುವ ಚಿತ್ರಕ್ಕೂ ವ್ಯತ್ಯಾಸವಿರುವುದನ್ನು ಗಮನಿಸಬಹುದು. ಜೈನ ಇಲ್ಲವೇ ವೀರಶೈವ ಮತ ಕಾವ್ಯಗಳಲ್ಲಿ ಬಂದಿರುವ ಬಳರಿಯ ಚಿತ್ರ ನೈಜವಾಗಿರಲು ಸಾಧ್ಯವಿಲ್ಲ. ಏಕೆಂದರೆ ಅದು ಅವರ ದೈವವಲ್ಲ. ಆದರೆ ಈ ದೈವವನ್ನು ಆರಾಧಿಸುತ್ತಿದ್ದ ಜನಗಳು ಈ ಎರಡೂ ಮತಗಳಿಗೆ ಬೇಕಿದ್ದುದರಿಂದ ಇವು ಬಳರಿಯ ಕುರಿತು ಬರೆಯುವಂತಾಯಿತು. ಆಶ್ಚರ್ಯವೆಂದರೆ ಈ ದೈವ ಬಹುಶಃ ಇಂದು ಎಲ್ಲಿಯೂ ಪೂಜಿಸಲ್ಪಡುತ್ತಿಲ್ಲ. ಏಕೆ ? ಬಳರಿ ಬೇರಾವುದೋ ದೈವದಲ್ಲಿ ಸಮೀಕರಣಗೊಂಡಿರಬೇಕು. ಬಳ್ಳಾರಿಯಲ್ಲಿ ದುರಗಮ್ಮ ಪ್ರಸಿದ್ಧ ದೈವ. ಈ ಜಿಲ್ಲೆಯ ಬೇರೆ ತಾಲೂಕುಗಳಲ್ಲೂ 'ಬಳ್ಳಾರಿ ದುರಗಮ್ಮ'ಗಳು ಅಪರೂಪವಾಗಿ ಕಂಡುಬಂದಿವೆ. ಹಾಗಾಗಿ ಸದ್ಯಕ್ಕೆ ಬಳರಿ, ದುರಗಮ್ಮನಲ್ಲಿ ಸೇರಿಹೋದಳೆಂದು ಭಾವಿಸಬಹುದಾಗಿದೆ. ಈ ವಿಷಯವನ್ನು ವಿವರವಾಗಿ ಚರ್ಚಿಸುವ ಮೊದಲು ಅರಸರಿಗೆ, ಜೈನ ಇಲ್ಲವೇ ಶೈವ ಯತಿಗಳಿಗೆ ಈ ಪದ ಹೇಗೆ ಬಳಕೆಯಾಗುತ್ತಿತ್ತೆಂದು ನೋಡಬೇಕಿದೆ. ಶಾಸನಗಳಲ್ಲಿ 'ಭಳಾರ', 'ಭಟಾರ', 'ಭಟ್ಟಾರ', 'ಭಟ್ಟಾರಕ', 'ಭಟಾರರ್' ಮೊದಲಾದ ಉಲ್ಲೇಖಗಳು ಸಾಕಷ್ಟು ಲಭ್ಯವಿದ್ದು ಕೆಲವೇ ನಿದರ್ಶನಗಳನ್ನಿಲ್ಲಿ ಕೊಟ್ಟಿದೆ :

೧. ಅರಸನಿಗೆ ಅನ್ವಯಿಸಿ ಭಟ್ಟಾರ್. ಕೆ.ಐ. vi, ೮-೯ ನೇ ಶತ. ಮೇರೂರು. ಹಿರೇಕೆರೂರು ತಾ.
೨. ಶ್ರವಣಬೆಳ್ಗೊಳದ ೭-೮ ನೇ ಶತಮಾನದ ಅನೇಕ ಶಾಸನಗಳಲ್ಲಿ ಜೈನಯತಿಗಳಿಗೆ 'ಭಟ್ಟಾರಕ', 'ಭಟಾರ' ಪದ ಬಳಕೆ ಆಗಿದೆ. ನಂತರದ ೯, ೧೦ ನೇ ಶತಮಾನದ ಶಾಸನಗಳಲ್ಲೂ ಈ ಪದ ಬರುತ್ತದೆ.
೩. ವಿಕಣದೇವಾ ಭಟ್ಟಾರಂ. ಎಸ್.ಕೆ.ಐ. ಕ್ರಿ.ಶ. ೮೭೪. ನಿಡಗುಂದಿ.
೪. ಕ್ರಿ.ಶ. ೮೮೮ ರ ಬಿಳಿಯೂರು ಶಾಸನದಲ್ಲಿ ಜೈನಯತಿಗೆ 'ಭಟರ' ಎಂದಿದೆ. (ಎ.ಕ. ೧).
೫. ಜೈನ ಭಟಾರ, ಎಸ್.ಐ.ಐ. ix. ಕಲ್ಯಾಣದುರ್ಗ ತಾಲೂಕು ಹೇಮಾವತಿ. ೯ ನೇ ಶ.
೬. ಸೋಮರಾಸಿ ಭಟರರ್. ಖಂಡೇಬಾಗೂರು. ಹಿರೇಕೆರೂರು ತಾಲೂಕು, ೯೨೪. ಕೆ.ಐ, vi.
೭. ಅಮೃತರಾಶಿ ಭಳಾರ, ಭಟಾರ. ತಳಕಲ್ಲು. ೯೯೧.
೮. ಭಗವ ಭಟಾರ. ಅಗಳಿ. ಮಡಕಶಿರಾ ತಾಲೂಕು. ಎಸ್.ಐ.ಐ. ix.
೯. ಬಾಳಶೋಮ ಭಟರ. ಗೊಲ್ಲಪುರಂ. ೧೦ ನೇ ಶ. ಎಸ್.ಐ.ಐ. ix
೧೦. ವೆಣ್ಣೆಯ ಭಟ್ಟರ್ (ಬ್ರಾಹ್ಮಣ). 'ಸಿರಿಪುರದ ಗುಹೆಯ ಮಠದ ಅಮರಾಚಾರ್ಯ ಭಟ್ಟಾರಕರ್'. ಆಲೂರು. ೧೦೧೧. ಎಸ್.ಕೆ.ಐ., ಪು. ೪೭.
೧೧. ಅಗ್ನಿ ಭಟ್ಟಾರಕರ್, ಹಿರೇಕೆರೂರು ತಾಲೂಕು ಖಂಡೇಬಾಗೂರು ಮತ್ತು ಮೇದೂರು ಶಾಸನಗಳು. ೧೦೪೭ ಕ್ರಿ.ಶ. ಕೆ.ಐ. vi.
೧೨. ಧರ್ಮಶಿವ ಭಳಾರ. ಇಂಡಿ ತಾಲೂಕು. ಚಡಚಣ. ೧೦೫೭, ಎಸ್.ಐ.ಐ. xx.
೧೩. ಶ್ರೀಪಾಳ ಭಟ್ಟಾರಕ, ಅನಂತವೀರ್ಯ ಭಟ್ಟಾರಕ, ಕನಕಸೇನ ಭಟ್ಟಾರಕ. ಹುಂಚ, ೧೦೭೭. ಎಸ್.ಕೆ.ಐ., ಪು. ೮೪.
೧೪. ಅನಂತಕೀರ್ತಿ ಭಟ್ಟಾರಕ. ಹಿರೇಕೋಣತಿ. ಹಿರೇಕೆರೂರು ತಾ. ೧೨೭೧, ಕೆ.ಐ. vi.
೧೫. ಸೇನ ಭಟ್ಟಾರಕ. ಹಿರೇಕೋಣತಿ, ಹಿರೇಕೆರೂರು ತಾಲೂಕು, ೧೨೭೮, ಕೆ.ಐ. vi.

ಹಿಂದೆ ಹೇಳಿರುವಂತೆ, 'ಟ' ಅಕ್ಷರ 'ಳ' ಆಗುವುದಕ್ಕೆ ಸಾಕಷ್ಟು ನಿದರ್ಶನಗಳು ಸಿಕ್ಕುತ್ತವೆ. ಮೇಲಿನ ಉದಾಹರಣೆಗಳಲ್ಲೇ ಅಂಥವನ್ನು ನೋಡಬಹುದು. ಬಳರಿ ಎಂಬ ಸ್ತ್ರೀ ದೈವದ ಹೆಸರು ಹೀಗೆ ಜೈನ ಮತ್ತು ಶೈವ ಪುರುಷ ಯತಿಗಳಿಗೆ ಬದಲಾದ ರೂಪದಲ್ಲಿ ಅನ್ವಯಿಸತೊಡಗಿದ್ದುದು ಕುತೂಹಲಕಾರಿ.

‘ಬಳರಿ ದೇವತೆ’ ಎಂಬ ಲೇಖನದಲ್ಲಿ (ಮಾರ್ಗ- ೨. ಡಾ. ಎಂ. ಎಂ. ಕಲಬುರ್ಗಿ) ಕಲಬುರ್ಗಿಯವರು ಭಟ್ಟಾರಿಕಾ >ಬಟರಿ>ಬಳರಿ>ಬಳಾರಿ ಎಂದೋ ಅಥವಾ ‘ಬಳರಿ’ಯೇ ಸಂಸ್ಕೃತೀಕರಣಗೊಂಡು ಬಟರಿ (ಭಟ್ಟರಿಕಾ) ಆಗಿರಬಹುದೆಂದು ಊಹಿಸುತ್ತಾರೆ. ಬಳರಿಯ ಅನುಯಾಯಿಗಳು ಕೌಳರಾಗಿದ್ದಿರಬಹುದೆಂದು ಲಿಖಿತ ಪರಂಪರೆಯ ಆಧಾರದಿಂದ ತರ್ಕಿಸುತ್ತಾರೆ. ಧಾರವಾಡ ಜಿಲ್ಲೆ ಚಿಕ್ಕ ಕೆರೂರು ಮತ್ತು ಕೌಜಗೇರಿಗಳಲ್ಲಿರುವ ೧೦ ನೇ ಶತಮಾನದ ಶಾಸನ ಮತ್ತು ಸ್ಮಾರಕಗಳ ಆಧಾರದಲ್ಲಿ ‘ಗೂಗೆ’ ಬಳರಿಯ ಚಿಹ್ನೆಯಾಗಿದ್ದಿತೆಂದೂ ‘ಒಟ್ಟಿನಲ್ಲಿ ನಮ್ಮ ನಾಡಿನಲ್ಲಿ ಸಿಗಬಹುದಾದ ಗೂಗೆ ಲಾಂಛನದ ಸ್ತ್ರೀ ವಿಗ್ರಹಗಳು ‘ಬಳರಿ’ ದೇವತೆಯಾಗಿವೆಯೆಂಬ ಅಂಶ ಈ ಲೇಖನದ ಮೂಲಕ ಮೊದಲ ಬಾರಿಗೆ ಬೆಳಕಿಗೆ ಬರುತ್ತಲಿದೆ’ ಎಂದು ಹೇಳುತ್ತಾರೆ. (ಪು. ೩೭೯). ಆದರೆ ಈಗ ಜನ ಇವಕ್ಕೆ ಬನಶಂಕರಿ, ಬನದವ್ವ, ಉಡಚವ್ವ ಎಂದು ಹೇಳುತ್ತಿರುವುದನ್ನೂ ನಮೂದಿಸುತ್ತಾರೆ. ಚಿಕ್ಕಕೆರೂರಿನ ವಿಗ್ರಹಕ್ಕೆ ನಾಲ್ಕು ಕೈಗಳಿದ್ದು ಕಿರೀಟ ಧರಿಸಿದೆ. ಕೈಗಳಲ್ಲಿ ತ್ರಿಶೂಲ, ಖಡ್ಗ, ಡಮರು, ಪಾನಪಾತ್ರೆಗಳಿವೆ. ಕಾಲಡಿ ಪುರುಷನನ್ನು ತುಳಿದಿದ್ದಾಳೆ. ತೋಳ, ನಾಯಿ, ಗೂಗೆಗಳಿವೆ.

ಕಿರೀಟ ಧರಿಸಿ ಕೈಯಲ್ಲಿ ಮೇಲೆ ಹೇಳಲಾದ ವಸ್ತುಗಳನ್ನು ಹಿಡಿದಿರುವ ಹೆಣ್ಣು ಮತ್ತು ಗಂಡು ದೈವಗಳು ಕರ್ನಾಟಕದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಕಾಣಬರುತ್ತವೆ. ಹಾಗಾಗಿ ಇದು ಬಳರಿಯ ವಿಶೇಷ ಸ್ವರೂಪವೇನಲ್ಲ. ತಾಂತ್ರಿಕ ಅಥವಾ ವಾಮಮಾರ್ಗೀಯ ಪಂಥಗಳಿಗೆ ಬಳರಿಯ ಸಂಬಂಧವೇನಾದರೂ ಇದೆಯೇ ಎಂಬುದು ಶೋಧನೆಯಾಗಬೇಕಿರುವ ಸಂಗತಿ.

‘ಜಾಲಾಟ’ದ ಸಂದರ್ಭದಲ್ಲಿ ‘ಬಳರಿ’ (ಬಳೊರಿ) ಕಟ್ಟುವುದು ಎಂಬ ಆಚರಣೆಯಿದೆ. ಕೊಡಿಯಡಿಯ ಮೇಲ್ಭಾಗಕ್ಕೆ ಒಳಗಿನಿಂದ ಕಟ್ಟಿದ ಬಿಳಿಯ ಬಟ್ಟೆಗೆ ತೆಂಗಿನಗರಿ ಮತ್ತು ಹೂಗಳಿಂದ ಅಲಂಕರಿಸಿ ತೆಂಗಿನಕಾಯಿ ಕಟ್ಟಿ ತೂಗುಬಿಡುವರು. ಕೊಡ್ಡಬ್ಬು, ತನ್ನಿಮಾನಿಗ ಭೂತಗಳ ಕೋಲದಲ್ಲಿ ಈ ರೀತಿ ಕಟ್ಟುವುದಕ್ಕೆ ಬಳರಿ ಕಟ್ಟುವುದು ಎನ್ನುತ್ತಾರೆ ಎಂದು ಡಾ. ಚಿನ್ನಪ್ಪಗೌಡರು ತಿಳಿಸುತ್ತಾರೆ (‘ಭೂತಾರಾಧನೆ ಜಾನಪದೀಯ ಅಧ್ಯಯನ’, ಕೆ.ಚಿ. ೧೯೯೦). ಬಳರಿಯ ಬೇರೊಂದು ಸಾಂಸ್ಕೃತಿಕ ಆಯಾಮವನ್ನೇ ಸೂಚಿಸುತ್ತದೆ ಈ ಪದ್ಧತಿ.

ಕನ್ನಡ ‘ಬಸವಪುರಾಣ’ದಲ್ಲಿ ಬಂದಿರುವ ಬಳರಿಯ ಬಗ್ಗೆ ನನ್ನ ಹಿಂದಿನ ಲೇಖನದಲ್ಲಿ ಪ್ರಸ್ತಾಪ ಮಾಡಿದ್ದೆ. ತೆಲಗು ಬಸವಪುರಾಣದಲ್ಲಿ ಮತ್ತು ಇಂದಿನ ಆಂಧ್ರದಲ್ಲಿ ‘ಬಳಾರಿ’ ದೈವ ಪ್ರಚಾರದಲ್ಲಿರುವಂತೆ ಕಾಣುವುದಿಲ್ಲ. ಹಾಗಾಗಿ ಇದು ಕನ್ನಡನಾಡ ದೇವತೆಯೇ. ಇಂದಿನ ‘ಬಳ್ಳಾರಿ’ಗೂ ಬಳರಿಗೂ ಸಂಬಂಧವಿರುವುದಾದರೆ ಬಳ್ಳಾರಿಗೂ ಕರ್ನಾಟಕ ಸಂಸ್ಕೃತಿಗೂ ‘ಬಳರಿ’ಯ ಮೂಲಕ ಇರುವ ನಂಟನ್ನು ಮುಖ್ಯವೆಂದು ಭಾವಿಸಬೇಕಾಗುತ್ತದೆ. ಶಿಲಾಯುಗಗಳ ಜನ ಬಳ್ಳಾರಿಯ ಸುತ್ತಮುತ್ತಲ ಪ್ರದೇಶಗಳಲ್ಲಿ ವಾಸವಾಗಿದ್ದುದರಿಂದ, ಪ್ರಾಚೀನ ದೈವವಾದ ಬಳರಿಗೂ ಇವರಿಗೂ ಸಂಬಂಧ ಇರಬಹುದೇ ?

ಚೌಡಿಕೆಯವರು, ಲಂಬಾಣಿ ಜನಾಂಗದ ಹಾಡುಗಾರರು ‘ಬಳ್ಳಾರಿ ತತ್ವ’, ‘ಬಳ್ಳಾರಿ ಪದ’ಗಳನ್ನು ಹಾಡುತ್ತಾರೆಂದು ಕ್ಯಾತನಹಳ್ಳಿ ರಾಮಣ್ಣ ಬರೆಯುತ್ತಾರೆ (‘ಕರ್ನಾಟಕ ಜಾನಪದ ಸಮೀಕ್ಷೆ’ಯಲ್ಲಿ ಕ್ಯಾತನಹಳ್ಳಿಯವರ ಲೇಖನ). ಈ ಹಾಡುಗಳಲ್ಲಿ ಬಳರಿ ದೈವಕ್ಕೆ ಸಂಬಂಧಿಸಿದ ಸಂಗತಿಗಳೇನಾದರೂ ಇವೆಯೇ ನೋಡಬೇಕು. ಹುಲ್ಲೂರು ಶ್ರೀನಿವಾಸ ಜೋಯಿಸರು ‘ಬಳ್ಳಾರಿಯ ಇತಿಹಾಸ’ ಎಂಬ ಲೇಖನ ಬರೆದಿದ್ದಾರೆ. ಅದರಲ್ಲಿ ಅವರು ಬಳರಿ ದೇವತೆಯ ಜತೆ ಊರ ಹೆಸರನ್ನು ಸಮೀಕರಿಸಲೆತ್ನಿಸುವುದಿದೆ. “ಚಂಡಮಾರಿ ದೇವತೆಯ ಅಷ್ಟೋತ್ತರ ಶತನಾಮಾವಳಿಗಳಲ್ಲಿ ‘ಬಳ್ಳಾರಿ’ ಎಂಬ ಹೆಸರೂ ಒಂದು. ಬಳಾರಿಯು ವನಮಾಲಿನಿ. ಪಶುಬಲಿ, ನರಬಲಿಗಳಿಲ್ಲದೇ ತೃಪ್ತಳಾಗುವುದಿಲ್ಲ. ಬಳಾರಿಯು ಒಲಿದವರಿಗೆ ನಾರಿ, ಮುನಿದವರಿಗೆ ಮಾರಿ. ಬಳ್ಳಾರಿ, ಮಾರಿ ದೇವತೆಯು ನಿಲಯವಿದ್ದ ವನದಲ್ಲಿ ನಿರ್ಮಿತವಾದ

ಊರು. ಕಾಲಕ್ರಮದಲ್ಲಿ ಬಳ್ಳಾರಿ ಆಗಿರಬಹುದೆ ? ಇದು ಒಂದು ಊಹೆ ಮಾತ್ರ" ಎಂದು ಅವರ ಅಭಿಪ್ರಾಯ (`ಐತಿಹಾಸಿಕ ಲೇಖನಗಳು`. ಪು. ೩೭೫). ಬಳರಿ ಅಷ್ಟೋತ್ತರ ನಾಮಾವಳಿಗಳಲ್ಲಿ ಸೇರುವಷ್ಟರ ಮಟ್ಟಿಗೆ ಖ್ಯಾತಳಾಗಿದ್ದಳು. `ಬಳರಿ`ಯಿಂದ ಬಳ್ಳಾರಿ' ಊರ ಹೆಸರಾಗಿರಬೇಕೆಂದು ಊಹಿಸುವುದು ಉಚಿತವೆಂದೇ ತೋರುತ್ತದೆ. ಈ ಜಿಲ್ಲೆಯ ಇನ್ನೂ ಹಲವು ಕಡೆ ಇಂಥ ನಿದರ್ಶನಗಳಿವೆ. ಪಂಪಮ್ಮನಿಂದ `ಪಂಪಿ' (ಹಂಪಿ), ಹುಲಿಗೆಮ್ಮನಿಂದ `ಹುಲಿಗಿ`, ಉಚ್ಚಂಗೆಮ್ಮನಿಂದಾಗಿ `ಉಚ್ಚಂಗಿದುರ್ಗ` ಇತ್ಯಾದಿ. ಜೋಯಿಸರು ಊಹಿಸುವಂತೆ ಬಳಾರಿಯು `ದುರಗಮ್ಮ`ನೇ ಹೊರತು `ಮಾರಿ'ಯಲ್ಲ. ನಯಸೇನ ಮಾರಿಯ ಜತೆ ಬಳರಿಯನ್ನು ಪ್ರತ್ಯೇಕವಾಗಿ ಹೆಸರಿಸುತ್ತಾನೆ. ಜನಪದರಲ್ಲೂ ಬಳಾರಿ ದುರಗಮ್ಮನೆಂಬ ಹೆಸರೇ ನಿಂತಿದೆ ಹೊರತು ಬಳಾರಿ ಮಾರೆಮ್ಮ ಎಂದಿಲ್ಲ. ಬಳ್ಳಾರಿ ಜಿಲ್ಲೆಯ ಶಿರಗುಪ್ಪ ತಾಲೂಕಿನಲ್ಲಿ, 'ನೀ ಬಾಳ ಸುಳ್ಳ ಬಳಾರಿ' ಎಂಬಂಥ ಮಾತುಗಳಿವೆ. ಬಳ್ಳಾರಿಯಿಂದ ೪೦ ಕಿ.ಮಿ. ದೂರದ ಹಳೇಕೋಟೆಯಲ್ಲಿ `ಬಳ್ಳಾರ‍್ಯಾರ ಓಣಿ' ಎಂಬ ಬೇಡರ ಕೇರಿಯಿದೆ. ಇವರು ಬಳ್ಳಾರಿಯಿಂದ ಬಂದು ನೆಲೆನಿಂತವರೇನಲ್ಲ. ಈ ಓಣಿಯ ಜನರ ಹೆಸರುಗಳಲ್ಲಿ ಕೂಡ (`ಬಳ್ಳಾರಿ ಕನಕಪ್ಪ', `ಬಳ್ಳಾರಿ ಮಲ್ಲಪ್ಪ' ಮುಂತಾಗಿ) ಬಳ್ಳಾರಿ ಎಂಬ ಪದ ಬರುತ್ತದೆ. ಇದರಿಂದ ಒಂದು ಊಹೆ ಸಾಧ್ಯವಿದೆ. ಹಿಂದಿನ ಬಳರಿ ಕುಲವೇ ಇಲ್ಲಿ ಹೀಗೆ ಮನೆತನದ ಹೆಸರಾಗಿ ಉಳಿದಿರಬಹುದೇ ? ವಲಸೆಗಾರರಾಗಿದ್ದ ಬೇಡರ ದೈವವಾಗಿತ್ತೇ 'ಬಳರಿ' ? ಬಳ್ಳಾರಿ ಜಿಲ್ಲೆಯ ಹೊಸಪೇಟೆಯ `ಬಳ್ಳಾರಿ ದುರಗಮ್ಮ'ನಿರುವುದೂ ಬೇಡರಕೇರಿಯಲ್ಲಿ.

ಒಟ್ಟಾರೆ ಈ ವಿಷಯದ ಚರ್ಚೆ ಇಷ್ಟಕ್ಕೇ ನಿಲ್ಲುವುದಿಲ್ಲ. ಬೇರೆ ಬೇರೆ ನೆಲೆಗಳಲ್ಲಿ ಇನ್ನೂ ಚರ್ಚೆಯನ್ನು ಶೋಧನೆಯ ಮೂಲಕ ಬೆಳೆಸುವ ಅವಕಾಶವಿದೆ.

(ಹಳೇಕೋಟೆಗೆ ಸಂಬಂಧಿಸಿದ ಮಾಹಿತಿಯನ್ನು ಒದಗಿಸಿದವರು ಪ್ರೊ. ವೀರಯ್ಯ. ಅವರಿಗೆ ಕೃತಜ್ಞ.)

● ▼

ಎಸ್. ಎಸ್. ಹಿರೇಮಠ, ಕನ್ನಡ ಪ್ರಾಧ್ಯಾಪಕ, ಎ.ಡಿ.ಬಿ. ಕಾಲೇಜು,
ಹರಪನಹಳ್ಳಿ - ೫೮೩ ೧೩೧ ಜಿ. ದಾವಣಗೆರೆ

ಸಾವು ಹನಿ ಹನಿ

ಕವಿತೆ - ೯

ಸಿದ್ಧರಾಮ ಹಿರೇಮಠ

೧ ಬದುಕಿನ
ಮುತ್ತಿಗೆ
ಸಾವಿನ ಚಿಪ್ಪು !

೨ ನಿನಗೆ
ತುಟಿಯೊತ್ತಿದೆ.
ಸಾವು ಸಹ
ಕಣ್ಮುಚ್ಚಿತು !

೩ ಸಾವು
ಬಾಗಿಲು ತಟ್ಟಿದೊಡನೆ,
ತೆರೆದೆ, ಕೇಳಿದೆ.
ಏನಯ್ಯಾ,
ಎಂದಾದರೂ ಯಾರನ್ನಾದರೂ
ಪ್ರೀತಿಸಿದ್ದೀಯಾ ಎಂದು
ಅಂದು ಹೋದ ಸಾವು
ಇನ್ನೂ ಮರಳಿಲ್ಲ !

● ▼

ಸಿದ್ಧರಾಮ ಹಿರೇಮಠ, ಕನ್ನಡ ಉಪನ್ಯಾಸಕರು, ಬಾಪೂಜಿನಗರ,
ಕೂಡ್ಲಿಗಿ - ೫೮೩ ೧೩೫ ಜಿ. ಬಳ್ಳಾರಿ. ✆ : ೦೮೩೯೧ - ೩೪ ೦೦೧೧

ಹಳಸದ ವಿನಯ

ಬಿ. ಆರ್. ಪೋಲೀಸ್‌ಪಾಟೀಲ

ಲಲಿತ ವಿನಯ

ಬರೆಯಲು ಕುಳಿತುಕೊಳ್ಳುತ್ತಲೆ ಸತ್ಯಕಾಮರ ನೆನಪಾಗುತ್ತದೆ, ಒಂದು ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿ ಅವರು ಆಡಿದ ಮಾತುಗಳು ನೆನಪಾಗುತ್ತವೆ :

ಸಂತಾನಕ್ಕೆ ಒಂದು ಅಣು ಸಾಕು / ಸರ್ಜನೆ ಮಾಡಿ
ಉಳಿದುದ್ದನ್ನೆಲ್ಲ / ವಿಸರ್ಜನೆ ಮಾಡಿ

ನಾನು ಕವಿಯಲ್ಲ ಎಂದು ಹೇಳುತ್ತಲೆ ಕಾವ್ಯ ಬದುಕಿದ ಈ ಅಪ್ಪಟ ಮನುಷ್ಯನ ಸಂಗ ಹೆಜ್ಜೇನು ಸವಿದಂತೆ. ಇಂದು ಸಹಸ್ರ ಸಹಸ್ರ ಸಾಕ್ಷರರ ಅತ್ಯಾಚಾರಕ್ಕೆ ಸಿಕ್ಕು ನರಳುತ್ತಿರುವ ಕಾವ್ಯಕನ್ನಿಕೆಯ ದಾರುಣ ಸ್ಥಿತಿಗೆ ಏನೆನ್ನಬೇಕೊ ತಿಳಿಯದು.

ನೂರು ಸಾಲು ಬರೆದು ಒಂದೂ ಉಳಿಯದಂತಿರುವುದಕ್ಕಿಂತ ಒಂದೇ ಸಾಲು ಬರೆದು ಅದನ್ನು ಉಳಿಸಿಕೊಂಡರೆ ಸಾಕು ಎನ್ನುವ ನೀತಿ ಹೆಚ್ಚು ಅಪೇಕ್ಷಿತ. ಶಬ್ದಾಘಾತಕ್ಕೆ ಸಿಕ್ಕು ಚೆಲ್ಲಾಪಿಲ್ಲಿಯಾಗಿ ಬಿದ್ದ ಹೆಣಗಳ ನಡುವೆ ಬದುಕಿದವರನ್ನು ಉಳಿಸಿಕೊಳ್ಳುವ ಕ್ರಿಯೆ ಅನೂಚಾನವಾಗಿ ನಡೆದುಕೊಂಡು ಬಂದಿದೆ. ಪ್ರಾತಿನಿಧಿಕ ಸಂಕಲನಗಳ ಮೂಲಕ ಕಾವ್ಯದ ಎಲ್ಲವೂ ಮುಗಿದಿಲ್ಲ, ಮುಗಿಯುವುದೂ ಇಲ್ಲ. ಸೃಷ್ಟಿಯ ನಿಗೂಢತೆ ಇರುವ ವರೆಗೆ ಕಾವ್ಯಕ್ಕೆ ಸಾವಿಲ್ಲ. ಒಳ್ಳೆಯ ಕಾವ್ಯ ಚಿತ್ರಗಳ ಮೂಲಕ ಮಾತಾಡುತ್ತದೆ, ಪರಿಕಲ್ಪನೆಗಳನ್ನು ಶಬ್ದಗಳ ಮೂಲಕ ಹೇರುವುದಿಲ್ಲ.

ಅವಸರಕ್ಕೂ ಆಗೂದಲ್ಲ, ಸುಸ್ತೀಗೆ ಬಾಗೂದಲ್ಲ
ಬಾ ಅಂದಾಗ ಬರೂದಲ್ಲ, 'ಬೇಕು' ಅಂದಾಗ ಒದಗೂದಲ್ಲ
ಏಸೋ ಗಳಿಗಿ ಹೆಪ್ಪ ಕರಗಿ / ಹರದು ಬರೂದು ಕವಿತಾ

ಇದು ನನ್ನ ನಂಬಿಕೆ. Introspection (ಒಳಗೆ ನೋಡಿಕೊಳ್ಳುವುದು) ಕಾವ್ಯದ ಮುಖ್ಯಗುಣ. ಇದು ಒಂದು ಪರಿ. ನಮ್ಮನ್ನು ನಾವು ನೋಡಿಕೊಳ್ಳಬೇಕಾದರೆ ನಮ್ಮ ಸ್ನೇಹಿತರ ಮತ್ತು ನಮ್ಮ ಶತ್ರುಗಳ ಕಣ್ಣಿನಿಂದ ನೋಡಬೇಕು ಎನ್ನುವುದು ಇನ್ನೊಂದು. ಅಭಿವ್ಯಕ್ತಿ ಅಹಂಕಾರ ಅಲಂಕಾರ ಎನ್ನಿಸಿದ ಕ್ಷಣವೆ ಅದರ ಬಳಕೆಯನ್ನು ನಿಲ್ಲಿಸಬೇಕು. ಯಾಕೆಂದರೆ ಕಾವ್ಯದಲ್ಲಿ ಅಹಂಕಾರದ ವಾಸನೆ ಬಂದ ಗಳಿಗೆಯೇ ಅದರ ಬೆಳವಣಿಗೆ ನಿಂತುಬಿಡುತ್ತದೆ. ಅಧ್ಯಾತ್ಮ, ಅನುಭಾವ, ಅನುಭೂತಿ ಬರಹಕ್ಕೆ ಹೊಳಪು ನೀಡುತ್ತವೆ, ಬಾಳಿನ ಬಟ್ಟೆ ಹಸನುಗೊಳಿಸುತ್ತವೆ.

ಇಂದು ಬರೆಯುತ್ತಿರುವ ಹಲವು ಕವಿಗಳಿಗೆ ನವೋದಯದ ಗೇಯತೆಯ ವ್ಯಾಮೋಹ ಕಡಿಮೆಯಾಗಿಲ್ಲ. 'ಗೇಯತೆ ಕಾವ್ಯವನ್ನು ಕೊಲ್ಲುತ್ತದೆ. ಹಾಡು ಎಂದೂ ಕಾವ್ಯವಾಗುವುದಿಲ್ಲ' ಎನ್ನುತ್ತಾರೆ ರಾಮಚಂದ್ರಶರ್ಮ.

'ದಣಿದು ಬೇಸತ್ತಾಗ, ದುಡಿದುಡಿದು ಸತ್ತಾಗ / ಜಗಕ ಹಿಗ್ಗಿನ ಹಾಡ ಹೇಳಾಂವ'

ಎನ್ನುತ್ತಾರೆ ವರಕವಿ ಅಂಬಿಕಾತನಯದತ್ತ. ಈ ವಾದ ಏನೇ ಇರಲಿ ಗೇಯತೆ ಕಾವ್ಯದ ಗುಣವೂ ಹೌದು. ದೌರ್ಬಲ್ಯವೂ ಹೌದು.

ಮೂಕರೂ ಓದಿ ಆನಂದಿಸುವಂಥ ಕಾವ್ಯ ಎಲ್ಲ ಕಾಲಕ್ಕೂ ಸ್ವಾಗತಾರ್ಹ. ಕಾವ್ಯ ಕಟ್ಟುವುದು ಎಂದರೆ ಪ್ರತಿಮೆಗಳನ್ನು ದುಡಿಸಿಕೊಳ್ಳುವ ಪ್ರಕ್ರಿಯೆ. ಕಾವ್ಯ ಎಂದರೆ ಜೀವಂತ ಸಾಲುಗಳು. ಸಾಲು ಸಾಲಾದ ಪ್ರತಿಮೆಗಳು ಕೂಡಿ ಕುಣಿಯುವುದು.

ಹಸರಂಗಿ ತೊಟ್ಟಾನ, ನೀಲುಡುಗಿ ಹೊದ್ದಾನ
ನಗುಬನದ ತುಂಬ ಹರಡ್ಯಾನ

ಭಗವಂತ, ಸೃಷ್ಟಿಕರ್ತನ ಕುರಿತು ಜನಪದರು ಹಾಡುವ ಈ ಹಾಡು ಕವಿತೆಯಲ್ಲವೆ ? ಕವಿಯಾಗಬೇಕಾದರೆ ಮನುಷ್ಯ ದಾರ್ಶನಿಕನಾಗಬೇಕು, ಸಹೃದಯಿಯಾಗಬೇಕು, ಭೃಂಗವಾಗಬೇಕು, ಎಲ್ಲಕ್ಕಿಂತ ಹೆಚ್ಚಾಗಿ ಆತ ಮನುಷ್ಯನಾಗಬೇಕು. ಕಾವ್ಯ ಬರೆಯದಿದ್ದರೂ ಕಾವ್ಯವನ್ನು ಬದುಕಬೇಕು. ಇದನ್ನೇ ರುಪರ್ಟ್ ಬ್ರೂಕ್ ".....the best of all is to live poetry " ಎಂದಿರುವುದು ಕಾವ್ಯ ಬರೆಯುವುದಕ್ಕಿಂತ ಮಹತ್ಕಾರ್ಯ ಮತ್ತೊಂದಿಲ್ಲ ಎಂದು ಭಾವಿಸುವ ಅಗತ್ಯ ಕಾಣುವುದಿಲ್ಲ.

ಕಾವ್ಯ ಕೇವಲ ಬರಹವಲ್ಲ, ಆನಂದ. ಕವಿಯಾದವ ಭೂತಗಳೂ ಹೋಗಲು ಹೆದರುವ ತಾಣಗಳನ್ನು ಶೋಧಿಸಿ, ಅಲ್ಲಿ ಇದ್ದು, ಮೋಡವಾಗಿ ತೇಲಿ ಭುವಿಯ ಸೌಂದರ್ಯವನ್ನೆಲ್ಲ ಸೂರೆಗೊಂಡು ಆನಂದದ ಅನುಭೂತಿಯನ್ನು ಹೊಂದುವಷ್ಟು ಶಕ್ತಿವಂತನಾಗಿರುತ್ತಾನೆ. ಎಲ್ಲ ಸಮಕಾಲೀನ ಸಾಹಿತ್ಯ ಚಳವಳಿಗಳಿಗೂ ಸಜೀವವಾಗಿ ಸ್ಪಂದಿಸಿ ಯಾವುದರಲ್ಲೂ ತನ್ನ ಕಳೆಕೊಳ್ಳದೆ ಸ್ವೋಪಜ್ಞತೆಯನ್ನು ಉಳಿಸಿಕೊಳ್ಳುತ್ತಾನೆ. ಇಂಥ ಸಮನ್ವಯ ಸಾಧಿಸಿ ನಮ್ಮ ಕಾಲದ ಎಲ್ಲ ಸಾಹಿತ್ಯ ಚಳವಳಿಗಳಿಗೂ ಕೊಂಡಿಯಾಗಿರುವ ಕಣವಿ ಅವರ 'ನಂಬಿಕೆ' ಇದಕ್ಕೊಂದು ಉದಾಹರಣೆ.

ನನ್ನ ನಂಬಿಕೆಯೊಂದು ಆಕಾಶ / ನಿಜ, ಅದಕ್ಕೆ ತಳಬುಡವಿಲ್ಲ. ನಾನೆಷ್ಟು ಬೆಳೆದರೂ
ನನಗೆ ನಿಲುಕುವುದಿಲ್ಲ, ದೂರದಿಂದಲ್ಲದೆ ನಾನದನು
ಮುಟ್ಟಿ ಅನುಭವಿಸಿಲ್ಲ. ಮೇಲೆ ನೋಡದೆ ಸೆಟೆದುಕೊಂಡೇ
ನಡೆದರೂ ಅದು ಸದಾ ನನ್ನ ತಲೆಯ ಮೇಲೆ
ಹಗಲು ಹೊತ್ತಿನಲಿ ಅದರೆಡೆಗೆ ಲಕ್ಷ್ಯವಿಲ್ಲ ನಮ್ಮ ಬದುಕಿನಲಿ
ನಾವು ಮಗ್ನರಾದರೆ ಸಾಕು.

ಈ ನಿಮಗ್ನತೆ ಕಾವ್ಯದ ಗಟ್ಟಿಗುಣ ಹಾಗೂ ಸಂಕೀರ್ಣತೆಯ ನೆಲೆ. 'ಬದುಕು ಮಡಿಯಾಗಿರಲಿ' ಕಾವ್ಯಕ್ಕೆ ಎಂದು ನಡೆದು, ನುಡಿದು ಬದುಕಿನ ಅಪೂರ್ಣತೆಯನ್ನು ಸ್ವೀಕರಿಸಿದ ಕಣವಿಯವರ ಮುಂದಿನವರಾದ ನಾವು ಇಂದು ಸಂಧಿಕಾಲದಲ್ಲಿದ್ದೇವೆ. ನಮ್ಮ ನಮ್ಮ ಹುಡುಕಾಟದಲ್ಲಿದ್ದೇವೆ.

We are what our forefathers ate and what we eat. ಈ 'eat' ಎಂಬ ಪದದಲ್ಲಿರುವ ಸಂಕೀರ್ಣತೆಯ ಬಗ್ಗೆ ಗಮನ ಸೆಳೆಯಲೆಂದು ಈ ಉಕ್ತಿಯನ್ನು ಉದಾಹರಿಸಿದ್ದು. ನಮ್ಮ ಆಹಾರ ಅನ್ನ ಮಾತ್ರ ಅಲ್ಲವಲ್ಲ ! ತಿನ್ನುವುದಷ್ಟೇ ಮುಖ್ಯವಲ್ಲ. ತಿಂದುದನ್ನು ಪಚನ ಮಾಡಿಕೊಂಡು ಅದರ ಫಲಶ್ರುತಿಯನ್ನು ಇತರರಿಗೂ ಹಂಚುವ ಔದಾರ್ಯವೂ ಅಷ್ಟೇ ಮುಖ್ಯ. ಇದನ್ನು ನಮ್ಮ ಹಲವು ಕಾವ್ಯಘಟ್ಟಗಳಲ್ಲಿ ಕಾಣಲು ಸಾಧ್ಯವಾಗಿದೆಯೆ ?

ನಮ್ಮ ಆಧುನಿಕ ಕಾವ್ಯದ ಆರಂಭವನ್ನು ೧೯೨೦ ರ ದಶಕ ಎಂದು ಗುರುತಿಸಿ ೧೯೨೧ ರ ಶ್ರೀಯವರ ಇಂಗ್ಲಿಷ್ ಗೀತಗಳ ಅನುವಾದದಿಂದ ೧೯೪೦ ರ ದಶಕದ ವರೆಗೆ ನವೋದಯ, ೧೯೪೩ ರಿಂದ ೫೦ ರ ವರೆಗೆ ಪ್ರಗತಿಶೀಲ ೧೯೫೦ ರಿಂದ ನವ್ಯ, ನವ್ಯೋತ್ತರ, ದಲಿತ - ಬಂಡಾಯ - ದಿಗಂಬರ ಇತ್ಯಾದಿ ಇತ್ಯಾದಿ ಕಾವ್ಯ ಘಟ್ಟಗಳನ್ನು ಗುರುತಿಸುವ ಪ್ರಯತ್ನ ನಡೆದಿದ್ದರೂ ಇದನ್ನು ಪೂರ್ಣಸತ್ಯವೆಂದು ಒಪ್ಪಲು ನನ್ನ ಪ್ರಜ್ಞೆ ಸಿದ್ಧವಿಲ್ಲ. ನಮ್ಮ ಜನಪದ ಕಾವ್ಯದಲ್ಲಿ, ವಚನಗಳಲ್ಲಿ, ದಾಸರ ಪದಗಳಲ್ಲಿ ಈ ಎಲ್ಲ ಚಳವಳಿಗಳ ಲಕ್ಷಣಗಳನ್ನು ಗುರುತಿಸಬಹುದು.

ಎಲ್ಯಾರ ಶರಣರ ಇಲ್ಲೇ ಕಾಣಸತಾರ
ಮಲ್ಲಿಗ್ಹೂವಿನ್ಯಾಗ ಅಡಗ್ಯಾರ ತಮ್ಮಾ, ಇಲ್ಲೇ ಕಾಣಸುತಾರ

ಈ ಜನಪದ ದ್ವಿಪದಿಯಲ್ಲಿರುವ ಅಮೂರ್ತತೆ ಮತ್ತು–

ಕಲ್ಲು ಕಡುಬವ ಮಾಡಿ, ಮುಳ್ಳ ಸ್ಯಾಂವಿಗಿ ಮಾಡಿ
ಬನ್ನಿ ಎಲಿಯಾಗ ಎಡಿಮಾಡಿ / ಧರುಮುರು
ಉಣ್ಣದಲ್ಹೋಗ್ಯಾರ ವನವಾಸ.

ಈ ತ್ರಿಪದಿಯಲ್ಲಿರುವ ಪ್ರತಿಮಾಸಾಮರ್ಥ್ಯವನ್ನು ಇಂದಿನ ಕಾವ್ಯದಲ್ಲಿ ಎಷ್ಟರ ಮಟ್ಟಿಗೆ ಗುರುತಿಸಲು ಸಾಧ್ಯವಾಗಿದೆ ? ಆದ್ದರಿಂದ ನಮ್ಮ ಆಧುನಿಕ ಕಾವ್ಯ ಆರಂಭವಾಗುವುದು ಜನಪದರಿಂದಲೇ. ನನ್ನ ಇತ್ತೀಚಿನ ಕವಿತೆ 'ಕಾವ್ಯದ ಹೆಣ' ಹೀಗಿದೆ :

ಕಾವ್ಯಲೋಕದ ಆರ್ಯರು ಜನಪದರು
ಆಡುತ್ತ ಹಾಡಿದರು, ಹಾಡುತ್ತ ಕಟ್ಟಿದರು
ಆದ್ಯರು ವಚನಕಾರರು / ನುಡಿದಂತೆ ನಡೆದರು, ನಡೆದು ನುಡಿ ಕಟ್ಟಿದರು
ತಾಯಿಯಾದರು ಆಂದು ದಾಸವರೇಣ್ಯರು / ಬಟ್ಟೆ ಹಸನಗೊಳಿಸಿ ಹೊಟ್ಟೆ ತಣ್ಣಗಿಟ್ಟರು:
ನವೋದಯ ಪಾಲಕರು / ಆದರ್ಶ ಬಿತ್ತಿದರು, ಸ್ವಾತಂತ್ರ್ಯ ಮೆಚ್ಚಿದರು
ನವ್ಯರು ಚಾಲಕರು / ಸವೆದಷ್ಟು ದಾರಿ ಕ್ರಮಿಸಿದರು
ನವ್ಯೋತ್ತರರು ಉತ್ತರರು ಎಲ್ಲ / ಮುಗಿದ ಮೇಲೆ ಬಂದರು, ಹೋದರು,
ನಿರ್ವಾಹಕರು ದಲಿತ - ಬಂಡಾಯಿಗಳು
ಬಂದಷ್ಟು ಸಾಕೆಂದು ಕರೆದಲ್ಲಿ ಹೋದರು. / ಸಾಗಿತ್ತು ಹೀಗೆ ಕಾವ್ಯದ ಬಸ್ಸು
ಗಬ್ಬದ ಚೇಳಿನಂತೆ. / ಎದುರಿಗೆ ಬಂತು ?
ಕಂಜ್ಯೂಮರ್ ಗೂಡ್ಸ್ ಹೊತ್ತ ಲಾರಿ.
ರಸ್ತೆ ಬಿಡಲಿಲ್ಲ ಇಬ್ಬರೂ / ಬಿದ್ದಿವೆ ನೋಡಿ ಚೆಲ್ಲಾಪಿಲ್ಲಿ
ಕಾವ್ಯದ ಹೆಣ / ಎಲ್ಲೆಂದರಲ್ಲಿ !

ನಮ್ಮ ನವ್ಯಕಾವ್ಯ ಎಷ್ಟು ಅಮೂರ್ತವಾಗಬಯಸಿತೊ ಅಷ್ಟು ಆಗಲಿಲ್ಲ. ಎಷ್ಟು ಸಂಕೀರ್ಣವಾಗಬಯಸಿತೊ ಅಷ್ಟು ಸಂಕೀರ್ಣವಾಗಲಿಲ್ಲ. ಆದ್ದರಿಂದ ಬಾಹುಳ್ಯವನ್ನೇ ಬಹುದೊಡ್ಡ ಸಾಧನೆಯೆಂದು ಭಾವಿಸಬೇಕಾಗಿಲ್ಲ. ಇಂದು ನಾವು ನೋಡುತ್ತಿರುವುದು ಕಾವ್ಯವೇ, ಕಾವ್ಯದ ಹೆಣವೆ ? ಎಂಬ ಪ್ರಶ್ನೆ ಕಾಡುತ್ತದೆ. ಹೀಗೆಂದ ಮಾತ್ರಕ್ಕೆ ಒಳ್ಳೆಯದು ಇಲ್ಲವೆಂದಲ್ಲ. ಆದರೆ ಅದು ಅದೆಷ್ಟು ಅಪರೂಪವಾಗುತ್ತಿದೆಯಲ್ಲ !

"ಏಕಾಗ್ರತೆ, ಅಮೂರ್ತಕ್ಕೆ ಆಕಾರ ಕೊಡುವ ಮೂರ್ತ ಪ್ರತಿಮೆಗಳ ಸೃಷ್ಟಿ, ವಚನಕಾರರ ದರ್ಶನದ ಸ್ಪಷ್ಟತೆ, ನಿರಾಭರಣ ಸುಂದರ ಭಾಷೆ. ಲಯದ ನಿಯಂತ್ರಣದಲ್ಲಿ ಹುಟ್ಟಿಕೊಳ್ಳುವ ಅರ್ಥ ಕ್ರಿಯೆ, ಮೌನ ಹೊರಡಿಸುವ ಶಬ್ದ..." ಇವು ಕಾವ್ಯದ ಶ್ರೇಷ್ಠ ಗುಣಗಳು ಎನ್ನುತ್ತಾರೆ ಜಿ. ಎಸ್. ಆಮೂರ್ ಅವರು. ಮಾತು ಮೌನಕ್ಕೆ ಶರಣಾಗದ ಹೊರತು ಅರ್ಥ ಹೊರಡುವುದು ಕಷ್ಟ. ಅಥವಾ ಮಾತನಾಡಿದರೂ ಮಾತಿನತ್ತ ನಿಗಾ ಇಡದಿದ್ದರೆ ಮಾತು ಪೊಳ್ಳಾಗುತ್ತದೆ ಎಂಬುದನ್ನು ಜರ್ಮನ್ ವಿಚಾರವಾದಿ, ತತ್ತ್ವಜ್ಞಾನಿ Ludwig Wittgenstein ಬಹಳಷ್ಟು ಮಾರ್ಮಿಕವಾಗಿ ಹೇಳಿದ್ದಾನೆ : "Don't for heaven's sake be afraid of talking nonsense ! but you must pay attention to your nonsense." ಲಕ್ಷ್ಯಗೊಟ್ಟು ಆಡುವ 'ನಾನ್‌ಸೆನ್ಸ್' ಕೂಡ ಸಾಕಷ್ಟು 'ಸೆನ್ಸ್' ನೀಡಬಲ್ಲುದು ಎಂಬುದನ್ನು ಅರಿತು ಅಭಿವ್ಯಕ್ತಿಯಲ್ಲಿ ತೊಡಗಬೇಕಲ್ಲ !

ಎಷ್ಟೇ ಪ್ರಯತ್ನಪಟ್ಟರೂ ಕವಿ ತನ್ನನ್ನು ಇಡಿಯಾಗಿ ಒಂದೇ ಕೃತಿಯಲ್ಲಿ ಅಭಿವ್ಯಕ್ತಗೊಳಿಸಿ (ಅನಾವರಣಗೊಳಿಸಿ) ಕೊಂಡು ಹಗುರಾಗುವುದು ಅಸಾಧ್ಯ. ಇದನ್ನೇ ಅಂಬಿಕಾತನಯದತ್ತರು 'ಹಳಸದ ವಿನಯ' ಎಂದು ಕರೆದಿರಬೇಕು. ಇಂಥ ವಿನಯವನ್ನು ಉಳಿಸಿಕೊಂಡ ಕವಿ ತಾಳುತ್ತಾನೆ. ಇಂಥ ಕವಿತೆ ಬದುಕುತ್ತದೆ.

ಬಿ. ಆರ್. ಪೋಲೀಸ್‌ಪಾಟೀಲ, ವಾತ್ಸಲ್ಯ, ಬನಹಟ್ಟಿ - ೫೮೭ - ೩೧೧, ಜಿ. ಬಾಗಲಕೋಟೆ

ಬಯಲು

ಯು. ಎನ್. ಸಂಗನಾಳಮಠ

ಬಸವಾದಿ ಶರಣರ ಮಹಾಕ್ರಾಂತಿಯನ್ನು ಅಚ್ಚಗನ್ನಡದಲ್ಲಿ, ತಿರುಳ್ಗನ್ನಡದಲ್ಲಿ ಹೇಳಬೇಕೆಂದರೆ ಆ ಶಬ್ದ ಖಂಡಿತವಾಗಿ 'ಬಯಲು'. ಬಯಲು ವಿಶ್ವದಷ್ಟೇ ಅನಂತವಾದ ಪದ. ಪ್ರೊ. ಎಲ್. ಬಸವರಾಜು ಅವರು ಬಯಲಿಗೆ ಈ ಕೆಲವು ಅರ್ಥಗಳನ್ನು ಕೊಟ್ಟಿದ್ದಾರೆ– ಆಕಾಶ, ತೆರವಾದ ಪ್ರದೇಶ, ಶೂನ್ಯ ಪ್ರದೇಶ, ಅಮೂರ್ತ, ಅದೃಶ್ಯ, ನಿರಾಕಾರ, ಸರ್ವಶೂನ್ಯ, ಸಮಾಧಿ, ಪರಬ್ರಹ್ಮ ಪೂರ್ಣಸ್ಥಿತಿ, ಸಿದ್ಧಸ್ಥಿತಿ, ಮುಕ್ತಿ, ಶಿವ, ಪರಮಪರವಸ್ತು. ಅಲ್ಲಮಪ್ರಭುವಿನ ವಚನಗಳ ಉಸಿರು 'ಬಯಲು' ಎನ್ನುವ ಪದ ಅಲ್ಲಮಪ್ರಭುವಿನ ಶೂನ್ಯಸಂಪಾದನೆ ಬಗ್ಗೆ ಮಾತನಾಡುತ್ತೇವೆ. ಓದುತ್ತೇವೆ. ವಿಮರ್ಶಕರು ವಿಮರ್ಶಿಸುತ್ತಾರೆ. ಶೂನ್ಯ 'ನಿರ್ವಾಣ' ಎನ್ನುವ ಅದ್ಭುತ ಪರಿಕಲ್ಪನೆಗಳನ್ನು ತಂದುಕೊಟ್ಟವರಲ್ಲಿ ಬುದ್ಧನು ಒಬ್ಬನು. ಬುದ್ಧನ ಶೂನ್ಯ, ನಿರ್ವಾಣ ಪದಗಳು ಸಂಸ್ಕೃತ ಪರಂಪರೆಯಲ್ಲಿ ಸವೆದು ಸವಕಲಾಗಿವೆ. ಶಿವಶರಣರ ಬಯಲು ಪದವಾದರೋ ನಮ್ಮ ನಾಡಿನಲ್ಲಿ ಜನಪದರ ಬಾಯಲ್ಲಿ ಜೀವಂತವಾಗಿದೆ. ನಮ್ಮ ಹಳ್ಳಿಯ ಮುಗ್ಧರು 'ಈಗ ಬಯಲಾಯಿತು, ಬಗೆಹರಿಯಿತು' ಎನ್ನುತ್ತಾರೆ.

ಜ. ಚ. ನಿ. ಯವರ ಬಯಲುಬಣ್ಣ ಎಂಬ ಪದಗಳು ನಿರಾಕಾರ ಸಾಕಾರ ಪದಗಳನ್ನು ಪ್ರತಿನಿಧಿಸುತ್ತವೆ. ಬಯಲು ಬಣ್ಣವಾದರೆ ಶರಣ, ಬಣ್ಣ ಬಯಲಾದರೆ ಲಿಂಗಾನುಭವಿ, ಉಭಯಗಳು ಒಂದಾದರೆ ಐಕ್ಯ. ಬಯಲು ಬಣ್ಣಗಳೆರಡನ್ನೂ ಒಂದಾಗಿ ಅರಿದು ಅಳವಡಿಸಿಕೊಂಡರೆ ಅದು ನಿಜದರಿವು. ಅದುವೇ ಪರಮಣ್ಣನ ಪರಮಾನುಭಾವ.

ಬಯಲ ರೂಪ ಮಾಡಬಲ್ಲಾತನೆ ಶರಣನು
ಆ ರೂಪ ಬಯಲ ಮಾಡಬಲ್ಲಾತನೆ ಲಿಂಗಾನುಭಾವಿ
ಬಯಲ ರೂಪ ಮಾಡಲರಿಯದಿದ್ದರೆ ಎಂತು ಶರಣನೆಂಬೆ ?
ಆ ರೂಪ ಬಯಲ ಮಾಡಲರಿಯದಿದ್ದರೆ ಎಂತು ಲಿಂಗಾನುಭಾವಿಯೆಂಬೆ !
ಆ ಉಭಯವ್ವೊಂದಾದರೆ ನಿಮ್ಮಲ್ಲಿ ತೆರಹುಂಟೆ ! ಕೂಡಲಸಂಗಮದೇವಾ ?

ಬಯಲ ಬಣ್ಣಗೊಂಡವ ಶರಣ. ಜಡದಿಂದಾದವನಲ್ಲ ಶರಣ. ಜಡವನ್ನು ಅಜಡವನ್ನಾಗಿಸಿಕೊಂಡವ ಶರಣ. ಇದು ಬಯಲ ಅರ್ಥವ್ಯಾಪ್ತಿಯನ್ನೂ ತಿಳಿಸುತ್ತದೆ.

ಇನ್ನು, ಅಲ್ಲಮ ಪ್ರಭುದೇವರ ಬೆಡಗಿನ ಈ ಕ್ಲಿಷ್ಟ ವಚನವನ್ನು ನೋಡಿ–

ಬಯಲು ಬಯಲಾಗಿ ಬಯಲಾಯಿತ್ತಯ್ಯಾ
ಬಯಲು ಜೀವನ ಬಯಲು ಭಾವನೆ
ಬಯಲು ಬಯಲಾಗಿ ಬಯಲಾಯಿತ್ತಯ್ಯಾ
ನಿಮ್ಮ ಪೂಜಿಸಿದವರು ಮುನ್ನವೇ ಬಯಲಾದರು
ನಾ ನಿಮ್ಮ ಪೂಜಿಸಿ ಬಯಲಾದೆ ಗುಹೇಶ್ವರ.

ಪ್ರಭುದೇವರು ಈ ವಚನದಲ್ಲಿ ಸೃಷ್ಟಿಯು ವಿಕಾಸವಾದ ರೀತಿಯನ್ನು ಮತ್ತು ಹಲವು ಜೀವಾತ್ಮರು ಮತ್ತೆ ತಮ್ಮ ಮೂಲದೊಡನೆ ಒಂದಾಗುವ ರಹಸ್ಯವನ್ನು ಪ್ರತಿಪಾದಿಸುತ್ತಾರೆ. ಇಲ್ಲಿ ಬಯಲು ಎಂದರೆ 'ಪರಬ್ರಹ್ಮಶಕ್ತಿ.' ಅಂಬರ, ಪರಿಪೂರ್ಣಸ್ಥಿತಿ, ಮುಕ್ತಿ, ಪರಮಪರವಸ್ತು ಎಂದು ನಾನಾ ಅರ್ಥದಲ್ಲಿ ಉಪಯೋಗಿಸಿದ್ದಾರೆ. ಈ ರೀತಿ ಶಬ್ದಗಳೊಡನೆ ಆಟವಾಡುವ ಈ ತರಹದ ಬೆಡಗಿನ ವಚನಗಳನ್ನು ಅರ್ಥೈಸುವುದು ಬಹಳ ಕಷ್ಟ. ಯಾವುದೇ ಒಂದು ಸಿದ್ಧಾಂತದ ಹಿನ್ನೆಲೆಯಲ್ಲಿ ರಚಿಸಿರುತ್ತಾರೆ.

ನಿರಾಳ ನಿಶ್ಶೂನ್ಯವೆಂಬ ನೇಣು ಹರಿಯಲೊಡನೆ
ಆ ಶಿಶುವು ತೊಟ್ಟಿಲ ಸಹವಾಗಿ ಬಟ್ಟ ಬಯಲಾಯಿತ್ತು
ಆ ಶಿಶುವು ತೊಟ್ಟಿಲ ಸಹವಾಗಿ ಬಟ್ಟ ಬಯಲಾದೊಡನೆ
ಅಖಂಡೇಶ್ವರನೆಂಬ ಬಯಲು ಬಟ್ಟಬರಿಯಬಟ್ಟ ಘನ ಗಂಭೀರ ಮಹಾಬಯಲೊಳಗೆ
ನಾನೆತ್ತ ಹೋದೆನೆಂದರಿಯೆನು.

ಬೇರೆ ಬೇರೆ ದೃಷ್ಟಿಯಿಂದ ಕೂಡಿದ ಆಧ್ಯಾತ್ಮಿಕ ಅನುಭವ ಇಲ್ಲಿದೆ. ಹೀಗೆ ಬಟ್ಟಬರಿಯಬಟ್ಟ ಘನಗಂಭೀರ ಮಹಾಬಯಲೊಳಗೆ 'ಅಡಗಿ ಎತ್ತ ಹೋದೆನೆಂಬ ಭಾವನೆಯೂ ಅಳಿದ ಆನಂದದ ನಿಲವನ್ನು ಪಡೆಯುವುದನ್ನೇ ಶರಣರು ತಮ್ಮ ಸಾಧನೆಯ ಮಾರ್ಗದಲ್ಲಿ ರೂಪಿಸಿದ್ದಾರೆ. ಬಯಲೇ ಮೂರ್ತಿಯಾಗಿ ಬಂದ ಆ ಪರಶಿವನನ್ನು ಮಾನವ ರೂಪದಿಂದ ಪೂಜಿಸುವುದಕ್ಕಿಂತ ಬಯಲಿನ ಸಂಕೇತದಿಂದಲೇ ಅನುಸಂಧಾನ ಮಾಡುವುದು ಅವರಿಗೆ ಹೆಚ್ಚು ಪ್ರಿಯವಾಗಿ ತೋರಿತು. ಆ ಬಯಲಿನ ಸಂಕೇತವಾದ ಇಷ್ಟಲಿಂಗವನ್ನು ಕರಸ್ಥಲದಲ್ಲಿಟ್ಟು ಶರಣರು ಪೂಜಿಸುತ್ತಾರೆ–

ಕಾಣಬಾರದ ಲಿಂಗವು ಕರಸ್ಥಲಕ್ಕೆ ಬಂದಡೆ / ಎನಗಿದು ಸೋಜಿಗ ಎನಗಿದು ಸೋಜಿಗ
ಅಹುದೆನಲಮ್ಮೆನು ಅಲ್ಲೆನಲಮ್ಮೆನು/ ಗುಹೇಶ್ವರಲಿಂಗ ನಿರಾಕಾರ/ ಬಯಲು ಆಕಾರವಾದುದೆ

ಇದನ್ನೇ ಅಕ್ಕಮಹಾದೇವಿಯು–

ಪಾತಾಳದಿತ್ತಿತ್ತ ಪಾದಗಳತ್ತತ್ತ / ದಶದಿಕ್ಕು ಇತ್ತಿತ್ತ ದಶಭುಜಗಳತ್ತತ್ತ
ಬ್ರಹ್ಮಾಂಡದಿತ್ತಿತ್ತ ಮಣಿಮಕುಟವತ್ತತ್ತ / ಚೆನ್ನಮಲ್ಲಿಕಾರ್ಜುನಯ್ಯ ನೀವೆನ್ನ ಕರಸ್ಥಲಕ್ಕೆ
ಬಂದು ಚುಳುಕಾದಿರಲ್ಲಾ ಲಿಂಗವೇ.

ಅದೆಂಥ ವ್ಯಾಪಕವಾದ ಅನುಭವ ಆ ಉಪಾಸನೆಯದು !

ಅದನ್ನು ಇನ್ನೂ ಸ್ಪಷ್ಟವಾಗಿ ತೋಂಟದ ಸಿದ್ಧಲಿಂಗೇಶ್ವರರ ಈ ವಚನದಲ್ಲಿ ಕಾಣಬಹುದು :

ಬಯಲ ಮೂರ್ತಿಯ ಮಾಡಿ / ಎನ್ನ ಕರಸ್ಥಲಕ್ಕೆ ಕೊಟ್ಟನಯ್ಯ ಶ್ರೀಗುರು,
ಆ ಬಯಲ ಮೂರ್ತಿಯ ಅಮೂರ್ತಿಯ ಮಾಡಿ / ನ್ನ ಪ್ರಾಣದೊಳಗಿರಿಸಿದನಯ್ಯ ಶ್ರೀಗುರು.
ಬಯಲು ಬಯಲನೇ ಬಯಸಿ ಬಯಲೆಂದೆನಿಸಿ / ಎನ್ನ ಭಾವದಲ್ಲಿರಿಸಿದನಯ್ಯ ಶ್ರೀಗುರು.
ಇದು ಕಾರಣ ಎನ್ನ ಕರಸ್ಥಲ, / ಮನಸ್ಥಲ ಭಾವಸ್ಥಲದಲ್ಲಿ ಧರಿಸಿ
ನಾನು ಅಂಗಲಿಂಗ ಸಂಬಂಧಿಯಾದೆನಯ್ಯ / ಮಹಾಲಿಂಗಗುರುಶಿವಸಿದ್ಧೇಶ್ವರ ಪ್ರಭುವೆ.

ಹೀಗೆ ಶೂನ್ಯವೇ ಮೂರ್ತಿಗೊಂಡು ಬಯಲಿನ ಕುರುಹಾಗಿ ಬಂದ ಇಷ್ಟಲಿಂಗದ ಅನುಸಂಧಾನ ಶರಣರನ್ನು ಕೊನೆಯಲ್ಲಿ ಆ ಬಯಲಿನ ನಿಲವಿಗೆ ತರುತ್ತದೆ. ಅದನ್ನು ಅಲ್ಲಮಪ್ರಭು ಈ ವಚನದಲ್ಲಿ ಅರ್ಥವತ್ತಾಗಿ ಹೇಳಿದ್ದಾರೆ :

ಘನವ ಕಂಡು ಮನವು ಗ್ರಹಿಸಿತ್ತು / ಕಂಡು ಕಂಡು ಮನ ಮಹಾಘನವಾಯಿತ್ತು
ತತ್ತ್ವಲ್ಲೀಯವಾಯಿತ್ತು ತಮಗತವಾಯಿತ್ತು / ಶಬ್ದ ಮುಗ್ಧವಾದುದನೇನೆಂಬೆ ಗುಹೇಶ್ವರಾ
ಮನದ ಕೊನೆಯ ಮೇಲೆ ನೆನೆದ ನೆನಹು
ಜನನಮರಣವ ನಿಲ್ಲಿಸಿ ಜ್ಞಾನಜ್ಯೋತಿಯ ಉದಯ ಭಾನುಕೋಟಿಯ ಮೀರಿ
ಸ್ವಾನುಭವದ ಉದಯ ಜ್ಞಾನಶೂನ್ಯದಲ್ಲಿ ಅಡಗಿದ ಘನವೇನೆಂಬೆನು ಗುಹೇಶ್ವರಾ.

ಸ್ವಾನುಭವದ ನಿಲವು ನಮ್ಮನ್ನು ಜ್ಞಾನಶೂನ್ಯದಲ್ಲಿ ಅಡಗಿಸುತ್ತದೆ. ಈ ಕೆಳಗಿನ ವಚನ ಶೂನ್ಯದ ವ್ಯಾಪಕತೆಯನ್ನು ಮೋಕ್ಷದ ಕಲ್ಪನೆಯನ್ನು ಸುಂದರವಾಗಿ ಮಾಡಿಕೊಡುತ್ತವೆ :

ಕರ್ಪೂರದ ಕಳ್ಳನ ಹುಲ್ಲಿನಲ್ಲಿ ಕಟ್ಟಿರಲು / ಅಗ್ನಿ ಎಂಬ ಹಿತವು ಬಂದು ಬಿಡಿಸಲು
ಪಾಶ ಬೆಂದು ಕಳ್ಳ ತನ್ನಲ್ಲಿಯೇ ಅಡಗಿದನು
ಬಯಲ ಶರಣಂಗೆ ಬಯಲ ಪಾಶ ಬಂದು ಕಟ್ಟಿರಲು
ಬಯಲ ಲಿಂಗ ಬಂದು ಬಿಡಿಸಲು / ಬಯಲು ಬಯಲೇಕವಾಯಿತ್ತು

ಮಹಾಲಿಂಗ ಕಲ್ಲೇಶ್ವರನೆಂಬ ಸಂಪತ್ತು ಸದಾ ಶೂನ್ಯವಾಯಿತ್ತು.

ಹಾವಿನಾಳ ಕಲ್ಲಯ್ಯನ ಈ ವಚನದಲ್ಲಿ – *"ಹುಲ್ಲಿನ ಕಟ್ಟುಗಳು ಬೆಂದು ಬೂದಿಯಾದವು ಕರ್ಪೂರ ಅದರಲ್ಲಿ ಅಡಗಿಹೋಯಿತು. ಹಾಗೆಯೇ ಬಯಲ ಶರಣನಿಗೆ ಬಯಲ ಪಾಶ ಬಂದು ಕಟ್ಟಿತ್ತು. ಬಯಲ ಲಿಂಗ ಬಂದು ಅದನ್ನು ಬಿಡಿಸಿತು. ಆಗ ಬಯಲು ಬಯಲು ಏಕವಾಯಿತು."* – ಹೀಗೆ ಕೇವಲ ಅನುಭವವೇದ್ಯವಾಗಬಹುದಾದ ಅನುಭಾವದ ಮಟ್ಟಕ್ಕೆ ಶರಣರ ಬಯಲಿನ ಕಲ್ಪನೆ ಇರುತ್ತದೆ.

ಇವಿಷ್ಟು ಡಾ. ಎಚ್. ತಿಪ್ಪೇರುದ್ರಸ್ವಾಮಿಯವರು ತಮ್ಮ 'ಶೂನ್ಯಸಂಪಾದನೆ' ಎಂಬ ಗ್ರಂಥದಲ್ಲಿ ಬಯಲಿನ ಬಗ್ಗೆ ವ್ಯಕ್ತಪಡಿಸಿದ ವಿಚಾರಗಳು.

ಕಾಯಕ-ಜಂಗಮ-ಬಯಲು ಒಂದಕ್ಕೊಂದು ಹೇಗೆ ಪೂರಕವಾಗಿವೆ ಎಂಬುದನ್ನು ಅರಿಯುವಾ– ಕಾಯ ಜಡವಾದದ್ದು. ಈ ಕಾಯ ಕಾಯಕ ಕೈಕೊಂಡಾಗ ಜಡ ಚೇತನವಾಗುವದು ಕಾಯಕ. ಆ ಕ್ರಿಯೆಯ ಚೇತನವೇ ಜಂಗಮ. ಜಂಗಮ ಎಂದರೆ ಸದಾ ಚಲಿಸು. ಜಂಗಮ ಸೇವೆ ಎಂದರೆ ಚೈತನ್ಯದ ಉಪಾಸನೆ. ಇದು ಲಿಂಗಪೂಜೆಗಿಂತಲೂ ಶ್ರೇಷ್ಠವಾದದ್ದು. ಇದಕ್ಕೂ ಪೂರಕವಾಗಿ ಈ ಘಟನೆಯನ್ನು ಅವಲೋಕಿಸಬಹುದು :

ಬಸವಣ್ಣನ ಮಹಾಮನೆಗೆ ಪ್ರಭುದೇವ ಸಿದ್ಧರಾಮರು ಜಂಗಮರಾಗಿ ಬಂದಿದ್ದಾರೆ. ಆಗ ಬಸವಣ್ಣ ಲಿಂಗಪೂಜೆಯಲ್ಲಿ ತನ್ಮಯರಾಗಿದ್ದಾರೆ. ಆ ಸಮಯದಲ್ಲಿ ಪರಿಚಾರಕರು ಬಂದು ಯಾರೋ ಜಂಗಮರಿರ್ವರು ತಮ್ಮನ್ನು ಕಾಯುತ್ತಿದ್ದಾರೆ, ತಮ್ಮ ಬರವನ್ನು ಅಪೇಕ್ಷಿಸುತ್ತಿದ್ದಾರೆ ಎಂದಾಗ ಬಸವಣ್ಣ ಅವರನ್ನು ಕರೆದು ಕುಳ್ಳಿರಿಸು ಎಂದನು. ಆಗ ಪರಿಚಾರಕರು ಜಂಗಮರಿಗೆ ನಿವೇದಿಸಿಕೊಂಡಾಗ, ಆಗ ಪ್ರಭುದೇವರು. "ಜಂಗಮವೇ ಪ್ರಾಣವೆಂದುಕೊಂಡವನು ಬಸವಣ್ಣ. ಆ ಜಂಗಮ ಮನೆ ಮುಂದೆ ಬಂದು ನಿಂತಾಗ ತಾನು ಸ್ವಾಗತಿಸದೇ ಪರಿಚಾರಕರನ್ನು ಅಟ್ಟಿ ಕರೆಸುತ್ತಿರುವನಲ್ಲಾ. ಎಷ್ಟು ದುರಹಂಕಾರ. ಇದು ಭಕ್ತನ ಸದಾಚಾರವಲ್ಲ. ಜಂಗಮನಾದವನು ಇಂಥ ಮನೆ ಪ್ರವೇಶಿಸಬಾರದು" ಎಂದರು. ಪರಿಚಾರಕರು ಅವರನ್ನು ಕರೆದು ತರದಿದ್ದಾಗ ಬಸವಣ್ಣ ಪ್ರಭುದೇವರನ್ನು ಹಿಡಿದು ತನ್ನಿ ಎಂದು ಆಜ್ಞಾಪಿಸುತ್ತಾನೆ. ಆದರೆ ಬಯಲೇ ತಾನಾಗಿರುವ ಪ್ರಭುದೇವನು ಹಿಡಿತಕ್ಕೆ ಸಿಕ್ಕಾನೆಯೇ ? ಕೊನೆಗೆ ಜ್ಞಾನಿಯಾದ ಚೆನ್ನಬಸವಣ್ಣನ ಪ್ರೇರಣೆಯಿಂದ ಅರಿವು ಉಂಟಾಗಿ ಶಿವಪೂಜೆಯಿಂದೆದ್ದು ಪ್ರಭುದೇವರಿದ್ದಲ್ಲಿಗೆ ಬಂದು ಕಾಲಿಗೆ ಬಿದ್ದು ಕ್ಷಮೆ ಕೇಳಿದನು.

ಲಿಂಗಪೂಜೆಯಲ್ಲಿ ನಿರತವಾದ ಬಸವಣ್ಣನಿಗೆ ಲಿಂಗಪೂಜೆಗಿಂತ ಜಂಗಮಸೇವೆ ಮುಖ್ಯ. ಸ್ಥಾವರದ ಲಿಂಗಕ್ಕಿಂತಲೂ ಜಂಗಮತತ್ವದ ಜಂಗಮಕ್ಕೆ ಆದ್ಯತೆ ಹೆಚ್ಚು ಎನ್ನುವ ಸಂದೇಶ ಇದೆ. ಕಾಯ ಕಾಯಕದಲ್ಲಿ ಒಳಗಾಗಿ ಜಂಗಮವಾದರೆ ಬಯಲಿನ ಅರಿವು ಉಂಟಾಗುವದು.

ಹೀಗೆ ಪರಶಿವನ ಮೂಲರೂಪವಾದ ಪರಿಪೂರ್ಣತೆಯನ್ನು ಶರಣರು 'ಶೂನ್ಯ' ಮತ್ತು 'ಬಯಲು' ಎಂಬ ಪದಗಳಿಂದ ನಿರ್ದೇಶಿಸಿದ್ದಾರೆ. ಬಯಲೇ ಮೂರ್ತಿಗೊಂಡು ಬಂದ ಆ ಪರಶಿವನನ್ನು ಮಾನವರೂಪದಿಂದ ಪೂಜಿಸುವುದಕ್ಕಿಂತ ಬಯಲಿನ ವ್ಯಾಪಕತೆಯನ್ನು ಸಂಕೇತರೂಪದಲ್ಲಿ ಇಷ್ಟಲಿಂಗದಲ್ಲಿ ಅಡಗಿಸಿ ಅದನ್ನು ಕರಸ್ಥಲದಲ್ಲಿಟ್ಟು ಪೂಜಿಸುತ್ತಾರೆ. ಹೀಗೆ ಇಷ್ಟಲಿಂಗದ ಅನುಸಂಧಾನ ಶರಣರನ್ನು ಕೊನೆಯಲ್ಲಿ ಆ ಬಯಲಿನ ನಿಲುವಿಗೇ ತಂದು ಅನುಭಾವದ ಮಟ್ಟಕ್ಕೆ ಬೆಳೆಯುವದು.

ಆಧಾರಗ್ರಂಥಗಳು : ೧) ಶೂನ್ಯಸಂಪಾದನೆ – ಡಾ. ಎಚ್. ತಿಪ್ಪೇರುದ್ರಸ್ವಾಮಿ. ೨) ವೀರಶೈವದೀಪ್ತಿ – ಡಾ. ಎಚ್. ತಿಪ್ಪೇರುದ್ರಸ್ವಾಮಿ, ೩) ಅಲ್ಲಮವಚನಚಂದ್ರಿಕೆ - ಡಾ. ಎಲ್. ಬಸವರಾಜು, ೪) ಡಾ. ಪೋಲಂಕಿ ರಾಮಮೂರ್ತಿಯವರ ಲೇಖನ, ೫) ಅಲ್ಲಮನ ವಚನಸುಧೆ

▼

●

ಯು.ಎಸ್. ಸಂಗನಾಳಮಠ. ರಾಜ್ಯಶಾಸ್ತ್ರ ಉಪನ್ಯಾಸಕ, ಸರಕಾರಿ ಪದವಿ ಪೂರ್ವ ಕಾಲೇಜು,
ಹೊನ್ನಾಳಿ - ೫೭೭ ೨೧೭, ಜಿ. ದಾವಣಗೆರೆ

ಎರಡು ಕವನಗಳು

ಕವಿತೆ - ೧೦, ೧೧

ರಜಿಯಾ ಡಿ. ಬಿ.

೧. ನೆರಳು

ಐವತ್ತರ ಆಸುಪಾಸಿನ
ಈ ನೆರಳು ನಡೆದಾಗಲೆಲ್ಲಾ
ನರಳಿಸಿ ಕೊರಗಿಸಿ ಕದಲಿಸಿ
ಸಾಗುತ್ತಲಿತ್ತು ಜತೆಜತೆಗೆ
ಎಡೆಬಿಡದೆ !

ಕಣ್ಣನೋಟದಲ್ಲಿ ಕುಕ್ಕಿದವರ
ಮಾತಿನ ತಂತ್ರಗಾರಿಕೆಯ
ಕತ್ತಿ ಮಸೆದವರ–
ಕಂಡು; ಎಚ್ಚೆತ್ತುಕೊಂಡು
ಎದೆಗುಂದದೆ ನಡೆದಿತ್ತು ಎಡೆಬಿಡದೆ
ನೆರಳಾಗಿ
ನೆನೆದಾಗ, ಹೃದಯ ಕೂಗಿದಾಗ

ಬಗೆಬಗೆಯ ನಗೆಯೊಳ ನಕ್ಕರು
ನಂಬಿದವರು
ಕಾಡಿದ್ದರೂ ಕೊಂಕಿದ್ದರೂ
ವಿಚಲಿತವಾಗದ ಈ ನೆರಳು
ಮುಗಿಲಿಗೆ ಏರಿತು
ದಿಟವಾಗಿ ಸಾಗಿತು.

●

೨. ಹುಡುಕಾಟ

ನಮ್ಮ ಧೀಮಂತ ಮಂತ್ರ
ಸಹಿಷ್ಣುತೆ
ದೀಪ ಹಚ್ಚಿ ಹುಡುಕಬೇಕಾಗಿದೆ
ಇಂದು ನಾವು;
ಸಹನೆ ಎಂಬ ತತ್ವಸಾರವನ್ನೇ ತಿರುಚಿ
ದ್ವೇಷದ ರಾಜಾರೋಷ ಗದ್ದಲ ಗೊಂದಲದ
ವಿಚ್ಛಿದ್ರಕಾರಕ ಅಸ್ತ್ರ
ವಾಗಿಸಿಕೊಂಡ ಸ್ವಾರ್ಥಿಗಳ ಧರ್ಮ
ಬಾಹಿರ ಕೃತ್ಯಗಳ ತಡೆಯಲು
ಸಂಯಮದಿಂದಲೇ....
ದೀಪ ಹಚ್ಚಿ ಹುಡುಕಬೇಕಾಗಿದೆ
ಅಹಿಂಸಾವಾದಿ ಮತ್ತೆ ಹುಟ್ಟಿ
ಈ ಸತ್ವ ಉದ್ಘೋಷವಾಗುವವರೆಗೂ
ದೀಪ ಹಚ್ಚಿಯೇ ಹುಡುಕಬೇಕಾಗಿದೆ

▼

ಡಿ. ಬಿ. ರಜಿಯಾ, ಎಸ್‌ಟಿಟಿಕೆ ಆವರಣ, ಶ್ರೀನಿವಾಸನಗರ, ಸುರತ್ಕಲ್ - ೫೭೪ ೧೫೭

ದುರ್ದೈವ

ಕವಿತೆ - ೧೨

ಅಮರೇಶ ಕುಂಬಾರ

ಬಾಯಿದ್ದರೂ ಮೂಕರು
ಕಿವಿಯಿದ್ದರೂ ಕಿವುಡರು
ಕಣ್ಣಿದ್ದರೂ ಕುರುಡರು
ಏನೆಲ್ಲ ಮಾಡುತ್ತ ನೋಡುತ್ತ
ನೋಡುತ್ತ ಇದ್ದು ಸತ್ತಿದ್ದೇವೆ.

ಕಣ್ಣಿಗೆ ಕಂಡದ್ದು ಕಂಡ ಹಾಗೆ
ನೋಡಿದರೂ ನೋಡದ ಹಾಗೆ
ಬಾಯಿಗೆ ಅರಬಿ ತುರುಕಿಕೊಂಡು
ಇಲ್ಲಿ ಬದುಕಿದ್ದೇವೆ.
ನಮ್ಮ ಸುತ್ತಮುತ್ತ ಎಂಥಾ
ಕಲಕು-ಮಲಕುಗಳ, ಘೋರ ದುರಂತಗಳ ನಡುವೆ
ಸಾಗಿ ನಡೆದಿದ್ದೇವೆ
ಚುಕ್ಕಾಣಿ ಇಲ್ಲದ ಹಡಗು.
ಎಲ್ಲಿಗೋ ಗೊತ್ತಿಲ್ಲ ಗುರಿಯಿಲ್ಲ.

ಡಾ. ಅಮರೇಶ ಕುಂಬಾರ, ಗ್ರಂಥಪಾಲಕ, ವಿಸಿಬಿ ಕಾಲೇಜು, ಲಿಂಗಸೂಗೂರು - ೫೮೪ ೧೨೨

ವಸ್ತು - ಶಿಸ್ತು

ಕವಿತೆ - ೧೩

ಎಂ. ಡಿ. ಗೋಗೇರಿ

ನಮ್ಮ ಸುತ್ತ ಮುತ್ತ ಇರುವ
ವಸ್ತು ಬೇರೆ ಬೇರೆ
ಕಲ್ಲು ಕಟಿಗೆ ಮನೆಯ ಇಟಿಗೆ
ಮರಳು ಒರಳು ಹಾರೆ
ಮೇಜು ಕುರ್ಚಿ ಬೆಂಚು ಇವಕೆ
ಘನಗಳೆಂದು ಕರೆವರು
ಸುಳಿವ ಗಾಳಿ ನಮ್ಮ ಉಸಿರು
ಅನಿಲವೆಂದು ಹೆಸರು
ಹರಿವ ನೀರು ಕುಡಿವ ಹಾಲು
ಎಣ್ಣೆ ಬೆಣ್ಣೆ ರಸಗಳು
ರೂಪ ಬದಲು ಮಾಡುವಂಥ
ರಸಿಕ ವಸ್ತು ದ್ರವಗಳು
ಅನಿಲ ಘನ ದ್ರವವೇ ಇರಲಿ
ಇವಕೆ ಭಾರ ಉಂಟು
ಹಿಗ್ಗು ಕುಗ್ಗು ಗುಣವ ಹೊಂದಿ
ನೆಲೆಯ ಪಡೆವುದುಂಟು
ಯಾವ ವಸ್ತು ಏನೆ ಇರಲಿ
ಶಿಸ್ತಿನಿಂದ ಹೊಂದಿರೆ
ಕಾಂಬುದೆಲ್ಲ ಅಂದ ಚೆಂದ
ಮನೆಗೆ ಅತಿಥಿ ಬಂದರೆ.

ಎಂ. ಡಿ. ಗೋಗೇರಿ, ನವಅಯೋಧ್ಯಾನಗರ, ಹುಬ್ಬಳ್ಳಿ - ೫೮೦ ೦೩೨ ✆ : ೦೮೩೬ - ೩೦ ೪೧೮೩

ಪ. ಲೋ. ಬಂಕಾಪುರ

ಮೋಹನ ಕಳಸದ

ಪತ್ರಕರ್ತರ ಕರ್ತ

ಗತಕಾಲದ ಪತ್ರಿಕಾ ಪ್ರಪಂಚದಲ್ಲಿ ಪ. ಲೋ. ಬಂಕಾಪುರ ಅವರು ಒಂದು ಹೆಗ್ಗುರುತು. ಬರಹಗಾರರ ಕೊರತೆ ಇದ್ದಾಗ ಲೇಖನಿ ಹಿಡಿದವರು. ಹರಿತವಾದ ಬರವಣಿಗೆ ಇವರ ವೈಶಿಷ್ಟ್ಯ. ಭ್ರಷ್ಟ ರಾಜಕಾರಣಿಗಳಿಗೆ ಸಿಂಹಸ್ವಪ್ನವಾಗಿದ್ದರು. ವೃತ್ತ ಪತ್ರಿಕಾಲೋಕ ಜಾಗೃತವಾಗದ ಸಮಯದಲ್ಲಿ ಮಿಂಚಿದವರು. ಉತ್ತರ ಕರ್ನಾಟಕದಲ್ಲಿ ಪತ್ರಕರ್ತ ಪಿತಾಮಹರು. ನೂರಾರು ಯುವ ಪತ್ರಕರ್ತರನ್ನು ಸೃಷ್ಟಿಸಿದವರು. ಹತ್ತಾರು ಪತ್ರಿಕೆಗಳನ್ನು ಹುಟ್ಟುಹಾಕಿದವರು. ಪತ್ರಿಕೋದ್ಯಮದಲ್ಲಿ ಹಲವಾರು ಹೊಸ ಕೊಡುಗೆ ನೀಡಿದವರು. ಪತ್ರಿಕಾ ವ್ಯವಸಾಯಕ್ಕೆ ಜೀವಾಳವಾದ ಭಾಷಾಂತರ ಕಲೆ ಇವರಿಗೆ ಕರತಲಾಮಲಕ. ತರ್ಜುಮೆ ಕೆಲಸಕ್ಕೆ ಸ್ಪಷ್ಟವಾದ ಇಂಗ್ಲಿಷ್ ಜ್ಞಾನ ಬೇಕು. ಬಿ.ಬಿ.ಸಿ. ಯಲ್ಲಿ ಬರುವ ಇಂಗ್ಲಿಷ್ ವಾರ್ತೆಯನ್ನು ಕೇಳುತ್ತಲೇ ಕನ್ನಡಿಸುವ ಸಾಮರ್ಥ್ಯ ಇವರದು. ಅಷ್ಟೊಂದು ತೀವ್ರಗತಿಯಲ್ಲಿ ಬರವಣಿಗೆ ಸಾಗಿಸಿದವರು –ಪ.ಲೋ.

ಪತ್ರಿಕೋದ್ಯಮ ಇವರಿಗೆ ಒಲಿದದ್ದು ಒಂದು ಆಕಸ್ಮಿಕ. ಇವರ ಹಿರಿಯರು ಯಾರೂ ಆ ವ್ಯವಸಾಯದಿಂದ ಬಂದವರಲ್ಲ. ಇವರು ಹುಟ್ಟಿದ್ದು (೧೩-೧೦-೧೯೧೮), ಬೆಳೆದದ್ದು ಕಡು ಬಡತನದಲ್ಲಿ. ಇವರ ಮನೆತನದ ಉದ್ಯೋಗ ನೇಕಾರಿಕೆ. ಮೂಲತಃ ಬಂಕಾಪುರದವರು. ಮುತ್ತಜ್ಜನ ಕಾಲದಲ್ಲೇ ಗದಗ-ಬೆಟಗೇರಿಗೆ ಬಂದು ನೆಲೆಸಿದವರು.

ಪ. ಲೋ. ಅವರ ಪ್ರಾಥಮಿಕ ಶಿಕ್ಷಣ ಬೆಟಗೇರಿಯಲ್ಲಿ ಮುಗಿಯಿತು. ಗದಗ ಮುನಸಿಪಲ್ ಹೈಸ್ಕೂಲಿನಲ್ಲಿ ಮ್ಯಾಟ್ರಿಕ್ ಪರೀಕ್ಷೆ ಪ್ರಥಮ ಸ್ಥಾನದಲ್ಲಿ ಪಾಸಾದರು. ಇವರು ಬಾಲ್ಯದಲ್ಲಿ ಹಟಮಾರಿ ಹಾಗೂ ಸ್ವಾಭಿಮಾನಿ. ಸ್ಕಾಲರ್ ವಿದ್ಯಾರ್ಥಿಯಾಗಿದ್ದರು. ಇದೇ ಅವಧಿಯಲ್ಲಿ ಬರೆಯುವ ಗೀಳು ಶುರುವಾದದ್ದು. ಇವರಿಗೆ ಉಚ್ಚ ಶಿಕ್ಷಣ ಪಡೆಯಬೇಕೆಂಬ ಬಯಕೆ. ಆಗ ಉನ್ನತ ಶಿಕ್ಷಣಕ್ಕೆ ನಮ್ಮ ದೇಶದಲ್ಲಿ ಪುಣೆ ಬಿಟ್ಟರೆ ಕೊಲ್ಹಾಪುರ. ಅಲ್ಲಿಯ ವರೆಗೆ ಕಳಿಸುವದು; ಕಲಿಸುವದು ಹಿರಿಯರಿಗೆ ಆಗುತ್ತಿರಲಿಲ್ಲ. ಹೇಗೂ ಮನೆಯಲ್ಲಿ ಸ್ವತಂತ್ರ ನೇಯ್ಗೆ ಉದ್ಯೋಗ ಇದೆ. ಅದನ್ನೇ ಮಾಡಲಿ –ಎನ್ನುವ ಅಭಿಪ್ರಾಯ ಅವರದು. ಆದರೆ ಪ. ಲೋ. ಅವರು ಕೇಳಲಿಲ್ಲ. ಹಾಗೂ ಹೀಗೂ ಮಾಡಿ ಎಲ್ಲ ವ್ಯವಸ್ಥೆ ಮಾಡಲಾಯಿತು. ಪ. ಲೋ. ಅವರು ಕೊಲ್ಹಾಪುರಕ್ಕೆ ಹೊರಟರು. ಅಲ್ಲಿ ರಾಜಾರಾಮ ಕಾಲೇಜಿನಲ್ಲಿ ಪ್ರವೇಶ ದೊರೆಯಿತು. ಸ್ವಲ್ಪ ದಿನ ಕಳೆದವು. ಅವರ ಬಡತನಕ್ಕೆ ವಿದ್ಯೆ ಬೇಡವಾಯಿತು. ಎಡರು ತೊಡರುಗಳು ಎದುರಾದವು. ಪ. ಲೋ. ವಾಪಸ್ ಬೆಟಗೇರಿಗೆ ಬಂದರು.

ಹಳೇ ಬನಶಂಕರಿ ಗುಡಿಯ ಹತ್ತಿರ ಪ. ಲೋ. ಅವರ ಮನೆ. ಮನೆಯಲ್ಲಿ ಮಗ್ಗದ ಉದ್ಯೋಗ. 'ದೇವಾಂಗದವರ ಮನೆಯಲ್ಲಿ ದೆವ್ವಗಳಿಗೂ ಉದ್ಯೋಗ' ಎನ್ನುವ ನಾಣ್ಣುಡಿ ಇದೆ. ಚಿಕ್ಕಮಕ್ಕಳು ಮೊದಲು ಮಾಡಿ ದುಡಿಯಬೇಕು. ಅಂದಾಗ ಸಂತೆ ಹೊತ್ತಿಗೆ ಸಂಬಳ. ಪ. ಲೋ. ಅವರು ಮಗ್ಗದ ಕುಣಿಯಲ್ಲಿ ಕಾಲು ಬಿಟ್ಟರು; ದೋಟ ಹಿಡಿದರು. ಆದರೆ ತಲೆಯಲ್ಲೆಲ್ಲಾ ಅಕ್ಷರಗಳ ಮೇಳ. ಶಬ್ದಗಳ ತಾಕಲಾಟ. ಏನೋ ಮಿಂಚಿ ಮಾಯವಾದ ಅನುಭವ. ಆಗ ವರವಾಗಿ ಬಂದದ್ದು ಒಂದು ನೌಕರಿ. ಮುನಿಸಿಪಾಲಿಟಿಯಲ್ಲಿ ಕಾರಕೂನ ಕೆಲಸ. ಸ್ವಲ್ಪ ದಿನ ಮಾಡಿದರು. ಬ್ರಿಟಿಶರ ಆಡಳಿತ. ಗುಲಾಮಗಿರಿಗೆ ಮನಸ್ಸು ಒಪ್ಪಲಿಲ್ಲ. ಸಮಾಜಸೇವೆ. ಸಾಹಿತ್ಯರಚನಾ ಮನೋಭಾವ –ಇವು ಅವರನ್ನು ಅಲ್ಲಿ ಇರಗೊಡಲಿಲ್ಲ.

ಗುಡಿಯ ಬಲಭಾಗದಲ್ಲಿ ಒಂದು ಕೋಣೆ. ಅದರಲ್ಲಿ ಬಡಕಲಿ ವಾಚನಾಲಯವಿತ್ತು. ಅಲ್ಲಿ ಪೌರಾಣಿಕ, ಐತಿಹಾಸಿಕ ಗ್ರಂಥಗಳಿದ್ದವು. ಅವುಗಳ ಜೊತೆಗೆ ಸಮಾಜವಾದವನ್ನು ಬಿಂಬಿಸುವ, ಭಾರತ ಹಾಗೂ ಕರ್ನಾಟಕದ ಹಿರಿಮೆಯನ್ನು ಸಾರುವ ಗಂಗಾಧರ, ಆಲೂರು ವೆಂಕಟರಾಯರ ಕೃತಿಗಳೂ ಹೊಸದಾಗಿ ಬಂದು ಸೇರಿದವು. ನಾಗರಸಭೆಯ ವತಿಯಿಂದ ನಡೆಯುತ್ತಿದ್ದ ಈ ವಾಚನಾಲಯ ಅನಾಥವಾಗಿತ್ತು. ಅನುಕೂಲ ಆದಾಗ ಮಾತ್ರ ತೆರೆದುಕೊಳ್ಳುತ್ತಿತ್ತು. ನಾಲ್ಕಾರು ಹಿರಿಯರು ಸಮಯ ಸಿಕ್ಕಾಗ ಬಂದು ಕುಳಿತು ಓದುತ್ತಿದ್ದರು. ಕೆಲವರು ಪುಸ್ತಕಗಳನ್ನು ಮನೆಗೂ ತೆಗೆದುಕೊಂಡು ಹೋಗುತ್ತಿದ್ದರು. ಅದಕ್ಕೆ 'ಓದುವ ಕೋಣೆ' ಎಂದು ಹೇಳುತ್ತಿದ್ದರು. ಪ. ಲೋ. ಅವರ ದೃಷ್ಟಿ ಆ ಕೋಣೆಯ ಕಡೆ ಹರಿಯಿತು. ಸಂಬಂಧಪಟ್ಟವರನ್ನು ಭೆಟ್ಟಿಯಾದರು. ಅದರ ಉಸ್ತುವಾರಿಯನ್ನು ತಾವೇ ವಹಿಸಿಕೊಂಡರು. ಓದುವ ಕೋಣೆಗೆ ಜೀವ ತುಂಬಿದರು. ಎಲ್ಲ ಗ್ರಂಥಗಳನ್ನೂ ಓದಿದರು. ಅವರಿಗೆ ವಾಚನಾಲಯ ವಿಶ್ವವಿದ್ಯಾಲಯವಾಯಿತು. ಸಾಯಂಕಾಲದ ವರೆಗೆ ಮಗ್ಗದ ಕುಣಿಯಲ್ಲಿ; ನಂತರ ಓದುವ ಕೋಣೆಯಲ್ಲಿ. ಪ. ಲೋ. ಅವರಿಗೆ ಮಗ್ಗದಿಂದ ಹೊಟ್ಟೆ ತುಂಬುತ್ತಿತ್ತು; ಓದಿನಿಂದ ಮನಸ್ಸು ತಣಿಯುತ್ತಿತ್ತು. ಆಗಲೇ ಅವರ ಸಾಂಸ್ಕೃತಿಕ ಮನಸ್ಸು ಗರಿಗೆದರಿದ್ದು. ಜ್ಞಾನಿಗಳ, ಸಾಹಿತಿಗಳ ಸಂಗ ಮಾಡಬೇಕು; ಕಾಣಬೇಕು; ಮಾತಾಡಿಸಬೇಕು – ಎಂಬ ಹಂಬಲ ಹುಟ್ಟಿದ್ದು.

ಓದುವ ಕೋಣೆ ಮಾತಿನ ಮಂಟಪವಾಯಿತು. ಇದು ಸುಮಾರು ೧೯೩೮. ಪ. ಲೋ. ಅವರು ತಿರುಗಾಡಿದರು. ಸ್ವಾತಂತ್ರ್ಯ - ಕನ್ನಡಕ್ಕಾಗಿ ಜನರನ್ನು ಕೂಡಿಸಿದರು. ಆಗಾಗ ಕಾರ್ಯಕ್ರಮ ನಡೆದವು. ದ. ರಾ. ಬೇಂದ್ರೆ, ಕೃಷ್ಣಶರ್ಮರಂಥವರು ಭೆಟ್ಟಿ ಕೊಟ್ಟರು. ಭಾಷಣ ಮಾಡಿದರು. ಆಗ ಭಾಷಣ ಮಾಡುವದೆಂದರೆ ಒಂದು ತರದ ಹೆದರಿಕೆ. ಏನು ಮಾತಾಡಿದರೂ ಅದು ಬ್ರಿಟಿಶರ ವಿರುದ್ಧವೇ ಎನ್ನುವ ಅನುಮಾನ ಇರುತ್ತಿತ್ತು. ಹೀಗಾಗಿ ಭಾಷಣ ಕೇಳಲೂ ಸಹ ಜನ ಬರುತ್ತಿದ್ದಿಲ್ಲ. ಜನರನ್ನು ಸೇರಿಸಲು ಮನರಂಜನೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿತ್ತು. ತೊಗಲುಗೊಂಬೆಯಾಟ, ಗೊಂದಲಿಗರ ಕಥೆ, ಕೀರ್ತನ ನಡೆಯುತ್ತಿದ್ದವು. ಆಗಿನ ಕಾಲಕ್ಕೆ ಕಳ್ಳಿ ತಿಪ್ಪಣ್ಣ ಶಾಸ್ತ್ರಿಗಳ ಕೀರ್ತನೆ ಜನಪ್ರಿಯವಾಗಿತ್ತು. ಅವರಿಗೆ 'ಕೀರ್ತನಕೇಸರಿ' ಬಿರುದು ಪ್ರಾಪ್ತವಾಗಿತ್ತು.

ಆಲೂರ ವೆಂಕಟರಾಯರು 'ಜಯಕರ್ನಾಟಕ' ಮಾಸಿಕ ಸ್ಥಾಪಿಸಿದ್ದರು. ಶ್ಯಾಮಲಾದೇವಿ ಸಂಪಾದಕರಾಗಿದ್ದರು. ಇದರ ಲೇಖಕ ಬಳಗದಲ್ಲಿ ಅನಕೃ, ಶ್ರೀರಂಗ, ಬೆಟಗೇರಿ ಕೃಷ್ಣಶರ್ಮ ಮೊದಲಾದವರು. ಇವರ ಜೊತೆಗೆ ಪ. ಲೋ. ಅವರ ಬರಹಗಳೂ ಸೇರಿದವು. ಅವರು ಬರಹಗಾರರಾದದ್ದು ಇಲ್ಲಿಂದಲೇ. ಅಷ್ಟೊತ್ತಿಗಾಗಲೇ ಗದುಗಿನಲ್ಲಿ 'ಕರ್ನಾಟಕ ಬಂಧು' ವಾರಪತ್ರಿಕೆ ಪ್ರಾರಂಭವಾಗಿತ್ತು. ಚೆನ್ನವೀರಸ್ವಾಮಿ ಹಿರೇಮಠ ಅವರ ಮನೆಯಲ್ಲೇ ಪ್ರೆಸ್ಸು, ಆಫೀಸು, ಅವರೇ ಸಂಪಾದಕರು. ಕಾದಂಬರಿಕಾರ ಬಸವರಾಜ ಕಟ್ಟೀಮನಿ ಅದನ್ನು ನೋಡಿಕೊಳ್ಳುತ್ತಿದ್ದರು. ಚೆನ್ನವೀರ ಸ್ವಾಮಿಗಳು ಪ. ಲೋ. ಅವರಿಂದ ಕತೆ, ಕವನ ಬರೆಸುತ್ತಿದ್ದರು. ಇವರ ಕತೆಗಳು ಕೇವಲ ಪ್ರೇಮಕತೆಗಳಾಗಿರಲಿಲ್ಲ. ಕ್ರಾಂತಿಕಾರಿ ವಿಚಾರವುಳ್ಳ ರಾಷ್ಟ್ರೀಯ ಕತೆಗಳಾಗಿದ್ದವು. ಮುಂದೆ ಬಸವರಾಜ ಕಟ್ಟೀಮನಿ ಕರ್ನಾಟಕ ಬಂಧುವಿನಿಂದ ಹೊರಬಂದರು. ಬೆಂಗಳೂರು ಸೇರಿದರು. 'ಉಷಾ' ವಾರಪತ್ರಿಕೆಗೆ ಹುಟ್ಟು ಹಾಕಿದರು. ಕರ್ನಾಟಕ ಬಂಧು ಪ. ಲೋ. ಅವರ ಕೊರಳಿಗೆ ಬಿತ್ತು. 'ಬೇವು ಬೆಲ್ಲ' ಅಂಕಣ ಶುರು ಮಾಡಿದರು. ರಾಜಕೀಯ ವಿಡಂಬನೆಗೆ ಈ ಅಂಕಣ ಬಹಳ ಪ್ರಸಿದ್ಧಿ ಪಡೆಯಿತು. ಕನ್ನಡದಲ್ಲಿ ಅಂಕಣ ಬರಹಕ್ಕೆ ಇವರೇ ಹರಿಕಾರರು ಎಂದು ಹೇಳಬಹುದು. ಬಸವರಾಜ ಕಟ್ಟೀಮನಿ ಅವರ ಒತ್ತಾಯಕ್ಕೆ ಉಷಾ ಪತ್ರಿಕೆಗೂ ಬರೆಯತೊಡಗಿದರು. ಸ್ವಲ್ಪ ದಿನ 'ಕರ್ಮವೀರ'ಕ್ಕೂ ಬರೆದರು.

ದೇಶದ ತುಂಬೆಲ್ಲ ಆಗ ಸ್ವಾತಂತ್ರ್ಯ ಆಂದೋಳನ ನಡೆಯುತ್ತಿತ್ತು. ಪ. ಲೋ. ಅವರು ಪತ್ರಿಕೆ ಬರಹದೊಂದಿಗೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿದರು. ಬ್ರಿಟಿಶರ ವಿರುದ್ಧ ಬರೆದರು. ಇವರ ವಿರುದ್ಧ ವಾರಂಟ್ ಬಂತು. ಇವರು ಅವರ ಕೈಗೆ ಸಿಗಲಿಲ್ಲ. ೧೯೪೭ ಭಾರತ ಸ್ವತಂತ್ರವಾಯಿತು. ಇದರೊಂದಿಗೆ ಪ. ಲೋ. ಅವರೂ ಎಲ್ಲ ಪತ್ರಿಕೆಗಳನ್ನು ಬಿಟ್ಟರು. 'ಗರ್ಜನೆ' ಎನ್ನುವ ಮಾಸಿಕ ಸ್ವತಂತ್ರವಾಗಿ ಪ್ರಾರಂಭಿಸಿದರು. ಇದರಲ್ಲಿ ಎಸ್. ಎಸ್. ಒಡೆಯರ, ಚೆನ್ನವೀರ ಕಣವಿ, ಆಯ್. ಜಿ. ಸನದಿ ಅವರ ಲೇಖನಗಳು ಇರುತ್ತಿದ್ದವು. ರಾಜಕೀಯ ವಿಮರ್ಶೆಗೆ ಇದು ಪ್ರಸಿದ್ಧಿ ಪಡೆಯಿತು. ಅನ್ಯಾಯದ ವಿರುದ್ಧ ಗರ್ಜನೆ ಗುಡುಗಿತು. ಆದರೆ ಇದು ಬಹಳ ವರ್ಷ ನಡೆಯಲಿಲ್ಲ. ಏಜೆಂಟರೇ ಇದನ್ನು ನುಂಗಿ ಹಾಕಿದರು. ನಂತರ 'ಸಿಡಿಲು' ಅನ್ನುವ ದೈನಿಕ ಶುರು ಮಾಡಿದರು.

ಹುಬ್ಬಳ್ಳಿಯಲ್ಲಿ ಕರ್ನಾಟಕ ಪಬ್ಲಿಸಿಟಿ ಸಂಸ್ಥೆ ಇತ್ತು. ಇದು ವಿಧಾಯಕ ಕಾರ್ಯಕ್ರಮ ಮಾಡುತ್ತಿತ್ತು. ಎಚ್. ಆರ್. ಇಟಗಿ ವಕೀಲರು ಇದರ ವ್ಯವಸ್ಥಾಪಕ ನಿರ್ದೇಶಕರಾಗಿದ್ದರು. ಈ ಸಂಸ್ಥೆಯ ವತಿಯಿಂದ 'ವಿಶಾಲ ಕರ್ನಾಟಕ' ದಿನಪತ್ರಿಕೆ ಹೊರಡುತ್ತಿತ್ತು. ಇಟಗಿ ವಕೀಲರೇ ಇದರ ಸಂಪಾದಕರಾಗಿದ್ದರು. ಪ. ಲೋ. ಅವರಿಗೆ ಸಂಸ್ಥೆಯಿಂದ ಕರೆ ಬಂತು. ಸುದ್ದಿ ಸಂಪಾದಕರಾಗಿ ಸೇರಿದರು. ೧೯೪೮ ರಿಂದ ೧೯೫೦ ರ ವರೆಗೆ ಪತ್ರಿಕೆಯ ಏಳಿಗೆಗೆ ಬಹಳ ಶ್ರಮಿಸಿದರು.

ಪ. ಲೋ. ಅವರಿಗೆ ಮೊದಲಿಂದಲೂ ಇಂಗ್ಲಿಶ್ ಅಚ್ಚು-ಮೆಚ್ಚು. ಮುಂಬಯಿಯಿಂದ 'ಫ್ರೀ ಪ್ರೆಸ್ ಜರ್ನಲ್' ಆಂಗ್ಲ ಪತ್ರಿಕೆ ಬರುತ್ತಿತ್ತು. ಅದರ ಸಂಪಾದಕ ಸದಾನಂದ. ಒಂದು ಸಲ ಅವರ ಪರಿಚಯವಾಯಿತು. ಗದಗ ಬಿಟ್ಟು ಮುಂಬಯಿ ಸೇರಿದರು. ಫ್ರೀ ಪ್ರೆಸ್ ಜರ್ನಲ್‌ಗೆ ಬರೆಯತೊಡಗಿದರು. ಅದೇ ಪತ್ರಿಕೆಯದೇ ಒಂದು ಸಿನೆಮಾ ಪತ್ರಿಕೆ ಇತ್ತು. ಪ. ಲೋ. ಅವರಿಗೆ ಇದರಲ್ಲಿ ಬರೆಯುವ ಅವಕಾಶ ದೊರೆಯಿತು. ಈ ಕೆಲಸ ಮಾಡುವ ಜೊತೆಗೆ ಅಲ್ಲಿದ್ದುಕೊಂಡೇ 'ಚಿತ್ರಾ' ಎನ್ನುವ ಸಿನೆಮಾ ಪತ್ರಿಕೆ ತೆಗೆದರು. ಅದು ಮುಂಬಯಿ ಗದಗಗಳಿಂದ ಏಕಕಾಲಕ್ಕೆ ಪ್ರಕಾಶಿತವಾಗುತ್ತಿತ್ತು. ತ್ರಿವರ್ಣ ಮುಖಪುಟದ ಮೊದಲ ಕನ್ನಡ ಪತ್ರಿಕೆ ಅದು. ಆಗ ಮುಂಬಯಿಯಲ್ಲಿ ಕನ್ನಡ ಸಿನೆಮಾಗಳು ತಯಾರಾಗುತ್ತಿದ್ದವು. ಪ. ಲೋ. ಬಹುಕಾಲ ಅಲ್ಲಿ ನಿಲ್ಲಲಿಲ್ಲ. ಗದುಗಿಗೆ ಮರಳಿದರು.

೧೯೫೭ ರಲ್ಲಿ ಮತ್ತೆ 'ವಿಶಾಲ ಕರ್ನಾಟಕ' ಸೇರಿಕೊಂಡರು. ಸಹಸಂಪಾದಕರಾಗಿ ಕೆಲಸ ಮಾಡತೊಡಗಿದರು. ಆಗ ಅಲ್ಲಿ ಕಲ್ಲೆ ಶಿವೋತ್ತಮರಾವ್, ಎಂ. ಆರ್. ಸಿದ್ದಾಪುರ, ಎಸ್. ಎಸ್. ಚಂದ್ರಶೇಖರಮಠ ಇವರೆಲ್ಲ ಸಂಪಾದಕ ವರ್ಗದಲ್ಲಿದ್ದರು. ಹಾವೇರಿಯ ಜನಪ್ರಿಯ ನಾಯಕರಾದ ಕೆ. ಎಫ್. ಪಾಟೀಲರು ಮಾರ್ಗದರ್ಶಕರಾಗಿದ್ದರು. ಅವರು ಮೊದಲು ಚಿತ್ರಕಲಾ ಶಿಕ್ಷಕರಾಗಿ ಕೆಲಸ ಮಾಡಿದವರು. ಪತ್ರಿಕೆಯ ಅಂದ, ಚಂದ, ಅಚ್ಚುಕಟ್ಟುತನಕ್ಕೆ ಹೆಚ್ಚಿನ ಕಾಳಜಿ ವಹಿಸಿದ್ದರು. ಪ. ಲೋ. ಅವರು ಪ್ರತಿದಿನ ಗದುಗಿನಿಂದ ಹುಬ್ಬಳ್ಳಿಗೆ ಹೋಗಿ ಬರುತ್ತಿದ್ದರು. ಇದು ತೊಂದರೆಯಾಗಿ ತಮ್ಮ ಸಂಸಾರವನ್ನು ಹುಬ್ಬಳ್ಳಿಗೆ ಸ್ಥಳಾಂತರಿಸಿದರು. ವಿಶಾಲ ಕರ್ನಾಟಕ ಮತ್ತೆ ಮೊದಲಿನಂತೆ ಆಕರ್ಷಕವಾಗಿ ಮುಂದುವರಿಯಿತು. 'ಮಸಿ ಬಿಸಿ' ಅಂಕಣ ತುಂಬ ಪ್ರಸಿದ್ಧವಾಯಿತು. ಒಂದು ಹಸಿ ಮಸಿ ಕೊಟ್ಟು ಜನಕ್ಕೆ ಬಿಸಿ ಮಾಡಿತು. ರಾಜಕೀಯ ಪಟುಗಳು ಅದನ್ನು ಅಂಜುತ್ತ ಓದುತ್ತಿದ್ದರು.

ಪತ್ರಕರ್ತರು ಒಂದೇ ಕಡೆ ನಿಲ್ಲುವದು ಬಹಳ ವಿರಳ. ಮಾಲಕರಿಗೂ ಪತ್ರಕರ್ತರಿಗೂ ಏನಾದರೂ ವ್ಯತ್ಯಾಸ ಬಂದರೆ ಸಾಕು ಹಿಂದು ಮುಂದು ನೋಡದೆ ಕೆಲಸ ಬಿಟ್ಟುಬಿಡುತ್ತಾರೆ. ಇದಕ್ಕೆ ಪ. ಲೋ. ಅವರೂ ಹೊರತಲ್ಲ. ಅವರು 'ವಿಶಾಲ ಕರ್ನಾಟಕ' ಬಿಟ್ಟು 'ನವಯುಗ' ಸೇರಿದರು. ಸಹಸಂಪಾದಕರಾದರು. ಪಾಟೀಲ ಪುಟ್ಟಪ್ಪನವರು ಸಂಪಾದಕರಾಗಿದ್ದರು. ಅವರು ಅದೇ ತಾನೆ ಅಮೇರಿಕೆಯಿಂದ ಬಂದಿದ್ದರು. ಪ. ಲೋ. ಅವರಿಗೆ ಪಾ. ಪು. ಅವರ ಮೇಲೆ

ಅಭಿಮಾನ. ಏಕಂದರೆ ಆಗ ಉತ್ತರ ಕರ್ನಾಟಕದಲ್ಲಿ ಪತ್ರಿಕಾ ವ್ಯವಸಾಯ ಬ್ರಾಹ್ಮಣರ ಕೈಯಲ್ಲೇ ಸಿಕ್ಕಿತ್ತು. ಈ ಕಡೆ ಪ್ರತಿಭಾವಂತರಾಗಿ ಪಾ. ಪು. ಅವರು ಕಾಣಿಸಿಕೊಂಡದ್ದು ಪ. ಲೋ. ಅವರಿಗೆ ಸಮಾಧಾನ ತಂದಿತ್ತು. ಎಲ್ಲವನ್ನೂ ಜಾತಿಗೋಲಿನಿಂದ ಅಳೆಯುವುದು ಈ ಜಾತ್ಯತೀತ ದೇಶದಲ್ಲಿ ಹೊಸದೇನಲ್ಲ ! ಈ ಅಳತೆಗೋಲಿನಿಂದ ಪ. ಲೋ. ಬಹಳ ಪೆಟ್ಟು ತಿಂದಿದ್ದಾರೆ. ಇದು ದುರ್ದೈವದ ಸಂಗತಿ.

ಪ. ಲೋ., ಪಾ. ಪು. ಸ್ವತಂತ್ರವಾದ ಪತ್ರಿಕೆಗೆ ಯೋಚಿಸಿದರು. ಇಬ್ಬರೂ ನವಯುಗ ತೊರೆದರು. ಒಂದು ತೀರ್ಮಾನಕ್ಕೆ ಬಂದರು. ತೀರ್ಮಾನದ ಫಲ 'ಪ್ರಪಂಚ' ಸಾಪ್ತಾಹಿಕ. ಪಾಪು ಸಂಪಾದಕ, ಪ. ಲೋ. ಉಪಸಂಪಾದಕ. ಪ. ಲೋ. ತಮ್ಮ ಅನುಭವವನ್ನೆಲ್ಲ ಪ್ರಪಂಚಕ್ಕೆ ಧಾರೆ ಎರೆದರು. ಪಾಪು ಅವರಿಗೆ ಪತ್ರಿಕೆ ಬಗ್ಗೆ ಓದಿ ಪರೀಕ್ಷೆ ಪಾಸು ಮಾಡಿ ಅನುಭವ. ಪ. ಲೋ. ಅವರಿಗೆ ಪತ್ರಿಕೆ. ಪ್ರೆಸ್ಸು. ಜಾಹೀರಾತು. ಮಾರಾಟ, ಓದುಗ – ಹೀಗೆ ಪತ್ರಿಕಾ ಪ್ರಪಂಚದ ಇಂಚು ಇಂಚೂ ಗೊತ್ತು. ಹೀಗಾಗಿ ಪ್ರಪಂಚ ಸ್ವಲ್ಪೇ ದಿನಗಳಲ್ಲಿ ಸ್ಥಿರವಾಗಿ ನಿಂತಿತು. ಆದರೆ ಪರಿಸ್ಥಿತಿ ಪ. ಲೋ. ಅವರನ್ನು ಅಲ್ಲಿ ನಿಲ್ಲಗೊಡಲಿಲ್ಲ. ಇದೇನು ಪ. ಲೋ. ಅವರ ವಿಧಿಯೋ ಪತ್ರಕರ್ತರಲ್ಲಿಯ ಕೀಳರಿಮೆಯೋ ತಿಳಿಯಲಿಲ್ಲ. ಆಗಿನ ಕಾಲದ ಪುಟ್ಟಳಿಯ ಪತ್ರಿಕಾಕರ್ತರಿಗೆ ಇದು ತಿಳಿದ ವಿಷಯವೇ ಆಗಿತ್ತು. ಆದರೆ ಯಾರೂ ಪ. ಲೋ. ಅವರ ಪರ ಬರಲಿಲ್ಲ, ಮಾತನಾಡಲಿಲ್ಲ. ಇಲ್ಲಿಯೂ ಜಾತಿ ತನ್ನ ಕೆಲಸ ಮಾಡಿತ್ತು. ಪ. ಲೋ. ಅವರು ಇದಾವುದಕ್ಕೂ ಹೆದರಲಿಲ್ಲ. ಯಾರಿಗೂ ಸೊಪ್ಪು ಹಾಕಲಿಲ್ಲ. ನನ್ನ ಲೇಖನಿಗೆ ಶಕ್ತಿ ಇರುವ ತನಕ ಯಾರ ಮುಂದೂ ಯಾವದಕ್ಕೂ ಕೈ ಒಡ್ಡಬಾರದು ಎಂದು ಸಂಕಲ್ಪ ಮಾಡಿದರು.

ಈ ಸುದ್ದಿ ತಿಳಿದ ಕೂಡಲೇ 'ನವಯುಗ'ದಿಂದ ಪ. ಲೋ. ಅವರಿಗೆ ಕರೆ ಬಂತು. ಮತ್ತೆ ನವಯುಗದಲ್ಲಿ ಬರವಣಿಗೆ ಪ್ರಾರಂಭವಾಯಿತು. ಇತ್ತ 'ವಿಶಾಲಕರ್ನಾಟಕ'ದಿಂದಲೂ ಕರೆ ಬಂತು. ಪ. ಲೋ. ಎರಡೂ ಪತ್ರಿಕೆಗಳ ಮಾಲಕರನ್ನು ಕೂಡಿಸಿದರು. ಸರದಾರ್ ವೀರನಗೌಡರು, ಎಚ್. ಆರ್. ಇಟಗಿ, ಆರ್. ಬಿ. ಮಾಮಲೇದೇಸಾಯಿ, ಟಿ. ಆರ್. ನೇಶ್ವಿ ಎಲ್ಲರೂ ಕೂಡಿ ವಿಚಾರ ಮಾಡಿದರು. ನವಯುಗ, ವಿಶಾಲಕರ್ನಾಟಕ ಎರಡೂ ಪತ್ರಿಕೆಗಳು ಕೂಡಿ ಕೆಲಸ ಮಾಡಬೇಕು, ಪ. ಲೋ. ಅವರು ಈ ವಿಷಯ ಮುಂದಿಟ್ಟರು. ಇದು ಎಲ್ಲರಿಗೂ ಒಪ್ಪಿಗೆಯಾಯಿತು. ಆದರೆ ಮೂರನೆಯವರ ಕುತಂತ್ರದಿಂದಾಗಿ ಎರಡೂ ಪತ್ರಿಕೆಗಳು ಮುಚ್ಚಿದ್ದು ಪತ್ರಿಕಾ ಪ್ರಪಂಚದಲ್ಲೇ ಅನಿಷ್ಟವಾದ ಸಂಗತಿ. ಅಲ್ಲಿಯ ವರೆಗೆ ಪ. ಲೋ. ಅವರು ಪತ್ರಕರ್ತರ ಒಂದು ಪಡೆಯನ್ನೇ ನಿರ್ಮಿಸಿದ್ದರು. ಅವರ ಎಲ್ಲ ಶಿಷ್ಯ ಬಳಗ ಚೆದುರಿಹೋಯಿತು. ವಿಶಾಲ ಕರ್ನಾಟಕ ಯುವ ಪತ್ರಕರ್ತರನ್ನು ತಯಾರು ಮಾಡುವ ಕಮ್ಮಟವಾಗಿತ್ತು. ಪ. ಲೋ. ಅವರು ಅದರ ಕರ್ತಾರರಾಗಿದ್ದರು. ಕೆ. ಎಲ್. ಅಣ್ಣಿಗೇರಿ, ಆರ್. ಟಿ. ಮಜ್ಜಿಗಿ, ಎಸ್. ಜಿ. ಮೈಸೂರಮಠ, ಸತ್ಯನಾರಾಯಣ ಹೆಗಡೆ, ಎಲ್. ಎಸ್. ಶಾಸ್ತ್ರಿ, ಜಿ. ಬಿ. ಮನ್ವಾಚಾರ ಮುಂತಾದವರು ಪ್ರಮುಖರು. ಪ. ಲೋ. ಅವರ ವಿಷಯವಾಗಿ ಮನ್ವಾಚಾರ ಒಂದು ಕಡೆ ಹೀಗೆ ಬರೆಯುತ್ತಾರೆ :

"ಗುರುಗಳಾದ ಬಂಕಾಪುರ ಅವರನ್ನು.... ಅಲ್ಲಿಯ ಎಲ್ಲ ವರ್ಗದ, ಎಲ್ಲ ವಿಭಾಗಗಳ ಸಿಬ್ಬಂದಿಯವರು ಒಂದು ಕುಟುಂಬದ ಹಿರಿಯನನ್ನು ಕಾಣುವಂತೆ ಕಾಣುತ್ತಿದ್ದರು. ಅವರ ನಲುಮಾತು-ವಾತ್ಸಲ್ಯಗಳ ವರ್ತುಲದಲ್ಲಿ ನಾನೂ ಸಿಕ್ಕಿಕೊಂಡೆ. ಪತ್ರಿಕೆಯ ಮಾಲಕ ವರ್ಗವೂ ಕೂಡಾ ತುಂಬಾ ಆದರದಿಂದ ಬಂಕಾಪುರ ಅವರನ್ನು ಕಾಣುತ್ತಿದ್ದರೆಂಬುದಕ್ಕೆ ಅವರಲ್ಲಿಯ ಪ್ರತಿಭೆ-ನಿಷ್ಠೆ-ಪ್ರಾಮಾಣಿಕತೆಗಳು ಕಾರಣವಾಗಿದ್ದವು.

ಆ ದಿನಗಳಲ್ಲಿ ನಿಯಮಿತವಾಗಿ ಪಗಾರ ದೊರೆಯುತ್ತಿರಲೇ ಇಲ್ಲ. ಯಾವುದಾದರೂ ಸ್ಥಾನಿಕ-ಸಂಸ್ಥೆಗಳ ಜಾಹೀರಾತುಗಳ ಹಣ ಬಂದಾಗ ಅಥವಾ ಶ್ರೀ ಹಾಮಲೇದೇಸಾಯಿ ಅವರು ತಮ್ಮ ಉತ್ಪನ್ನದಿಂದ ತಂದ ಹಣ ಬಂದಾಗಲೇ ನಾವೆಲ್ಲ ಪಗಾರ ಹಂಚಿಕೊಳ್ಳುತ್ತಿದ್ದೆವು. ಶ್ರೀ ಬಂಕಾಪುರ ಅವರು ನನ್ನನ್ನು ಪ್ರೀತಿಯಿಂದ ಕಂಡಂತೆ ನಾನು ಗೌರವದಿಂದ ಕಾಣುತ್ತಿದ್ದೆನಾದರೂ. ಅನೇಕ ಸಲ ಅವರಿಗೆ ಕ್ಯಾಶಿಯರನಾಗಿದ್ದ ನಾನು ಅವರ ಅಡಚಣೆಯ ಕಾಲಕ್ಕೆ ಹಣ ಕೊಡದೇ ಹೋದ ಪ್ರಸಂಗಗಳಿಗಾಗಿ ಬಹಳ ವ್ಯಥೆಪಟ್ಟಿದ್ದೇನೆ. ನಾವು ತಿಂಗಳಲ್ಲಿ ಊಟ ಮಾಡಿದ ಅಂಕೆಗಳನ್ನು ಲೆಕ್ಕ ಹಾಕಬಹುದಾಗಿತ್ತೇ ಹೊರತು ಊಟ ಮಾಡದೇ ಇದ್ದ ದಿನಗಳೇ ಹೆಚ್ಚು. ಬಂಕಾಪುರ ಅವರ ಹೃದಯ ವಿಶಾಲವಾದದ್ದು. ಮೂವರು ಮಕ್ಕಳು ಮತ್ತು ತಾವಿಬ್ಬರು ಪುಟ್ಟ ಮನೆಯಲ್ಲಿರುತ್ತಿದ್ದರು. ಒತ್ತಾಯದಿಂದ ಅವರಲ್ಲಿ ಊಟ ಮಾಡಿದ್ದೂ ಉಂಟು. ಅವರ ಶ್ರೀಮತಿಯವರದು ತಾಯಿಹೃದಯ. ಪತಿಯ ಸಂಕಷ್ಟಗಳಲ್ಲಿ ಒಂದಾಗಿ ತಾವು ಉಪವಾಸವಿದ್ದರೂ ಇನ್ನೊಬ್ಬರಿಗೆ ಊಟ ಮಾಡಿಸುವ ವಿಶಾಲ ಅಂತಃಕರಣ ಆದರ್ಶಪ್ರಾಯವಾದದ್ದು."

ಪ. ಲೋ. ಅವರು ಧೃತಿಗೆಡಲಿಲ್ಲ. ಹಿಂದೆ ನಿಲುಗಡೆ ಆಗಿದ್ದ 'ಗರ್ಜನೆ' ಪುನಃ ಪ್ರಾರಂಭಿಸಿದರು. ಅದರ ಜೊತೆಗೆ 'ಸರ್ವಜ್ಞ' ವಾರಪತ್ರಿಕೆಯನ್ನೂ ಹುಟ್ಟು ಹಾಕಿದರು. ಪತ್ರಿಕಾ ವ್ಯವಸಾಯದಲ್ಲಿ ಹೊಸ ಹೊಸ ಪ್ರಯೋಗ ಮಾಡಿದರು. ಈಗೆಲ್ಲಾ ಸಂಜೆ ಪತ್ರಿಕೆಗಳು ಬರುತ್ತಿವೆ. ಆದರೆ ೧೯೫೮ ಕ್ಕೆ ಮೊದಲೇ ಸಂಜೆ ಪತ್ರಿಕೆ ಪ್ರಾರಂಭಿಸಿದ ಕೀರ್ತಿ ಪ. ಲೋ. ಅವರದು.

ನವಯುಗ ಮುಚ್ಚಿದ್ದು ಮುಚ್ಚಿಹೋಯಿತು. ವಿಶಾಲ ಕರ್ನಾಟಕಕ್ಕೆ ಮತ್ತೆ ಮರುಜೀವ ಬಂತು (೧೯೬೪). ಕೆ. ಎಚ್. ಪಾಟೀಲ, ಗೋಪಿನಾಥ ಸಾಂಡ್ರಾ ಇದರ ಒಡೆತನ ವಹಿಸಿಕೊಂಡರು. ಪ. ಲೋ. ಅವರಂತೂ ತಯಾರಾಗೇ ಇದ್ದರು. ವಿಶಾಲ ಕರ್ನಾಟಕ ಹೊಸ ಉತ್ಸಾಹದಿಂದ ಹೊಸ ಪ್ರಯೋಗದಿಂದ ಪ್ರಕಟವಾಗತೊಡಗಿತು. ಆ ದಿನಗಳಲ್ಲಿ ಮಾಡಿದ ಒಂದು ಪ್ರಯೋಗ : ೨೭ - ೫ - ೧೯೬೪ ರಾತ್ರಿ ೧೦ - ೩೦ ರ ಸಮಯ. ಪ್ರಧಾನಮಂತ್ರಿ ನೆಹರೂ ಹೃದಯಾಘಾತದಿಂದ ನಿಧನರಾದ ಸುದ್ದಿ ಬಂತು. ಆಗ ರಾಷ್ಟ್ರಕ್ಕೆ ದೊಡ್ಡ ಆಘಾತ. ದೇಶಕ್ಕೆ ದೇಶವೇ ಕಂಬನಿಗರೆಯಿತು. ಎಲ್ಲ ದಿನಪತ್ರಿಕೆಗಳು ಉದ್ದುದ್ದ ಸಂಪಾದಕೀಯ ಬರೆದು ತಮ್ಮ ದುಃಖ ವ್ಯಕ್ತಪಡಿಸಿದ್ದವು. ಆದರೆ ವಿಶಾಲಕರ್ನಾಟಕದ ಸಂಪಾದಕೀಯವೇ ಬೇರೆಯಾಗಿತ್ತು. "ಅಗಲಿದ ಪ್ರಧಾನಿ ನೆಹರೂ ಅವರಿಗೆ ಬಾಷ್ಪಾಂಜಲಿ" ಎಂದು ಮೇಲೆ ಒಂದೇ ಸಾಲು. ಕೆಳಗೆ ಕಣ್ಣೀರ ಹನಿಗಳ ಚಿತ್ರ. ಸುಮಾರು ಮೂರು ಇಂಚಿಗೊಂದರಂತೆ ಬೀಳುವ ನೀರ ಹನಿಗಳ ಎರಡು ಲಂಬ ಸಾಲುಗಳು ಮಾತ್ರ ಅಂದಿನ ಸಂಪಾದಕೀಯ. ನಿಜವಾದ ದುಃಖದಲ್ಲಿ ಬರೆಯುವದಾದರೂ ಹೇಗೆ ? ಇದು ಪ. ಲೋ. ಪ್ರಶ್ನೆ. ಅಂದಿನ ಮಸಿ-ಗುಂಡು ಅಂಕಣದಲ್ಲಿ ದೊಡ್ಡ ಅಕ್ಷರದಲ್ಲಿ 'ಠುಸ್' ಎನ್ನುವ ಒಂದೇ ಒಂದು ಶಬ್ದ ಮಾತ್ರ.

ಇನ್ನೊಮ್ಮೆ ಮಸಿಗುಂಡು ಅಂಕಣದಲ್ಲಿ ಹೀಗೆ ಬರೆದಿದ್ದರು, 'ಕಮಲ ಎಮ್ಮೆಯ ವಿಮಾನ ಹಾರಾಟದ ಕನಸು'. ಆಗ ಇಂದಿರಾಗಾಂಧಿ ಪ್ರಧಾನ ಮಂತ್ರಿಯಾಗಿದ್ದರು. ಸರೋಜಿನಿ ಮಹಿಷಿ ಕಾಂಗ್ರೆಸ್ ಮುಖದ ಜನಸಂಘ ಮನಸ್ಸಿನ ರಾಜಕಾರಣಿ. ಇದು ಬಹಳ ಜನರಿಗೆ ತಿಳಿದಿರಲಿಲ್ಲ. ಆದರೆ ಪ. ಲೋ. ಅವರಿಗೆ ಗೊತ್ತಿತ್ತು. ಆಗ ಸರೋಜಿನಿ ಮಹಿಷಿ ಅವರು ವಿಮಾನೋಡ್ಡಾಣ ಮಂತ್ರಿ ಆಗಿದ್ದರು. ಮಸಿಗುಂಡು ಅಂಕಣದಲ್ಲಿ ಮೇಲಿನ ವಾಕ್ಯ ಓದಿ ಕೆ. ಎಚ್. ಪಾಟೀಲರಿಗೆ ಫೋನು ಮಾಡಿ ಕೇಳಿದ್ದರಂತೆ "ಏನಿದು ?" ಎಂದು— ಸ್ವಲ್ಪ ಸಿಟ್ಟಿನಿಂದಲೇ. ಕೆ. ಎಚ್. ಪಾಟೀಲರು ನಗೆಯಲ್ಲಿ ಮಾತು ತೇಲಿಸಿ "ಶಬ್ದಶಃ ಸಂಸ್ಕೃತದಿಂದ ಅನುವಾದ

ಮಾಡಿದ್ದಾರೆ. ಅದನ್ನಾಕೆ ಮನಸ್ಸಿಗೆ ಹಚ್ಚಿಕೊಳ್ಳುತ್ತೀರಿ." – ಎಂದು ಉತ್ತರಿಸಿದ್ದರಂತೆ. ಇಂದಿನ ವರೆಗೂ ಹುಬ್ಬಳ್ಳಿಗೆ ವಿಮಾನ ನಿಲ್ದಾಣ ಕನಸಿನ ಮಾತೇ ಆಗಿದೆ!

೧೯೬೪ ರಿಂದ ೧೯೭೨ ರ ವರೆಗೆ ಪ. ಲೋ. ಅವರು ಜೊತೆ ಸಂಪಾದಕರೆಂದು ಕೆಲಸ ಮಾಡಿದರು. ಮಾಲಕರಿಂದ ಸರಿಯಾಗಿ ಪಗಾರ ಬರಲಿ, ಬರದೇ ಇರಲಿ ನಿಷ್ಠೆಯಿಂದ ದುಡಿದರು. ಇದರಿಂದ ಮಾಲಕ ವರ್ಗಕ್ಕೆ ಹಣ, ಹೆಸರು ಎರಡೂ ಸಿಕ್ಕವು. ಆದರೆ ತೆರೆಯ ಮರೆಯಲ್ಲಿ ದುಡಿದ ಇವರಿಗೆ ಇದಾವದೂ ಸಿಗಲಿಲ್ಲ. ಇವರು ಎಂದೂ ಪ್ರಚಾರಪ್ರಿಯರಲ್ಲ. ಅನ್ಯಾಯದ ಹತ್ತು ಪೈಸೆಯನ್ನೂ ಮುಟ್ಟಲಾರದ ಸ್ವಭಾವ. ಇದ್ದದ್ದು ಇದ್ದಂತೆ ಮಾತಾಡುವ; ಬರೆಯುವ ರೀತಿ ಇವರದು. ಆಗ ರಾಜಕೀಯದಲ್ಲಿ ಸ್ಥಿತ್ಯಂತರ ನಡೆಯಿತು. ಕಾಂಗ್ರೆಸ್ಸು ಎರಡನೇ ಬಾರಿ ಒಡೆಯಿತು. ಹೊಸ ಪಕ್ಷಗಳು ತಯಾರಾದವು. ಒಂದು ಪಕ್ಷಕ್ಕೆ ಒಂದು ಪತ್ರಿಕೆ ಎನ್ನುವಂತೆ ಪತ್ರಿಕೆಗಳೂ ಹುಟ್ಟಿದವು. ಮಾಲಕರ ಅಭಿಪ್ರಾಯದಂತೆ ಬರೆಯಬೇಕಾಯಿತು. ವಸ್ತುನಿಷ್ಠ ಪತ್ರಕರ್ತರಾದ ಪ. ಲೋ. ಅವರಿಗೆ ಇದು ಸರಿಬೀಳಲಿಲ್ಲ. ಇವರಿಗೆ ಎಂದೂ ಆತ್ಮವಂಚನೆ ಮಾಡಿಕೊಂಡು ಗೊತ್ತಿಲ್ಲ. ವಿಶಾಲ ಕರ್ನಾಟಕದಿಂದ ಸುಮ್ಮನೆ ಎದ್ದು ಹೊರಬಂದರು. ಆಗಿನ ಕಾಲದಲ್ಲಿ ಪತ್ರಕರ್ತರಿಗೆ ವೇತನ ಕಾನೂನು; ಕೆಲಸದ ಭದ್ರತೆ ಇದ್ದಿಲ್ಲ. ಹಂಗಾಮಿ ಉದ್ಯೋಗ; ಅತಂತ್ರ ಬದುಕು. ಇಂಥದರಲ್ಲೂ ಪ. ಲೋ. ಅವರು ಸಂಸಾರ ನೂಕುತ್ತ ಬಂದಿದ್ದರು. ಇದೇ ಸಮಯಕ್ಕೆ ಅವರ ಧರ್ಮಪತ್ನಿ ನಿಧನ ಹೊಂದಿದರು.

ಕೈಯಲ್ಲಿ ಕೆಲಸ ಇದ್ದಿಲ್ಲ. ಯೋಚಿಸಿದರು. 'ನಟರಾಜ' ಸಿನೆ ಮಾಸಿಕ ಪ್ರಾರಂಭಿಸಿದರು. ಇದು ಕೇವಲ ಸಿನೆಮಾಕ್ಕೆಂದೇ ಮೀಸಲು. ಆದರೆ ರಾಜಕೀಯ ಕುರಿತು ಇವರ ಬರವಣಿಗೆಗೆ ಬೇಡಿಕೆ ಇದ್ದೇ ಇತ್ತು. ೧೯೭೫ ತುರ್ತು ಪರಿಸ್ಥಿತಿ ದೇಶದಲ್ಲಿ ಸರ್ವಾಧಿಕಾರದ ದರ್ಪ ನಡೆಸಿತ್ತು. ಬೆಂಗಳೂರಿನಿಂದ 'ಪ್ರಜಾಪ್ರಭುತ್ವ' ಸಾಪ್ತಾಹಿಕ ಹೊರಡುತ್ತಿತ್ತು. ಟಿ. ಎಸ್. ಭಟ್ ಅದರ ಸಂಪಾದಕರು. ಪ. ಲೋ. ಅವರ ಚುರುಕು ಮುಟ್ಟಿಸುವ ಬರಹ ಅದಕ್ಕೆ ಬೇಕಾಗಿತ್ತು. ಉತ್ತರ ಕರ್ನಾಟಕದ ವಿಶೇಷ ಪ್ರತಿನಿಧಿಯಾಗಿ ನಿಯುಕ್ತಿಗೊಂಡರು. ಅದರಲ್ಲಿ 'ಮಾಸಿ-ಗುಂಡು', 'ಅಪ್ಪ ಅರಿಯಾ' ಎರಡು ಅಂಕಣಗಳು ಇವರಿಗಾಗಿ ಕಾದಿದ್ದವು. ಈ ರೀತಿಯ ಬರಹ ನೋಡಲು ಜನ ಪತ್ರಿಕೆ ಕೊಳ್ಳುತ್ತಿದ್ದರು. ನಂತರ 'ನನ್ನ ಎದೆ ಭಾರ' ಅಂಕಣ ಬಂತು – ಇದರಲ್ಲಿ ನೊಂದ ಮನಸ್ಸಿನ ನೋವು ಇರುತ್ತಿತ್ತು. ಎದೆ ಹಗುರಾಗುತ್ತಿತ್ತು.

ಪ. ಲೋ. ಅವರ ಕಾರ್ಯಕ್ಷೇತ್ರವು ಕೇವಲ ಪತ್ರಿಕೋದ್ಯಮಕ್ಕೆ ಮಾತ್ರ ಸೀಮಿತವಾಗಿದ್ದಿಲ್ಲ. ೧೯೮೦ - ೮೩ ರ ವರೆಗೆ ಕರ್ನಾಟಕ ವಿಶ್ವವಿದ್ಯಾಲಯದ ಸಿನೇಟರ್ ಆಗಿದ್ದರು; ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮಿಟಿ ರಚಿಸಿದ ನೇಕಾರರ ಸ್ಥಿತಿಗತಿ ವಿಚಾರಣಾ ಸಮಿತಿಯ (೧೯೭೫) ಅಧ್ಯಕ್ಷರಾಗಿದ್ದರು.

ಬರಹಗಾರರಾಗಬೇಕು ಹಾಗೆಂದು ಬಗೆದವರು ಮೊದಲು ಕವನ ಬರೆಯುತ್ತಾರೆ. ನಂತರ ಕತೆ, ಕಾದಂಬರಿ, ಪ್ರವಾಸಕಥನ – ಹೀಗೇ ಸಾಗುತ್ತದೆ.. ಅಪ್ಪಿ ತಪ್ಪಿ ಪತ್ರಿಕಾಲಯದಲ್ಲಿ ಕಾಲಿಟ್ಟರೆ ಮುಗಿಯಿತು ಅದು ಅವರನ್ನು ಬಿಡುವುದೇ ಇಲ್ಲ. ತನ್ನ ನ್ಯೂಸ್ ಪೇಪರ್‌ನಲ್ಲಿ ಸುತ್ತಿ ಕಟ್ಟಿ ಒಗೆಯುತ್ತದೆ. ಅದರಿಂದ ಬಿಡಿಸಿಕೊಂಡು ಬಂದವರು ಬಹಳ ಕಡಿಮೆ. ಬರಹಗಾರ ಕೊನೆಯ ತನಕ ವರದಿಗಾರನಾಗುತ್ತಾನೆ. ಸೃಜನಾತ್ಮಕ ರಚನೆ ನಿಂತಹೋಗುತ್ತದೆ. ಪ. ಲೋ. ಅವರದೂ ಇದೇ ಸ್ಥಿತಿ. 'ಸಣ್ಣಪ್ಪ ಸತ್ತಾಗ', 'ನಗ್ನನೃತ್ಯ' ಎರಡು ಕಾದಂಬರಿಯ ನಂತರ ಸಾಹಿತ್ಯ ರಚನೆಯಾಗಲಿಲ್ಲ. ಸಾಹಿತ್ಯ ಹಾಗೂ ಪತ್ರಿಕೆ ಎರಡರಲ್ಲೂ ಸಾಧಿಸಿದವರು ಬಹಳ ಕಡಿಮೆ.

ಪ. ಲೋ. ಅವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (೧೯೭೩) ಬಂತು. ಈ ಪ್ರಶಸ್ತಿ ಪಡೆದ ಪ್ರಥಮ ಪತ್ರಿಕೋದ್ಯಮಿ ಇವರಾದರು. ನಂತರ ಕರ್ನಾಟಕ ಪತ್ರಿಕಾ ಅಕಾಡೆಮಿಯ ಪ್ರಶಸ್ತಿ ೧೯೯೩ ರಲ್ಲಿ ದೊರೆಯಿತು. ೧೯೯೭ ರ ಪ್ರತಿಷ್ಠಿತ ಟಿ. ಎಸ್. ಆರ್. ಪ್ರಶಸ್ತಿಯನ್ನು ೧೯೯೭ ರ ಕೊನೆಯಲ್ಲಿ ಕರ್ನಾಟಕ ಸರಕಾರ ಘೋಷಿಸಿತು. ಮುಂದೆ ಈಗಿನ ಮುಖ್ಯಮಂತ್ರಿ ಎಸ್. ಎಂ. ಕೃಷ್ಣ ಪ. ಲೋ. ಅವರ ಮನೆಗೆ ಹೋಗಿ ಸತ್ಕರಿಸಿದರು. ಒಂದು ಲಕ್ಷ ರೂಪಾಯಿ ನೀಡಿದರು. ಪ. ಲೋ. ಅವರ ಬಾಳ ಸಂಜೆ ಹಾಗೂ ಆರೋಗ್ಯ ಕಾಪಾಡಲು ಸಹಕಾರಿಯಾಯಿತು.

ಪ. ಲೋ. ಅವರು ಸ್ಥಾಪಿಸಿದ 'ನಟರಾಜ' ಈಗಲೂ ಇದೆ. ಅವರ ಹಿರಿಯ ಮಗ ಲೋಕನಾಥ ಅದನ್ನು ನಡೆಸುತ್ತಿದ್ದಾರೆ. ೩೧ ವರ್ಷದಿಂದ ನಡೆಯುತ್ತಿರುವ ಏಕೈಕ ಸಿನೆ ಮಾಸಿಕ ಇದಾಗಿದೆ. ಈಗಿನ ಸ್ಪರ್ಧಾತ್ಮಕ ದಿನಗಳಲ್ಲಿ ಪತ್ರಿಕೆ ನಡೆಸುವುದು ಕಠಿಣ ಸಾಧ್ಯ. ಆದರೂ ನಟರಾಜ ಬರುತ್ತಿದೆ.

ಇಷ್ಟೆಲ್ಲಾ ದುಡಿದ ಈ ಹಿರಿಯ ಜೀವಕ್ಕೆ ತನ್ನದೇ ಆದ ನೆಲೆ ಇಲ್ಲ. ಚಿಕ್ಕ ಕೋಣೆಯಲ್ಲಿ ಮಲಗಿರುತ್ತಾರೆ. ಮೇಲೇಳಲು ಬರುವದಿಲ್ಲ. ಕಿವಿ ಕೇಳುವದಿಲ್ಲ. ಕಣ್ಣು ಸ್ಪಷ್ಟವಾಗಿ ಕಾಣುವದಿಲ್ಲ. ಬರೆದೂ ಬರೆದೂ ಕೈ ಸೋತಿದೆ. ಎರಡೂ ಕೈ ಬೆರಳು ಮಡಿಚಿಕೊಂಡಿವೆ. ಬದುಕು ಚೆಲ್ಲಾಪಿಲ್ಲಿಯಾಗಿದೆ. ತಾವು ಮಾಡಿದ ಸಮಾಜಸೇವೆ, ಪತ್ರಿಕಾಸೇವೆ, ನೆನೆದುಕೊಂಡು ತೃಪ್ತಿಯ ಉಸಿರು ಬಿಡುತ್ತಾರೆ. ಪರ್ವತಪ್ಪ ಲೋಕಪ್ಪ ಬಂಕಾಪುರ ಅವರಿಗೆ ಈಗ ೮೫ ವರ್ಷ. ಹಳೆಯ ನೆನಪುಗಳೊಂದಿಗೆ ಕಾಲ ನೂಕುತ್ತಿದ್ದಾರೆ.

● ▼

ಮೋಹನ ಕಳಸದ, ಶ್ರಮಶ್ರೀ, ೨೫,. ಶಿಕ್ಷಕರ ಬಡಾವಣೆ, ನೀರಿನ ಟ್ಯಾಂಕಿನ ಹತ್ತಿರ, ಖಾಸಬಾಗ, ಬೆಳಗಾವಿ - ೫೯೦ ೦೦೪ ✆ : ೦೮ - ೪೮ ೯೪೭೩

ಮೋಚಿ, ಮೋಚಿ, ನನ್ನ ಮೊಚ್ಚೆ ಹೊಲಿ

ಕತೆ

ಅನು. : ಸದಾನಂದ ಕನವಳ್ಳಿ **ಇಂಗ್ಲಿಶ್ : ಜ್ಯಾನ್ ಸ್ಟ್ರದರ್**

ವಿಚಿತ್ರ ಪಟ್ಟಣ ಚೆಲ್ಸೀಯ ಬೀದಿಗಳಲ್ಲಿ ಅಡ್ಡಾಡುವ ವಿಚಿತ್ರ ಮಂದಿಗೆ ಬರವಿಲ್ಲ. ಹತ್ತಿಪ್ಪತ್ತು ಬೀದಿ ಹಾಡುಗಾರರು, ಬ್ಯಾರೆಲ್-ಆರ್ಗನ್ ಹರ್ಡಿ-ಗರ್ಡಿ, ಕಹಳೆಗಳು, ಕೊಳಲು, ಪಿಟೀಲು, ಹಾರ್ಪ್ ನುಡಿಸುವ ಬೀದಿ ಸಂಗೀತಗಾರರು ಯಾವಾಗ ನೋಡಿದರೂ ಇರುವವರೆ. 'ಬ್ಲೂಬೆನ್ನಿ, ಒಳ್ಳೆಯ ದಿಮ್ಮಿ' ಎಂದು ಕೂಗುವವರು. ನಿಮ್ಮ ಚಾಕು ಕತ್ತರಿ ಸಾಣೆ ಹಿಡಿಯುವವರು. ನಿಮ್ಮ ಕುರ್ಚಿಗಳಿಗೆ ಬೆತ್ತ ಹೆಣೆಯುವವರು. 'ನನ್ನ ಸುಂದರ, ಅರಳುವ ಲ್ಯಾವೆಂಡರ್ ಕೊಳ್ಳಬನ್ನಿ, ಒಂದು ಪೆನ್ನಿಗೆ ಹದಿನಾರು ಉತ್ತಮ ರೆಂಬೆಗಳು' ಎಂದು ಕರೆಯುವ ಹೆಂಗಸರು. ಅದು ಕಿವಿಗೆ ಕಾವ್ಯಮಯವಾಗಿ ಕೇಳಿಸುತ್ತದೆ, ಆದರೆ ಅದು ಶುದ್ಧ ಸುಳ್ಳು, ಏಕೆಂದರೆ, ಮೊದಲ ಬಾರಿಗೆ ಈ ಕರೆ ಸೃಷ್ಟಿಗೊಂಡಾಗಿನಿಂದ ಬೆಲೆ ಏರುತ್ತಲೇ ಬಂದಿದೆ. ಹಲವಾರು ಧಾರ್ಮಿಕ ಹುಚ್ಚರನ್ನೂ ಅಲ್ಲಿ ಕಾಣಬಹುದು. ಬಿಳಿ ಗಡ್ಡದ ಮುದುಕರು. ಸುವರ್ಣ ಗಡ್ಡದ ಯುವಕರು. ಅವರು ಬಕ್ಕ ತಲೆಯಲ್ಲಿ ತಿರುಗುತ್ತ ದೇವರ ಬಗ್ಗೆಯೆ ಮಾತನಾಡುತ್ತಾರೆ. ಕೊನೆಗೆ, ಗಾಳಿಗೆ ಹಾರುವಷ್ಟು ಅಗಲ ಹ್ಯಾಟ್ ಮತ್ತು ಕಪ್ಪು ನಿಲುವಂಗಿ ಧರಿಸಿದ ಕೆಲವೊಂದು ಕಲಾವಿದರು ಮತ್ತು ಬಹಳ ವಿಚಿತ್ರ ಸ್ವಭಾವದ ಹೆಂಗಸರೂ ಕಾಣಸಿಗುವರು. ಅವರೆಲ್ಲ ಬಹಳ ಪರಿಶ್ರಮದಿಂದ ಕೈಯಿಂದ

ನೂತ ಪೇಸ್ಟೆಲ್ ಬಣ್ಣಗಳ ಮತ್ತು ಅಸಹ್ಯವಾಗಿ ಹೊಲಿದ ಬಟ್ಟೆಗಳನ್ನು ಧರಿಸುವುದರಿಂದ ಕಲೆಯಲ್ಲಿ ಪುನರುತ್ಥಾನವಾಗುವುದೆಂಬ ಭ್ರಮೆ ಇರಿಸಿಕೊಂಡವರು. ನಿಜಕ್ಕೂ, ಎಷ್ಟೊಂದು ಬಗೆಬಗೆಯ ವಿಲಕ್ಷಣಗಳು ಕಣ್ಣಿಗೆ ಬೀಳುತ್ತವೆಂದರೆ, ನೀವು ಮೊದಲು ಈ ಪಟ್ಟಣದಲ್ಲಿ ವಾಸಿಸಲು ಬಂದಾಗ ಅವುಗಳತ್ತ ಬೀರುತ್ತಿದ್ದ ಕುತೂಹಲಭರಿತ ದೃಷ್ಟಿಯನ್ನು ಈಗಲೂ ಉಳಿಸಿಕೊಂಡಿರಲಾರಿರಿ.

ಹೀಗಾಗಿ ಕಿಂಗ್ಸ್ ರಸ್ತೆಯಲ್ಲಿ ನಡೆದುಬರುತ್ತಿದ್ದ ಮುದುಕನತ್ತ ಯಾರೂ ಗಮನ ಹರಿಸಲಿಲ್ಲ. ಅದು ಅಕ್ಟೋಬರ್ ತಿಂಗಳ ಮಧ್ಯಾಹ್ನ. ಶರತ್ಕಾಲದ ಚಳಿ. ಜನರಿಗೆ ಮನೆಗೆ ತೆರಳಿ ಬೆಣ್ಣೆ ಹಚ್ಚಿದ ಬಿಸಿ ಬಿಸಿ ಟೋಸ್ಟ್ ಮತ್ತು ಚಹಾ ಯಾವಾಗ ಸವಿದೇವೋ ಎನ್ನುವ ತವಕ. ಮನೆಯಲ್ಲಿ ಕೆಂಡ ಕಾಯಿಸಿಕೊಳ್ಳುವ ಸುಖ. ಅವನು ನಿಜವಾಗಿಯೂ ಮುಪ್ಪಾನುಮುಪ್ಪ ಮನುಷ್ಯ. ಬಹಳ ವಿಲಕ್ಷಣನೂ ಕೂಡ. ಅವನು ತೊಟ್ಟಿದ್ದ ಉದ್ದ, ಸಡಿಲ ನಿಲುವಂಗಿ ನೋಡಿದರೆ ಕಲಾವಿದನಾಗಿರಬಹುದೇನೋ ಎನ್ನಿಸುವಂತಿತ್ತು. ಆದರೆ ಅದರ ಹರುಕುಮುರುಕುತನ ನೋಡಿದರೆ ಅವನೊಬ್ಬ ಹಡಿಗಾರ್ಡಿ ವಾದಕನಾಗಿರಬಹುದು ಎನಿಸುತ್ತಿತ್ತು. ಅವನ ಬಿಳಿ ಗಡ್ಡ, ಎಲ್ಲೋ ದೂರ ನೆಟ್ಟ ಕಣ್ಣುಗಳಲ್ಲಿನ ಮಿಂಚು ಅವನಿಗೆ 'ಧಾರ್ಮಿಕ' ಪಟ್ಟಿ ಅಂಟಿಸುವಂತಿತ್ತು. ಅವನು ಪಾದಗಳಲ್ಲಿ ತೊಟ್ಟಿದ್ದ ಸ್ಯಾಂಡಲ್‌ಗಳು ವಿಚಿತ್ರ.

ತಾಳಿ, ಸ್ಯಾಂಡಲ್ ತೊಟ್ಟ ಪಾದಗಳಲ್ಲ; ಪಾದ, ಏಕೆಂದರೆ, ಅವನ ಎಡಪಾದ ಬರಿದಾಗಿತ್ತು, ಬಹಳ ಕೊಳೆಯಾಗಿತ್ತು. ಎಡ ಸ್ಯಾಂಡಲ್ ಅವನ ಸುಕ್ಕುಗಟ್ಟಿದ ಕೈಯಲ್ಲಿತ್ತು. ಅದರ ಪಟ್ಟಿ ಕಿತ್ತಿತ್ತು. ಪಾದಕ್ಕೆ ಕೊಂಚ ಗಾಯವೂ ಆಗಿತ್ತು. ಕುಂಟುತ್ತ ನಡೆದಿದ್ದ ಮುದುಕ ಗುನುಗುನಿಸುತ್ತಿದ್ದ : "ನನ್ನ ಸ್ಯಾಂಡಲ್‌ಅನ್ನು ಯಾರಾದರೂ ಹೊಲಿದಾರೆಯೆ ?"

ಇಷ್ಟರಲ್ಲಿಯೆ ಅವನು ಒಂದು ಅಂಗಡಿಗೆ ಬಂದ. ಅಂಗಡಿಯ ಗಾಜುಕಿಟಕಿಯ ತುಂಬ ಅಸಂಖ್ಯ ಶೂಗಳು. ಚುಕ್ಕೆಗಳು ಆಕಾಶವನ್ನು ಅಲಂಕರಿಸಿದ ತರಹ. 'ಅತ್ಯಂತ ಬಾಳಿಕೆಯುಳ್ಳ' ಎಂಬ ಚೀಟಿ ಅಂಟಿಸಿದ್ದ ಪುರುಷರ ಶೂಗಳಿದ್ದವು. 'ಅತ್ಯಂತ ಒಯ್ಯಾರದ' ಎಂಬ ಚೀಟಿಯುಳ್ಳ ಹೆಂಗಸರ ಶೂಗಳು. 'ಸರಿಸಾಟಿಯಿಲ್ಲದ ಬೆಲೆ' ಎಂಬ ಚೀಟಿ ಹೊತ್ತ ತುಪ್ಪಳದ ಬೆಡ್‌ರೂಮ್ ಸ್ಲಿಪರುಗಳು. ಆ ಮುದುಕ ನಿಂತ, ಗಾಜುಕಿಟಕಿಯನ್ನೇ ದಿಟ್ಟಿಸಿದ.

"ಅಸಹ್ಯಕರ - ಅತಿ ಅಹಸ್ಯಕರ" ಎಂದು ಗೊಣಗಿದ. "ಕಾಲ ಕೆಟ್ಟುಹೋಯಿತು" ಎಂದು ಮರುಗಿದ. ಆಗ, ಮೂಲೆಯಲ್ಲಿಟ್ಟಿದ್ದ ಕೆಲವು ಮಕ್ಕಳ ಸ್ಯಾಂಡಲ್‌ಗಳು ಕಾಣಿಸಿದವು. ಅವನ ಮುಖದಲ್ಲಿ ಕಾಠಿಣ್ಯ ಮೃದುವಾಯಿತು.

"ಮಕ್ಕಳು ಇನ್ನೂ ಸ್ಯಾಂಡಲ್ ಧರಿಸುತ್ತಾರಲ್ಲ !" ಎಂದು ಮೆದುವಾಗಿ ತನ್ನಷ್ಟಕ್ಕೆ ಅಂದುಕೊಂಡ. ಭರವಸೆ ತಾಳಿ ಅಂಗಡಿಯೊಳಕ್ಕೆ ನಡೆದ. ಒಳಗಡೆ ಹೊಳೆಯುವ, ಅಂದವಿಲ್ಲದ ಹಸಿರು ರತ್ನಗಂಬಳಿ ಹಾಸಿತ್ತು. ಅವನು ಅದರ ಮೇಲೆ ಕಾಲಿಡುತ್ತಿದ್ದಂತೆ ಅವನ ಬರಿಗಾಲು ಅದರ ಮೇಲೆ ಕೆಸರು ಮತ್ತು ರಕ್ತದ ಕಲೆ ಬಿಟ್ಟಿತು. ಅಂಗಡಿಯ ಅಂತರಾಳದಿಂದ ಬಂದ ಯುವ ಮಾರಾಟಗಾರ ಕೈ ಹೊಸೆಯುತ್ತ ಯಾಂತ್ರಿಕವಾಗಿ ಕೇಳಿದ :

"ಗುಡ್ ಆಫ್ಟರ್‌ನೂನ್, ಸರ್. ನಿಮಗೆ ಏನು ಬೇಕು ?"

ಆದರೆ, ಮುದುಕನತ್ತ ಸರಿಯಾಗಿ ನೋಡಿದಾಗ ಅವನ ಧ್ವನಿ ಬದಲಾಯಿತು.

"ಕ್ಷಮಿಸಬೇಕು, ಸರ್ – ರತ್ನಗಂಬಳಿ. ನಿಮ್ಮ ಪಾದಕ್ಕೆ ಏನಾದರೂ ತೊಂದರೆಯೆ ?"

"ಗೊತ್ತಿದೆ", ಸಮಾಧಾನದಿಂದ ಮುದುಕನೆಂದ. "ಗಾಜಿನ ಮೇಲೆ ಕಾಲಿಟ್ಟು ಪಾದಕ್ಕೆ ಗಾಯವಾಗಿದೆ. ಹಾಗಾಗಿಯೆ ನಾನಿಲ್ಲಿಗೆ ಬಂದಿರುವುದು. ನೀನು ನನ್ನ ಸ್ಯಾಂಡಲ್ ಹೊಲಿದುಕೊಡು. ನಾನದನ್ನು ಪುನಃ ಮೆಟ್ಟಿಕೊಳ್ಳುವೆ."

ಅವನು ತನ್ನ ಹರಿದ ಪಾದರಕ್ಷೆಯನ್ನು ಯುವಕನ ಮುಂದೆ ಹಿಡಿದ. ಯುವಕನೋ ಹಿಂದೆ ಕೈಕಟ್ಟಿಕೊಂಡು ಅದರತ್ತ ತಿರಸ್ಕಾರದಿಂದ ನೋಡಿದ. "ನೀನು ಬೇರೆಡೆ ಹೋಗಬೇಕಾಗುವುದೇನೋ" ಮಾರಾಟಗಾರನೆಂದ ಅವನ ಸಂಬೋಧನೆಯಲ್ಲಿದ್ದ "ಸರ್" ಈಗ ಮಾಯವಾಗಿತ್ತು. "ನಾವು ಆ ತರದ ರಿಪೇರಿಗಳನ್ನು ಮಾಡುವುದಿಲ್ಲ."

"ಹಾಗಾದರೆ, ಕೊಳ್ಳಲಿಕ್ಕೆ ಇನ್ನೊಂದು ಜೋಡಿ ಉಂಟೆ ?"

"ಅಂಥದಾವುದನ್ನೂ ನಾವು ದಾಸ್ತಾನು ಇಡುವುದಿಲ್ಲವಲ್ಲ ?"

"ಮತ್ತೆ ಅಲ್ಲಿ ಶೋಕೇಸ್‌ನಲ್ಲಿವೆಯಲ್ಲ ?"

"ಓ ಅದಾ, ಹೌದು. ಮಕ್ಕಳದು. ದೊಡ್ಡ ಸೈಜಿಗೆ ಬೇಡಿಕೆಯಿಲ್ಲ."

"ಯಾವತ್ತಾದರೂ ಹೀಗೆಯೇ", ಮುದುಕ ಗೊಣಗುಟ್ಟಿದ, ಮಕ್ಕಳೇ ಜಾಣರು. ನನಗೊಂದು ಜೋಡಿ ಮಾಡಿಕೊಡಲಾರೆಯಾ ?"

"ಕ್ಷಮಿಸಿರಿ. ನಾವು ತಯಾರಕರಲ್ಲ, ಏಜೆಂಟರು ಮಾತ್ರ. ಗುಡ್ ಆಫ್ಟರ್‌ನೂನ್". ಅವನು ಬಾಗಿಲನ್ನು ತೆರೆದು ಭದ್ರವಾಗಿ ಹಿಡಿದುಕೊಂಡ.

"ತಯಾರಿಸುವುದೂ ಇಲ್ಲ, ರಿಪೇರಿ ಮಾಡಿಕೊಡುವುದೂ ಇಲ್ಲ. ಕಸಬುದಾರರೆ ಉಳಿದಿಲ್ಲವೆ ?" ಎಂದು ಗೊಣಗುತ್ತ ಮುದುಕ ದುಃಖಿತನಾಗಿ ಹೊರನಡೆದ.

ಅದೇ ತರದ ಇನ್ನೂ ಹಲವು ಅಂಗಡಿಗಳಿದ್ದವು. ಎಲ್ಲ ಕಡೆಗೂ ಅದೇ ವರ್ತನೆ. ಒಂದರಲ್ಲಿ ಮಾರಾಟದ ಹುಡುಗ ಮ್ಯಾನೆಜರನನ್ನು ಕರೆದ. ಮ್ಯಾನೆಜರನು ಮುದುಕನಿಗೆ ಹೊರಡೆಂದ. ಇನ್ನೊಂದರಲ್ಲಿ ಉದ್ಧತ ಯುವತಿಯೊಬ್ಬಳು ಕಿಸಕ್ಕನೆ ನಕ್ಕು ಹೇಳಿದಳು : "ನಮ್ಮಲ್ಲಿ ಮೊಲದ ಚರ್ಮಗಳಿಲ್ಲ, ಥ್ಯಾಂಕ್ ಯು:" ಮೂರನೆಯ ಅಂಗಡಿಯಲ್ಲಿ ಮುದುಕ ಕೇಳದೆಯೆ ಕೆಂಪು ಮಖಮಲ್ಲಿನ ಕುರ್ಚಿಯಲ್ಲಿ ಕುಳಿತುಬಿಟ್ಟ. ಅಸಾಧ್ಯ ದಣಿವು. ಆದರೆ, ಮ್ಯಾನೆಜರನು ಕಾಜುಗಣ್ಣಿನಿಂದ ದಿಟ್ಟಿಸುತ್ತ ಪೊಲೀಸರನ್ನು ಕರೆಸುವುದಾಗಿ ಬೆದರಿಸಿದ. ಮುದುಕ ಕಷ್ಟಪಟ್ಟು ಎದ್ದು ಕಾಲೆಳೆದುಕೊಂಡು ರಸ್ತೆಗುಂಟ ನಡೆದ.

"ಈ ದೊಡ್ಡ ಪಟ್ಟಣದಲ್ಲಿ ಯಾರೂ ನನ್ನ ಶೂ ಹೊಲಿದು ಕೊಡಲಾರರೆ ?" ತನ್ನನ್ನು ತಾನೆ ಕೇಳಿಕೊಂಡ.

ಆದರೆ, ತಕ್ಷಣ ಅವನ ಹಿಂದೆ ದುಡುದುಡು ಓಡಿಬರುತ್ತಿದ್ದ ಹೆಜ್ಜೆಗಳ ಸಪ್ಪಳ. ಕಪ್ಪು ಫ್ರಾಕ್ ಧರಿಸಿ ಓಡಿಬಂದ ಹುಡುಗಿ ಅವನ ತೋಳು ತಟ್ಟಿದಳು. ಅವಳು ಬಟನ್ ಮೂಗಿನ ಹುಡುಗಿ. ಅವನು ಹೋಗಿದ್ದ ಹಿಂದಿನ ಅಂಗಡಿಯಲ್ಲಿ ಮಹತ್ವವಿಲ್ಲದ ಸಹಾಯಕಳು. ಮುದುಕನ ಬಗೆಗೆ ಕನಿಕರ.

"ಇಲ್ಲಿ ನೋಡಿರಿ," ಏದುಸಿರಿನಿಂದ ಅವಳೆಂದಳು, "ನನ್ನ ಕಕ್ಕ ಎಮಿಲಿ ರಸ್ತೆಯಲ್ಲಿ ಮೋಚಿಯಾಗಿರುವನು. ಅವನಲ್ಲಿ ಪ್ರಯತ್ನಿಸಿರಿ." ತನ್ನ ದುಡುಕಿಗೆ ನಸುನಾಚುತ್ತ ಹುಡುಗಿ ಅಂಗಡಿಗೆ ಮರಳಿ ಓಡಿದಳು. ಅವಳು ಓಡುತ್ತಿರುವಂತೆಯೆ ಮುದುಕ ಅವಳತ್ತ ಆಶೀರ್ವಾದ ಎಸೆದ. ಅವಳ ಕೆಲಸ ಉತ್ತಮಗೊಳ್ಳುತ್ತಿದೆ ಎಂದು ಮರುದಿನವೆ ಮ್ಯಾನೆಜರ್ ಹೇಳಿದ. ಅವಳ ಗೆಳತಿ ಮೇಬೆಲ್ ಅವಳಿಗೆ ಹೊಸ ನೀಲಿ ಹ್ಯಾಟ್ ಕಾಣಿಕೆಯಿತ್ತಳು. ದಾರಿಯಲ್ಲಿ ಅವಳಿಗೊಂದು ಶಿಲಿಂಗ್ ನಾಣ್ಯ ಸಿಕ್ಕಿತು. ಜೊತೆಗೆ ಸುತ್ತುತ್ತಿದ್ದ ಹುಡುಗ ಮದುವೆಯಾಗೆಂದು ಅವಳನ್ನು ಕೇಳಿದ. ಆಶೀರ್ವಾದ ಶಕ್ತಿಯ ಬಗೆಗೆ ನೀವೇನೆ ಅನ್ನಿ.

ಮುದುಕ ಕುಂಟುತ್ತ ಎಮಿಲಿ ರಸ್ತೆಗೆ ಬಂದ. ಅಲ್ಲಿ ನಿಜಕ್ಕೂ ಹಳೆಯ ಕಾಲದ ಮೋಚಿಯಂಗಡಿಯಿತ್ತು. ಎಲ್ಲ ಚೆಲ್ಲಾಪಿಲ್ಲಿ. ಮುರುಕು ಸಾಮಾನುಗಳು ಹದಮಾಡಿದ ಚರ್ಮದ

ತುಂಡುಗಳು. ಗೋಡೆಗುಂಟ ಇಳಿಬಿದ್ದ ಬೂಟು ಲೇಸುಗಳು. ಎಲ್ಲೆಲ್ಲೂ ಚರ್ಮದ ದಿವ್ಯ ಪರಿಮಳ. ಅಲ್ಲಿ ಬೆನ್ನು ಬಾಗಿಸಿ ಕೆಲಸ ಮಾಡುತ್ತಿದ್ದ. ಮಿಸ್ಟರ್ ಮಲಿನ್ಸ್ ಎದ್ದು ನೋಡಿದ. ಮುದುಕ ಒಳಗೆ ಬರುತ್ತಿದ್ದಂತೆಯೆ ಮಲಿನ್ಸ್ ಮುಗುಳ್ನಗೆಯ ಸ್ವಾಗತ ನೀಡಿದ. ಅವನಿಗೆ ವಿಚಿತ್ರವಾಗಿ ಕಾಣುವ ಗಿರಾಕಿಯೆಂದರೆ ಇಷ್ಟ.

"ನನ್ನ ಶೂ ರಿಪೇರಿ ಮಾಡಿಕೊಡಬಲ್ಲೆಯಾ ?" ಮುದುಕ ಅಳುಕುತ್ತಲೆ ಕೇಳಿದ.

"ನಿಮ್ಮ ಶೂ ರಿಪೇರಿ ಮಾಡಿಕೊಡಬಲ್ಲೆನೆ ? ಸರ್, ಚರ್ಮದಿಂದ ಮಾಡಿದ್ದು ಯಾವುದಿದ್ದರೂ ರಿಪೇರಿ ಮಾಡಬಲ್ಲೆ. ಅದೇ ನನ್ನ ಉದ್ಯೋಗ ತಾನೆ ?"

"ಕೊನೆಗೂ ಒಬ್ಬ ಕಸಬುಗಾರ ಸಿಕ್ಕನಲ್ಲ !"

ಮುದುಕ ಮಲಿನ್ಸ್‌ಗೆ ಶೂ ಕೊಟ್ಟ.

"ವಿಲಕ್ಷಣವಾದ ಶೂ", ಆಸಕ್ತಿಯಿಂದ ನೋಡುತ್ತ ಮಲಿನ್ಸ್ ಅಂದ.

"ನಾನು ಹೇಳಲೆ ?" ಅದು ನಿಮ್ಮನ್ನು ಹೊತ್ತುಕೊಂಡು ಬಹಳ ಕಾಲ ತಿರುಗಾಡಿರುವುದು. ನಾನು ಖಾತ್ರಿಯಾಗಿ ಬಲ್ಲೆ."

"ಹದಿನಾರು ನೂರು ವರ್ಷಗಳು" ಮುದುಕ ಗುನುಗುನಿಸಿದ.

"ಬಡಾಯಿಗಾರ", ಮಲಿನ್ಸ್ ತನ್ನಷ್ಟಕ್ಕೆ ತಾನೆ ಅಂದುಕೊಂಡ. "ಆದರೆ ಒಳ್ಳೆಯ ಮುದುಕ." ಅವನು ಗಟ್ಟಿಯಾಗಿ ಅಂದ, "ನೀವು ಇಷ್ಟಪಟ್ಟರೆ ಈ ಕೆಲಸ ನಾನು ಮಾಡುವೆ. ಈಗಿರುವ ಸ್ಥಿತಿಯಲ್ಲಿಯೆ ನೀವು ಮನೆಗೆ ನಡೆದು ಹೋಗಲಾರಿರಿ. ದಯವಿಟ್ಟು ಕುಳಿತುಕೊಳ್ಳಿರಿ." ಮಲಿನ್ಸ್ ಒಂದು ಎತ್ತರದ ಸ್ಟೂಲು ಮುದುಕನಿಗೆ ನೀಡಿದ. "ನೀವಿರುವುದು ಇಲ್ಲಿಂದ ಬಲು ದೂರವೆ ?"

"ಬಹಳ ಅಂದರೆ ಬಹಳ ದೂರ". ಮುದುಕ ಮುಂದೆ ಬಾಗಿ ರಿಪೇರಿ ಕೆಲಸವನ್ನು ಆಸ್ಥೆಯಿಟ್ಟು ಗಮನಿಸಿದ.

"ಸರ್, ನೀವು ಏನೂ ತಿಳಿದುಕೊಳ್ಳದಿದ್ದರೆ, ಹಳೆಯದಾದರೂ ಇದು ನಾನು ನೋಡಿದ ಅತ್ಯಂತ ಶ್ರೇಷ್ಠ ಚರ್ಮ."

"ಹಾಂ. ಚರ್ಮ ಚರ್ಮವೆ ಆಗಿದ್ದ ಕಾಲವದು."

"ಇಂಥ ಒಳ್ಳೆಯ ಚರ್ಮವನ್ನು ಈ ಹಿಂದೆ ಎಂದು ಕಂಡಿದ್ದೆನೊ ಗೊತ್ತಿಲ್ಲ. ಕ್ಷಮಿಸಿರಿ ಸರ್. ಈ ಸ್ಯಾಂಡಲ್ ಜೋಡಿಯನ್ನು ಎಲ್ಲಿ ತೆಗೆದುಕೊಂಡಿರಿ ?"

"ಅದು ನಾನೇ ಮಾಡಿದ್ದು. ನಾನು ಒಂದಾನೊಂದು ಕಾಲದಲ್ಲಿ ನಿನ್ನ ಕಸುಬಿನಲ್ಲಿದ್ದೆ."

"ಈಗ ? ಹಾಂ, ಹಾಂ. ನಾ ಹೇಳಲಾರೆ. ನಾನು ಹೇಳುವುದೇನೆಂದರೆ ನಿಮಗೆ ಕಸುಬು ಚೆನ್ನಾಗಿ ತಿಳಿದಿತ್ತು. ಈಗ ಬಿಟ್ಟಿರುವಿರಾ ?"

"ಹೌದು, ಬಿಟ್ಟು ಬಹಳ ಕಾಲವಾಯಿತು."

"ಸುನಾಮುವನ್ನು ಮಾರಿದಿರಾ ?"

"ಸುನಾಮು ? ಅದು ಕೊಳ್ಳುವುದೂ ಅಲ್ಲ, ಮಾರುವುದೂ ಅಲ್ಲ."

"ಲಂಡನ್ನಲ್ಲಿ ಅದನ್ನು ಮಾರುವುದಿದೆ. ಬಹುಶಃ ಬೇರೆ ಬೇರೆ ಊರುಗಳಲ್ಲಿ ಬೇರೆ ಬೇರೆ ವ್ಯವಹಾರ ಪದ್ಧತಿಗಳಿರಬಹುದು. ನೀವು ಕೆಲಸ ಮಾಡುತ್ತಿದ್ದ ಊರು ಯಾವುದು ?"

"ಸೊಯ್ಸೊನ್ಸ್‌ನಲ್ಲಿ."

"ಸೊಯ್ಸೊಂಗ್ ? ಐನ್ ನದಿದಂಡೆಯಲ್ಲಿರುವ ಸೊಯ್ಸೊಂಗ್ ಅಲ್ಲ !"

"ನಿನಗೆ ಆ ಊರು ಗೊತ್ತಾ ?" ಮುದುಕ ಉತ್ಸುಕನಾಗಿ ಕೇಳಿದ.

"ನನಗೆ ಗೊತ್ತೆಂದು ತೋರುತ್ತದೆ. ನಾನು ಅಲ್ಲಿ ಎರಡು ವರ್ಷ ಹೆಚ್ಚೂಕಡಿಮೆ–ಇದ್ದೆ. ಹೊರನೂಕಲ್ಪಡುವ ಮುಂಚೆ."

"ಬಹಳ ಸುಂದರ ಊರು" ಮುದುಕ ಧ್ಯಾನಿಸಿದ. "ಆದರೆ ದುಷ್ಕೃತ್ಯಗಳ, ದುರ್ವಿಚಾರಗಳ ತವರೂರು. ನಿಜಕ್ಕೂ ತವರೂರು."

"ಹೌದು, ನನಗೆ ಗೊತ್ತಿರುವ ಅತಿ ಕೆಟ್ಟ ಊರು."

"ಸಾಧ್ಯವಿದ್ದುದನ್ನೆಲ್ಲ ಮಾಡಿದೆ. ಮಾಡಿದೆ. ಆದರೆ ಅವರ ಮಧ್ಯದಲ್ಲಿದ್ದು, ಅವರ ಮಧ್ಯೆ ದುಡಿದು ಮತ್ತು ಅವರ ಶೂಗಳ ಅಟ್ಟೆಗಳ ಮೂಲಕ ಅವರ ಅವಿನಾಶಿ ಆತ್ಮಗಳನ್ನು ತಲುಪಲೆತ್ನಿಸಿದೆ. ಅವರನ್ನು ಸುಧಾರಿಸುವುದು ಸಾಧ್ಯವಿರಲಿಲ್ಲ. ಬಹುಶಃ...."

ಇಬ್ಬರೂ ಕೆಲ ಕ್ಷಣ ಹಳೆಯ ಕಾದಾಟಗಳ ಸ್ಮರಣೆಯಲ್ಲಿ ಕಳೆದುಹೋದರು. ಒಬ್ಬನಿಗೆ ಅದು ಸೈನ್ಯಗಳ ಕಾದಾಟವಾಗಿದ್ದರೆ ಇನ್ನೊಬ್ಬನಿಗೆ ಅದು ದೇವರುಗಳ ವಿರುದ್ಧ ದೇವನ ಕಾದಾಟ. ಒಬ್ಬನು ಒಂದು ದಶಕ ಮಾತ್ರ ಹಿಂದೆ ಹೋಗಿದ್ದರೆ ಇನ್ನೊಬ್ಬ ಹದಿನಾರು ನೂರು ವರ್ಷಗಳ ಹಿಂದೆ ಜರುಗಿದ ಸಂಗತಿಗಳನ್ನು ಮೆಲುಕು ಹಾಕುತ್ತಿದ್ದ.

"ಇಗೋ ಇಲ್ಲಿದೆ", ಮುಕ್ತಾಯದ ಸ್ಪರ್ಶ ನೀಡುತ್ತ ಮಲಿನ್ಸ್ ಅಂದ. "ನಿಮಗೆ ಸರಿಯೆನಿಸುತ್ತದೆಂದು ಭಾವಿಸುವೆ. ನೀವು ಕೂತೇ ಇರ್ರಿ. ನಾನೇ ನಿಮ್ಮ ಕಾಲಿಗೆ ತೊಡಿಸುವೆ."

ಮಲಿನ್ಸ್ ಚರ್ಮದ ತುಂಡುಗಳ ಮಧ್ಯೆ ಬಾಗಿ ಪ್ರಯಾಣದಿಂದ ಕೊಳೆಯಾಗಿದ್ದ ಬರಿಗಾಲಿಗೆ ಸ್ಯಾಂಡಲ್ ತೊಡಿಸಿದ. ಆಗ ಅಸಾಮಾನ್ಯ ಮುದುಕ ತನ್ನ ಸುಕ್ಕುಗಟ್ಟಿದ ಕೈಗಳನ್ನು ಮಲಿನ್ಸ್ ತಲೆಯ ಮೇಲಿಟ್ಟು ಆಶೀರ್ವಾದ ಮಾಡಿದ.

"ಅರೆ, ಅರೆ, ಇದೇನು ಹೀಗೆ ? ಮುದುಕ ಧಾರ್ಮಿಕ ಪುರುಷನಿರಬೇಕು. ಬಂದು ನಿಮ್ಮ ಆತ್ಮ ಕಾಪಾಡಲಾಗಿದೆಯೆ ಎಂದು ಕೇಳುತ್ತಾರಲ್ಲ, ಅವರಂತೆ."

ಅದನ್ನು ಕಂಡು ತಾನು ಮೂರ್ಖನಾದುದನ್ನು ನೋಡಲು ಯಾರೂ ಇಲ್ಲದ್ದು ಮಲಿನ್ಸ್‌ಗೆ ಸಂತೋಷ ನೀಡಿತು. ಆಗ ಒಮ್ಮಿಂದೊಮ್ಮೆಲೆ ಅವನಿಗೆ ವಿಚಿತ್ರ ಅನುಭವವಾಯಿತು. ಅವನಿಗೆ ಹಿಂದೆಂದಿಗಿಂತ ಆನಂದವಾಯಿತು, ತಲೆ ಹಗುರಾಯಿತು. ಸರಿಯಾಗಿ ಕಾಣದಾಯಿತು. ತಲೆ ಸುತ್ತಿತು....

ಹಾಗೆ ಆದುದು ಒಂದೇ ಒಂದು ಕ್ಷಣ. ಅವನಿಗೆ ಎಚ್ಚರ ಬಂದಾಗ ಮುದುಕ ಅಲ್ಲಿರಲಿಲ್ಲ. ಆದರೆ ಒಂದು ಬಂಗಾರದ ನಾಣ್ಯ ಬಿಟ್ಟುಹೋಗಿದ್ದ. ಅದು ಸವರನ್ ಆಗಿರಲಿಲ್ಲ, ವಿದೇಶಿ ನಾಣ್ಯವಾಗಿತ್ತು. ಪ್ರಾಚೀನವಾದದ್ದೆಂದು ಕಂಡ ಅದು ಸವಕಲಾಗಿತ್ತು. ಅವನು ಅದನ್ನು ಲಗುಬಗೆಯಿಂದ ತನ್ನ ಜೇಬಿಗೆ ಸೇರಿಸಿದ. ಏಕೆಂದರೆ, ಅವನ ಚಿಕ್ಕ ಮಗ ಟಾಮಿ ಪಾಟೀಚೀಲ ತಿರುಗಿಸುತ್ತ ಅಂಗಡಿಯೊಳಕ್ಕೆ ನುಗ್ಗಿದ್ದ.

"ಅಪ್ಪ, ಅಪ್ಪ, ಇಂದು ಮಧ್ಯಾಹ್ನ ನಾವು ಏನು ಮಾಡಿದೆವು, ಗೊತ್ತಾ ? ನಾಟಕ ! ಕೊನೆ ಪಕ್ಷ, ನಾಟಕದ ತುಣುಕು. ಶೇಕ್ಸ್‌ಪಿಯರನದು. ನಾವು ಸರದಿಯಂತೆ ಅದನ್ನು ಓದಿದೆವು. ಅಪ್ಪ, ನಾನು ರಾಜಾ ಆಗಿದ್ದೆ, ರಾಜಾ !"

"ನೀ ಏನು ಮಾತಾಡ್ತಿರೋದು ?" ಸಮಾಧಾನ ಚಿತ್ತದಿಂದ ಮಲಿನ್ಸ್ ಕೇಳಿದ. "ಯಾವ ರಾಜ ? ಏನು ನಾಟಕ ?"

"ಐದನೆಯ ಹೆನ್ರಿ. ನೋಡಿಲ್ಲಿ" ಎಂದು ಅಪ್ಪನ ಮೂಗಿನಡಿ ಶೇಕ್ಸ್‌ಪಿಯರ್ ಪುಸ್ತಕ ಹಿಡಿದ.

"ಓಹೋ, ಕಾವ್ಯ", ಮಲಿನ್ಸ್ ಮೂಸಿಟ್ಟ.

"ಓದು, ಅಪ್ಪ. ಸುಂದರವಾಗಿದೆ. ರಾಜ ಹೇಳುವ ಕೊನೆಯ ಭಾಗವನ್ನು ಓದಿ ನೋಡು–"

ಈಗ ಹಾಸಿಗೆಯಲ್ಲಿ ಒರಗಿರುವ ಇಂಗ್ಲಂಡಿನ ಸದ್ಗೃಹಸ್ಥರು
ಇಲ್ಲಿಲ್ಲದ್ದಕ್ಕಾಗಿ ತಮ್ಮನ್ನು ಅದೃಷ್ಟಹೀನರೆಂದು ಭಾವಿಸುವರು

ಸಂತ ಕ್ರಿಸ್ಪಿನ್‌ನ ದಿನದಂದು ನಮ್ಮ ಜೊತೆಗೂಡಿ ಕಾದಾಡಿದ
ಯಾರಾದರೂ ಮಾತಾಡುವಾಗ ತಮ್ಮ ಪೌರುಷ ಬೆಲೆಯಿಲ್ಲದ್ದೆಂದಾರು.

"ನೋಡು, ಇಂದು ಸಂತ ಕ್ರಿಸ್ಪಿನ್‌ನ ದಿನ. ಅಕ್ಟೋಬರ ಇಪ್ಪತ್ತೊಂದು. ಆ ಕಾರಣಕ್ಕಾಗಿಯೆ ಗುರುಗಳು ನಮ್ಮಿಂದ ಆ ನಾಟಕ ಮಾಡಿಸಿದ್ದು."

"ಓ". ಪ್ರಭಾವಿತನಾಗದೆ ಮಲಿನ್ಸ್ ನುಡಿದ. "ಇದೆಲ್ಲ ನಾಟಕಗೀಟಕ ನಿಮಗೆ ಬೇರೆ ಉಪಯುಕ್ತವಾದುದನ್ನು ಏಕೆ ಕಲಿಸುವುದಿಲ್ಲ. ಅಂತೂ ಸಂತ ಕ್ರಿಸ್ಪಿನ್ ಅಂದರೆ ಯಾರವನು ? ಅವನು ಎಷ್ಟೊತ್ತಿನಲ್ಲಿ ಮನೆಯಲ್ಲಿರುವನು ?"

"ಅವನು ನಿನ್ನಂತೆಯೆ ಮೋಚಿಯಾಗಿದ್ದ" ಟಾಮಿ ಉತ್ಸಾಹದಿಂದ ನುಡಿದ. "ಗುರುಗಳು ಹೇಳಿದರು. 'ಅವನು ಮೋಚಿಗಳನ್ನು ಕಾಪಾಡುವ ಸಂತನಾಗಿದ್ದ'. ಈಗ ಹೇಳು."

"ಹೀಗs", ಮಲಿನ್ಸ್ ನಿಧಾನವಾಗಿ ತಲೆ ತುರಿಸುತ್ತ ಅಂದ. ಬಹಳ ಹೊತ್ತಿನ ಮೇಲೆ–

"ಓ ಹೌದಾ ? ಅವನು ಮೋಚಿಗಳನ್ನು ಕಾಪಾಡುವ ಸಂತನಾಗಿದ್ದನೆ ?" ತನ್ನ ಜೇಬಿನಲ್ಲಿದ್ದ ಬಂಗಾರದ ನಾಣ್ಯದ ಮೇಲೆ ಬೆರಳಾಡಿಸುತ್ತ ವಿಚಾರಮಗ್ನನಾದ.

● ▼

ಸದಾನಂದ ಕನವಳ್ಳಿ, ಸವಿ, ಜಲದರ್ಶಿನಿಪುರ, ಧಾರವಾಡ - ೩, ✆ : ೦೮೩೬ - ೨೭ ೬೬೬೮

ವಾಸನೆಯ ವೈಶಿಷ್ಟ್ಯ

ಲಲಿತ ವಾಸನೆ

ಹಾಲಾಡಿ ಮಾರುತಿರಾವ್

ಈ ಬಾರಿಯ ಅಸಾಧ್ಯ ಬೇಸಿಗೆಯ ಬಿಸಿಲಿಂದ ಕಾದ ಮಣ್ಣಿನ ಮೇಲೆ ಮೊನ್ನೆ ಮಳೆಯ ಪ್ರೋಕ್ಷಣೆಯಾದಾಗ ಹೊರಹೊಮ್ಮಿದ ವಿಶಿಷ್ಟ ವಾಸನೆಗೆ ಮರುಳಾಗಿ ನನ್ನ ಮೊಮ್ಮಗಳು, ರೂಮಿನಲ್ಲಿ ಕುಳಿತು ಏನು ಬರೆಯಲಿ ಎಂದು ನಾನು ತಲೆ ಕೆರೆದುಕೊಳ್ಳುತ್ತಿರುವಾಗ ನನ್ನನ್ನು ಹೊರಗೆಳೆದುಕೊಂಡು ಬಂದು ಮೂಗೇರಿಸುತ್ತಾ 'ಈ ವಾಸನೆ ಎಲ್ಲಿಂದ ಬಂತು ?' ಎಂದು ಕೇಳಿದಳು.

ಇದೇ ಬಗೆಯ ಪ್ರಶ್ನೆ ನಾನೊಮ್ಮೆ ಯಾರಿಗೋ ಕೇಳಿದಂತೆ ಭಾಸವಾಯ್ತು. ಹೌದು, ನನ್ನ ಮದುವೆಯ ರಾತ್ರಿ ನನ್ನವಳ ಕೊರಳಿಗೆ ಮುತ್ತಿಟ್ಟಾಗ ನಾನು ಅವಳನ್ನು ಕೇಳಿದ್ದೆ, 'ಈ ಸುವಾಸನೆ ನಿನಗೆ ಎಲ್ಲಿಂದ ಬಂತು ?' ಎಂದು.

ನಿಜ, ಹೊಸತರಲ್ಲಿ ಅದು ಹೆಣ್ಣಿರಲಿ, ಮಣ್ಣಿರಲಿ ಅದರ ಸೋಂಕಿನಲ್ಲಿ ಆಕರ್ಷಕವಾದ ವಾಸನೆ ಇರುತ್ತದೆ. ಮಾತನಾಡಲು ಬರದವರನ್ನು 'ಮೂಕ' ಎನ್ನುವುದಕ್ಕಿಂತಲೂ ಮೂಗಿಂದ ವಾಸನೆಯನ್ನು ಪಡೆಯುವ ಅದೃಷ್ಟವಿಲ್ಲದವನನ್ನು 'ಮೂಕ' ಎಂದು ಕರೆಯಬಹುದಿತ್ತೇನೋ !

ವಾಸನೆಯಲ್ಲಿ ಎರಡು ಬಗೆ– ಸುವಾಸನೆ ಮತ್ತು ದುರ್ವಾಸನೆ. ಸುವಾಸನೆಯನ್ನು ಪರಿಮಳವೆಂದೂ, ದುರ್ವಾಸನೆಯನ್ನು ನಾವು ನಾತವೆಂದೂ ಪ್ರತ್ಯೇಕಿಸುತ್ತೇವೆ. ಒಂದು ಊದುಬತ್ತಿಯಂತೆ ಆಹ್ಲಾದಕರ, ಇನ್ನೊಂದು ಹೂಸಿನಂತೆ ಅಸಹ್ಯ. ಒಂದು ಒಗ್ಗರಣೆಗೆ ಹತ್ತಿರವಾದದ್ದು, ಬಾಯಲ್ಲಿ ನೀರೂರಿಸುವಂಥದ್ದು. ಇನ್ನೊಂದು ಚರಂಡಿಗೆ ಹತ್ತಿರವಾದದ್ದು, ವಾಂತಿ ತರಿಸುವಂಥದ್ದು. ನಾವು ಎರಡೂ ಬಗೆಯ ವಾಸನೆಗೆ ಒಳಪಟ್ಟವರು.

ವಾಸನೆಯ ಬಗ್ಗೆ ಚಿಂತಿಸುವಾಗ ನನಗೊಂದು ಗಾದೆಯ ನೆನಪಾಗುತ್ತದೆ– "ಬುದ್ಧಿವಂತನಿಗೆ ಮೂರು ಕಡೆ" ಇದನ್ನು ನನ್ನ ಅಮ್ಮ ಅರ್ಥವಾಗುವಂತೆ ವಿವರಿಸಿದ್ದಳು. ಕತ್ತಲಲ್ಲಿ ಒಬ್ಬ

ಹೋಗುತ್ತಿದ್ದ. ಅವನು ಕಣ್ಣಿಗೆ ಕಾಣದೆ ಏನನ್ನೋ ಮೆಟ್ಟಿದ. ಅದೇನಿರಬಹುದೆಂದು ಅವನು ಬೆರಳಿಂದ ಮುಟ್ಟಿದ. ತಿಳಿಯಲಿಲ್ಲ. ಮೂಸಿದ. ಆಗ ಗೊತ್ತಾಯ್ತು. ಅದು ಸೆಗಣಿಯೆಂದು! ಪೆದ್ದನಾದವನು ತಾನು ಮೆಟ್ಟಿದ್ದು ಏನು ಎಂದು ಚಿಂತಿಸುತ್ತಿರಲಿಲ್ಲ. ಅದು ಒಂದೇ ಕಡೆಯಲ್ಲಿ ಆಗಿ ಹೋಗುತ್ತಿತ್ತು. ಬುದ್ಧಿವಂತ ಹಾಗೆ ಹೋಗಲಾರ. ಮುಟ್ಟುತ್ತಾನೆ. ಮೂಸುತ್ತಾನೆ. ಮೂರು ಕಡೆ ಆಯ್ತು. ಅತಿ ಬುದ್ಧಿವಂತಿಕೆಯಿಂದ ಆಗುವ ಪ್ರಮಾದ ಈ ಗಾದೆಯಲ್ಲಿ ಹಾಸ್ಯರೂಪವಾಗಿ ಅಡಗಿದೆ.

ನಾವು ಹಲವಾರು ಬಗೆಯ ವಾಸನೆಗಳನ್ನು ಆಸ್ವಾದಿಸುತ್ತೇವೆ. ಅವುಗಳಲ್ಲಿ ನನಗೆ ಅಚ್ಚರಿ ಉಂಟುಮಾಡಿದ್ದು ಹುಟ್ಟಿದ ಮಗುವಿನ ವಾಸನೆ. ಇದನ್ನು ಸುವಾಸನೆಯೆಂದೋ ದುರ್ವಾಸನೆಯೆಂದೋ ಗುರುತಿಸುವುದು ಸಾಧ್ಯವಿಲ್ಲ. ಆಗ ಮಗು ಎನ್ನುವುದು ಒಂದು ಮಾಂಸದ ಮುದ್ದೆ. ಮಾಂಸ ಆಹಾರವಾದ ಬೆಕ್ಕು ಹುಲಿಗಳಂಥ ಪ್ರಾಣಿಗಳು ತಾವು ಹೆತ್ತಿದ್ದರಲ್ಲೇ ಒಂದೆರಡನ್ನು ತಿಂದುಬಿಡುತ್ತವಂತೆ. ಬಹುಶಃ ಪ್ರೀತಿ ಎಂಬ ಒಂದು ವಿಶೇಷ ಗುಣ ನಮ್ಮಲ್ಲಿ ಬೆಳೆಯುವ ತನಕ ನಾವು ಕೂಡಾ ಹುಟ್ಟಿದ ಮಕ್ಕಳನ್ನು ಹರಿದು ತಿನ್ನುತ್ತಿದ್ದೆವೋ ಏನೋ! ಈಗ ನಾವು ಹುಟ್ಟಿದ ಮಗುವಿನ ರಕ್ಷಣೆಗಾಗಿ ತೊಟ್ಟಿಲು ಕಟ್ಟುತ್ತೇವೆ– ಬೆಕ್ಕಿನಿಂದ. ಇರುವೆಗಳಿಂದ. ದುಷ್ಟ ಜಂತುಗಳಿಂದ ತಪ್ಪಿಸಲು ತೊಟ್ಟಿಲು ಕೇವಲ ತೂಗಿ ಮಲಗಿಸುವ ಸಾಧನವಾಗಿರಲಿಲ್ಲ. ಮಗುವನ್ನು ರಕ್ಷಿಸುವ ಕೋಟೆಯೂ ಆಗಿತ್ತು.

ವಾಸನೆ ಎನ್ನುವುದು ರಕ್ಷಣೆಗೆ ಮತ್ತು ಪೋಷಣೆಗೆ ಎಷ್ಟು ಮುಖ್ಯ ಎಂಬುದನ್ನು ನಾವು ಗಮನಿಸಬೇಕಾದರೆ ಪ್ರಾಣಿ ಪಕ್ಷಿ ಪ್ರಪಂಚದತ್ತ ಕಣ್ಣು ಹೊರಳಿಸಬೇಕು. ಹಸು ಹುಲಿಯನ್ನು ಬಹು ದೂರದಿಂದಲೇ ವಾಸನೆಯ ಬಲದಿಂದ ಗುರುತಿಸಿ ಆತ್ಮರಕ್ಷಣೆಗಾಗಿ ಕರೆಯುವ ಕಹಳೆ ಊದುತ್ತದೆ. ಕರಿದ ತಿಂಡಿ ಎಲ್ಲೆಲ್ಲಿಟ್ಟರೂ ಇರುವೆಯಾಗಲೀ, ಬೆಕ್ಕಾಗಲೀ, ನಾಯಿಯಾಗಲಿ ಬಹು ಬೇಗ ವಾಸನೆಯಿಂದ ಆಕರ್ಷಿತವಾಗುತ್ತವೆ. ಪತ್ತೇದಾರಿಗೆ ಕೂಡಾ ನಾವು ವಾಸನೆಯ ಮೂಲಕ ನಾಯಿಗಳಿಂದ ಕಳ್ಳರನ್ನು ಹಿಡಿಯಲು ಪ್ರಯೋಜನವಾಗುತ್ತದೆ. ದುಷ್ಟ ಪ್ರಾಣಿಗಳಿಗಿಂತ ಸಾಧು ಪ್ರಾಣಿಗಳಿಗೆ ಈ ವಾಸನೆಯ ವರ ಹೆಚ್ಚು ಪ್ರಮಾಣದಲ್ಲಿ ಇರುತ್ತದೆ. ಗಂಡಸರಿಗಿಂತ ಹೆಂಗಸರಿಗೆ ಈ ವರ ಹೆಚ್ಚಾಗಿ ಏಕೆ ದಕ್ಕಿದೆ ಎಂಬುದಕ್ಕೆ ಇದೇ ಕಾರಣವನ್ನು ಕೊಡಬಹುದೇನೋ!

ಗರ್ಭಿಣಿ ಹೆಂಗಸರ ವಾಸನಾಶಕ್ತಿ ಪ್ರಬಲವಾಗಿ ಅವರು ವಾಂತಿ ಮಾಡಿಕೊಳ್ಳುವುದು ಹೆಚ್ಚು. ಇದೇಕೆ ಎನ್ನುವುದರ ಅರ್ಥ ತಿಳಿದುಕೊಳ್ಳುವುದು ಕಷ್ಟವಲ್ಲ. ಹೀಗೆ ವಾಂತಿ ಮಾಡಿಕೊಳ್ಳುವ ಹೆಣ್ಣಿನಿಂದ ಗಂಡು ಸ್ವಲ್ಪ ದೂರವಾಗಿದ್ದು ಗರ್ಭಕ್ಕೆ ತೊಂದರೆ ಆಗದಂತೆ ಪ್ರಕೃತಿ ಅವಳಿಗೆ ನೆರವು ನೀಡುತ್ತದೆ!

ವಾಸನೆ ಎನ್ನುವುದಕ್ಕೆ ಬಯಕೆ ಎನ್ನುವ ಅರ್ಥವೂ ಇದೆ. ಗರ್ಭಿಣಿ ಹೆಂಗಸಿಗೆ ಗಂಡನೊಡನೆ ಸುಖ ಪಡೆಯುವುದಕ್ಕಿಂತ ಮಗುವನ್ನು ಪಡೆಯುವ ಬಯಕೆ. ಅದು ತಿನ್ನಬೇಕು, ಇದು ತಿನ್ನಬೇಕು ಎಂಬ ಬಯಕೆ ಹೆಣ್ಣಿಗೆ ಹುಟ್ಟುವುದು ಆವಾಗಲೇ. ಒಂದು ಕಡೆ ಬಯಕೆ ಇನ್ನೊಂದು ಕಡೆ ವಾಕರಿಕೆ. ಬೇಕು ಬೇಡಗಳ ದ್ವಂದ್ವದಿಂದಲೇ ಹುಟ್ಟು ಅವತರಿಸುತ್ತದೆ!

ವಾಸನೆ ಎನ್ನುವುದಕ್ಕೆ 'ಸೂಚನೆ' ಎಂಬ ಅರ್ಥವೂ ಇದೆ. ನಾನು ರಮ್ಮಿ ಆಡುವಾಗ ಮೊದಲನೇ ರೌಂಡಿನಲ್ಲಿ ಯಾರು ಯಾರು ಯಾವ ಕಾರ್ಡು ಹಾಕುತ್ತಾರೆ ಎಂದು ಗಮನಿಸುತ್ತೇನೆ. ಚಿಕ್ಕಪುಟ್ಟ ಕಾರ್ಡು ಹಾಕಿದರೆ ಸಾಕು ಅವರು ಡಿಕ್ಲೇರ್ ಮಾಡಬಹುದೆಂದು ಮಿಡಲ್‌ಡ್ರಾಪ್ ಮಾಡಿಬಿಡುತ್ತೇನೆ. ಕೆಲವೊಮ್ಮೆ ಸಾಲ ಕೇಳಲು ಬಂದವರ ಮುಖ ನೋಡಿಯೇ ನಮಗೆ ವಾಸನೆ ಬರುತ್ತದೆ!

ನನಗೆ ಎಲ್ಲದಕ್ಕಿಂತಲೂ ಆಶ್ಚರ್ಯವಾದದ್ದು ವಾಸನೆ ವ್ಯಾಪಾರಕ್ಕೆ ಕೊಟ್ಟ ಪ್ರೋತ್ಸಾಹ. ಹಲ್ಲಿನ, ಬಾಯಿಯ ವಾಸನೆ ಬರುತ್ತದೆ. ಈ ಪೇಸ್ಟ್ ತೊಗೊಳ್ಳಿ. ಈ ಬ್ರಶ್ ಉಪಯೋಗಿಸಿ. ನಿಮ್ಮ ಮೈಗೆ ವಾಸನೆ ಬರುತ್ತದೆ. ಈ ಸೋಪ್ ಉಪಯೋಗಿಸಿ. ಈ ಸೆಂಟ್ ಬಳಸಿ. ಬಚ್ಚಲು ಮನೆಯಲ್ಲಿ ಫಿನೈಲ್ ಹಾಕಿ. ಸೊಳ್ಳೆ ಓಡಿಸಲು ಗುಡ್‌ನೈಟ್ ಸುಡಿ – ಒಂದೇ ಎರಡೇ.

ವಾಸನೆಯನ್ನು ಹಿಂದಿನ ಜನ್ಮದ ನೆನಪು ಎಂಬರ್ಥದಲ್ಲಿ ಬಳಸಿದ್ದನ್ನು ನಾನು ನೋಡಿದ್ದೇನೆ. ಅದೇನೋ ನನಗೆ ಗೊತ್ತಿಲ್ಲ. ಆದರೆ ಕೆಲವರು ನಮಗೆ ಬಹಳ ಬೇಕಾದವರಾಗಿ ಬಿಡುತ್ತಾರೆ. ಕೆಲವರು ನಾವು ಎಷ್ಟು ಪ್ರಯತ್ನಪಟ್ಟರೂ ನಮಗೆ ಆತ್ಮೀಯರಾಗುವುದಿಲ್ಲ. ಇದೆಲ್ಲ ಹಳೆಯ ಜನ್ಮದ ವಾಸನೆಯ ಫಲವೆಂದು ಹೇಳಬಹುದೇ ?

ನನ್ನ ಹೆಂಡತಿ ಸತ್ತಾಗ 'ನಕ್ಷತ್ರ ಸರಿಯಿಲ್ಲ. ಆ ಆತ್ಮಕ್ಕೆ ಇಲ್ಲಿಯ ವಾಸನೆಯಿಂದ ಬಿಡುಗಡೆ ಸಿಕ್ಕಿಲ್ಲ. ಶಾಂತಿ ಮಾಡಬೇಕು' ಎಂದು ಪುರೋಹಿತರು ನನಗೆ ಹೇಳಿದರು. 'ಇಲ್ಲವೇ ಮನೆ ಬಿಡಬೇಕು' ಎಂದು ಬೆದರಿಸಿದರು. 'ಬಂದರೆ ಬರಲಿ ಪ್ರೀತಿಯಿಂದ ಬಂದರೂ ಸರಿಯೇ, ಪ್ರೇತವಾಗಿ ಬಂದರೂ ಸರಿಯೆ' ಎಂದೆ. ಈ ವರೆಗೆ ಆಕೆ ಬಂದೇ ಇಲ್ಲ ನೋಡಿ !

● ▼

ಹಾಲಾಡಿ ಮಾರುತಿರಾವ್, ೩೫೧, ಮ್ಹಾಳಸಾ ನಿವಾಸ, ಅಬ್ಬಿಗೆರೆ ಬಡಾವಣೆ, ಚಿಕ್ಕಬಾಣಾವರ ರಸ್ತೆ, ಬೆಂಗಳೂರು - ೫೬೦ ೦೯೦

೪೦ ವರ್ಷದ ಹಿಂದೆ ಅರಳಿದ ಹೂ ೩

ಜಿ. ಎನ್. ಮಂಜುನಾಥ್ **ಕವಿತೆ - ೧೪, ೧೫, ೧೬**

೧. ಪುನರಾಗಮನ

ಬಂದು ಬಾಗಿಲಿನಲ್ಲಿ ನಿನ್ನ ಚಾಟಿಯ ಬೀಸಿ
ಏಳೊ ಹಂದೆಯೆ ಎಂದು ನಿಂದಿಸುವೆಯ ?
'ಮುಂದೇನು ?' ಎಂಬೊಂದು ಪ್ರಶ್ನೆ ಎದೆಯಿಂದೇಳೆ,
ಬದುಕುವಾಸೆಯ ತಂದು ಬಂಧಿಸುವೆಯ ?
ಏನೊ ಮೋಹವ ತುಂಬಿ, ಯಾವುದೋ ಮುಸುಕಿನಲಿ
ಏನೊ ಮೋಡಿಯ ಹಾಕಿ ನಗುತಿರುವೆಯ ?
ನೂರು ದಿಣ್ಣೆಗಳಂತೆ ನೂರಾರು ಇಳಿಜಾರು,
ಯಾವುದೋ ನೆಲೆಗೆನುತ ನಡೆಸುತಿಹೆಯ !
ಇಲ್ಲಿ ನೆರಳಲಿ ತಂಗಿ ಉಸರೆಳೆದುಕೊಳಲಿಲ್ಲ
ನಾಲ್ಕು ತೆನೆಗಳ ಗೋವು ಮೇಯಲಿಲ್ಲ;
ಹಾಯಿ ಗಾಳಿಯ ಕುಡಿದು ಆಹ್ಲಾದಗೊಳಲಿಲ್ಲ
ಹಾಯಾಗಿ ಹಾಸಿನಲಿ ಮಲಗಲಿಲ್ಲ !
ಆಗಲೇ ಬಂದಯ್ಯೊ ಬಾಗಿಲಲಿ ಕಾದಿರುವೆ,
ನೀ ಪಠಾಣಿಗೇನು ಕಡಿಮೆಯಲ್ಲ !
ಸಾಲು ಬಣಬೆಗಳನ್ನು ಬಿಚ್ಚಿ ಹರಡಿದೆ ಕಣದಿ
ಸಾಲದೇನೆಂಬಂತೆ ಹಿಡಿವೆಯಲ್ಲ !

ಉರುಳಿ ಹೋದವು ಹಿಂದೆ ಸ್ವಪ್ನದಲೆ ಮೊರೆತಗಳು
ಮುಂದೆ ಮುಗಿಲೆತ್ತರಕೆ ಗಿರಿಯ ಗಡಣ
ಮುಂದೆ ಮುಂದಿನ್ನೇನೊ ದಟ್ಟಡವಿ ದುಳ್ಳುರಿಯೊ
ಅರ್ಥವಾಗದು ನಿನ್ನ ಉರಿವ ವದನ !!
ಇರುಳ ನಿದ್ದೆಯ ಮುಂಪರಿಳಿದಿಲ್ಲ – ಸಹಿಸದೆಯೆ
ಹಾರಿ ಬಂದೆಯ ಹಸಿದ ಹದ್ದಿನಂತೆ !
ಬಿಸಿಲ ಬಿಸಿಯುರುಳಿಂದ ಬಾಳ ಬಂಡಿಯನೆಳೆದು
ಉರುಳುರುಳು ಎನ್ನುವೆಯ ಎಂದಿನಂತೆ !
ಬಂದೆಯ ಬೆಳಗಾಯಿತೆಂಬ ಸಿಡಿನುಡಿಯಲೆ
ನೋವುಗಳ ಹಾವುಗಳ ಹೆಡೆಯ ತೆರೆದು !
ಹಾವಗಳ ಭಾವಗಳ, ಕುಡಿಯ ಮುರಿದು !!

೨. ಸ್ವಪ್ನ ಸೌಂದರ್ಯ

('Man is thing of dream' —Marlow)

ಬಿಳಿಮುಗಿಲ ಬೆನ್ನೇರಿ ತಿಳಿನೀಲಿ ಗಗನದಲಿ
ಮೆಲುಮೆಲನೆ ಮುಂಬರಿದು ವಿಶ್ವದೊಳಗೆಲ್ಲ
ಸುತ್ತಿ ನಾನೈತಹೆನು ನಿತ್ಯ ಚೆಲ್ವುಕೆಯಲ್ಲಿ,
ಕಾಲದೇಶಗಳೆಂಬ ಪಾಶ ನನಗಿಲ್ಲ. ||೧||

ಹುಣ್ಣಿಮೆಯ ರಾತ್ರಿಯಲಿ ಹಿರಿಮೌನ ಯಾತ್ರೆಯಲಿ
ಗರಿಮೂಡಿ ಹಾರಾಡಿ ನನ್ನ ಕಲ್ಪನೆಯು
ಅಮಿತ ಸಂತೋಷದಲಿ ಅರಸೆ ಸ್ವಾತಂತ್ರ್ಯದಲಿ
ಸೃಷ್ಟಿಯ ರಹಸ್ಯವನುಣಲದಕಿಲ್ಲ ಕೊನೆಯು. ||೨||

ಆಗಸವ ಕವಿದಿರಲು ಮುಂಗಾರ ಕಾರ್ಮುಗಿಲು,
ತಿರೆಯ ನಡುಗಿಸುತಿರಲು ಸಿಳ್ಮಿಂಚು ಭರಸಿಡಿಲು,
ಮಿಂಚಿನೊಳು ಮಿಂಚಾಗಿ, ಗುಡುಗು ಸಿಡಿಲುಗಳಾಗಿ
ಸಂಚರಿಸಲೆನಗಿಹುದು ಕಾರ್ನಿಶೆಯ ಮಡಿಲು ! ||೩||

ಚೈತ್ರಮಾಸವು ಬಂದು ನೂತ್ನ - ಸೊಗದಲಿ ಮಿಂದು
ಹೊಸಹೊಗರ ವಸನವನು ಧರೆಯು ಧರಿಸಲು,
ಹೂಗಳರಳುವ ತೆರದಿ ಹೃದಯ ವಿಕಸನಗೊಳಲು,
ಶುಕದಂತೆ ಪಿಕದಂತೆ ಆಗೆನ್ನ ಕೊರಳು. ||೪||

ಇಂತು ನೀಡೆನ್ನೆದೆಗೆ ರಸದ ಸವಿಯೂಟವನು
ಹಗಲಿರುಳಿನಲ್ಲಿ ಮೇಣೆಲ್ಲ ಋತುಗಳಲಿ.
ಅಲೆಯುತಿಹೆ ನಲಿನಲಿದು ಸೌಂದರ್ಯಪಥಗಳಲಿ
ಕಲ್ಪನೆಯ ಚಿತ್ರತರ ಸ್ವರ್ಣರಥಗಳಲಿ. ||೫||

೩. ಯಕ್ಷಗಾನ

ಬುವಿಗೆ ಯಕ್ಷ ಇಳಿದು ಬರೆ
ಕಿನ್ನರಿಯನು ನುಡಿಸುತ;
ಹರುಷ ಭರದಿ ಹಿಗ್ಗಿ ತಿರೆ
ಮೌನದಿ ತಲೆದೂಗುತ. ॥೧॥

ತಂತಿಯುಲಿಗೆ ಗಾನವೆರಸೆ
ಜಡವು ಕ್ಷಣದಿ ಪುಳಕಿತ.
ಧವಲಗಿರಿಯು ಶಿರವ ಬಾಗಿ
ಮಣಿಯದಿಹುದೆ ಹಿಗ್ಗುತ. ॥೨॥

ಪಕ್ಷಿಕುಲವು ಮೌನವಾಂತು
ಕೇಳುತಿಹುದು ನಲಿಯುತ
ಗಿಡ ಬಳ್ಳಿಯು ಚಿಗಿತು ಹೂತು
ಲಾಲಿಸುತಿದೆ ಕುಣಿಯುತ. ॥೩॥

ಭ್ರಮರ ಕುಲಕೆ ದೀರ್ಘ ನಿದ್ರೆ
ಜೋಂಪಿಸುತಿದೆ ಗಾಳಿಯು;
ಕಡಲ ಎದೆಯು ತುಂಬಿ ಬರೆ
ಅಲೆ ಅಲೆಗೂ ಮೌನವು. ॥೪॥

ಯಕ್ಷಗಾನ ಮೋಡಿಯಿಂದೆ
ವಸಂತ ಋತುವೆ ನಿತ್ಯವು;
ಗಾನ ಸೊದೆಯು ಸವಿಯನೂಡೆ
ಅಮೃತತತ್ವ-ಸತ್ಯವು. ॥೫॥

(ಮಹಾಕವಿ ಷೇಕ್ಸ್‌ಪಿಯರ್‌ನ 'The Power of Song'— ಕವನದ ಭಾವಾನುವಾದ.)

● ▼

ಜಿ. ಎಸ್. ಮಂಜುನಾಥ, ಶೆಟ್ಟಿಸರ, ಕರಿಗುಡ್ಡೆ - ೫೭೭ ೪೦೧. ಅಂಚೆ : ಎಡಜಿಗಳೇ ಮನೆ, ತಾ. ಸಾಗರ, ಜಿ. : ಶಿವಮೊಗ್ಗ ✆ : ೦೮೩೬ - ?

ಯಾಕೆ ಅಂಜಲಿ ಯಾಕೆ ಅಳುಕಲಿ

ಕವಿತೆ - ೧೭

ಜಿ. ಎಚ್. ಹನ್ನೆರಡುಮಠ

ಯಾಕೆ ಅಂಜಲಿ ಯಾಕೆ ಅಳುಕಲಿ
ಮತ್ತೆ ತೋಟವ ಮಾಡುವೆ
ನವಣೆ ಸಜ್ಜೆಯ ಜೋಳ ಬೆಳೆಗಳ
ಮತ್ತೆ ನೆಲದಲಿ ಬೆಳೆಯುವೆ ॥೧॥

ದೂರ ಮುಗಿಲಿನ ದಿಬ್ಬದಾಚೆಗೆ
ನನ್ನ ತೋಟವು ಮಲಗಿದೆ
ಬಿಳಿಯ ಜೋಳದ ಹಸಿರು ತೆನೆಗಳು
ಮಳೆಯ ಗಾಳಿಗೆ ಬಾಗಿವೆ ॥೨॥

ಬೆಳುವ ಹಕ್ಕಿಯ ಕೊಳಲ ಕಂಠವು
ಬೆಳಸಿ ಕಾಳಿಗೆ ಹಸಿದಿದೆ
ಎಳ್ಳು ಅಗಸಿಯ ಬೆಳೆಯ ಹೂಗಳು
ನೂರು ಹಕ್ಕಿಯ ಕರೆದಿವೆ ॥೩॥

ಇಲ್ಲಿ ಇರಿಯುವ ದನದ ಹಿಂಡಿದೆ
ಕಳ್ಳಿ ಕಂಟಿಯು ಹಬ್ಬಿದೆ
ಬೆಣಚು ಕಲ್ಲಿನ ಕಠಿಣ ನೆಲದಲಿ
ಕಾಲು ರಗುತವ ಕಕ್ಕಿದೆ. ॥೪॥

● ▼

ಜಿ. ಎಚ್. ಹನ್ನೆರಡುಮಠ, ಯೋಗ ಭವನ, ಇಂದ್ರಪ್ರಸ್ಥ, ನ್ಯಾಶನಲ್ ಪಾರ್ಕ್ ರಸ್ತೆ, ಗೊಟ್ಟಿಗೆರೆ ಅಂಚೆ, ಬೆಂಗಳೂರು - ೫೬೦ ೦೮೩ ✆ : ೦೮೦-೮೪೨ ೯೯೮೧

ಪುಸ್ತಕ ಪರಿಶೀಲನೆ

೧. ಕಾರ್ಯಕ್ರಮ : ಬಂದಗದ್ದೆ ರಾಧಾಕೃಷ್ಣ, ಪುಸ್ತಕ ಹೊಂಬಾಳೆ, ಕೆಳದಿ, ಸಾಗರ - ೫೭೭ ೪೦೧.
ಪ್ರ. ಮು. ೨೦೦೨, ಪು. ೪೨, ರೂ. ೨೦/-

ಬಂದಗದ್ದೆ ರಾಧಾಕೃಷ್ಣ ಪರಿಸರ ಕಾಳಜಿ, ಮಕ್ಕಳ ಶಿಕ್ಷಣ ಹಾಗೂ ಚಿತ್ರಕಲೆಯ ಕ್ಷೇತ್ರಗಳಲ್ಲಿ ಪರಿಚಿತ ಹೆಸರು. ಸಾಗರದ ಸುತ್ತಮುತ್ತಲಿನ ಮಲೆನಾಡ ಜನರ ವಿಶಿಷ್ಟ ರೀತಿ-ನೀತಿಗಳಿಂದ ಕೂಡಿದ ಬದುಕನ್ನು, ಆ ಪ್ರದೇಶವನ್ನು ದಟ್ಟವಾದ ವಿವರಗಳಲ್ಲಿ ಅವರು ತಮ್ಮ 'ಕಾರ್ಯಕ್ರಮ' ಹಾಗೂ 'ಕಾಯಿಲೆ' ಎಂಬ ಸಣ್ಣಕತೆಗಳಲ್ಲಿ ಹಿಡಿಯುವಲ್ಲಿ ಸಾಕಷ್ಟು ಯಶಸ್ಸು ಕಂಡಿದ್ದಾರೆ. ಈ ವಿವರಗಳನ್ನಲ್ಲದೆ ಹೆಚ್ಚಿನ ಸ್ವಲ್ಪನ್ನೂ ಹೇಳಲು ಸಾಧ್ಯವಾಗಿದ್ದರೆ, ಅವರು ಈ ಕತೆಗಳಿಗಾಗಿ ಆಯ್ದುಕೊಂಡ protagonist ಶ್ರೀಪತಿ ಹೆಗಡೆಯ ಪಾತ್ರದಿಂದ. ಬಿ.ಎ. ವರೆಗೆ ಕಲಿತ ಶ್ರೀಪತಿಗೆ ತನ್ನ ಸುತ್ತಲಿನ ಅಡಿಕೆ ತೋಟ, ಅಲ್ಲಿ ಕೆಲಸ ಮಾಡುವವರು, ಅಂಗನವಾಡಿ ಹಾಗೂ ಅಲ್ಲಿ ಕೆಲಸ ಮಾಡುವ ಶಿಕ್ಷಕಿಯರು ಎಲ್ಲರಲ್ಲಿಯೂ ಕುತೂಹಲ. ಹೀಗಾಗಿ ಅವುಗಳನ್ನು ವಿವರವಾಗಿ ಚಿತ್ರಿಸುವಲ್ಲಿ ಅವನಿಗೆ ಸಿಕ್ಕ ಸಣ್ಣ ಸಂತೋಷ, ರುಚಿ ಕೆಲವೊಂದು ಸಲದ ನಿರ್ಮೋಹಿತನ- ಇವೆಲ್ಲ ಓದುಗನಿಗೆ ತಿಳಿಯದೆ ಹೋಗುವದಿಲ್ಲ. ಅವನಲ್ಲಿ ಕೆಲಸ ಮಾಡುವ ಉತ್ಸಾಹ ಇದ್ದಾಗಲೂ ಅವನು ಮುಂದಾಳಾಗುವುದಿಲ್ಲ. ವಸ್ತುಸ್ಥಿತಿಯನ್ನು ಒಪ್ಪಿಕೊಂಡಾಗಲೂ ನಿರಾಶಾವಾದಿಯಾಗುವುದಿಲ್ಲ. ತನ್ನ ಸ್ವಂತ ಅಭಿಪ್ರಾಯಗಳಿದ್ದಾಗಲೂ, ಮತ್ತೊಬ್ಬರು ಹೇಳುವದನ್ನು ಎಷ್ಟು ಬೇಕೋ ಅಷ್ಟು ಆಸಕ್ತಿಯಿಂದ ಕೇಳಿಸಿಕೊಳ್ಳುತ್ತಾನೆ. ಇದು ಅಂಗನವಾಡಿಯ ವಾರ್ಷಿಕೋತ್ಸವದ ಕಾರ್ಯಕ್ರಮದ ಬಗ್ಗೆ ಹೌದು, ಹಂದಿಗೋಡು ಕಾಯಿಲೆಯ ಬಗೆಗೂ ಹೌದು. ಕಾರ್ಯಕ್ರಮದಲ್ಲಿ ಅವನಿಗೆ ಅನಿವಾರ್ಯವಾಗಿ ಬಂದ ಜವಾಬ್ದಾರಿಯನ್ನು ಉತ್ಸಾಹದಿಂದ ನೆರವೇರಿಸಿದಾಗಲೂ, ಕಾರ್ಯಕ್ರಮಕ್ಕೆ ಬರಬೇಕಾದ ಅತಿಥಿಗಳು ಬರದೇ ಇದ್ದುದು ಅವನಿಗೆ ನಿರಾಶೆ, ಸಿಟ್ಟು ತರುವುದಿಲ್ಲ. ಇದು ಒಂದು ರೀತಿಯಲ್ಲಿ ಒಂದು ವ್ಯಕ್ತಿತ್ವ ಪ್ರಕಟಗೊಳ್ಳುವ ರೀತಿ. ಅದರಂತೆ ಆ ವ್ಯಕ್ತಿತ್ವ ಹಾಗೇಕೆ ? ಎನ್ನುವದು ಸಹಜವಾಗಿ ತಿಳಿಯುವಂತೆ ಮಾಡುವ ಪರಿಸರದ ಚಿತ್ರಣ. ಕತೆಗೆ ಒಂದು ದೃಷ್ಟಿಕೋನ ತಂದುಕೊಡುವ ಪ್ರಯತ್ನ ಅವಶ್ಯವಿಲ್ಲ ಎನ್ನುವ ರೀತಿಯಲ್ಲಿ ಕತೆ ಮೂಡಿಬರುತ್ತವೆ. ಕುತೂಹಲದಿಂದ ಬರುವ, ಸಂಗ್ರಹಗೊಳ್ಳುವ ಮಾಹಿತಿ ಉಪಯುಕ್ತವಾಗಿರುವಂತೆಯೇ ಮನೋರಂಜನೆಗೂ ಅವಕಾಶ ಮಾಡಿಕೊಡುತ್ತವೆ. ಹಂದಿಗೋಡ ಕಾಯಿಲೆಗೆ ಕಾರಣ ಹುಡುಕುವದು, ಪರಿಣತರ ಅಭ್ಯಾಸದ ಜಾಡು ಹಿಡಿದು ಹೋದರೆ ಸಿಗುವ ವಿವರಗಳು, ಅದೇ ಸಂದರ್ಭದಲ್ಲಿ ಮೂರು ವರ್ಷ ಸತತ ಪರಿಶ್ರಮಪಟ್ಟು ಜ್ಯೋತಿಷ್ಯ ಕಲಿತ ಸೂರಪ್ಪ- ಇವೆಲ್ಲ ಹಲ್ಲುಬಿಗಿ ಹಿಡಿದು ನಗುವಂತಹ ರೀತಿಯಲ್ಲಿ ಮೂಡಿಬಂದಾಗಲೂ, ಕತೆಗಾರರ ಕಾಳಜಿಗಳು ನಮ್ಮನ್ನು ತಟ್ಟದೆ ಹೋಗುವದಿಲ್ಲ.

– **ದುಷ್ಯಂತ ನಾಡಗೌಡ**, ವೆಂಕಟಾದ್ರಿ, ೧೨೪, ೨ ನೇ ಮೇನ್, ಗಾಂಧಿನಗರ, ಧಾರವಾಡ -೪

೨. ಲೌಕಿಕ - ಅಲೌಕಿಕ : ಡಾ. ರಾಜಾರಾಮ ಹೆಗಡೆ, ಆನಂದಕಂದ ಗ್ರಂಥಮಾಲೆ, ಮಲ್ಲಾಡಿಹಳ್ಳಿ. ಪ್ರ.ಮು. ೨೦೦೧, ಪು.೨೩೯, ರೂ. ೨೦೦/-

ಡಾ. ರಾಜಾರಾಮ ಹೆಗಡೆಯವರ ೬ ವಿದ್ವತ್ಪೂರ್ಣ ಸಂಶೋಧನ ಲೇಖನಗಳ ಸಂಗ್ರಹ 'ಲೌಕಿಕ - ಅಲೌಕಿಕ' ಭಾರತೀಯ ಇತಿಹಾಸದಲ್ಲಿ ಪ್ರಭುತ್ವ ರಚನೆ ಮತ್ತು ಮತ ಸಂಪ್ರದಾಯಗಳು

ವಿವಿಧ ಕಾಲಘಟ್ಟಗಳಲ್ಲಿ. ವಿವಿಧ ನೆಲಪ್ರದೇಶಗಳಲ್ಲಿ. ವಿವಿಧ ರೀತಿಯಲ್ಲಿ ಕಂಡುಬರುವುದರ ಹುಡುಕಾಟವಾಗಿದೆ. ನಾವು ಓದಿದ ಇತಿಹಾಸವನ್ನು ಸಮಕಾಲೀನ ಸೈದ್ಧಾಂತಿಕತೆಯ ಕಣ್ಣುಗಳಿಂದ ಪರಿವಿಕ್ಷಿಸತೊಡಗಿದಾಗ ಭಾರತೀಯ ಸಾಂಸ್ಕೃತಿಕ ಇತಿಹಾಸವು ಗೊಂದಲಗಳ ಗೂಡು ಎನ್ನಿಸುವುದು ಸಹಜ. ಧರ್ಮನಿರಪೇಕ್ಷ ಸ್ವತಂತ್ರ ಸಾರ್ವಭೌಮ ರಾಷ್ಟ್ರವನ್ನು ಕಟ್ಟುವ ಬದ್ಧತೆಯನ್ನು ನಾವಿಂದು ರೂಢಿಸಿಕೊಳ್ಳಬೇಕಾಗಿದೆ. ಸೀಮಿತ ಆಕರಗಳ ಪರಿಧಿಯಲ್ಲಿಯೇ ವಸ್ತುನಿಷ್ಠವಾದ ಸಾಂಸ್ಕೃತಿಕ ಐತಿಹಾಸಿಕ ಸಂಗತಿಗಳ ವಿಶ್ಲೇಷಣೆ ವ್ಯಾಖ್ಯಾನಗಳನ್ನು ಸತ್ಯದ ಇತಿಮಿತಿಗಳಲ್ಲಿ ಇಂದಿನ ಬದುಕನ್ನು ಶ್ರೀಮಂತಗೊಳಿಸಲು ರೂಪಿಸಿಕೊಳ್ಳಬೇಕಾಗಿದೆ. ಲೌಕಿಕ - ಅಲೌಕಿಕದ ಪರಿಭಾಷೆ. ನಿಖರ ಅನ್ನಿಸಬಹುದಾದ ಶಬ್ದಾರ್ಥಗಳು. ಬುದ್ಧಿ ವಿವೇಕಗಳು ಒಪ್ಪುವಂತಹ ನಿರ್ಣಯಗಳು. ಜಾಗರೂಕತೆಯಿಂದ ಪಾಲಿಸಿಕೊಂಡು ಬಂದ ಅಕೆಡೆಮಿಕ್ ಶಿಸ್ತಿನ ಪ್ರಬಂಧಗಳ ಓದುಗರನ್ನು ಆಳಕ್ಕಿಳಿಸುತ್ತವೆ. ವಾಚಕ ತನ್ನ ಪೂರ್ವಾಗ್ರಹ. ಸಂದೇಹಗಳನ್ನು ಸರಿಪಡಿಸಿಕೊಂಡು ಹೊಸ ಆಯಾಮಗಳಿಂದ ಭಾರತೀಯ ಇತಿಹಾಸದ ಸಾಂಸ್ಕೃತಿಕ ಪರಂಪರೆಗಳನ್ನು ಕಾಣುವ ನೋಟವನ್ನಿಲ್ಲಿ ಪಡೆಯುತ್ತಾನೆ. ಪ್ರಭುತ್ವ ಮತ್ತು ಮತ ಪಂಥಗಳು ಅಧಿಕಾರ ಛತ್ರದ ನಿರ್ಮಾಣ. ಸಾಮಾಜಿಕ ಆರ್ಥಿಕ ಭೌತಿಕ ಯಾಜಮಾನ್ಯಕ್ಕಾಗಿ ನಡೆಸಿದ ಹೋರಾಟ ಹೊಂದಾಣಿಕೆಗಳು ಕುತೂಹಲವನ್ನು ಹುಟ್ಟಿಸುತ್ತವೆ. ಸಾಂಸ್ಕೃತೀಕರಣಗೊಂಡ ಇತಿಹಾಸದ ಇಲ್ಲಿಯ ಅಧ್ಯಯನ ಚೇತೋಹಾರಿಯಾದ ರಂಜನೀಯವಾದ ಸತ್ಯದ ಪರಿಚಯವನ್ನು ಮಾಡಿಕೊಡುತ್ತದೆ. ಹಿಂದಣ ಅಲೌಕಿಕ ಜೀವನಕ್ಕೆ ಇಂದಿನ ಲೌಕಿಕ ಮೆರಗನ್ನು ಲೇಪಿಸುವ ಹೆಗಡೆಯವರ ಪ್ರಬಂಧಗಳ ಗಟ್ಟಿಯಾದ ಲೇಖನ ವಿನ್ಯಾಸ ನಮ್ಮನ್ನು ಬೆರಗುಗೊಳಿಸುತ್ತದೆ. ಕನ್ನಡದಲ್ಲಿ ಸಮಾಜೋತಿಹಾಸ ಶಾಸ್ತ್ರವನ್ನು ಬೆಳೆಸುವ ಭದ್ರ ಬರವಣಿಗೆ. ಪಾರಿಭಾಷಿಕ ಪ್ರಯೋಗ ಇಲ್ಲಿ ಆರೂಢಗೊಂಡಿದೆ. ಪ್ರಜ್ಞೆಗೆ ಪಂಜು ತೋರುವ ಈ ಥರದ ಶೋಧನ ಸಾಹಿತ್ಯ ಇಂದಿನ ಅಗತ್ಯ.

— ಶಿವಶಂಕರ ಹಿರೇಮಠ. ೧೩, ಮಂಜುನಾಥ ಕಾಲನಿ. ೨ನೇ ಮೇನ್. ಶಿವಗಿರಿ. ಧಾರವಾಡ -೭

೩. ವಾಸ್ತವದ ಕನವರಿಕೆ : ಡಿ. ಬಿ. ರಜಿಯಾ. ಲೋಹಿಯಾ ಪ್ರಕಾಶನ. ಕ್ಷಿತಿಜ. ಕಪ್ಪಗಲ್ಲು ರಸ್ತೆ. ಗಾಂಧೀನಗರ. ಬಳ್ಳಾರಿ - ೩. ಪ್ರ.ಮು. ೨೦೦೨. ಪು. ೬೪. ರೂ. ೩೦/-

ಡಿ. ಬಿ. ರಜಿಯಾ ಅವರು 'ಭಾಯಿ'. 'ಕಳೆದು ಹೋಗುತ್ತೇವೆ'. 'ಬುತ್ತಿ' ಕವನಸಂಕಲನಗಳ ಮೂಲಕ ಈಗಾಗಲೇ ಹೆಸರು ಮಾಡಿದ್ದಾರೆ. 'ವಾಸ್ತವದ ಕನವರಿಕೆ' ಅವರ ೯ ಸಣ್ಣಕತೆಗಳ ಸಂಕಲನ. ಒಳಮನಸ್ಸಿನ ಸೂಕ್ಷ್ಮ ಸಂವೇದನೆ ಕಲಕಲ್ಪಟ್ಟಾಗ 'ಸಹಜವಾಗಿಯೇ ಅದರ ಸುತ್ತ ಹೆಣೆಯಲ್ಪಟ್ಟ ಭಾವನೆಗಳ ಹಂದರವನ್ನು ರಜಿಯಾರವರ ಕತೆಗಳಲ್ಲಿ ಗುರುತಿಸಬಹುದು. ಈ ಕತೆಗಳಿಗೆ ವಿವಿಧ ಧರ್ಮದ ಚೌಕಟ್ಟುಗಳಿವೆ. ಸ್ತ್ರೀ ಯಾವುದೇ ಧಾರ್ಮಿಕ ಚೌಕಟ್ಟಿಗೊಳಪಟ್ಟಿದ್ದರೂ ಆಕೆಯ ಬದುಕಿನ ಆಸೆ-ನಿರಾಸೆ-ನೋವು. ನಲಿವು ತಲ್ಲಣಗಳು ಹೆಚ್ಚು ಕಡಿಮೆ ಒಂದೇ ತೆರನಾಗಿರುತ್ತವೆ ಎಂಬುದನ್ನು ಲೇಖಕಿ ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಹೀಗಾಗಿ ಇಲ್ಲಿನ ಪಾತ್ರಗಳು ಜಾತಿ ಮತಗಳನ್ನು ಮೀರಿ ನಿಂತಿವೆ. ಇವರ ಕತೆಗಳನ್ನೆಲ್ಲಾ ಜಾಲಾಡಿದರೆ ಕೆಟ್ಟ ಪಾತ್ರಗಳು ಸಿಗುವುದಿಲ್ಲ. ಸ್ವಲ್ಪ ಕೆಟ್ಟತನವಿದ್ದ ಪಾತ್ರಗಳೂ ತಾವು ಮಾಡಿದ ಕೃತ್ಯಕ್ಕೆ ಪಶ್ಚಾತ್ತಾಪ ಪಟ್ಟು ಜೀವ ತೆರುವುದನ್ನು ಗಮನಿಸಬಹುದು. 'ಮಿಲನ' ಮತ್ತು 'ನ್ಯಾಯವಿದೆಯೇ ?' ಕತೆಗಳೆರಡರ ಕೇಂದ್ರಬಿಂದುಗಳಾದ 'ಹಸೀನಾ' ಮತ್ತು 'ಜೀನತ್' ಅಸಹಾಯಕ ಮುಸ್ಲಿಂ ಯುವತಿಯರು. ಬಹುಶಃ ಮುಸ್ಲಿಂ ಹೆಣ್ಣುಮಕ್ಕಳ ಅಸಹಾಯಕತೆಯನ್ನು

ಧರ್ಮದ ಚೌಕಟ್ಟಿನೊಳಗೇ ಅನುಭವಿಸಿದ ನೋವನ್ನು ಚಿತ್ರಿಸುವುದೇ ಈ ಎರಡೂ ಕತೆಗಳ ಪ್ರಧಾನ ಆಶಯ. ಪುರುಷರ ದಬ್ಬಾಳಿಕೆ, ವರದಕ್ಷಿಣೆಯ ದುರಾಸೆ, ಆ ಮೂಲಕ ಸ್ತ್ರೀ ಶೋಷಣೆಯ ಚಿತ್ರ ಮನಮುಟ್ಟುವಂತೆ ಚಿತ್ರಿತವಾಗಿದೆ. 'ಉಸಿರು' ಕತೆಯಲ್ಲಿ ಹೆಣ್ಣು ಪರಾವಲಂಬಿಯಾದರೆ, ಆರ್ಥಿಕ ಸ್ವಾತಂತ್ರ್ಯ ಇಲ್ಲವಾದಾಗ ವೃದ್ಧಾಪ್ಯದಲ್ಲಿ ಹೀಗೆ ಪ್ರತಿಯೊಂದಕ್ಕೂ ಮಕ್ಕಳ ಮುಂದೆ ಕೈ ಚಾಚಬೇಕಾಗುತ್ತದೆ ಎಂಬುದು ಮನಮುಟ್ಟುವಂತಿದೆ. ತನ್ನ ದಯನೀಯ ಸ್ಥಿತಿಗಾಗಿ ಕುಗ್ಗಿ ಹೋಗುವ ತಾಯಿಯ ಚಿತ್ರ ಪರಿಣಾಮಕಾರಿಯಾಗಿದೆ. 'ಅಭಿಮಾನಿಯ ಅರ್ಹತೆ' ಯಲ್ಲಿ ವಿದ್ಯಾವಂತ ಸುಸಂಸ್ಕೃತ ಗಂಡಸರೂ ಕೂಡಾ ಹೇಗೆ ಹೆಣ್ಣೆಂದರೆ ಭೋಗದ ವಸ್ತು, ಕಾಮದ ಬೊಂಬೆ ಎಂದು ಭಾವಿಸುತ್ತಾರೆ– ಸಾಹಿತಿಗಳೂ ಉಳಿದವರಿಗಿಂತ ಈ ವಿಚಾರದಲ್ಲಿ ಬೇರೆಯೇನಲ್ಲ – ಅವರ ಬರಹಕ್ಕೂ-ಬದುಕಿಗೂ ಅಜಗಜಾಂತರ ವ್ಯತ್ಯಾಸವಿರಬಹುದು– ಎಂಬ ಚಿತ್ರಣವಿದೆ. 'ಹೀಗೊಂದು ವಾಸ್ತವದ ಕನವರಿಕೆ' ಇಂದಿನ ಯುವ ಜನತೆಯ ಅಸಹಾಯಕ ಸ್ಥಿತಿಯ –ದೌರ್ಬಲ್ಯದ ನೈಜ ಚಿತ್ರಣವಾಗಿದೆ. 'ಗೃಹಪ್ರವೇಶ' ಕತೆಯಲ್ಲಿ ವಿದ್ಯಾವಂತರೂ ಕೆಲವೊಮ್ಮೆ ಮೇಲರಿಮೆ ಬೆಳೆಸಿಕೊಂಡು ಸ್ವಪ್ರತಿಷ್ಠೆಯೊಂದಿಗೆ ತಮ್ಮ ಹೆಂಡತಿ ಮಕ್ಕಳಿಂದಲೂ ದೂರವಾಗಿ ಹೇಗೆ ವಿನಾಶದ ಅಂಚನ್ನು ತಲುಪುತ್ತಾರೆ, ಕೊನೆಗೂ ಮಾನವೀಯತೆಯಿದ್ದ ಅವರ ಪತ್ನಿ ಹೇಗೆ ಅವರ ನೆರವಿಗೆ ಧಾವಿಸಿ ಬರುತ್ತಾಳೆ ಎಂಬುದನ್ನು ಕಲಾತ್ಮಕವಾಗಿ ಚಿತ್ರಿಸಲಾಗಿದೆ. 'ಪರಿಪೂರ್ಣ' ಕತೆ ಅಂಗವಿಕಲೆಯಾದ ಅವಿವಾಹಿತೆಯ ಆದರ್ಶ ಬದುಕನ್ನು ಚಿತ್ರಿಸುತ್ತದೆ. 'ಒಂದು ಸಾವಿನ ಸುತ್ತ' ಮತ್ತು 'ಯಾರು ಹೊಣೆ' ಗಮನಾರ್ಹ ಕತೆಗಳು. ಈ ಕತೆಗಳಲ್ಲಿ ರಜಿಯಾರವರು ತಮ್ಮ ಸುತ್ತಲ ಪರಿಸರದಲ್ಲಿ ತಾವು ಕಂಡ, ಕೇಳಿದ ಅದೆಷ್ಟೋ ವಿಚಾರಗಳಿಗೆ ಕಥಾ ಹಂದರವೊಂದನ್ನು ಕಟ್ಟಿಕೊಟ್ಟಿದ್ದಾರೆ. ಅದಕ್ಕೆ ತಕ್ಕುದಾದ ಭಾಷೆ, ನೇರ ನಿರೂಪಣೆಗಳಿರುವುದರಿಂದ ಕತೆಗಳೆಲ್ಲವೂ ಚೆನ್ನಾಗಿ ಓದಿಸಿಕೊಂಡು ಹೋಗುತ್ತವೆ.

— **ಡಾ. ಕೆ. ವಿ. ಜಲಜಾಕ್ಷಿ,** ಮುಖ್ಯಸ್ಥೆ, ಕನ್ನಡ ವಿಭಾಗ, ವಿ.ವಿ.ಕಾಲೇಜು, ಮಂಗಳೂರು-೫೭೫ ೧೦೧

೬. ಶೇಷ : ಡಾ. ದಿವಸ್ಪತಿ ಹೆಗಡೆ, ಅಕ್ಷಯ ಪ್ರಕಾಶನ, ೧೩, ೪ ನೇ ಕ್ರಾಸ್, ಹನುಮಂತನಗರ, ಬೆಂಗಳೂರು-೧೯, ಪ್ರ.ಮು. ೨೦೦೦, ಪು. ೧೪೯, ರೂ. ೭೫/-

'ಮಹಾಬಲ' ಎಂಬ ಹೆಸರಿನಲ್ಲಿ 'ಪ್ರಜಾವಾಣಿ' ವಾರಪತ್ರಿಕೆಯಲ್ಲಿ ಧಾರಾವಾಹಿಯಾಗಿ ಮೂಡಿಬಂದು ಈಗ 'ಶೇಷ' ಎಂಬ ಹೆಸರಿನಲ್ಲಿ ಕಾದಂಬರಿಯಾಗಿ ನಮ್ಮೆದುರಿಗಿದೆ. ಇಲ್ಲಿ ಬರುವ ಪಾತ್ರಗಳು ಹೇರಳ. ಪ್ರತಿ ಪಾತ್ರವೂ ತಾನೇ ತಾನಾಗಿ ಒಂದೊಂದು ವ್ಯಕ್ತಿತ್ವವಾಗಿ ಬೆಳೆಯಬಹುದಾದ ವಿಪುಲ ಅವಕಾಶವಿದೆ. ಆದರೆ ಕೇವಲ 'ಮಾಬ್ಲುಕಾಕ'ನಿಗೆ ಮಾತ್ರ ಕೇಂದ್ರೀಕೃತವಾಗಿರುವ ಕಾದಂಬರಿ ಓದುಗರಿಗೆ ಕಸಿವಿಸಿ ಉಂಟುಮಾಡುತ್ತದೆ. ಇದೇ ಇದರ ದೊಡ್ಡ ಮಿತಿ. ಆದ್ದರಿಂದಲೇ ಮಲೆನಾಡಿನ ಸುಂದರ ವರ್ಣನೆಗಳು, ಉತ್ತರ ಕನ್ನಡ ಜಿಲ್ಲೆಯ ಭಾಷೆಯ ಸೊಗಡು ಎಲ್ಲವೂ ಒಂದು ಹಂತದಲ್ಲಿ ಸಾಕೆನ್ನಿಸಿ ಬಿಡುತ್ತದೆ.

ಇಡೀ ಕಾದಂಬರಿ ಓದಿದ ನಂತರವೂ ಮಾಬ್ಲುಕಾಕನ ವ್ಯಕ್ತಿತ್ವ, ಅವನ ವರ್ತನೆಗಳು, ಮತ್ತು ಅವನ ಸಾವು ಯಾವುದೂ ತೆರೆಕೊಳ್ಳುವುದಿಲ್ಲ. ಮತ್ತು ಓದುಗನನ್ನು ಚಿಂತನೆಗೂ ಹಚ್ಚುವುದಿಲ್ಲ. ಏಕೆಂದರೆ ಯಾವುದರ ಕುರಿತೂ ಜವಾಬ್ದಾರಿ ಇಲ್ಲದ ಮಾಬ್ಲುಕಾಕನಿಗೆ ತನ್ನ ಬದುಕು ಮತ್ತು ಜೀವದ ಬಗ್ಗೆ ಕೂಡ ಎಚ್ಚರ ಇದ್ದಂತೆ ಅನ್ನಿಸುವುದೇ ಇಲ್ಲ. ಈ ಜವಾಬ್ದಾರಿಹೀನತೆ ನಿರ್ಲಿಪ್ತತೆ, ಸ್ಥಿತಪ್ರಜ್ಞತೆ, ಶೂನ್ಯತೆಯ ದೃಷ್ಟಿಕೋನ, ಲೌಕಿಕ ವ್ಯಕ್ತಿಯ ಬುದ್ಧಿವಂತಿಕೆ, ವೈರಾಗ್ಯ ಅರಿತ ಯೋಗಿ ಹೀಗೆ ಯಾವೊಂದೂ ಇಲ್ಲದ ವ್ಯಕ್ತಿತ್ವವಾಗಿಬಿಡುತ್ತವೆ.

ಆದ್ದರಿಂದ ಅವನ ಹುಟ್ಟು, ಬದುಕು, ಬಾಳು, ಸಾವು ಯಾವುದೂ ಯಾರನ್ನೂ ತಟ್ಟುವುದೇ ಇಲ್ಲ. ಈ ಕಾದಂಬರಿ ಇಂತಹ ವ್ಯಕ್ತಿತ್ವಕ್ಕೆ ಕೇಂದ್ರೀಕೃತವಾಗಿರುವುದರಿಂದ ಅತ್ಯಂತ ಸಪ್ಪೆಯಾಗಿ, ಬೋರ್ ಹೊಡೆಸುವಂತೆಯೇ ಮುಂದುವರಿದು ಅಂತೂ ಮುಗಿಯುತ್ತದೆ.

ಇದರೊಂದಿಗೆ ಇಲ್ಲಿ ಬರುವ ದೊಡ್ಡ ಕುಟುಂಬದ ಇವರ ಪಾತ್ರಗಳು ಬೇಜವಾಬ್ದಾರಿ ನಾಯಕನ ಮುಷ್ಟಿಯಲ್ಲಿ ನರಳಿದ್ದು, ಅವರ ಆತಂಕ, ಕನಸು, ಯಾತನೆಗಳು, ಅವಿವಾಹಿತ ಹೆಣ್ಣುಗಂಡುಗಳ ಭಗ್ನ ಹೃದಯಗಳು, ಸುಟ್ಟ ಆಸೆಗಳು, ಕಮರಿದ ಕನಸುಗಳು.... ಎಲ್ಲವೂ ಓದುಗ ತಾನೇ ಅರಿತುಕೊಂಡು ತನಗೆ ಬೇಕಾದಂತೆ ಬೆಳೆಸಬೇಕಾಗಿದೆ. ಈ ಕಾದಂಬರಿ ಓದಿದ ಯಾರಿಗೂ ಮಾಬ್ಲುಕಾಕ ಒಂದು ಪ್ರಶ್ನೆಯಾಗಿ ಕಾಡುವುದೇ ಇಲ್ಲ.

– ಡಾ.ಎಂ.ಆರ್. ಮಂದಾರವಲ್ಲಿ, ಕೇರ್ ಜಿ.ಕೆ. ರವೀಂದ್ರಕುಮಾರ್, ಆಕಾಶವಾಣಿ, ಮೈಸೂರು

೪. ರೆಕ್ಕೆ-ಗೂಡು-ಆಕಾಶ : ಸಿ. ವಿ. ಶೇಷಾದ್ರಿ **ಹೊಳವನಹಳ್ಳಿ, ಕಮಲ ಪ್ರಕಾಶನ, ರಾಮಮಂದಿರ, ಹೊಳವನಹಳ್ಳಿ, ೫೭೨ ೧೨೧, ಪ್ರ.ಮು. ೨೦೦೧, ಪು. ೧೫೨, ರೂ. ೪೦/-**

ಗದ್ಯಗಂಧಿಯಾದ ಈ ಸಂಕಲನದ ಕವಿತೆಗಳಲ್ಲಿಯ ಆಂತರಿಕ ಲಯ, ಅಲ್ಲಲ್ಲಿ ಹೊಸತನ, ಚಿತ್ರಕ ಶಕ್ತಿಗಳು ಆಸಕ್ತಿಯಿಂದ ಓದಿಸಿಕೊಂಡು ಹೋಗುತ್ತವೆ. ಇದು ಕವಿಯ ಪ್ರಥಮ ಕವನಸಂಕಲನವಾಗಿದ್ದರೂ ಕವನರಚನೆಯ ಪ್ರಾಥಮಿಕ ಸಿದ್ಧಿಗೇನೂ ಕೊರತೆಯಿಲ್ಲ. ಅನೇಕ ಚಿಕ್ಕ, ಚೊಕ್ಕ ಕವಿತೆಗಳು ಇಲ್ಲಿ ಮಿಂಚಿವೆ. ಈ ಸಂಕಲನದಲ್ಲಿಯ ಅನೇಕ ಚಿಕ್ಕ ಕವಿತೆಗಳು ಬತ್ತಿದ ಕಾಲುವೆಯ ನಿರಾಸೆಗಳಾಗಿಯೊ; ಬುಗುರಿಹಗ್ಗದ ನೇಣು, ಕೊಳಲ ಬಂದೂಕುಗಳ ಬೀಭತ್ಸ ರೂಪದಲ್ಲಿಯೊ ಸ್ಫೋಟಗೊಂಡಿವೆ. ಕೆಲ ಕವನಗಳಲ್ಲಿ ಹೆಚ್ಚು ವಾಚ್ಯತೆಯಿದೆ.

ಹಿರಿಯ ಕವಿಗಳಾದ ಎಚ್. ಎಸ್. ಶಿವಪ್ರಕಾಶ, ಬಿ. ಆರ್. ಲಕ್ಷ್ಮಣರಾವ್ ಅವರು ನಿಖರವಾಗಿ ಗುರುತಿಸಿ ಹರಸಿದ ನುಡಿಗಳು ಇವರ ಮುನ್ನಡೆಗೆ ತೋರುಗಂಬಗಳಾಗಿವೆ. ಸ್ವತಃ ಕವಿ ಈ ಸಂಕಲದ ಪ್ರಾರಂಭದಲ್ಲಿಯೇ ಸಲ್ಲಿಸಿದ ಪ್ರಣಾಮದಲ್ಲಿ ತನ್ನೂರ ಜಯಮಂಗಲಿ ನದಿ ಬತ್ತುತ್ತ ಹರಿಯುತ್ತ ಸಾಗಿದ ಚಿತ್ರ ಕಟ್ಟಿದ್ದಾರೆ. ಮುಂದಿನ ದಿನಗಳಲ್ಲಿ ಮುಂಬರುವ ಕೃತಿಗಳಲ್ಲಿ ಅವರ ಕಾವ್ಯಗಂಗೆ ಬತ್ತಲಾರದ ಜಯಮಂಗಲಿಯಾಗಲಿ.

– ನರಸಿಂಹ ಪರಾಂಜಪೆ, ಚೈತ್ರ, ಪ್ರಶಾಂತನಗರ, ೪ ನೇ ಕ್ರಾಸ್, ಸಾಧನಕೇರಿ, ಧಾರವಾಡ-೮

೫. ಅನನ್ಯ : ಸಿದ್ಧರಾಮ ಹಿರೇಮಠ
ಆಲೋಚನ ಪ್ರಕಾಶನ, ಕೊಪ್ಪಳ, ಪ್ರ.ಮು. ೨೦೦೨, ಪು. ೪೯, ರೂ. ೩೦/-

'ಅನನ್ಯ' ಸಿದ್ಧರಾಮ ಹಿರೇಮಠ ಅವರ ೩ ನೆಯ ಕವನ ಸಂಕಲನ. ಈ ಸಂಕಲನದಲ್ಲಿ ೨೭ ಕವನಗಳಿವೆ. ಸಂಕಲನದ ಹೆಚ್ಚಿನ ಕವನಗಳು ವೈಯಕ್ತಿಕ ಅನುಭವದ ಅಭಿವ್ಯಕ್ತಿ. ಈ ಸಂಕಲನವನ್ನು ಗಮನಿಸಿದಾಗ ಇಡೀ ಕವನಕ್ಕಿಂತ ಹನಿಗವನದ ಮೇಲೆ ಹಿರೇಮಠರು ಪ್ರಭುತ್ವ ಸಾಧಿಸಿರುವುದು ಕಂಡುಬರುತ್ತದೆ. 'ಮಣ್ಣ ಹೊದಿಕೆ/ಹೊದ್ದವನಿಗೊಂದೇ, ಕಸಿವಿಸಿ–/ನನಗೆ ನಿಂತ ಕಾಲ/ಚಲಿಸುತ್ತಿರುವುದಲ್ಲ/ಇವರಿಗೆಲ್ಲ !' ಇದರಂತೆ ಚಂದ್ರನನ್ನು ಕುರಿತು 'ಕೃಷ್ಣ ಸುಂದರಿಗೆ/ಯಾರಿಟ್ಟರೋ/ಬೆಳ್ಳಿ ಬೊಟ್ಟು !' ಎಂಬ ಹನಿಗವನಗಳು ಘಟ್ಟಿಯಾಗಿವೆ. ಕಲ್ಪನೆ ಹಾಗೂ ವಾಸ್ತವತೆಗಳೆರಡೂ ಹಿರೇಮಠರ ಕವನದ ಎರಡು ಮುಖಗಳು. 'ಇವಳು/ಮೈ

ಅರಳಿಸಿವರೆ/ಮಲೆನಾಡಿನ ಹಸಿರು/ಮುಗಿದರೆ/ಬಯಲು ಸೀಮೆಯ ಬಿಸಿಲು!'. 'ಬೀಸುವ ಬಿರುಗಾಳಿ/ಗೇನು ಗೊತ್ತು/ತಾಯ್‌ಹಕ್ಕಿ ಮರಿಗಳಿಗೆ/ಮುದ್ದಿಸುವ ಗತ್ತು!' ಎಂಬ ಸಾಲುಗಳಲ್ಲಿ ಮೇಲಿನ ಅಂಶಗಳ ಜೊತೆಗೆ ಕವನ ರಚನಾಚಾತುರ್ಯವೂ ಕಂಡುಬರುತ್ತದೆ. ಪರಿಸರ, ದೇಶಭಕ್ತಿ, ಸಾಮಾಜಿಕ ಕಳಕಳಿ, ವ್ಯಕ್ತಿಚಿತ್ರಣಗಳನ್ನು ನೀಡಿದ್ದಾರೆ ಹಿರೇಮಠರು.

— **ಡಾ. ಎ. ಮುರಿಗೆಪ್ಪ**, ಭಾಷಾಶಾಸ್ತ್ರ ಪ್ರಾಧ್ಯಾಪಕರು, ಕ. ಅ. ಪೀಠ, ಕ.ವಿ.ವಿ., ಧಾರವಾಡ- ೩

೮. ಮಿ|| ಛತ್ರಪತಿ : ಲಲಿತಾ ಸಿದ್ದಬಸವಯ್ಯ, ಚಿನ್ಮಯಿ ಪ್ರಕಾಶನ, ೫೨೧೭, ೨ ನೇ ಕ್ರಾಸ್, ಅಶೋಕನಗರ, ತುಮಕೂರು - ೨. ಪ್ರ.ಮು. ೨೦೦೨. ಪು. ೯೯. ರೂ. ೪೦/-

ಲಲಿತ ಪ್ರಬಂಧ-ಹರಟೆಗಳನ್ನು ಬರೆದು ಯಶಸ್ವಿಯಾಗುವುದು ಸ್ವಲ್ಪ ಕಷ್ಟವೇ ಸರಿ. ಎ. ಎನ್. ಮೂರ್ತಿರಾವ್, ಅ. ರಾ. ಮಿತ್ರ ಮೊದಲಾದ ಕೆಲವರು ಯಶಸ್ವೀ ಪ್ರಬಂಧಕಾರರನ್ನು ಕನ್ನಡ ಸಾಹಿತ್ಯದಲ್ಲಿ ಕಾಣಬಹುದು. ಪ್ರಸ್ತುತ ಲಲಿತಾ ಸಿದ್ದಬಸವಯ್ಯ ಅವರ ಮಿ|| ಛತ್ರಪತಿ ಎಂಬ ೩೧ ನಗೆಬರಹಗಳ ಸಂಕಲನ ಅಂಥ ಪ್ರಯತ್ನಗಳಲ್ಲಿ ಒಂದು.

ಸಮಾಜದ ವಿವಿಧ ಸಮಕಾಲೀನ ಸಂಗತಿಗಳನ್ನು ಅಭಿವ್ಯಕ್ತಿಸಲು ಲೇಖಕಿಯ ಕಾಲ್ಪನಿಕ ಸೃಷ್ಟಿಯೇ ಈ ಛತ್ರಪತಿ. ನವಿರಾದ ಭಾಷೆಯೊಂದಿಗೆ ಉತ್ತಮ ಹಾಸ್ಯಪ್ರಜ್ಞೆಯೂ ಈ ಲೇಖಕಿಗಿದೆ. ಇಲ್ಲಿನ ಲೇಖನಗಳು ಬೇರೆ ಬೇರೆ ಪತ್ರಿಕೆಗಳಲ್ಲಿ ಆರೇಳು ವರ್ಷಗಳ ಅವಧಿಯಲ್ಲಿ ಪ್ರಕಟವಾಗಿವೆ ಎಂದು ತಿಳಿಸಿರುವ ಲೇಖಕಿ ಲೇಖನಗಳ ಕೆಳಗೆ ಅವು ಪ್ರಕಟವಾದ ಪತ್ರಿಕೆಯ ಹೆಸರನ್ನೂ ತಿಳಿಸಿರುತ್ತಾರೆ. ಅಂತೆಯೇ ಆಯಾ ಲೇಖನ ಬರೆದ ಹಿನ್ನೆಲೆಯನ್ನೂ ಸ್ಥೂಲವಾಗಿ ವಿವರಿಸುತ್ತಾರೆ. ಇದು ಈ ಸಂಕಲನದ ಲೇಖನಗಳನ್ನು ಅರ್ಥಮಾಡಿಕೊಳ್ಳುವಲ್ಲಿ ಸಹಕಾರಿಯಾಗಿದೆ.

'ಅಜೆಂಡಾ ಮಂಡನೆ' ಎಂಬ ಲೇಖನದಲ್ಲಿ ಇರುವ 'ಕವನ' ತವಾಷೆಯೊಂದಿಗೆ ವಾಸ್ತವಕ್ಕೆ ಹತ್ತಿರವಾಗಿದೆ. ಚಪ್ಪಾಳೆ ಹೊಡೆಯುವ, ಹೊಡೆಯದಿರುವ ಸಂಗತಿ ಅರ್ಥಪೂರ್ಣವಾಗಿದೆ. ಹಾಸ್ಯ ಮತ್ತು ಗಂಭೀರವನ್ನು ಕುರಿತು ಲೇಖಕಿಯೇ ಹೀಗೆ ನಯವಾಗಿ ವಿವರಿಸುತ್ತಾರೆ, 'ನಾನು ಬರೆದ ಗಂಭೀರ ಸಾಹಿತ್ಯ ಓದಿದಾಗ ನೀವೆಲ್ಲ ಮುಸಿ ಮುಸಿ ನಗುತ್ತಿದ್ದವರು, ಹಾಸ್ಯ ಬರೆದಾಗ ಗಂಭೀರ ಚರ್ಚೆ ನಡೆಸ್ತೀರಲ್ಲ... ಈಗ ನನಗೆ ಗೊತ್ತಾಯಿತು. ಹಾಸ್ಯ ಎಂದರೆ ಗಂಭೀರವನ್ನೇ ಹಾಸ್ಯಾಸ್ಪದವಾಗಿ ಬರೆಯೋದು. ಗಂಭೀರ ಎಂದರೆ ಹಾಸ್ಯವನ್ನೇ ಗಂಭೀರವಾಗಿ ಬರೆಯೋದು.... ಬೆಂಗಳೂರು ದೂರದರ್ಶನ ಧಾರಾವಾಹಿಗಳ ತರ...' 'ಪ್ರಚಲಿತ ಸಮಸ್ಯೆಗಳು'. 'ಮನೆಯಲ್ಲಿ ಉದ್ಯೋಗ', 'ನಾಮಾವಶೇಷನ್', 'ಮಾಡಬಾರದ್ದು' ಮುಂತಾದವು ಉತ್ತಮವಾಗಿವೆ.

ಸಂಕಲನದ 'ಬ್ಯಾಗು, ಬ್ಯಾಡ್ಜು ಮತ್ತು ಬಟ್ಟಲು' ಲೇಖನದ ಕೊನೆಯಲ್ಲಿ, 'ಈ ಬ್ಯಾಡ್ಜು ನೋಡಿ ಬಿಡಾಕಾಗೋಲ್ಲ. ತುಮಕೂರಿನ ತುಂಬಾ ಗಲ್ಲಿಗಲ್ಲಿಯಲ್ಲಿಯೂ ಇಂಥ ಹಪ್ಪಳದಗಲದ ಬ್ಯಾಡ್ಜು ತಗಲಾಕಿಕೊಂಡು ಟೀಗಳೆಲ್ಲಾ ಓಡಾಡ್ತಿದಾವೆ. ಎಷ್ಟು ಬಿಟ್ಟಿದಾವ್ರೋ ಅಷ್ಟು ಬ್ಯಾಡ್ಜು ಇವೆ. ನಡೀರಿ ಆಚೆಗೆ. ಅಂತ ನಿಕಾಲ್ ಮಾಡಿದರಂತೆ. ಪಾಪ ಛತ್ರಪತಿ ನಮ್ಮನೆಯಲ್ಲೇ ಮಧ್ಯಾಹ್ನಗೆ ಅನ್ನ ತಿಂದು ಹೋದರು' (ಪು. ೮೯) ಎಂಬುದು ತುಮಕೂರಿನಲ್ಲಿ ನಡೆದ ಅಖಿಲ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಹೋದವರಿಗೂ ಹೋಗದವರಿಗೂ ಅರ್ಥವಾಗುತ್ತದೆ. ಬದುಕು ಇದೇ. ಇಂಥದೇ ವಿವರಗಳು ಈ ನಗೆಬರಹಗಳ ಗಂಭೀರ ಚಿಂತನೆಗಳು.

— **ಜಿ. ಟಿ. ಶ್ರೀಧರ ಶರ್ಮ**, ತ್ಯಾಗರಾಜ ವಿಸ್ತರಣೆ, ಅಜ್ಜಂಪುರ - ೫೭೭ ೫೪೭, ತಾ. ತರೀಕೆರೆ

೭. ನಮ್ಮೆಲ್ಲರ ಭಾರತಿ : ಬಿ. ಎಂ. ಶರಭೇಂದ್ರಯ್ಯ, ಪೂಜಾರ ಸಿದ್ದಪ್ಪ ಸ್ಮಾರಕ ಗ್ರಂಥಮಾಲೆ, ಕೂನಿಕೆರೆ, ತಾ. ಹಿರಿಯೂರು, ಪ್ರ.ಮು. ೨೦೦೧, ಪು. ೮೦, ರೂ. ४೦/-

ಕನ್ನಡದ ಮಹತ್ವದ ಲೇಖಕರಲ್ಲೊಬ್ಬರಾದ ಕುಂ. ವೀರಭದ್ರಪ್ಪ ಅವರ 'ಯಾಪಿಲ್ಲು' ಕಾದಂಬರಿ ವಸ್ತುವಿನಿಂದ ಮಾತ್ರವಲ್ಲ ಒಳಗೊಂಡ ನಾಟಕೀಯ ಗುಣಗಳಿಂದಾಗಿಯೂ ನಮ್ಮ ಗಮನ ಸೆಳೆಯುತ್ತದೆ. ಈ ಎರಡರಿಂದಲೂ ಆಕರ್ಷಿತರಾದ ಬಿ. ಎಂ. ಶರಭೇಂದ್ರಯ್ಯ 'ಯಾಪಿಲ್ಲು' ವನ್ನು 'ನಮ್ಮೆಲ್ಲರ ಭಾರತಿ' ಎಂಬ ನಾಟಕವಾಗಿಸಿದ್ದಾರೆ.

ಒಂದು ಸೃಜನಕೃತಿ ಇನ್ನೊಂದು ಭಿನ್ನವಾದ ವಿನ್ಯಾಸದಲ್ಲಿ ಅರಳುವುದು ಸಾಹಿತ್ಯ ಚರಿತ್ರೆಗೆ ಹೊಸದೇನಲ್ಲ. ಕಥೆ ಸಂಗ್ರಹಿತವಾಗಿ ಕವಿತೆಯಾಗುವುದು, ವಿಸ್ತಾರಗೊಂಡು ಕಾದಂಬರಿಯಾಗುವುದು, ಕವಿತೆಯನ್ನು ಕಥೆಯನ್ನಾಗಿಸುವುದು ಅಥವಾ ನಾಟಕವನ್ನಾಗಿಸಿದುದಕ್ಕೆ ಹೇರಳ ಉದಾಹರಣೆಗಳು ಸಿಗುತ್ತವೆ. ಹೀಗೆ ಸೃಜನಕೃತಿಯೊಂದು ಬೇರೊಂದು ರೂಪದಲ್ಲಿ ಮೈದಾಳುವ ಉದ್ದೇಶ ಏನು ಎಂಬುದು ಒಂದು ಕುತೂಹಲಕಾರಿ ಚರ್ಚೆ. ಅದು ಇಲ್ಲಿ ಅಪ್ರಸ್ತುತವಾದುದರಿಂದ ಅದನ್ನು ಬಿಟ್ಟು 'ನಮ್ಮೆಲ್ಲರ ಭಾರತಿ'ಯ ಬಗ್ಗೆ ಸಂಕ್ಷಿಪ್ತವಾಗಿ ಟಿಪ್ಪಣಿಸುತ್ತೇನೆ.

'ಸರ್ಕಾರಿ ಕನ್ನಡ ಶಾಲೆ v/s ಖಾಸಗಿ ಕಾನ್ವೆಂಟ್ ಶಾಲೆ' ಇದು ನಾಟಕದ ಮುಖ್ಯವಸ್ತು ಎಂದು ಹೇಳಿದ ಮಾತ್ರಕ್ಕೆ ಎಲ್ಲವನ್ನೂ ಹೇಳಿದಂತಾಗುವುದಿಲ್ಲ. ಇದು ಮಾತೃಭಾಷೆ ಮತ್ತು ಪರಕೀಯಭಾಷೆಗಳ ನಡುವಿನ, ದೇಶಿ ಸಂಸ್ಕೃತಿ-ವಿದೇಶಿ ನಾಗರಿಕತೆಗಳ ನಡುವಿನ ಸ್ವಾತಂತ್ರ್ಯ ಮತ್ತು ಗುಲಾಮಗಿರಿಗಳ ನಡುವಿನ ಸಂಘರ್ಷ. ಅಕ್ಷರಾಭ್ಯಾಸದಲ್ಲಿ ಆಸಕ್ತಿಯಿರುವ ದಲಿತ ಹುಡುಗಿ ಯೋರ್ವಳು ಮಾಸ್ತರರ ಸಲಹೆಯಂತೆ ಕನ್ನಡ ಶಾಲೆಗೆ ಸೇರುತ್ತಾಳೆ. ಪರಿಸ್ಥಿತಿಯ ಒತ್ತಡದಿಂದಾಗಿ ಅವಳು ಖಾಸಗಿ ಕಾನ್ವೆಂಟ್ ಶಾಲೆಯ ಆಕರ್ಷಣೆಗೆ ತುತ್ತಾಗುತ್ತಾಳಾದರೂ ಕೊನೆಗೆ ಸರಕಾರಿ ಕನ್ನಡ ಶಾಲೆಯಲ್ಲಿಯೆ ಓದನ್ನು ಮುಂದುವರಿಸುತ್ತಾಳೆ. ಕನ್ನಡ-ಕಾನ್ವೆಂಟ್ ನಡುವಿನ ಈ ಹೊಯ್ದಾಟ ಇಡೀ ಗ್ರಾಮದ ಹೊಯ್ದಾಟವಾಗಿ ತುಂಬ ಪರಿಣಾಮಕಾರಿಯಾಗಿ ಚಿತ್ರಿತವಾಗಿದೆ. ರಿಕೇತು, ಬೆರಿಬೆರಿ ಎಂಬ ಆಂಗ್ಲ ರೋಗಗಳ ಹೆಸರನ್ನು ದಲಿತರ ಹುಡುಗಿಗೆ ಇಡುವುದು, ಕನ್ನಡ ಶಾಲೆಯ ಶಿಕ್ಷಕ ಅವಳಿಗೆ 'ಭಾರತಿ' ಎಂದು ನಾಮಕರಣ ಮಾಡುವುದು, ಆಂಗ್ಲಶಾಲೆಯ ವ್ಯಾಮೋಹಕ್ಕೆ ಒಳಗಾದ ಆಕೆ 'ಏಂಜಲ್' ಆಗುವುದು, ಕೊನೆಗೆ ಅವಳೇ "ಸಾರೂ ನನ್ನೆಸ್ರು ಭಾರತಿ" ಎಂದು ಹೇಳುವುದು ಎಲ್ಲ ತುಂಬ ಸಾಂಕೇತಿಕ ಅರ್ಥ ಪಡೆದುಕೊಂಡಿವೆ. ಹಳ್ಳಿಯ ಮುಗ್ಧ ಜನತೆ ಆಂಗ್ಲಭಾಷೆಯ ತೀವ್ರ ಆಕರ್ಷಣೆಗೆ ಒಳಗಾಗುವುದನ್ನು ತುಂಬ ಧ್ವನಿವತ್ತಾಗಿ ನಿರೂಪಿಸಲಾಗಿದ್ದು, ಪರಕೀಯ ಸಂಸ್ಕೃತಿಯೊಂದು ಪ್ರಾದೇಶಿಕ ಸಂಸ್ಕೃತಿಯನ್ನು ಹೇಗೆ ಆಕ್ಟೋಪಸ್‌ನಂತೆ ಆಕ್ರಮಿಸಿಕೊಳ್ಳುತ್ತದೆ, ದೇಶಿ ಸೃಜನಶೀಲತೆಯನ್ನು ನಾಶಗೊಳಿಸುತ್ತದೆ ಎಂಬುದು ಸಮರ್ಥವಾಗಿ ಚಿತ್ರಿತವಾಗಿದೆ.

ಮೂಲ ಕಾದಂಬರಿಯ ಕೆಲ ಅಂಶಗಳನ್ನು ನಾಟಕಕಾರರು ತಮ್ಮ ಆಶಯಕ್ಕೆ ತಕ್ಕಂತೆ ಬದಲಾಯಿಸಿಕೊಂಡಿದ್ದಾರೆ. ಇದು ಸರಿಯೊ ತಪ್ಪೊ ಎಂಬ ಚರ್ಚೆಯನ್ನು ಬದಿಗಿಟ್ಟು ನೋಡಿದರೆ ಈ ಬದಲಾವಣೆ ನಾಟಕಕ್ಕೆ ಹೊಸ ಕಸುವನ್ನು ತಂದಿದೆ ಎಂಬು ಹೇಳಬಹುದು. ಗ್ರಾಮೀಣ ಅದರಲ್ಲೂ ದಲಿತ ಪರಿಸರದ ಭಾಷೆ, ಜೀವಂತಿಕೆಯಿಂಧ ನಳನಳಿಸುವ ನಿರೂಪಣಾ ಶೈಲಿ, ಚುರುಕು ಸಂಭಾಷಣೆಯಿಂದಾಗಿ ನಾಟಕ ಕಳೆಗಟ್ಟಿದೆ. ರೂಪಾಂತರವೂ ಸೃಜನಶೀಲವಾಗಿರಬಲ್ಲುದು ಎಂಬುದಕ್ಕೆ ಬಿ. ಎಂ. ಶರಭೇಂದ್ರಯ್ಯ ಅವರ 'ನಮ್ಮೆಲ್ಲರ ಭಾರತಿ' ಒಂದು ಉತ್ತಮ ಮಾದರಿ.

– **ಚಂದ್ರಶೇಖರ ವಸ್ತ್ರದ**, ಬೆಳಗು, ಆನಂದಾಶ್ರಮ ರಸ್ತೆ, ಗದಗ - ೫೮೨ ೧೦೧

ಕಡೀ ಪುಟ : ಸಿದ್ಧಲಿಂಗ ಪಟ್ಟಣಶೆಟ್ಟಿ

ಜೀವನ ಅಂದರ ಏನು ಅಂತ ಕೇಳಬಾರದು, ಹೇಳಬಾರದು. ಅದು ಕೇಳೂವಂಥಾದ್ದೂ ಅಲ್ಲ, ಹೇಳೂವಂಥಾದ್ದೂ ಅಲ್ಲ. ಬರೇ ತಿಳಿಯೂವಂಥಾದ್ದು, ಅಳಿಯೂವಂಥಾದ್ದು. ನಮ್ಮ ನಮ್ಮ ಶಕ್ತಿ, ಪ್ರಯತ್ನ, ಪ್ರತಿಭೆ, ಭಾಗ್ಯಕ್ಕ ತಕ್ಕಂಗ ತಿಳದಷ್ಟು ಹೊಳೀತಯ್ತಿ, ಅಳದಷ್ಟು ಕಳೀತಯ್ತಿ. ಈ ಹೊಳೆಯುವ ಮತ್ತು ಕಳೆಯುವ ಎರಡು ದಂಡೆಗಳ ನಡುವ ಹರಿಯುವ ಜೀವಜಲಾನ್ಅ ಜೀವನ.

ಜೀವನ ಅಂದರ ಜಲ. ಜಲ ಅಂದರ ಚಲ. ಕೆಲವರು ಜಲಕ್ಕ ಜಳ ಅಂತಾರ, ಚಲಕ್ಕ ಛಲ ಅಂತಾರ. ಈ ಜಲ-ಚಲನೆಯ ಹರಿಯುವಿಕೆಯ ಜೊತೆಗೆ ಎದುರು ಮುಂದೆ ವಿರುದ್ಧ ಉಸಿರಾಟದ ಯಾವ ಗೊಂಬಿನೂ ಎಂಥಾ ಛಲಾನೂ ಮಾಡಿ ಬದುಕಲಾರ. ಸ್ವತಃ ಜೀವನಾನ್ಅ ನಮಗ ಬದುಕನ್ನ ನೀಡಿದಂಥ ಚಿಚ್ಛಕ್ತಿ. ಅದರ ಮುಂದ ಯಾವ್ದೂಂದೂ ಏನೂ ನಡಿಯೂದಿಲ್ಲ.

ಜೀವನ ಅನ್ನುವ ಪದಾ ಒಂದು ಇಡೀ ಶಬ್ದಕೋಶ ಇದ್ದಂಗ. ನಮಗ ತಿಳಿದದ್ದು ಹೊಳೆದದ್ದು ಎಲ್ಲಾನೂ ಅದರ ಒಡಲಾಗ ಹಾಕಿ, ಅದ್ಅ ಜೀವನ ಅಂತ ಹೇಳುವ ಉಸಿರಿನ ಉಗ್ರಾಣದ ಹೆಸರು ಶ್ವಾಸಕೋಶ ಅಂತ. ಹಿಂಗಾಗಿ ಜೀವನ ಅತ್ಯಂತ ವಿಶಾಲ ಉದಾರ ಉತ್ಕೃಷ್ಟ ಬೃಹತ್ ಭವ್ಯ ದಿವ್ಯ ನಿತ್ಯ ನವ್ಯ ಅಂತ ಹೇಳದಿದ್ದರ ಅದು ಲಗೂನ ನಮ್ಮ ಕೈ ಬಿಡತಯ್ತಿ. ಆಗ ಅದಕ್ಕ ಲಭ್ಯವಾಗಿರುವ ಆಯುಷ್ಯ ಅನ್ನುವ ಪದಾರ್ಥದ ಬಾಲ್ಯ ಯೌವನ ಪ್ರೌಢತ್ವ ವೃದ್ಧಾಪ್ಯದ ನಾಲ್ಕು ಕಂಬಗಳಲ್ಲಿ ಒಂದೊಂದ ಒಂದೊಂದ ಹಗ್ಅರಕ ಹುಳುಕ ಹಲ್ಲು ಅಳಗ್ಯಾಡಿ ಒಸಡೀ ತಿವ್ಲದು ಉದುರಿ ಬಿದ್ದಂಗ ಕಳಚಾಕ್ಹತ್ತಿ ಬಿಡತಾವು. ಅದಕ ಹೆದರ್ಯಾದರೂ ಜೀವನದ ಕೂಡ ಮಂಗ್ಯಾನಾಟ ಮಾಡಬಾರದು, ಮಾಡಕೂಡದು.

ಜೀವನ ಅಂದರ ಅಸ್ತಿತ್ವ, ಇರುವಿಕೆ ಇತ್ಯಾದಿ ಅಂತ ಕೆಲವರು ತಾತ್ವಿಕ ವ್ಯಾಖ್ಯಾನ ಮಾಡತಾರ. ಅದೂ ಇರಬಹುದು. ಅಲ್ಲಂತ ಯಾರ ಅಂತಾರ ? ಅಸ್ತಿ ಅಂದರ ಆಯ್ತಿ. ನಾಸ್ತಿ ಅಂದರ ಆಸ್ತಿನೂ ಇಲ್ಲ ಅಸ್ಥಿನೂ ಇಲ್ಲ ಅಂತ ಆಕ್ಕತಿ. ಜೀವನ ಅನ್ನೂದು ಗಾಳಿ, ಉಸಿರು, ಪುತ್ರ, ಪರಮಾತ್ಮ, ಅದ್ಅ ಆಗ ಹಿಂಡಿದ ಹಾಲು, ಬೆಣ್ಣೆ, ಮೆದುಳು, ಸಂಜೀವನಿ ಔಷಧ ವನಸ್ಪತಿ, ಹೃದಯ, ಸ್ಪಂದನ, ಪ್ರಾಣತತ್ತ್ವ, ಜಿಜೀವಿಷಾ, ಪ್ರಜ್ಞೆ, ಚೈತನ್ಯ, ಅಮೃತ, ಸ್ಫೂರ್ತಿ, ಚಲನಶೀಲತೆ, ಶ್ವಾಸಕ್ರೀಡೆ, ಪ್ರೀತಿಯ ವಸ್ತು - ವ್ಯಕ್ತಿ, ಸಂಘರ್ಷ, ಸಂಚಯನ, ಗಳಿಕೆ ಮುಂತಾದ ಮಹಾ ಮಹಾರ್ಥಗಳ ಸಂಗ್ರಾಹಕ ಪ್ರೇರಕ ಪೆಟ್ಟಿಗೆ. ಇಷ್ಟೆಲ್ಲಾ ಇದರ ಹೊಟ್ಯಾಗ ತುಂಬಿರುವಾಗ, ಮತ್ತು ಅವ್ಅ ಎಲ್ಲಾ ನಮಗೂ ಬೇಕಾಗಿರುವಾಗ ಅದು ಕೊಡತೇನಿ ಕೊಡತೇನಿ ಅಂತ ಆಟಾ ಆಡಿಸಿಗೊಂತ ಸಾವು ಅನ್ನುವ ಕೊಡತೀ ಉಳೀ ಮೆಳೀ ಚಾಣಾ ಹಿಡಕೊಂಡು ಕೊಡುವ ಪ್ರತಿಯೊಂದು ಪೆಟ್ಟಿಗೆ ಸುಮ್ಮನ್ಅ ತಲಿ ತಗ್ಗಿಸಿ ನಡೀಬೇಕಾಗಿರೂದು ನಮ್ಮ ಕರ್ಮಧರ್ಮ ಸಂಯೋಗ. ನಮ್ಮ ಆಸ್ತಿ ಅಧಿಕಾರ ಅಹಂಕಾರ ಬಲಗಳನ್ನೆಲ್ಲ ತುಳದು ಕುಳ್ಳ ಬಡದಂಗ ತಟ್ಟಿ ಒಣಗಿಸಿ ಸುಟ್ಟುಬಿಡುವ ಸಿಟ್ಟು ಜೀವನದ ಕಣಕಣದೊಳಗ ಚಣಚಣದೊಳಗ ತುಂಬಿರೂದುನ್ನ ತಿಳೀಲಾರದ ಸೋತವರ್ಅ ಭಾಳ ಮಂದಿ. ಅಂಥವರು ಅಹಂ ಮದದ ಕದಾ ತೆರೀಲಾರದ ಜೀವನದ ಹದಾ ಅರೀಲಾರರು.

ಭೌತಿಕವಾಗಿ ಮಾನಸಿಕವಾಗಿ ಜೀವಿಸೂದು ಬದುಕು. ಆಧಿಭೌತಿಕವಾಗಿ ಹಾರ್ದಿಕವಾಗಿ ಬದುಕುವುದು ಜೀವನ. ಇವುಗಳ ನಡುವ ಹರಿಯುವ ದ್ವಂದ್ವರಸಾನ್ಅ ಜೀವಜಲಾ ಅಂತ ತಿಳದು ನಾವು ಬದುಕು ಹಿಡಕೋಬೇಕೋ, ಜೀವನಾ ಪಡಕೋಬೇಕೋ ಅನ್ನುವ ನಿರ್ಧಾರ ಮಾಡುವುದರ ಮ್ಯಾಲಿಂದ ನಮ್ಮ ವ್ಯಕ್ತಿತ್ವ ಗೊತ್ತಾಕ್ಕತಿ.

ನಮ್ಮನ್ನ ಇಷ್ಟ ಪಡೀಲೆ ಸೂರೆಗೊಳ್ಳುವ ಜೀವನದ ಮ್ಯಾಲ ಸಿಟ್ಟು ಬಂದಾಗ ಏನಂತ ಬಯ್ದು ಸಮಾಧಾನ ಪಟ್ಟುಕೊಳ್ಳಲಿ ಅಂದೆ. ಬಯ್ಯುವುದು ಪ್ರೀತಿಸುವುದರ ಇನ್ನೊಂದು ಮುಖ. ಬದುಕನ್ನ ಅಪ್ಪು ಜೀವನವನ್ನ ಒಪ್ಪು ಅಂದರಾಗೂದುಲ್ಲ ತಪ್ಪು ಅಂದಳು ಮಗಳು. ಅವಳ ಆಯುಷ್ಯ ಅಲ್ಲ, ವಯಸ್ಸು ತನಗ ತಕ್ಕಂಗ ನುಡಿದಿತ್ತು. ಜೀವನದ ವಿರುದ್ಧಾರ್ಥ ಪದ ಏನು ಹೇಳು, ಅದನ್ನ್ಅ ಬಯ್ಗುಳ ಅಂತ ಬಳಸತೇನಿ ಅಂದೆ. ತಟ್ಟನ್ಅ ಆಜೀವನ ಅಂದಳು. ಆ್ಹ ಜೀವನ ಅಂತ ಬೆಚ್ಚಿದಳೋ, ಆಹ್ ಜೀವನ ಅಂತ ಹೆದರಿದಳೋ, ಆ....ಜೀವನ ಅಂತ ಆಚೆ ದಂಡೆಯದರ ಬಗ್ಗೆ ಹೇಳಿದಳೋ, ಆಜೀವನ ಅಂತ ತಿಳಿಸಿದಳೋ ಹೊಳಿಯದಾಗೇತಿ. ಎರಡೂ ದಂಡೆಗಳ ನಡುವ ತೂಗುತ್ತಿರುವ ಜೀವನ ಈಗ ಹಳೇಹಳೇಹಳೇ ಹೊಳಿ ಆಗೇತಿ.

- ಸಂಕಲನ-೭ ರ ಎಲ್ಲ ಪುಟಗಳಲ್ಲೂ ಹೊಸತನ. ಸುಮಾರು ೨೫ ಲೇಖಕರ ಒಳ್ಳೊಳ್ಳೆಯ ಲೇಖನ, ಕವನಗಳ ಮುಖಾಂತರ ಮತ್ತೊಮ್ಮೆ ಅವರನ್ನೆಲ್ಲ ಮುಖಾಮುಖಿ ಕಂಡಂತೆ ನೆನಪಿಸಿಕೊಂಡೆ. 'ಕಡೀಪುಟ' ಪಟ್ಟಣಶೆಟ್ಟಿಯವರು 'ನಾಕನ್ನ ಹ್ಯಾಂಗ ತಿಳಕೊಳ್ಳಿ...' ಅನ್ನೋ ಮುಖಾಂತರ ನಮಗೂ ಹೊಸ ಹೊಸ ವಿಚಾರ ತಿಳಿಸಿಕೊಟ್ಟಿದ್ದಾರೆ. ಸಂಕಲನದ ಪ್ರಕಟಣೆ ಒಳ್ಳೆಯ ಹೆಮ್ಮೆಯ ಧೈರ್ಯದ ಸಾಧನೆ ಎಂದೇ ಹೇಳಬೇಕು. ನಿಮಗೆ ಅಭಿನಂದನೆಗಳು. – **ಲತಾ ಗುತ್ತಿ**, ಬೆಂಗಳೂರು
- 'ಕಡೀಪುಟ' ದ ೨ ಪುಟ ಓದಿದೆ. ಸಂಕಲನ-೭ ರ – ಶ್ಯಾಮಲಾ ಮಾಧವ ಅವರ ಮೊದಲ ಲೇಖನದ ವಿಷಯವೇ ಕೊನೆಯ ಪುಟಕ್ಕೂ ಇರುವದನ್ನು ನೋಡಿದರೆ ಹೆತ್ತವರ ಋಣ ನೆನೆದು ತೀರಿಸುವ ವಿಧಾನವೆನ್ನಿಸಿತು. ಅವ್ವ ಅಪ್ಪನ ಕುರಿತ ಮಾಲೆ ಬೇರೆ ಅಂದಿದ್ದೀರಿ. ಮುಂದಿನ ತಿಂಗಳೂ ಈ ಮಾಲೆ ಮುಂದುವರಿಯಲಿ. ಕಡೀಪುಟದ ಮೊದಲ ಪುಟ ಕಾವ್ಯಮಯವಾಗಿದ್ದರೆ ೨ ನೆಯ ಪುಟ ಗದ್ಯವಾಗಿದೆ. ಮೊದಲನೆಯ ಪುಟ ಭಾವಪೂರಿತವಾಗಿದ್ದರೆ ೨ ನೆಯ ಪುಟ ವಿಚಾರಪೂರಿತವಾಗಿದೆ. ಮೊದಲ ಪುಟ ಜಾನಪದವಾಗಿದ್ದರೆ ೨ ನೆಯ ಪುಟ ಶಿಷ್ಟವಾಗಿದೆ. ಶಬ್ದಗಳೊಂದಿಗೆ ಸಮರ್ಥವಾಗಿ ಸರಸವಾಡುವುದು ಶೈಲಿಯಾದರೂ ಶೈಲಿ ಕೇವಲ ಅಲಂಕಾರವಾಗದೆ ಅರ್ಥವಂತಿಕೆಯನ್ನು ಜತೆ ಮಾಡಿದೆ.

  – **ರಾ. ಕ. ನಾಯಕ**, ಚೆನ್ನಮ್ಮನ ಕಾಕತಿ
- ಸಂಕಲನ ಚೆನ್ನಾಗಿ ಬರುತ್ತಿದೆ. 'ವಾಮನರಾವ್ ಮಾಸ್ತರ್' ಒಂದು ವಿಶಿಷ್ಟ ಅಪರೂಪದ ಕೃತಿ, ಕಾಣಿಕೆ. ನಾಟಕಗಳ ಬಗೆಗೆ, ರಂಗಭೂಮಿ ಬಗೆಗೆ, ಅಂದಿನ ಸಾಂಸ್ಕೃತಿಕ ವಿವರಗಳ ಬಗೆಗೆ ಎನ್ಕೆ ತುಂಬ ಆತ್ಮೀಯವಾಗಿ ಬರೆದಿದ್ದಾರೆ. – **ಡಾ. ಗುರುಪಾದ ಮರಿಗುದ್ದಿ**, ಸಂಕೇಶ್ವರ
- ನಿಮ್ಮ ಪ್ರಯತ್ನಕ್ಕೆ ಕನ್ನಡ ಓದುಗರ ಸಹಕಾರ ಸಾಲದು. – **ಜಿ. ಟಿ. ಶ್ರೀಧರ ಶರ್ಮ**, ಅಜ್ಜಂಪುರ
- ಸಂಕಲನ-೭ ರೊಂದಿಗೆ ನೀವು ಕಾಣಿಕೆಯಾಗಿ ಕಳಿಸಿದ 'ನಟ ನಾಟಕಕಾರ ವಾಮನರಾವ್ ಮಾಸ್ತರ್' ಕುತೂಹಲದಿಂದ ಓದಿದೆ. ಎನ್ಕೆಯವರ ಸಮೀಪದ ಅನುಭವಗಳ ಸಮೃದ್ಧ ಸಂಗತಿಗಳಿಂದ ಓದುಗರ ಮನಸ್ಸು ಮುಟ್ಟುತ್ತದೆ. ಇಂಥ ಕೃತಿಯೊಂದನ್ನು ಬರೆಯಿಸಿ ಮರೆತುಹೋದ ಮಹಾನುಭಾವ ವಾಮನರಾವ್ ಮಾಸ್ತರ್‌ರನ್ನು ಓದುಗರ ಕಣ್ಣೆದುರಿಗೆ ನಿಲ್ಲಿಸುವಂತೆ ಮಾಡಿದ್ದೀರಿ.

  – **ಎಚ್. ಎಸ್. ಪಾಟೀಲ**, ಕೊಪ್ಪಳ
- 'ವಾಮನರಾವ್ ಮಾಸ್ತರ್' ಪ್ರಕಟಣೆ ಸಂಕಲನಕ್ಕೆ ಭೂಷಣ.

  – **ಡಾ. ಎಂ. ಎಂ. ಕಲಬುರ್ಗಿ**, ಧಾರವಾಡ

' ಸಂಕಲನ ' ಸ್ವೀಕರಿಸಿದ ಪುಸ್ತಕಗಳು

೧ **ಕಾರ್ಯಕ್ರಮ** : ಕತೆ, ರಾಧಾಕೃಷ್ಣ ಬಂದಗದ್ದೆ, ಪುಟ ೪೨, ರೂ. ೩೦/- ೨. **ಸೂರ್ಯ-ಪ್ರೀತಿ** : ಇಪ್ಪತ್ತೈದು ಭಾವಗಳು, ರಾಧಾಕೃಷ್ಣ ಬಂದಗದ್ದೆ, ಪುಸ್ತಕ ಹೊಂಬಾಳೆ, ಪುಟ ೩೬, ರೂ. ೨೦/-, ಕೆಳದಿ, ಸಾಗರ-೫೭೭ ೪೦೧, ಪ್ರ. ಮು. ೨೦೦೨, ಕ್ರಾವುನ್ ೧/೮

೨ **ಆಕಲನ** : ವಿಮರ್ಶೆ, ಡಾ. ಹೇಮಾ ಪಟ್ಟಣಶೆಟ್ಟಿ, ಪುಟ ೧೧೨, ರೂ. ೭೫/-; ೩. **ಶಸ್ತ್ರಸಂತಾನ** : ನಾಟಕ, ರಾಮೇಶ್ವರ್ ಪ್ರೇಮ್ / ಸಿದ್ಧಲಿಂಗ ಪಟ್ಟಣಶೆಟ್ಟಿ, ಪುಟ ೮೨, ರೂ. ೬೦/-; ೪. **ಅನುಸ್ವಾದನ** : ವಿಮರ್ಶೆ, ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ, ಪುಟ ೮೨, ರೂ. ೬೦/-; ೫. **ಚಹಾದ ಜೋಡಿ ಚೂಡಾದ್ಹಾಂಗ-೪** : ಅಂಕಣ ಲೇಖನ, ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ, ಪುಟ ೧೭೬, ರೂ. ೯೫/-, ಪ್ರ. ಮು. ೨೦೦೨, ಡೆಮಿ ೧/೮, ಅನನ್ಯ ಪ್ರಕಾಶನ, ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ - ೫೮೦ ೦೦೪

೬ **ಇಂಗ್ಲೆಂಡ್ ಕವನಗಳು** : ಡಾ. ನಾ. ದಾಮೋದರ ಶೆಟ್ಟಿ, ಕನ್ನಡ ಪ್ರಪಂಚ ಪ್ರಕಾಶನ, ಪುತ್ತೂರು-೫೭೪ ೨೦೨, ಪ್ರ. ಮು. ೨೦೦೦, ಕ್ರಾವುನ್ ೧/೮, ಪುಟ ೮೪, ರೂ. ೫೦/-

೭ **ಇತ್ಯಾದಿ** : ವಿಮರ್ಶೆ, ಬಿ. ಆರ್. ಲಕ್ಷ್ಮಣರಾವ್, ಸಿ.ವಿ.ಜಿ. ಪಬ್ಲಿಕೇಶನ್ಸ್, ೭೦, ೨ನೇ ಮೇನ್, ಜಬ್ಬಾರ್ ಬ್ಲಾಕ್, ವೈಯಾಳಿಕಾವಲ್, ಬೆಂಗಳೂರು - ೫೬೦ ೦೦೩, ಪ್ರ. ಮು. ೨೦೦೨, ಡೆಮಿ ೧/೮, ಪುಟ ೧೨೮, ರೂ. ೧೦೦/-

SANKALANA: RNI No. KARKAN 14160/10/1/2002-TC

ಸಂಕಲನ : ಸಂಪುಟ ೨, ಸಂಚಿಕೆ ೨ : ೧೪ ಮಾರ್ಚ್ ೨೦೦೩

ಸಂಪಾದಕರು

ಸಿದ್ಧಲಿಂಗ ಪಟ್ಟಣಶೆಟ್ಟಿ / ಹೇಮಾ ಪಟ್ಟಣಶೆಟ್ಟಿ

•

• ಶಿವಪುತ್ರ ಮ. ರಾಚಯ್ಯನವರ • ಎಸ್.ಜಿ. ಸಿದ್ಧರಾಮಯ್ಯ
• ರಾ. ಕ. ನಾಯಕ • ಎಚ್. ಎಲ್. ಪುಷ್ಪ
• ಮಲ್ಲಿಕಾರ್ಜುನ ವಿ. ಬನ್ನಿ • ಬಸವರಾಜ ಸಬರದ
• ಜಿ. ಎನ್. ರಂಗನಾಥರಾವ್ • ಹಿರೇಮಠ ಎಸ್. ಎಸ್.
• ಸಿದ್ಧರಾಮ ಹಿರೇಮಠ • ಬಿ. ಆರ್. ಪೋಲೀಸ್‌ಪಾಟೀಲ
• ಯು. ಎಸ್. ಸಂಗನಾಳಮಠ • ರಜಿಯಾ ಡಿ. ಬಿ.
• ಅಮರೇಶ ಕುಂಬಾರ • ಎಂ. ಡಿ. ಗೋಗೇರಿ
• ಮೋಹನ ಕಳಸದ
• ಜ್ಯಾನ್ ಸ್ಟ್ರದರ್ / ಸದಾನಂದ ಕನವಳ್ಳಿ
• ಹಾಲಾಡಿ ಮಾರುತಿರಾವ್ • ಜಿ. ಎನ್. ಮಂಜುನಾಥ್
• ಜಿ. ಎಚ್. ಹನ್ನೆರಡುಮಠ

•

ದುಷ್ಯಂತ ನಾಡಗೌಡ, ಶಿವಶಂಕರ ಹಿರೇಮಠ
ಕೆ. ವಿ. ಜಲಜಾಕ್ಷಿ, ಎಂ.ಆರ್. ಮಂದಾರವಲ್ಲಿ
ನರಸಿಂಹ ಪರಾಂಜಪೆ, ಎ. ಮುರಿಗೆಪ್ಪ
ಜಿ. ಟಿ. ಶ್ರೀಧರ ಶರ್ಮ, ಚಂದ್ರಶೇಖರ ವಸ್ತ್ರದ

•

ಸರೋಜ ಚೌಗುಲೆ, ಹಿರೇಮಠ ಎಸ್. ಎಸ್., ಬಂದಗದ್ದೆ ರಾಧಾಕೃಷ್ಣ
ಎಚ್. ಜಿ. ಸೋಮಶೇಖರರಾವ್, ರಾಮಚಂದ್ರ ದೇವ, ಸಿ. ನಾಗಣ್ಣ
ನಿರ್ಮಲ ವೀರಣ್ಣ, ಎಂ. ಪ್ರಭಾಕರ ಜೋಶಿ, ಎ. ಡಿ. ನಂಜುಂಡಸ್ವಾಮಿ
ಲತಾ ಗುತ್ತಿ, ರಾ. ಕ. ನಾಯಕ, ಗುರುಪಾದ ಮರಿಗುದ್ದಿ
ಜಿ. ಟಿ. ಶ್ರೀಧರ ಶರ್ಮ, ಎಚ್. ಎಸ್. ಪಾಟೀಲ
ಎಂ. ಎಂ. ಕಲಬುರ್ಗಿ

•

ಸಂಕಲನ ಪ್ರಕಾಶನ
ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ-೫೮೦ ೦೦೪